# DAMAGE BOOK

# THE BOOK WAS DRENCHED

UNIVERSAL LIBRARY
OU_202329
UNIVERSAL LIBRARY

K1[illegible]1·4 [illegible] K 4343
H23R

[illegible], K

[illegible]

OUP—556—13-7-71—4,000

**OSMANIA UNIVERSITY LIBRARY**

Call No. K181·4 H23B Accession No. K 4343

Author హనుమంతశాస్త్రులు, K

Title శ్రీకృష్ణ [illegible] 1950.

This book should be returned on or before the date last marked below.

ಹರಿಃ ಓಂ

॥ ಶ್ರೀ ಲಕ್ಷ್ಮೀ ನರಸಿಂಹಾಯ ನಮಃ ಶ್ರೀ ಲಕ್ಷ್ಮೀ ವೆಂಕಟೇಶ ಪ್ರಸನ್ನ ॥

## ಶ್ರೀ ವರದೇಂದ್ರ ಹರಿದಾಸ ಸಾಹಿತ್ಯಮಾಲೆ

ವರ್ಷ (೧)  ಕುಸುಮ (೩)

# ಬ್ರಹ್ಮಚರ್ಯ


— ಸಂಪಾದಕ, ಪ್ರಕಾಶಕ —

ನರಸಿಂಹರಾವ ಕು॥ ಗೋವಿಂದರಾವ ಲಿಂಗಸೂಗೂರ


ಬಿಡಿ ಸಂಚಿಕೆ ಬೆಲೆ ೧ ೮—೦


ವಾರ್ಷಿಕ ವರ್ಗಣಿ ರು. ೬ ಟಪಾಲು ೧೨ ಆಣೆ

ಡಿಸೆಂಬರಿನಿಂದ ೧—೮—೦ ಹೆಚ್ಚಿಗೆ

ವರ್ಷದಲ್ಲಿ (೮) ಪುಸ್ತಕಗಳು ೬೦೦ ಪುಟಗಳಿಂದ ೭೨೦ ಪುಟದವರೆಗೆ ಪ್ರಕಟಗೊಳ್ಳುತ್ತದೆ.

# ನನ್ನ ಮಾತು

ಸಾಧನ ಯೋಗ್ಯ ಭಾರತನಾಡು. ವರ್ಣಾಶ್ರಮಗಳ ಗೂಡು ಬ್ರಹ್ಮಚರ್ಯದ ಬೀಡು. ಜ್ಞಾನಿಗಳ ಜಾಡು. ಸನಾತನಿಗಳ ಜೋಡು. ಸುಜನರ ಕೂಡು. ಸತು ಕರ್ಮದಾನ ಧರ್ಮಮಾಡು. ಜ್ಞಾನವಬೇಡು, ದೇವದೇವನ ಹಾಡಿ ಪಾಡು. ಒಡನೆ ನಲಿದಾಡು. ಇಲ್ಲದಿರೆ ಕೇಡು ಅನ್ಯರು ಜೇಡಿ ಒಳಲಿದರೂ ಶಿಗದನಾಡು. ಅಜ್ಞರಿಗಿದು ಕಾಡು ಇಂಥಭಾರತನಾಡಿನ ಸೇವೆಯು ಪ್ರತಿಯೊಬ್ಬನಿಗೆ ಮುಖ್ಯ. ಮಾತೆಯು ಸೇವೆಯ ಸಲ್ಲಿಸಲು ಧೃಡಾಂಗನಾಗಬೇಕು. ಬಲವಾನ್‌ನಾಗಬೇಕು. ಇದಕ್ಕೆ ಬ್ರಹ್ಮಚರ್ಯಬೇಕು. ಇಲ್ಲಿ ಈ ಬ್ರಹ್ಮಚರ್ಯ ಪಾಲಿಸೆಯಿಂದ, ಸಕಲೇಂದ್ರಿಯಗಳನ್ನು ಬ್ರಹ್ಮನಲ್ಲಿ ಧಾಪಿಸಬೇಕು. ಇದೇ ಮುಖ್ಯವಾದ ಬ್ರಹ್ಮಚರ್ಯ.

ಹರಿದಾಸ ಸಾಹಿತ್ಯ ಮಾಲೆಯು (೩)ನೇ ಕುಸುಮವಿದು. ಅನೇಕ ಸಜ್ಜನ ಸ್ನೇಹಿತರೂ, ಹಿರಿಯರೂ, ಸೂಚಿಸಿದಂತೆ ಆತ್ಮೋನ್ನತಿ ಅಂತರಂಗ ಶುಚಿಗೆ ಕಾರಣವಾದ ಬ್ರಹ್ಮಚರ್ಯ ವಿಷಯದಲ್ಲಿರುವ, ವಿಶೇಷಗಳನ್ನು ಒಂದೆಡೆ ಸಂಗ್ರಹಿಸಲಾಗದೆ. ಅವುಗಳ ಜೋಡಣೆ ಅರ್ಥ ಬರೆದುದೆ ನನ್ನ ಮನೋ ವಿಚಾರಗಳಲ್ಲ.

ವೇದ, ಉಪನಿಷತ್, ಕಾಠಕ, ಮಾಂಡುಕ, ಷಟ್ ಪ್ರಶ್ನಗಳಲ್ಲಿ, ಮಂತ್ರ ಶ್ರೀ ಭಗವದ್ಗೀತೆ, ಶ್ರೀ ಭಾಗವತ್, ಶ್ರೀ ಮಹಾಭಾರತ, ಪದ್ಮ ಪುರಾಣಾದಿಗಳಲ್ಲಿ, ಸವಿಸ್ತರವಾಗಿ ವರ್ಣಿಸಿದ ಬ್ರಹ್ಮಚರ್ಯಪಾಲನೆ ನಿಯಮಗಳನ್ನು ಕನ್ನಡಿಸಿ ಬರೆಯಲಾಗಿದೆ ಓದಗರು ಬೇಸರದೇ ಬ್ರಹ್ಮಚರ್ಯನಿಯಮಗಳನ್ನು ಮನವರಿಕೆಮಾಡುವದು. ಇವೆಲ್ಲವುಗಳಲ್ಲಿ ಸಾಂಗವಾಗಿ ವಿವರಿಸಿದ ಮಾತುಗಳನ್ನೇ ಶ್ರೀ ದಾಸಾರ್ಯರು ತಿಳಿಗನ್ನಡದಲ್ಲಿ ಬೋಧಿಸುವ ಸದ್ವಚನಗಳಾದ ಪದ ಸುಳಾದಿಗಳನ್ನೇ ಸಂಕಲನ ಮಾಡಲಾಗಿದೆ. ಈ ಪ್ರಚಾರ ಕಾರ್ಯವೇ ನಮ್ಮಮುಖ್ಯಧ್ಯೇಯ. ಮುಂದೆ ಬ್ರಹ್ಮಚರ್ಯಪಾಲನೆನಿಯಮ. ಸದ್ಯಃಕಾಲವಲ್ಲಿ ಸುಧಾರಿಸುವ ಕೆಲ ವಿಷಯಗಳಗಳು ವಿಸ್ತರಿಸಲಾಗಿದೆ. ತಪ್ಪಿದ್ದಲ್ಲಿ ತಜ್ಞರು ತಿದ್ದಿ ತಿಳುಹಿಸಬೇಕಾಗಿ ಪ್ರಾರ್ಥನೆ.

ಮಾಲೆಯ (೩) ನೆ ಕುಸುಮ ಈಬ್ರಹ್ಮಚರ್ಯ ಪುಸ್ತಕವನ್ನು ಚನ್ನಾಗಿ ಅವಲೋಕಿಸಿ ಸಂಕ್ಷಿಪ್ತವಾಗಿಯೂ, ಅರ್ಥವತ್ತಾಗಿಯೂ, ಸಂದರವಾಗಿಯೂ,

ಮುನ್ನುಡಿಯನ್ನು ಬರೆದು ಕೊಟ್ಟ ಶ್ರೀಮಾನ್ ವಿದ್ವಾನ್ ಮಾನ್ವಿನರಶಿಂಗ ರಾಯರು ಎಂ. ಎ. ಪಿ. ಓ ಯಲ್ ಹೈ. ದ. ಇವರಿಗೆ ಕೃತಜ್ಞನಾಗಿದ್ದೇನೆ.

ಈ ಮಹತ್ಕಾರ್ಯದಲ್ಲಿ, ನನ್ನ ಸೋದರಳಿಯಂದರಾದ ಚಿ|| ವಿಠ್ಠಲರಾವ ಲಿಂಗಸೂಗೂರ ಹೈ ದ, ಅನೇಕ ವಿಧ ಸಹಾಯುಮಾಡಿದವರಿಗೆ ದಿನೆದಿನೆ ಭಗವಂತನಲ್ಲಿ ಜ್ಞಾನಭಕ್ತಿ ಅಭಿವೃದ್ಧಿ ಯಾಗಲೆಂದುಪರಮಾತ್ಮನ್ನು ಪ್ರಾರ್ಥಿಸುತ್ತೇನೆ. ಇವರನನುಸರಿಸಿ, ಸಹಾಯ ವಿತ್ತ ಶ್ರೀ ಕೆ.-ರಾಮಚಂದ್ರರಾವ, ಯಣ್ಣಿ ಇವರಲ್ಲಿ ಕೃತಜ್ಞತೆ.

ಬಹು ತ್ವರೆಯಾಗಿ ಅಚ್ಚುಮಾಡಿಕೊಟ್ಟು ಚಂದ್ರಗುಪ್ತ ಅಚ್ಚುಕೂಟದವರ ಉಪಕಾರ ಸ್ಮರಿಸುತ್ತೇನೆ.

ಪುಷ್ಯವದಿ (೩೦)ಗೆ ಹೊರಡುವದಾಗಿತ್ತು ದೈವೀ ಅನೇಕ ತೊಂದರೆ, ಅಚ್ಚಿನಾಲಯದ ಅನಾನುಕೂಲತೆಯಿಂದ ೨ ತಿಂಗಳ ತಡವಾದುದಕ್ಕಾಗಿ ಕ್ಷಮಾಪನೆ.

## ಸಹಾಯಕರ. ಉಪಕಾರ ಸ್ಮರಣೆ

೧೦ ರು|| ಶ್ರೀ ವೆ||ಕೃಷ್ಣಾಚಾರ್ಯ ಜೋಶಿ, ವಕೀಲ ಹೈ. ದ.
೧೦ ,, ಮಧ್ವರಾಯರು ಆನ್ವರಿ, ಹೈ. ದ.
೧೦ ,. ವಿದ್ವಾನ್ ಮಾನ್ವಿ ನರಸಿಂಗ ರಾಯರು, ಎಂ.ಏ.ಎಲ್.ಪಿ.ಓ.
೧೦ ,, ಬಿ. ಜಿ. ಚಿಮ್ಮಲಗಿಯವರು, ಹೈ. ದ.
೧೨ ,, ಬಿ. ವಿ. ದೇಸಾಯಿಯವರು, ಎಂ. ಏ. ಎಲ್. ಎಲ್. ಬಿ.
೧೦ ,, ಪಾಂಡುರಂಗ ರಾಯರು ದೇಶಮುಖ, ಕಲಬುರ್ಗಿ.
೧೦ ,, ವಿಠ್ಠಲ ರಾಯರು, ಲಿಂಗಸಗೂರ, ಹೈ. ದ.
೧೦ ,, ಪಗಡಿ ಸೇತುಮಾಧವರಾಯರು, ನಾಯಬಮೋತಮದ್, ಮಾಲಗುಜಾರಿ, ಹೈ. ದ.

ಹರಿದಾಸ ದಾಸ, **ಹನುಮಂತರಾವ** ಕು||ಗೊರಾಬಾಳ

# ಮುನ್ನುಡಿ

ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ
ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿ
ಜಾಯತೇ ॥ ಕ್ರೋಧಾದ್ಭವತಿ ಸಮ್ಮೋಹಃ ಸಮ್ಮೋಹಾತ್
ಸ್ಮೃತಿ ವಿಭ್ರಮಃ । ಸ್ಮೃತಿ ಭ್ರಂಶಾತ್ ಬುದ್ಧಿನಾಶೋ ಬುದ್ಧಿ
ನಾಶಾತ್ ಪ್ರಣಶ್ಯತಿ ॥

ಪ್ರಕೃತಿ ಧರ್ಮ ಸ್ವರೂಪ ಧರ್ಮಗಳ ವಿಶ್ಲೇಷಣಾ ಕ್ರಮವಿದು. ಆತ್ಮತತ್ತ್ವ ಪ್ರಕೃತಿ ತತ್ತ್ವದಲ್ಲಿ ಬದ್ಧವಾಗಿದೆ. ಆದಕ್ಕೋಸ್ಕರ ಸಾಧ್ಯವೆನ್ನುವ ವಿಶ್ವಾಸಕ್ಕೆ ಎಡೆಯಿದ್ದ ಜನಗಳಿಗೆ ಈ ಮಾತು ರುಚಿಸುವದು. "ಲೋಕೋ ಭಿನ್ನರುಚಿಃ"- ಈ ನಂಬಿಕೆಗೆ ಸಂವಾದಿಯಾಗಿ ಸೃಷ್ಟಿ ಆಕಸ್ಮಾತ್ ಘಟನೆಗಳ ಸಂಭವರೂಪ. ಕಾರ್ಯಕಾರಣ ವಿವೇಚನೆ ಮನುಷ್ಯ ಬುದ್ಧಿಯ ಮೇಧಾ ಸಂಪತ್ತೇ ವಿನಾ ಸ್ವತಃ ಚರಿತಾರ್ಥ ಅದಕ್ಕೆ ಇಲ್ಲ. ಪಂಚಭೂತಗಳ ಸಮಾಗಮ ಮತ್ತು ಅವುಗಳ ವಿಯೋಗ ಪ್ರಕೃತಿ ಪಥದಲ್ಲಿ ನಿತ್ಯ ಗೋಚರವಾಗುವ ಪ್ರಕ್ರಿಯೆ. ಇದಕ್ಕೆ ಅಂತಿಮ ಧ್ಯೇಯವಿಲ್ಲವೆಂಬ ವಿಶ್ವಾಸವುಳ್ಳ ಜನಗಳೂ ಇದ್ದಾರೆ. ಆದರೆ ಮೊದಲನೆಯ ವಿಶ್ವಾಸದ ಜನಗಳ ಸಿದ್ಧಿಗಾಗಿ ಒಂದು ಸಾಧನವಾದ ಬ್ರಹ್ಮಚರ್ಯ ಈ ಗ್ರಂಥದ ವಸ್ತು.

ಶ್ರೀಮಾನ್ ಹನುಮಂತರಾವ ಗೊರಾಬಾಳ ಇವರು ಹಿಂದಿನ ತಲೆಮಾರಿನವರು. ಮಾಧ್ವಮತದಲ್ಲಿ ಜನ್ಮಿಸಿ ಆ ಸಿದ್ಧಾಂತವೇ ಸತ್ಯವಾದ ಸಿದ್ಧಾಂತವೆಂದು ನಂಬಿದವರು. ಉಪನಿಷತ್ತು, ಪುರಾಣ, ಪದ, ಸುಳಾದಿಗಳು, ಮನುಷ್ಯೋದ್ಧಾರಕ್ಕೆ ಮಾರ್ಗದರ್ಶಿಗಳೆಂದು ನಂಬಿದವರು. ಈ ನಂಬಿಗೆಯ ಆವಿರ್ಭಾವ ಈ ಕೃತಿಯಲ್ಲಿ ವ್ಯಕ್ತವಾಗಿದೆ. ವಾಚಕರು ಆ ಆವರಣದಲ್ಲಿ ಈ ಗ್ರಂಥವನ್ನು ಓದಬೇಕು. ಆ ಆವರಣದ ಪರಿಚಯ ವಿಲ್ಲದವರಿಗೆ

ಇದು ರುಚಿಸಲಿಕ್ಕಿಲ್ಲ. ದೇಹಸ್ವಾಸ್ಥ್ಯದ ದೃಷ್ಟಿಯಿಂದ ವೀರ್ಯರಕ್ಷಣೆ ಆವಶ್ಯಕವೆನ್ನುವವರಿಗೂ ಈ ಗ್ರಂಥದಲ್ಲಿ ಸರಿಯಾದ ಭೋಧೆ ಸಿಕ್ಕುವುದು.

ಬ್ರಹ್ಮಚರ್ಯದ ನಿರ್ವಚನವನ್ನು ಸಂಕಲನ ಕರ್ತರು ತಮ್ಮ ಗ್ರಂಥದಲ್ಲಿ ಸ್ಪಷ್ಟಪಡಿಸಿದ್ದಾರೆ "ಬ್ರಹ್ಮಣಿ ಹರೌ ಚರಣಮೇವ ಬ್ರಹ್ಮಚರ್ಯ ಸಾಮ್ಯ,, ಎನ್ನುವಷ್ಟು ನಿರಾಳವಾಗಿದೆ ಬ್ರಹ್ಮಚರ್ಯಧರ್ಮ. ಆದರೆ ಇದಕ್ಕೆ ಪೂರ್ವಾಂಗವಾಗಿ ಲೈಂಗಿಕಜೀವನದ ಸಂಯಮವೇ ಈ ಬ್ರಹ್ಮಚರ್ಯೆಯ ತಳಹದಿಯೆಂಬ ಮಾತನ್ನು ಎಲ್ಲಕಾಲಗಳಲ್ಲಿಯೂ ಎಲ್ಲರೂ ಒಪ್ಪಿದ್ದಾರೆ. ಅದನ್ನೇ ಈ ಗ್ರಂಥದ ಬಹುಭಾಗದಲ್ಲಿ ಸಮರ್ಥಿಸಲಾಗಿದೆ.

ವೀರ್ಯ ಓಜಸ್ಸಿಗೆ ಮಾತೃಕೆ. ಆಧಿಭೌತಿಕ ಮತ್ತು ಆಧ್ಯಾತ್ಮಿಕ ಸಿದ್ಧಿಗೆ ಇದರ ಸವಿವೇಕವಾದ ಬಳಕೆ ಆವಶ್ಯಕ. ಇಂದಿನ ಮನಃಶಾಸ್ತ್ರವೂ ಊರ್ಧ್ವರೇತಸ್ಸು ಉತ್ತಮ ಫಲಕಾರಿ ಎಂಬುದನ್ನು ಒಪ್ಪಿದೆ. ಪ್ರಾಪಂಚಿಕ ಕ್ಲೇಶಕ್ಕೆ ಚಿತ್ತ ಶೈಥಿಲ್ಯವೇ ಮುಖ್ಯಕಾರಣ. ವಿಷಯಧ್ಯಾನ, ಧ್ಯಾನದಿಂದ ಸಂಗ, ಸಂಗದಿಂದ ಕಾಮ, ಕಾಮದಿಂದ ಕ್ರೋಧ, ಕ್ರೋಧದಿಂದ ಸಮ್ಮೋಹ, ಸಮ್ಮೋಹದಿಂದ ಸ್ಮೃತಿ ವಿಭ್ರಮ, ಸ್ಮೃತಿವಿಭ್ರಮದಿಂದ ಬುದ್ಧಿನಾಶ, ಬುದ್ಧಿನಾಶದಿಂದ ಸರ್ವ ನಾಶವೆಂದು ಮೇಲೆ ಉದ್ಧರಿಸಲಾದ ಶ್ರೀ ಭಗವದ್ಗೀತೆಯ ಉಕ್ತಿ ವಿಷಯ ವಿಶ್ಲೇಷಣಕ್ಕೆ ಸಮರ್ಪಕವಾದ ಸೂತ್ರ. ಮೂಲಭ್ರಮೆಯಿಂದ ವಿಷಯದ ಸಂಗವಾಗುವುದು. ಅದರ ಸಂಗವಾದೊಡನೆ ಮುಂದಿನ ಅನರ್ಥಗಳೆಲ್ಲ, ಕೈಯನೆಳೆದರೆ ಮೈತಾನೆ ಬಂದಂತೆ ಬರುವುವು. ಈ ಪ್ರಕೃತಿಗುಣಗಳಲ್ಲಿ ಸಾತ್ವಿಕ, ರಾಜಸ, ತಾಮಸ ಮೂರುವಿಧ. ಸಾತ್ವಿಕದಿಂದ ಪ್ರಕೃತಿ ಸಂಯೋಗ ವಿಯೋಗವಾಗುವುದು. ಅದನ್ನು ಕೋರುವ ಜೀವಗಣಗಳ ಗುಂಪೊಂದು. ಅದನ್ನುಗ್ರಹಿಸದೇ ಇಂದ್ರಿಯಗಮ್ಯ ಭೋಗಗಳಲ್ಲಿ ತುಷ್ಟಿಪಡೆದು ಇದೇ ಸಾಕು ಎನ್ನುವ ಜೀವಗಣ ಇನ್ನೊಂದು ಗುಂಪು. ಇಂದ್ರಿಯಸುಖವೇ ಸರ್ವಸಿದ್ಧಿ; ಅದನ್ನು ಸಾಧಿಸುವ ಮಾರ್ಗಗಳೆಲ್ಲ ಸನ್ಮಾರ್ಗಗಳು, ಎಂದು ನಂಬಿದ ಜೀವಗಣ ಇನ್ನೊಂದುಗುಂಪು. ಈ ಮೂರು ನಂಬುಗೆಗಳಲ್ಲಿ ನಡೆದ ಕದನವೇ ಸೃಷ್ಟಿ. ಅದು ನಿತ್ಯಸತ್ಯ. ಆದರೆ ಮೊದಲನೆಯ ಗುಂಪು

ನ್ನ ಸಾಧನೆಯಲ್ಲಿ ಮೊದಲು ಅನುಸರಿಸಬೇಕಾದ ವ್ರತಬ್ರಹ್ಮಚರ್ಯ. ಏಕೆಂದರೆ ಇಂದ್ರಿಯಗಳು ಅಂತರ್ಮುಖವಾಗುವವರೆಗೆ ಪ್ರಕೃತಿ ಸಂಯೋಗವು ಸಂಯೋಗದಲ್ಲಿ ಪರಿವರ್ತಿಸಲಾರದು ಪ್ರಜ್ಞೆ ಪ್ರತಿಷ್ಠಿತವಾಗದು. ಪ್ರಜ್ಞೆ ಪ್ರತಿಷ್ಠಿತವಾಗದವರೆಗೆ ಪ್ರಸಾದವು ಅಸಂಭವ ಅಂತೆಯೇ ಬ್ರಹ್ಮಚರ್ಯೆಗೆ ಮಹತ್ವ.

ಭಾರತವು ಋಷಿಗಳ ನಾಡು. ಆಧ್ಯಾತ್ಮವನ್ನು ಅವಲಂಬಿಸಿ ಮುಕ್ತಿ ಮಾರ್ಗವನ್ನು ತೋರಿದ ನಾಡು. ಮೈನಂಜಿಗೆ ಮೋಸಹೋಗಿ ಮನಸ್ಸನ್ನು ಮಾರುಗೊಡದಂತೆ ಎಚ್ಚರದಿಂದ ಬಾಳಬೇಕೆಂಬ ಸಂದೇಶವನ್ನು ನಮ್ಮ ಹಿರಿಯರು ನಮಗೆ ಕೊಟ್ಟಿದ್ದಾರೆ. ಮನಸ್ಸಿನ ಸಂಯಮ ಬಹಳ ಕಷ್ಟದ ಕೆಲಸವೇನೋ ನಿಜ. ಆದರೆ ಅದರ ಸಿದ್ಧಿಯಿಂದಾಗುವ ಆನಂದವು ಅಮರವಾದುದು. ಸುಲಭ ಸುಖಕ್ಕೆ ಮರುಳಾಗಿ ಕಷ್ಟ ಸಾಧ್ಯವಾದುದನ್ನು ಕಡೆಗಣಿಸುವುದು ವಿವೇಕವಲ್ಲ. ಆಧ್ಯಾತ್ಮ ಆದಿ ಭೌತಿಕಕ್ಕೆ ಅಡಿಗಲ್ಲು ಅದನ್ನು ಸಾಧಿಸುವುದರಿಂದ ಇಹ ಜೀವನವೂ ಶುಭ್ರವಾಗಿ ಸುಖಕರವಾಗುವುದು. ಕತ್ತಲಲ್ಲಿ ತಡವರಿಸುತ್ತಿರುವ ಲೋಕಕ್ಕೆ ಇಂದು ಬೆಳಕು ಬೇಕಾಗಿದೆ. ಲೋಕ ಭಾರತವನ್ನು ಇದಿರು ನೋಡುತ್ತಿದೆ. ಭಾರತೀಯರು ಈ ಲೋಕ ನಿರೀಕ್ಷಣೆಯನ್ನು ನೆರವೇರಿಸಲು ಸಮರ್ಥರಾಗಬೇಕಾದರೆ ಅವರ ಶೀಲ ಸಂವರ್ಧನೆಗೆ ಆವಶ್ಯಕವಾದ ಚಿತ್ತ ಸಂಯಮವನ್ನು ಅವರು ಅನುಸರಿಸಬೇಕು. ಚಿತ್ತ ಸಂಯಮಕ್ಕೆ ಬ್ರಹ್ಮಚರ್ಯೆ ಮೊದಲ ಸೂತ್ರ.

ಶ್ರೀ ಗೊರಾಬಾಳರು ಲೋಕ ಕಲ್ಯಾಣದ ದೃಷ್ಟಿಯನ್ನಿಟ್ಟೇ ಈ ಸಂಕಲನವನ್ನು ಕೈಗೊಂಡಿದ್ದಾರೆ.

ಓದುಗರು ಈ ದೃಷ್ಟಿಯಿಂದ ಈ ಗ್ರಂಥದ ಪ್ರಯೋಜನವನ್ನು ಪಡೆಯಬೇಕೆಂದು ಕೋರಲಾಗಿದೆ.

ಬಾಗ ಲಿಂಗಂಪಲ್ಲಿ
ಹೈದರಾಬಾದ, (ದಕ್ಷಿಣ)
ಫಾಲ್ಗುಣ ಶುದ್ಧ ತ್ರಯೋದಶಿ
೨—೩—೫೦

ಮಾನ್ವಿ ನರಸಿಂಗರಾವ್.

# ಪರಿವಿಡಿ


| ಕ್ರಮಾಂಕ | ವಿಷಯ | ಪುಟ |
|---|---|---|
| | ಮೊದಲು ಭಾಗದ ಪ್ರತಿಗಳು | ೮ |
| ೧ | ಅಣಾಗರ ಅಣಕು | ೧ |
| ೨ | ಬ್ರಹ್ಮಚರ್ಯದ ಆವಶ್ಯಕತೆ | ೨-೮ |
| ೩ | ಬ್ರಹ್ಮಚರ್ಯ ಪಾಲನೆ | ೮-೧೨ |
| ೪ | ಭಾಗವತ ಏಳನೇ ಸ್ಕಂದದಲ್ಲಿ ಬ್ರಹ್ಮಚರ್ಯ ನಿಯಮ | ೧೨ |
| ೫ | ಏಕಾದಶ ಸ್ಕಂಧ ಭಾಗವತದಲ್ಲಿ ,, | ೧೩ |
| ೬ | ,, ಉಪಕುರ್ವಾಣ ಬ್ರಹ್ಮಚಾರಿಯ ಧರ್ಮ | ೧೪ |
| ೭ | ,, ನೈಷ್ಠಿಕ ಬ್ರಹ್ಮಚಾರಿಗಳ ಧರ್ಮ | ೧೬ |
| ೮ | ,, ಉಪಕುರ್ವಾಣ ಬ್ರಹ್ಮಚರ್ಯ ಉಪಸಂಹಾರ | ೧೭ |
| ೯ | ಸದಾಚಾರ ಸ್ಮೃತಿಯಲ್ಲಿ ಬ್ರಹ್ಮಚರ್ಯ | ೧೮ |
| ೧೦ | ಪದ್ಮ ಪುರಾಣದಲ್ಲಿ ಬ್ರಹ್ಮಚರ್ಯ ವಿಚಾರ | ೧೯ |
| ೧೧ | ,, ಬ್ರಹ್ಮಚಾರಿ ನಿತ್ಯ ವರ್ಣಾಶ್ರಮಗಳ ಭೋಜನದ ವಿಧಿ | ೨೩ |
| ೧೨ | ,, ಮಲಮೂತ್ರ, ಮುಖ ಶೌಚವಿಧಿ | ೨೬ |
| ೧೩ | ,, ಬ್ರಹ್ಮಚಾರಿ ನಿತ್ಯದ ಧರ್ಮ | ೨೭ |
| ೧೪ | ,, ಗುರುವಿಚಾರ | ೩೦ |
| ೧೫ | ,, ಪ್ರಾಣಾಯಾಮ ಗಾಯತ್ರಿ ಜಪ | ೩೩ |
| ೧೬ | ಭಾರತಶಾಂತಿಪರ್ವದಲ್ಲಿಯಬ್ರಹ್ಮಚರ್ಯ ಧರ್ಮ ವಿವರಣೆ | ೩೫ |
| ೧೭ | ,, ಮನಬುದ್ಧಿ ಇನ್ರುಗಳ ನಿಜ ಸ್ವರೂಪ | ೪೨ |
| ೧೮ | ವಿಷಯ ನಿರ್ಲೇಪ ವಿಚಾರ | ೪೫ |
| ೧೯ | ಪದ್ಮ ಪುರಾಣ ಸ್ವರ್ಗ ಖಂಡದಲ್ಲಿ ಸ್ತ್ರೀಸಂಗನಿಂದಾ | ೪೬ |
| ೨೦ | ಕೆಲವು ಶಂಕಾಗಳು (೧೦) | ೫೧ |
| ೨೧ | ಬ್ರಹ್ಮಚರ್ಯವೆಂದರೇನು? ಅದರ ನಿಗ್ರಹಾದಿ ವಿವರ | ೫೪ |
| ೨೨ | ನೈಷ್ಠಿಕ ಉಪಕುರ್ವಾಣ ಬ್ರಹ್ಮಚರ್ಯ ಸಮಾನವೆ? | ೬೦ |
| ೨೩ | ಗೃಹಸ್ಥಾಶ್ರಮಿಗೆ ಸತಿಯುಳು ಹೇಗಿರಬೇಕು | ೬೩ |

| | | |
|---|---|---|
| ೨೪ | ಸ್ತ್ರೀ ದುಷ್ಟ ಸ್ವಭಾವ ನಿಂದ್ಯ | ೭೮ |
| ೨೫ | ಜಾರ ಪುರುಷರ ದುಷ್ಟಸ್ವಭಾವ ಮತ್ತು ಅವರ ನಿಂದ್ಯ | ೮೮ |
| ೨೬ | ಸ್ತ್ರೀಯರಿಗೆ ಮರುಳಾಗದಿರೆಂದು ಉಪದೇಶ ವಚನಗಳು | ೯೧ |
| ೨೭ | ಇಂಥ ಅಪರಾಧ ಕ್ಷಮಿಸೆ ಭಗವಂತನ ಪ್ರಾರ್ಥನೆ | ೧೦೨ |
| ೨೮ | ವಿಷಯ ವೈರಾಗ್ಯವೇ ಬ್ರಹ್ಮಚರ್ಯಕ್ಕೆ ಮುಖ್ಯ | ೧೦೮ |
| ೨೯ | ಶೂದ್ರನಿಗೆ ಉತ್ತಮರ ಶುಶ್ರೂಷೆಯೇ ಬ್ರಹ್ಮಚರ್ಯ | ೧೦೯ |
| ೩೦ | ಭಾಗವತ ಸಾರೋದ್ಧಾರದಿ, ಇಂದ್ರಿಯ ಜಯ, ವೈರಾಗ್ಯ | ೧೦೯ |
| ೩೧ | ಜ್ಞಾನಿಗಳ ಅಪರಾಧ ಹೇಗೆ ಕ್ಷಮಿಸುತ್ತಾನೆ | ೧೧೦ |
| ೩೨ | ಸದ್ಯಕಾಲದಲ್ಲಿ, ಬ್ರಹ್ಮಚರ್ಯದ ಪಾಲನ | ೧೧೩ |
| ೩೩ | ಭಾರತ ಹರಿವಂಶ ಯೋಗಶಾಸ್ತ್ರಾದಿ, ಇಂದ್ರಿಯ ಜಯ ಬಗೆ | ೧೧೩ |
| ೩೪ | ಸದ್ಯಃಕಾಲದಲ್ಲಿ ಸಂಯಮನದ ಅಭ್ಯಾಸ | ೧೧೬ |
| ೩೫ | ಸ್ತ್ರೀ ಸಂಭೋಗ ವಿ॥ ಉಪಯುಕ್ತ ಮಾತುಗಳು | ೧೧೮ |
| ೩೬ | ಸಂಭೋಗ ವರ್ಜ ಕಾಲಾದಿಗಳು | ೧೧೯ |
| ೩೭ | ಕಾಮೋತ್ತೇಜನ ಕಡಮೆಯಾಗತಕ್ಕ ಉಪಾಯಗಳು | ೧೨೧ |
| ೩೮ | ಸದ್ಯಃಕಾಲದ ಪರಿಸ್ಥಿತಿ | ೧೨೨ |
| ೩೯ | ಇದರ ಸುಧಾರಣೆಯ ಕ್ರಮ ವಿಚಾರ | ೧೨೫ |
| ೪೦ | ಪೂರ್ವಿಕ ಸಂಸ್ಕಾರಗಳು | ೧೨೬ |
| ೪೧ | ಕಾಲ ಚಕ್ರಗತಿ | ೧೨೯ |
| ೪೨ | ಕ್ರಮವಾದ ಸುಧಾರಣೆ, ಗರ್ಭರಕ್ಷಣೆ | ೧೩೧ |
| ೪೩ | ಶಿಶು ಜನ್ಮನಂತರ ಕರ್ತವ್ಯ | ೧೩೨ |
| ೪೪ | ಬಾಲಕರಿಗೆ ನಿಯಮಿತ ಆಹಾರ | ೧೩೪ |
| ೪೫ | ಬಾಲಕರ ನಡೆನುಡಿಗಳ ಶಿಕ್ಷಣ | ೧೩೫ |
| ೪೬ | ಮಾತಾಪಿತೃ, ಶಿಕ್ಷಕರ ಕರ್ತವ್ಯ ಉಪಸಂಹಾರ | ೧೩೬ ೧೩೮ |
| | ತಿದ್ದುಪಡಿ | ೪ ಪುಟ |
| | ಇತರ | ೨ ಪುಟ |
| | ಒಟ್ಟಿಗೆ | ೧೫೨ ಪುಟ |

ಹರಿಃ ಓಂ

ಶ್ರೀ ಲಕ್ಷ್ಮೀನರಸಿಂಹಾತ್ಮಕ ಶ್ರೀ ಲಕ್ಷ್ಮೀವೆಂಕಟೇಶ ಪ್ರಸನ್ನ

ಶ್ರೀ ಗುರುರಾಜೋವಿಜಯತೇ.

**ಸತ್ಯೇನ ಲಭ್ಯತಪಸಾ ಹ್ಯೇಷ ಆತ್ಮಾಸಮ್ಯ**
**ಜ್ಞಾನೇನ ಬ್ರಹ್ಮಚರ್ಯೇಣ ನಿತ್ಯಮ್ || ಅಂತಃ**
**ಶರೀರೇ ಜ್ಯೋತಿರ್ಮಯೋಹಿಶುಭ್ರೋಯಂ**
**ಪಶ್ಯಂತಿಯತಯಃ ಕ್ಷೀಣದೋಷಾಃ ||**

ಮಾಂಡುಕ ಉಪನಿತ್ ತೃತೀಯ ಖಂಡ ೫ನೇ ಮಂತ್ರ

# ಬ್ರಹ್ಮಚರ್ಯ

☆

## ೧ ಅಣಾಗನ ಅಣಕು

ಬ್ರಹ್ಮಚರ್ಯದ ಸ್ಥಿತಿಗತಿಯನ್ನು ಪ್ರತ್ಯಕ್ಷ ಪ್ರಸಿದ್ಧ ಬ್ರಹ್ಮಚಾರಿ ಪುರುಷನೆ ಅನುವಾದ ಮಾಡಿ ಹೇಳಲು ಶಕ್ಯನು. ಮತ್ತು ಅಂತಹ ಪುರುಷನು ಹೇಳಿದ್ದು ಸಾರ್ಥಕವೂ ಇದೆ. ಏಕೆಂದರೆ, ಬ್ರಹ್ಮಚರ್ಯಯುಳ್ಳ ಪುರುಷರ ಸಂಗಡಲೇ ಬ್ರಹ್ಮಚರ್ಯವು ಮೂರ್ತಿಮಂತವಾಗಿಯೇ ನಡೆಯುತ್ತಿದೆ. ಜಿತೇಂದ್ರಿಯಯುಳ್ಳವನು ಯಾವ ದಾರಿಯನ್ನು ಹಿಡಿದು ಹೋಗುತ್ತಾನೋ ಆ ದಾರಿಯಲ್ಲೆ ಬ್ರಹ್ಮಚರ್ಯದ ನಿಜ ತತ್ವವು ಹಿಂದೇ ಬಂದೇ ಬರುತ್ತದೆ. ಬ್ರಹ್ಮಚರ್ಯಯುಳ್ಳ ಪುರುಷರ ಕಂಗಳಿಂದ ಬ್ರಹ್ಮಚರ್ಯದ ಥೆರೆಗಳು ಹೊರಸೂಸಿ ನಾಲ್ಕು ಕಡೆಗೆ ಪ್ರಸರಿಸುತ್ತಲಿವೆ ಆ ಪುರುಷನ ಎಲ್ಲ ಮನೋಭಾವ ಬಯಕೆಗಳು ತನ್ನ ಸಜಾತೀಯ ಭಾವದ ವಿಚಾರವನ್ನೇ ಎಚ್ಚರಗೊಳಿಸುತ್ತಿದೆ. ಇದು ಸಾಮಾನ್ಯ ನಿಯಮ. ಕಾರಣ ಬ್ರಹ್ಮಚರ್ಯದ ಥೆರೆಗಳು ಯಾವ ಯಾವ ಮನುಷ್ಯನ ಹೃದಯವೆಂಬ. ಹೃದದಲ್ಲಿ ಪ್ರವೇಶ ಮಾಡುತ್ತವೆಯೋ ಆ ಆ ಮನುಜರ ಅಂತಃಕರಣದಲ್ಲಿ ಬ್ರಹ್ಮಚರ್ಯ ಭಾವವನ್ನು, ಎಚ್ಚರಗೊಳಿಸುತ್ತಲಿರುತ್ತದೆ.

ನಾನು ಅಜಿತೇಂದ್ರಿಯನು. ಡಾಂಭಿಕನು. ಬ್ರಹ್ಮಚರ್ಯವನ್ನು ಹೇಳುವದೆಂತು ? ಹೇಳಿದರೆ ಜನರ ಮೇಲೆ ಪರಿಣಾಮವಾಗುವದೆಂತು ?, ಪರಿಣಾಮಗೈದರೂ ಜನರು ಪ್ರವರ್ತಿಸುವರೆಂತು ? ಪ್ರವರ್ತಿಸಿದರೂ ನೈಜ ಬ್ರಹ್ಮಚರ್ಯ ಮಹಿಮೆ ಹೊರ ಬೀಳ್ವದೆಂತು ? ಬಿದ್ದರೂ ಬುದ್ಧಿಯಲ್ಲಿ ನೆಲೆಗೊಳಿಸುವದೆಂತೊ? ಇದು ಅಣುಗನ ಅಣುಕೆ ಸರಿ. ಶ್ರೀ ಕೃಷ್ಣ ಭಗವಾನನು, ೭ ವರ್ಷದ ಚಿಕ್ಕ ಬಾಲಕನಿರುವಾಗಲೇ ಅನೇಕ ಗೋಪಿಯರ ವ್ರತ-ಭಂಗಗೈದು ವಿಹಾರ ಮಾಡಿ ಜಿತೇಂದ್ರಿಯನೆಂದೆನಿಸಿದ, ನಿತ್ಯ ಬ್ರಹ್ಮಚಾರಿಯ ಅನುಗ್ರಹಕ್ಕೆ ಪಾತ್ರರಾದ ಅನೇಕ ಭಕ್ತ ದಾಸವರ್ಯರು ಉಂಡು ಸವಿದುಳಿಸಿದ ಎಂಜಲವನ್ನೇ ಮೆದ್ದುದು ಅವರ ವಚನಗಳೆಂದು ಸುಜನರು ಸ್ವೀಕರಿಸುವದಾಗಿ ವಿನಂತಿ. ಬಾಹ್ಯ ಶುಚಿಗೆ ಸದಾಚಾರ ಹೇಗೆಮುಖ್ಯವೊ ಅದರಂತೆ ಅಂತರಂಗ ಮನೋಶುಚಿಗೆ ಇಂದ್ರಿಯ ನಿಗ್ರಹ ರೂಪ ಬ್ರಹಚರ್ಯ ಮುಖ್ಯ.

## ೨ ಬ್ರಹ್ಮಚರ್ಯದ ಆವಶ್ಯಕತೆ

ಬ್ರಹ್ಮಚರ್ಯವನ್ನು ಪರಿಪಾಲನ ಮಾಡುವದು ಎಲ್ಲದೃಷ್ಟಿಯಿಂದಲೂ ಅತ್ಯಾವಶ್ಯಕತೆ ಇದೆ. ಬಹ್ಮಚರ್ಯದಿಂದಲೇ ಬಲ ಬುದ್ಧಿ ತೇಜಸ್ಸು ಇದರಿಂದ ಆಯುವೃದ್ಧಿ ಆರೋಗ್ಯ, ಸಿದ್ಧಿ ಇಹ ಪರಲೋಕ ಸುಖ ಶಾಂತಿ ಎಲ್ಲಿಯವರಿಗೆಂದರೆ, ಶ್ರೀ ಪರಮಾತ್ಮನ ಪ್ರಾಪ್ತಿಯು ಸಹ ಬ್ರಹ್ಮಚರ್ಯದಿಂದಲೇ ಆಗುತ್ತದೆ.

ಇದು ಜೀವನ ಪರಮ ಮುಖ್ಯಧ್ಯೇಯವು, ಜನನ ಮರಣರೂಪ ಸಸಾರ ಫೇರಿಯಿಂದ ನಿರಂತರ ಬಿಡುಗಡೆಯಾಗಲು ಈ ಬ್ರಹ್ಮ ಚರ್ಯವು ಒಂದೇ ಉಪಾಯ ಸಂಭವನಿದೆ ವೇದ ವೇದಾಂತಗಳು ಬ್ರಹ್ಮಚರ್ಯ್ಮ ಮಹಿಮಾ ವಿಶೇಷವಾಗಿ ಗಾನಮಾಡುತ್ತಲಿವೆ. ಶ್ರುತಿ ಹೇಳುವದೇನಂದರೆದ

ಬ್ರಹ್ಮಚರ್ಯೇಣತಪಸಾ ದೇವಾ ಮೃತ್ಯುಮುಪಾನ್ಘತ್, ಬ್ರಹಚರ್ಯ ಈ ತಪಸ್ಸು ದ್ವಾರದಿಂದಲೇ ದೇವತೆಗಳು ಮೃತ್ಯುವಿನನ್ನು ಸಹ ಗೆಲ್ದು ವಿಜಯ ಹೊಂದಲು ಸಮರ್ಥರು.

ಕಾಠಕೋಪನಿಷದದಲ್ಲಿ, ಬ್ರಹ್ಮಚರ್ಯವು ಶ್ರೀ ಪರಮಾತ್ಮನ ಪ್ರಾಪ್ತಿಯ ಮುಖ್ಯ ಸಾಧನವೆಂದು ಹೇಳಿದೆ ದ್ವಿತೀಯವಲ್ಲಿ ೧೫ ನೇ ಮಂತ್ರ.

**ಸರ್ವೇವೇದಾ ಯತ್ಪದಮಾಮನಂತಿ ತಪಾಂಸಿ ಸರ್ವಾಣಿಚ ಯದ್ವದನ್ತಿ । ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ ತತ್ತೆಪದಜ್ಞ ಸಂಗ್ರಹೇಣ ಬ್ರವೀಮ್ಯೋಮಿತ್ಯೇತತ್,**

ಸಕಲ ವೇದಗಳು ಯಾವ ಪದದ ಪರಮಾತ್ಮನ ಸ್ವರೂಪ ವರ್ಣನ ಮಾಡುತ್ತನೆಯೋ ಸಂಪೂರ್ಣ ಎಲ್ಲ ತಪಸ್ಸ ಪ್ರಾಪ್ತಿಗೆ ಸಾಧನ ಮಾರ್ಗ ತೋರುತ್ತಲಿವೆಯೊ ಇಂಥ ಮಾರ್ಗ ಇಚ್ಛಾವಲಂಬಿಗಳಾದ, ಬ್ರಹ್ಮಚಾರಿಗಳು ಬ್ರಹ್ಮಚರ್ಯದ ಪಾಲನಮಾಡುತ್ತಿರುಪರೊ, ಆ ಬ್ರಹ್ಮಚರ್ಯದ ಮಹಿಮೆ ನಾನುನಿಮಗೆ ಸಂಕ್ಷೇಪದಿಂಪ ಹೇಳುತ್ತೇನೆ. ಓಂ ಇದೇಯೆ ಆ ಪದ ಸ್ವರೂಪವಿದೆ ಅಂದರೆ ಶ್ರೀ ಸರ್ವಜ್ಞರ ಭಾಷ್ಯಾನು ಸಾರ ಶ್ರೀ ಮಂತ್ರಾಲಯ ಗುರುರಾಜರ ಖಂಡಾರ್ಥದಲ್ಲಿ ಹೇಳಿರುವನೇನಂದರೆ ನಚಿಕೇತರು ಯಮದೇವರನ್ನು ಕುರಿತು ಬ್ರಹ್ಮ ಪದ, ಸ್ವರೂಪವನ್ನು ಹೇಳಿರೆಂದು ಕೇಳಲು ಯಮದೇವರು ಉಪದೇಶ- 'ಸರ್ವೇವೇದಾ: ಸಮಸ್ತ ವೇದಗಳು 'ಯತ್ಪದಂ, ಯಾವ ಪರಮಾತ್ಮನಸ್ವರೂಪವನ್ನು 'ಆ ಮನಂತಿ, ಪರಮ ಮುಖ್ಯವೃತ್ತಿಯಿಂದಬೋಧಮಾಡುತ್ತವೆಯೋ'ಸರ್ವಾಣಿತಂಪಾಸಿ, ಚ-ಕೃಚ್ಛ್ರ ಚಾಂದ್ರಾಯಣರೂಪ ಎಲ್ಲತಪಸ್ಸುಗಳು 'ಎತ್, ಯಾವ ಉದ್ದೇಶವಾಗಿ ಮಾಡುತ್ತವೆಯೋ ಎಂದು ವದಂತಿ, ವೇದಗಳುಹೇಳುತ್ತವೆ ಯದಿಚ್ಛಂತ, ಯಾವುದನ್ನು ಹೊಂದುವ ಇಚ್ಛೆಯಿಂದ ಬ್ರಹ್ಮಚರ್ಯ. ಬ್ರಹ್ಮ ಗೋಚರ ಶ್ರಾವಣಾದಿಕಂ, ಬ್ರಹ್ಮ ವಿಷಯಕವಾದ ಶ್ರವಣ ಮನನಾದಿ ವಿಚಾರವನ್ನು, ಅಥವಾ ಊರ್ಧ್ವರೇತಸ್ತ್ವಾದಿ[ಇಂದ್ರಿಯನಿಗ್ರಹ]ವ್ರತವನ್ನು, ಚರಂತಿ ಋಷಿಗಳು ಅನುಷ್ಠಾನ ಮಾಡುತ್ತಾರೋ ತತ್ಪದಂ ಆಬ್ರಹ್ಮಸ್ವರೂಪವನ್ನು ತೇ,ನಿಮಗೆ ಸಂಕ್ಷೇಪದಿಂದ ಹೇಳುತ್ತೇನೆ. ಓಂಮಿತ್ಯೇತತ್, ಆಬ್ರಹ ಸ್ವರೂಪವು ಓಂಕಾರದಿಂದ ಉಪಾಸನೆಮಾಡುವದು. ಸಾರಂಶ, ಶ್ರೀ ಹರಿ ರೂಪ ಪರಬ್ರಹ್ಮನ ಪ್ರಾಪ್ತಿಗೆ. **ಸಚ್ಛಾಸ್ತ್ರ** ಬ್ರಹ್ಮಗೋಚರವಾದ **ಶ್ರವಣ ಮನನಾದಿಗಳನ್ನು ಮಾಡುವದು ಮುಖ್ಯ**- ಅಥವಾ ಇಂದ್ರಿಯನಿಗ್ರಹ

**ರೂಪತಪಸ್ಸಾದಿಗಳನ್ನುಮಾಡಿ.** ಆ ಬ್ರಹ್ಮಚರ್ಯ ವ್ರತದಿಂದ ಪರಮಾತ್ಮನ ಪ್ರಸಾದರೂಪ ಒಲುಮೆ.

ಭಗವದ್ಗೀತೆಯಲ್ಲಿ ಸಹ ಇದೇ ಮಂತ್ರಾರ್ಥವು ಸಲ್ಪ ಪರಿವರ್ತನ ಮಾಡುತ್ತ ಈ ಪ್ರಕಾರ ಶ್ರೀ ಕೃಷ್ಣ ಭಗವಾನನು ಹೇಳಿದ್ದಾನೆ.

**ಯದಕ್ಷರಂ ವೇದವಿದೋವದನ್ತಿ. ವಿಶನ್ತಿಯದ್ಯತಯೋ ವೀತರಾಗಃ|| ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿತತ್ತೇ ಪದಂ ಸಂಗ್ರಹೇಣಪ್ರವಕ್ಷ್ಯೇ** ೮|೧೧

ವೇದದ ಇಂಗಿತಾರ್ಥವನ್ನು ಬಲ್ಲ ವಿದ್ವಾನರು ಯಾವ ಸಚ್ಚಿದಾನಂದಘನರೂಪಿಯು, ಘನರೂಪ ಪರಮಪದಕ್ಕೆ ವಿನಾಶ ವಿಲ್ಲೆಂದು ಹೇಳುತ್ತಾರೆಯೋ ವಿಷಯಾ ಸಕ್ತಿ ಇಲ್ಲದ, ಸಂತತ ಪ್ರಯತ್ನಶೀಲ ಸಂಪನ್ನರಾದ ಸನ್ಯಾಸಿ ಮಹಾತ್ಮರ ಗುಂಪು ಯಾವುದರಲ್ಲಿ ಮಗ್ನರಾಗಿ ಪ್ರವೇಶ ಮಾಡುತ್ತಾರೆಯೋ ! ಮತ್ತು ಆ ಪರಮಾತ್ಮನ ಸಂಪ್ರೀತಿ ಇಚ್ಛೆಯುಳ್ಳ ಬ್ರಹ್ಮಚಾರಿಗಳು, ಬ್ರಹ್ಮಚರ್ಯದ ಆಚರಣೆ ಮಾಡುತ್ತಾರೆಯೋ ! ಅಂಥ ಪರಮ ಪಾವನ ಪದವನ್ನು ನಾನು ನಿನಗೋಸ್ಕರ ಸಂಕ್ಷೇಪದಿಂದ ಹೇಳುವೆನೆಂದು ಶ್ರೀ ಕೃಷ್ಣನ ವಚನ ಮತ್ತು ಗೀತಾ ಅಧ್ಯಾಯ ೪ ಶ್ಲೋಕ ೩೯ರಲ್ಲಿ **ಶ್ರದ್ಧಾವಾನ್ ಲಭತೇ ಜ್ಞಾನಂ ತತ್ಪರ ಸಂಯತೇಂದ್ರಿಯಃ** ಕೇವಲ ಆಸ್ತಿಕ್ಯ ಬುದ್ಧಿಯಿಂದ ಭಕ್ತಿಯಿಂದ ಶ್ರೀ ಹರಿಯಲ್ಲಿ ಭಕ್ತಿಯುಳ್ಳ ಸಕಲೇಂದ್ರಿಯಗಳನ್ನು ನಿಗ್ರಹಿಸುವವನು ಜ್ಞಾನ ಸಂಪಾದಿಸುವನು ಮತ್ತು ೩ನೇ ಅಧ್ಯಾಯದಲ್ಲಿ "**ಇಂದ್ರಿಯಾಣಿ ಮನೋ ಬುದ್ಧಿ ರಸ್ಯಾಧಿಷ್ಠಾನ ಮುಚ್ಯತೇ ಏತೈರ್ವಿಮೋಹಯತ್ಯೇಷ ಜ್ಞಾನಮಾವೃತ್ಯ ದೇಹಿನಂ|| ತಸ್ಮಾತ್ ತ್ವಮಿಂದ್ರಿಯಾಣಿ ನಿಯಮ್ಯ ಭರತರ್ಷಭ**" ಇಂದ್ರಿಯಾದಿಗಳು, ಶತ್ರುರೂಪವಾಗಿ ಕಾಮಕ್ಕೆ ಆಶ್ರಯವಾಗಿರುತ್ತವೆ. ಕಾರಣ ಇಂದ್ರಿಯ ನಿಗ್ರಹ ಮಾಡುವದು ಅತ್ಯಾವಶ್ಯವೆಂದು ಅರ್ಜುನನಿಗೆ ಶ್ರೀ ಕೃಷ್ಣ ಹೇಳಿದ್ದಾನೆ. ಮೇಲೆ ವಿವರಿಸಿದ ವೇದಮಂತ್ರ ಗೀತೋಕ್ತ್ಯಾದಿಗಳಲ್ಲಿ ಬಹ್ಮಚರ್ಯದಿಂದಲೇ ಶ್ರೀ ಪರ

ಮಾತ್ಮನ ಪ್ರಾಪ್ತಿಯ ಮುಖ್ಯ ಸಾಧನವೆಂದು ಸ್ಪಷ್ಟೋಕ್ತಿಯಿಂದ, ಹೇಳಿದೆ

ನಮ್ಮ ಸನಾತನ ಧರ್ಮದಲ್ಲಿ ವಿವರಿಸಿದ ವರ್ಣಾಶ್ರಮದ ವ್ಯವಸ್ಥೆಯಲ್ಲಿ, ಶ್ರೀಪರಬ್ರಹ್ಮನಾದ ಶ್ರೀಹರಿಯ ಪ್ರಾಪ್ತಿಯಲಕ್ಷ್ಯ ವಿಟ್ಟೆಯೆ ಬ್ರಹ್ಮಚರ್ಯಪಾಲನ ಮಾಡುವ ನಿಯಮ ಮಾಡಲ್ಪಟ್ಟಿದೆ, ಸನಕಾದಿ ಪರಮ ಋಷಿಗಳು ದೇವರ್ಷಿನಾರದರು ಭಕ್ತಶ್ರೇಷ್ಠನಾದ ಹನುಮಾನ್, ಪರಮಯೋಗಿ ಶಿರೋಮಣಿಶುಕಾಚಾರ್ಯ ಮತ್ತು ವೀರಾಗ್ರಗಣ್ಯರಾದ ಭೀಷ್ಮಪಿತಾಮಹರು ನಮ್ಮಲ್ಲಿಯ ಪ್ರಾಮುಖ್ಯ ತೋರುವ, ಬ್ರಹ್ಮಚಾರಿಗಳಿದ್ದಾರೆ. ಸ್ಮೃತಿ [ಪುರಾಣ] ಗ್ರಂಥಗಳಲ್ಲಿ ಸಹ ಬ್ರಹ್ಮಚರ್ಯದ ಮಹತ್ವ ಮಹಿಮೆ ವರ್ಣಿಸಿದ್ದಾರೆ.

ಲೌಕಿಕ ಪಾರಮಾರ್ಥಿಕ, ಎಲ್ಲ ದೃಷ್ಟಿಯಿಂದಲೂ ವೀರ್ಯದ ರಕ್ಷಣೆಯು ಪರಮ ಉಪಯೋಗವಿದೆ. ವೀರ್ಯರಕ್ಷಣವೇ ಮಾನವಜೀವನ, ವೀರ್ಯನಾಶವೇ ಮೃತ್ಯು, ವೀರ್ಯ ರಕ್ಷಣೆಯಿಂದಲೇ ಲೋಕ ಪರಲೋಕವೆಲ್ಲ ಪ್ರಾಸಾಧಿಸುತ್ತದೆ ವೀರ್ಯಹೀನ ಮನುಜನು ಸಂಸಾರದಲ್ಲಿ ಏನಾದರೂ ಸಹ ಮಾಡಲಾರನು.

ಶರೀರದ ಸಪ್ತ ಧಾತುಗಳಲ್ಲಿಯೂ ವೀರ್ಯವೇ ಸರ್ವೋಪರಿ ಇರುವದ. 'ಮಜ್ಜ್ಯವರೇತೋಭವತಿ ತಸ್ಮಿನ್ ಪ್ರಾಣಪ್ರತಿಷ್ಠಿತಃ ಪ್ರಾಣೋ ನಾರಾಯಣ ತಸ್ಮಾತ್ ರೇತೋಗರ್ಭತ್ವಮೇಷ್ಯತಿ, ಎಂದು ಮಾನಸ ಸ್ಮೃತಿ ಆ ಮಜ್ಜಾದಿಂದಲೇ ರೇತಸ್ಸು ಹುಟ್ಟುತ್ತದೆ ರೇತಸ್ಸಿನಲ್ಲಿ ಪ್ರಾಣನು ಇರುತ್ತಾನೆ. ಆ ಪ್ರಾಣನಲ್ಲಿ ಶ್ರೀ ನಾರಾಯಣನು ಇರುತ್ತಾನೆ, ಆದಕಾರಣ ರೇತಸ್ಸು ಗರ್ಭತ್ವವನ್ನು ಐದುತದೆ. ಕಾರಣ ವೀರ್ಯ ರಕ್ಷಣದ ಅತ್ಯಾವಶ್ಯಕತೆ. ವೀರ್ಯದಿಂದಲೇ ಶರೀರ ಉತ್ಪತ್ತಿ, ವೀರ್ಯದಿಂದಲೇ ಶರೀರರಕ್ಷಾ ವೀರ್ಯವೇ ಜೀವನ ಮುಖ್ಯ ಜೀವ್ಯತ್ವ ಸಾರವಿದೆ ವೀರ್ಯದ ಅಪವ್ಯಯ ದುರುಪಯೋಗ ಮಾಡುವ ಮನುಷ್ಯನು ಯಾನಾಗ್ಯೂ ಸ್ವಸ್ಥನಾಗಿಯೂ ಸುಖಿಯಾಗಿಯೂ ಶಾಂತನಾಗಿಯೂ ಇರಲಾರನು. ವೀರ್ಯನಾಶಮಾಡಿಕೊಂಡ ಮನುಜನು ನಾನಾ ರೋಗಗಳ ಬೇಟೆಯು ಬಲಿಗೆ ಬಿದ್ದು. ಆ ಕಾಲ

ದಲ್ಲಿ ಯುವಕನಿರುವಾಗಲೇ ಕಾಲವಶನಾಗಿ ಮೃತ್ಯುವಿನ ತುತ್ತಾಗುತ್ತಾನೆ. ವೀರ್ಯದ ಬಿಂದುಗಳ ಶಕ್ತಿ ಕಡಿಮೆಯಾಗುವದರಿಂದ ಶರೀರದ ಎಲ್ಲ ಕ್ರಿಯೆಗಳು ಅಸ್ತವ್ಯಸ್ತವಾಗುತ್ತಲಿವೆ. ಮೇದೋದೌರ್ಬಲ್ಯದಿಂದ ಹೆಚ್ಚುಬುದ್ಧಿಯು ವಿಚಾರ ಕುಗ್ಗುತ್ತದೆ, ಸ್ಮರಣ ಶಕ್ತಿ ಕ್ಷೀಣವಾಗುತ್ತಲಿದೆ. ನರಗಳ ನಿರ್ಬಲತೆಯಾಗುತ್ತ ನಡೆಯುದೆ. ರಕ್ತಸಂಚಲನವು ಕಡಿಮೆಯಾಗುತ್ತಲಿದೆ, ದಿನೆದಿನೆ ಇಂದ್ರಿಯಗಳೆಲ್ಲ ಸಿಥಿಲವಾಗುತ್ತಲಿವೆ ಮತ್ತು ಶೀತಉಷ್ಣದಂದ್ವಗಳಸಹನ ಮಾಡಿಕೊಳ್ಳುವ ಶಕ್ತಿ ಕಡಿಮೆಯಾಗುತ್ತಲಿದೆ

ವ್ಯಾಯಾಮಕ್ಕಾದರೂ ಬ್ರಹ್ಮಚರ್ಯದ ಪರಮಾವಶ್ಯಕತೆ ಇದೆ ನಿರಂತರ ವ್ಯಾಯಾಮ ಮಾಡತಕ್ಕವರು ವ್ಯಾಯಾಮ ಮುಗಿದಕೂಡಲೇ ಹಾಲು ಸೇವನ ಮಾಡುವದರಿಂದಲೇ ಅಧಿಕ ಬಲ ಪ್ರಾಪ್ತಿ, ಬ್ರಹ್ಮಚರ್ಯಕ್ಕೆ ಸಹಾಯಕರವು ಈ ಬ್ರಹ್ಮಚರ್ಯದ ಪಾಲನೆಯು ಮಾಡದಿರಲು ವ್ಯಾಯಾಮವು ಸಹ ಹಾನಿಮಾಡತಕ್ಕದ್ದಾಗಿದೆ. ಯಾವ ಪುರುಷರು ಬ್ರಹ್ಮಚರ್ಯ ವಿಷಯಗಳನ್ನು ಲಕ್ಷ್ಯಕ್ಕೆ ತಾರದೇ ವ್ಯಾಯಾಮನಡಿಸಿದರೆ, ಅನೇಕ ರೋಗಗಳಿಗೆ ಬಲಿಯಾಗುತ್ತಾರೆ, ಸ್ವಾಸ್ಥ್ಯ ರಕ್ಷಣೆ ಆರೋಗ್ಯ ಲಭಿಸುವದಕಾಗಿಯೂ ಬ್ರಹ್ಮಚರ್ಯವು ಅನಿವಾರ್ಯವಾಗಿದೆ. ರೋಗಿಗಳ ರೋಗ ನಿವಾರಣೆಗಾಗಿಯೂ ಮತ್ತು ಬಹುತ್ವರೆಯಾಗಿ ಆರೋಗ್ಯ ಭಾಗ್ಯ ಒದಗಿಸಲು ಸಹ ವೈದ್ಯರು ಔಷಧ ಸೇವನೆಯ ಸಂಗಡವೇ ಊಟದಲ್ಲಿ ಪಥ್ಯ ಮತ್ತು ಬ್ರಹ್ಮಚರ್ಯಪಾಲನೆ (ಹಾಸಿಗೆ ಪಥ್ಯ) ಇದೇ ಮುಖ್ಯವೆಂದು ಸಾರಿ ಹೇಳುತ್ತಾರೆ. ಅನುಭವದಿಂದಲೂ ಸಿದ್ಧವಾದುದು.

ಯೋಗ ಸಾಧನ ಮಾಡುವದಕ್ಕಾದರೂ, ಬ್ರಹ್ಮಚರ್ಯ ಪಾಲನೆ ಬಹು ಅವಶ್ಯಕತೆ ಇರುವದು. ಅಷ್ಟಾಂಗ ಯೋಗದಲ್ಲಿ ಮೊದಲನೇ ಪಾವಟಿಗೆ, 'ಐದು ಪ್ರಕಾರದ ಯಮ ಪಾಲನೆಯದೆ. ಮತ್ತು ಈ ಯಮದಲ್ಲಿ ಬ್ರಹ್ಮಚರ್ಯವೇ ಪ್ರಾಮುಖ್ಯವಾಗಿದೆ. ಬ್ರಹ್ಮಚರ್ಯದ ವಿನಾ, ಮನಸ್ಸಿನ ಏಕಾಗ್ರತೇ ಎಂದಿಗೂ ಸಂಭವಿಸಲಾರದು. ಬ್ರಹ್ಮಚರ್ಯದಿಂದ ಹೀನನಾದವನನ್ನು, ಆಲಸ್ಯ ವಿಕ್ಷೇಪಾದಿಗಳು, ಹೆಚ್ಚಿಗೆ ಕಾಡುತ್ತಲಿರುತ್ತವೆ. ಆವನ ಮನಸ್ಸು ಹೆಚ್ಚಾಗಿ, ಚಂಚಲವಾಗುತ್ತದೆ. ಮತ್ತು ಬ್ರಹ್ಮಚರ್ಯದ

ವಿನಾ, ಮನುಷ್ಯನ ಲೌಕಿಕ ಕಾರ್ಯಗಳು ಒಳ್ಳೇದಾಗಿಯೂ, ಚಂದ ವಾಗಿಯೂ ನಡೆಯುವದಿಲ್ಲ ಮತ್ತು ಅಬ್ರಹ್ಮಚಾರಿ ಯಾದವನ ಪಾರ ಮಾರ್ಥಿಕ ಸಾಧನ ವಾದರೂ ಶೇಖರ ಹೊಂದಲಾರದು ಅವನು ಇತೋ ಭ್ರಷ್ಟ ತತೋಭ್ರಷ್ಟನಾಗಿ ದುಃಖದಿಂದ ಜೀವನ ಮಾಡುವನಾಗಿ ಕೊನೆಗೆ ದು:ಖದಿಂದಲೇ ಮರಣ ಹೊಂದುತ್ತಾನೆ.

ಜ್ಞಾನ ಮಾರ್ಗದಲ್ಲಿಯೂ ಸಹ ಬ್ರಹ್ಮಚರ್ಯದ ಅತ್ಯಾವಶ್ಯಕತೆ ಹೇಳಿದೆ. ಛಾಂದೋಗ್ಯ ಉಪನಿಷತಿನಲ್ಲಿ ಕಥೆಯು ಅರಿತ ಜನರು ಮರೆತಿ ರಲಿಕ್ಕಿಲ್ಲ. ಇಂದ್ರ ದೇವರು ಬ್ರಹ್ಮ ದೇವರಲ್ಲಿ ಜ್ಞಾನೋಪದೇಶ ಪಡೆಯಲು ಒಂದುನೂರಾ ಒಂದು ವರುಷದ ವರೆಗೆ ಬ್ರಹ್ಮಚರ್ಯದ ಪಾಲನೆ ಮಾಡಿದ್ದರು. ಇದರಂತೆಯೇ ದಧೀಚಿ ಋಷಿಗಳ ಬಳಿಯಲ್ಲಿ ಅಶ್ವೀನಿಕುಮಾರರು ಜ್ಞಾನೋಪದೇಶಕ್ಕೆ ಹೋದಾಗ್ಗೆ, ದಧೀಚಿ ಋಷಿಗಳು ಅಶ್ವಿನೀ ಕುಮಾರರಿಗೆ ಮೊದಲಿಗೆ ನೀವು ಬ್ರಹ್ಮಚರ್ಯ ವ್ರತ ಪಾಲನೆ ಮಾಡಿರೆಂದು ಹೇಳಿದರು.

ಮತ್ತು ತಾಂತ್ರಿಕ ಸಾಧನಾ ಮತ್ತು ಭಕ್ತಿಯ ಸಾಧನೆಯಲ್ಲಿಯೂ ಸಹ ಪ್ರಾಮುಖ್ಯವಾಗಿ ಬ್ರಹ್ಮಚರ್ಯ ಪಾಲನೆ ಮಾಡುವದೊಂದೆಯೇ ಪುನ: ಪುನಃವಾಗಿ ಗಟ್ಟಿಯಾಗಿಹೇಳುತ್ತದೆ ಸಾರಾಂಶವೇನಂದರೆ ಯಾವ ಪ್ರಕಾರ ಲೌಕಿಕ ಕಾರ್ಯಗಳ ಸಿದ್ಧಿಗೆ ಬ್ರಹ್ಮಚರ್ಯದ ಅವಶ್ಯಕತೆ ಇದೆಯೋ ಅದರಂತೆಯೇ ಪರಮಾರ್ಥ ಸಾಧನದಲ್ಲಿಯೂ ಸಹ ಬ್ರಹ್ಮಚರ್ಯ ಪಾಲನೆಯು ಪರಮ ಮುಖ್ಯವಾಗಿದೆ.ಬಹು ಎಚ್ಚರದಿಂದ ನೆನಪಿನಲ್ಲಿಟ್ಟು ನಡೆಯುವುದು ದೇಹ ಬಲ ಕುಗ್ಗಿ ಮನೋ ಎಲ್ಲ ಸುವಿಚಾರಗಳೇಲೋಪವಾದ ಮೇಲೆಬ್ರಹ್ಮಚರ್ಯವಿಲ್ಲದೇ ಬ್ರಹ್ಮನಪ್ರಾಪ್ತಿಎಲ್ಲಿ? ಯಾವ ಬ್ರಹ್ಮಪದಪ್ರಾಪ್ತಿಗೆಯೆಂದರೆ, ಶ್ರೀಹರಿಯ ಸಂದರ್ಶನಾನಂದ ಮುಕ್ತಿಯನ್ನು ಹೊಂದುವ ವೈಕುಂಠ ಪ್ರಾಪ್ತಿಗೆ ಬ್ರಹ್ಮಚಾರಿಗಳು,ಬ್ರಹ್ಮಚರ್ಯ ವ್ರತ ಪಾಲನ ಮಾಡುತ್ತಾರೆ. ಬ್ರಹ್ಮಚರ್ಯದ ವಾಸ್ತವಿಕ ನಿಜಾರ್ಥವೇನೆಂದರೆ, ಶ್ರೀ ಪರ ಬ್ರಹ್ಮನ ಪ್ರಾಪ್ತ್ಯರ್ಥ ಧ್ಯಾನಯೋಗಾದಿ ಮಾರ್ಗಗಳಿಂದ, ಸಂಚರಣೆ ಮಾಡುವದು, ಅಥವಾ ಬ್ರಹ್ಮಮೀಂಮಾಸಾ ಶಾಸ್ತ್ರದಿಂದ ಪರಬ್ರಹ್ಮನಲ್ಲೇ ರತಿ

ಇಷ್ಟು ವಿಚಾರ ಮಾಡುವದಲ್ಲದೆ, ಯಾವ ಯಾವ ಸಾಧನಗಳಿಂದ ಬ್ರಹ್ಮ ಪ್ರಾಪ್ತಿಯ ಮಾರ್ಗದಲ್ಲಿ ಪ್ರಾಮುಖ್ಯ ಸಾಧನವೆಂದು ಹೇಳಲ್ಪಟ್ಟಿದಿಯೊ ಆ ಸಾಧನದ ಮುಖ್ಯ ಆಚರಣೆ ಮಾಡುವದು. ಇಂಥ ಸಾಧನಗಳೇ ಬ್ರಹ್ಮ ಚರ್ಯ ವ್ರತವೆಂದು ಕರೆಸುತ್ತದೆ

ಬ್ರಹ್ಮಚರ್ಯಾಶ್ರಮದಲ್ಲಿ ಆ ಆಶ್ರಮ ಧರ್ಮರೂಪ ಬ್ರಹ್ಮಚರ್ಯ ಪಾಲನ ಆವಶ್ಯ ಮಾಡುವದಾಗಿ ಹೇಳಿದೆ ಸಾಮಾನ್ಯವಾಗಿ ಅದರಂತೆಯೇ ಆಯಾ ಅವಸ್ಥಾ ಆಶ್ರಮ ಭೇದಾನಸರಿಸಿ ಎಲ್ಲ ಸಾಧನ ಗಳ ಯಥಾ ಶಕ್ತಿ ಅವುಗಳನ್ನು ಅತ್ಯಾವಶ್ಯವಾಗಿಪಾಲನ ಮಾಡ ಲಿಯೇ ಬೇಕು.

ಗೀತಾ ಅಧ್ಯಾಯ ೬ ಶ್ಲೋಕ ೧೪ರಲ್ಲಿ ಸಹ,

ಪ್ರಶಾಂತಾತ್ಮಾ ವಿಗತ ಭೀ ಬ್ರಹ್ಮಚಾರಿ ವ್ರತೇ ಸ್ಥಿತಃ। ಮನಃ ಸಂಯಮ್ಯ ಮಚ್ಚಿತ್ತೋ ಯುಕ್ತ ಆಸೀತ ಮತ್ಪರಃ ॥

ಎಂದರೆ, ಬ್ರಹ್ಮಚಾರಿವ್ರತದಲ್ಲಿರುವವ, ಭಯರಹಿತನಾಗಿ ಭೂತದಯ ಪಶ್ಚಾತ್ತಾಪಾದಿ, ಶಾಂತ ಮನಸ್ಕ ವುಳ್ಳ. ಸಮಾಧಿಯೋಗಿ, ಅಥವಾ ಮನ ಸ್ಸು ಸಂಯಮಮಾಡಿದ ಸಮಚಿತ್ತ ವುಳ್ಳ ಸಾವಧಾನ ಯೋಗಿ ಮನಸ್ಸು ವಶಮಾಡಿಕೊಂಡು ನನ್ನಲ್ಲಿ ಏಕಾಗ್ರಚಿತ್ತ ವುಳ್ಳವನೂ, ನನ್ನ ಪರಾಯಣ ನಾಗಿಯೇ ಇರುವನಾಗಲಿ ಬೇಕು.

## ೩ ಬ್ರಹ್ಮಚರ್ಯ ಪಾಲನೆ

ಬ್ರಹ್ಮಚರ್ಯ ವ್ರತದಲ್ಲಿ ಇರುವದು ಹೇಗೆಂದರೆ ಭಾಗವತ ಸಾರೋ ದ್ಧಾರಾದಿಗ್ರಂಥಗಳಲ್ಲಿ ಬ್ರಹ್ಮಚರ್ಯದ ತಾತ್ವಿಕಾರ್ಥ, ಮುಖ್ಯ ಎರಡನೇ ಪ್ರಕಾರ ವಿವರಿಸಿದ್ದರೂ, ವೀರ್ಯ ಧಾರಣಮಾಡುವದು ಪ್ರಾಮುಖ್ಯಾರ್ಥ ವಿದೆ. ಇದು ಪ್ರಸಂಗಾನುಕೂಲ ಸಹವಿದೆ. ಮನುಷ್ಯ ಶರೀರದಲ್ಲಿ ವೀರ್ಯ ಯೊಂದು ಮಹಾ ಅಮೌಲ್ಯ ವಸ್ತುವಿದೆ. ಅದನ್ನು ಚನ್ನಾಗಿ ಸಂರಕ್ಷಣೆ ಮಾಡದವಿನಾ ಶಾರೀರ, ಮಾನಸಿಕ ಅಥವಾ ಅಧ್ಯಾತ್ಮಿಕ ಯಾವ ಪ್ರಕಾರ

ದ ಬಲವೂ ಪ್ರಾಪ್ತವಾಗುವದಿಲ್ಲ. ಮತ್ತು ಆಬಲ ವೀರ್ಯಾದಿಗಳ ಸಂಚಯು ಆಗುವದಿಲ್ಲ. ಈ ಕಾರಣದಿಂದಲೇ ಆರ್ಯ ಸಂಸ್ಕೃತಿ ಸನಾತನ ನಾಲ ಆಶ್ರಮಗಳಲ್ಲಿ ಬ್ರಹ್ಮಚರ್ಯವೇ ಮೊದಲನೇ ಆಶ್ರಮವಾಗಿದೆ. ಈ ಬ್ರಹ ಚರ್ಯವೇ ಬಾಕಿಮೂರು ಆಶ್ರಮಗಳ ತಳಹದಿಯು ಅಡಿಗಲ್ಲಾಗಿದೆ ಬ್ರಹ ಚರ್ಯ ಆಶ್ರಮದಲ್ಲಿರುವ ಬ್ರಹ್ಮಚಾರಿಗಳು ಪಾಲನ ಮಾಡುವ ಅನೇಕ ನಿಯಮಗಳಿವೆ. ಆ ನಿಯಮಗಳನ್ನು ಪರಿಪಾಲನೆಯಿಂದ ವೀರ್ಯ ಧಾರಣ ಮಾಡಲು ಬಹು ಮಹತ್ತರವಾದ ಸಹಾಯಸಿಗುತ್ತದೆ ಬ್ರಹ್ಮಚರ್ಯ ಪಾ ಲನೆ ಮಾಡುವದರಿಂದಲೇ ಯದ್ಯಪಿ ವಾಸ್ತವಾಗಿ, ವೀರ್ಯವು ಚೆನ್ನಾಗಿ ಧಾರಣವಾಗುತ್ತದೆ. ಆ ವೀರ್ಯದಿಂದಲೇ ಶರೀರದೊಳಗೆ ಒಂದು ಪ್ರಕಾ ರದ ವಿದ್ಯುಚ್ಛಕ್ತಿ ಉತ್ಪನ್ನವಾಗುತ್ತಲಿದೆ, ಆ ವಿದ್ಯುಚ್ಛಕ್ತಿಯಕ ತೇಜಸ್ಸು ಮಹಾ ಶಕ್ತಿಯುಳ್ಳದ್ದಾಗಿರುತ್ತದ್ದೇನಂದರೆ, ಆ ತೇಜಸ್ಸಿನ ಕಾರಣದಿಂದಲೇ ತಸ್ನಿಂದ ತಾನೆಯೆ ಪ್ರಾಣ ಮತ್ತು ಮನಸ್ಸಿನ ಗತಿಯು ಸ್ಥಿರವಾಗುತ್ತದೆ. ಮತ್ತು ಸಂತತವಾಗಿ ನಡೆದ ಚಿತ್ತದ ಪ್ರವಾಹವು ಧೇಯು ವಸ್ತುವಿನ (ನಿಜ) ಸ್ವಭಾವಿಕ ಗತಿಹೊಂದುತ್ತಲಿರುತ್ತದೆ.

ಇವತ್ತು ನಾಳೆಯು ಜನರು ಎಷ್ಟೂ ಪ್ರಯತ್ನಪಟ್ಟರು ಧ್ಯಾನವನ್ನರಿ ಯರು. ಅವರುಗಳ ಚಿತ್ತ ಧೇಯುವಾದ ವಸ್ತುವಿನಲ್ಲಿ ನಿಲ್ಲುವದೇ ಇಲ್ಲ. ಇದಕ್ಕೆ ಮುಖ್ಯ ಕಾರಣವೇನೆಂದರೆ ಇಂದಿನ ಕಾಲದ ಜನರು ವಿರ್ಯಧಾರ ಣವೇಮಾಡಿಲ್ಲ. ಮಾಡಿಲ್ಲ ನಿಜವಾಗಿಯೂ ಮಾಡಿಲ್ಲ

ಎದ್ಯಪಿ ಶಾಸ್ತ್ರದಲ್ಲಿ ವಿವಾಹವಾದಮೇಲೆಯೂ, ತನ್ನ ಪತಿವ್ರತೆ ಪತ್ನಿ ಯಸಂಗತ ನಿಯಮಿತ ಜೀವನದಿಂದ ನಡೆಯುವದಾದರೂ, ಬ್ರಹ್ಮಚರ್ಯ ಸಮವೆಂದು ಹೇಳಿದೆ. ಮತ್ತು ಇದರಿಂದಲೂ ಧ್ಯಾನಯೋಗದಲ್ಲಿ ಮಹತ್ತರ ಸಹಾಯವಾಗುತ್ತಲಿದೆ ಪರಂತು ಯಾರು ಮೊದಲಿಸಿಂದಲೆಯೇ ಬ್ರಹ ಚರ್ಯದ ನಿಯಮಗಳನ್ನು ಒಳ್ಳೆ ದೃಢವಾದ ಅಂದವಾದ ನಿಯಮದಿಂದ ಪಾಲನಮಾಡಿರುವರೋ ಮತ್ತು ಧ್ಯಾನಯೋಗದ ಸಾಧನ ಸಮಯವರೆಗೆ, ಯಾರ ವೀರ್ಯವು ಬಾಹ್ಯ ರೂಪದಲ್ಲಿ ಯಾವ ಪ್ರಕಾರದಿಂದಲೂ ರಕ್ಷಣೆ ಯಾಗಿದಿಯೊ, ಅವರಿಗೆ ಧ್ಯಾನಯೋಗದಲ್ಲಿ ಬಹು ಶೀಘ್ರವಾಗಿಯೂ, ಮತು

ಚನ್ನಾಗಿ ವಿಧಾನ ಪೂರ್ವಕದಿಂದ ಸಫಲತೆಯನ್ನು ಹೊಂದುತ್ತಲಿದೆ ಮನ ಸ್ಮೃತ್ಯಾದಿ ಅನೇಕ ಗ್ರಂಥಗಳಲ್ಲಿ ಮತ್ತು ಎರಡನೆ ಶಾಸ್ತ್ರಗಳಲ್ಲಿಯೂಸಹ ಬ್ರಹ್ಮಚಾರಿಗಳು ಪಾಲನಮಾಡುವ ವ್ರತನಿಯಮಗಳನ್ನು ಬಹುಸುಂದರ ವಾಗಿಯೂ ವಿಧಾನಪೂರ್ವಕವಾಗಿಯೂ, ವರ್ಣಿಸಿರುವರು. ಅದರಲ್ಲಿ ಪ್ರಾ ಮುಖ್ಯಯಾವೆಂದರೆ ಬ್ರಹ್ಮಚಾರಿಗಳು ನಿತ್ಯಸ್ನಾನಮಾಡಬೇಕು. ಸುವಾಸನೆ ಗಂಧ (ಪರಿಮಳ) ಹಚ್ಚಗೂಡದು. ಕಣ್ಣಿಗೆ ಕಾಡಿಗೆ ಅಥವಾ ತಂಪಾದ ಸುರಮಾ ಕಜ್ಜಲ ಹಚ್ಚಬಾರದು ತೈಲಾಭ್ಯಂಗನ ಕೂಡದು ಅರಳಿದ ಸುವಾ ಸನೆ ಹೂ ಮೂಸಿನೋಡಕೂಡದು. ಸುಗಂಧ ದ್ರವ್ಯಗಳ ವಾಸನೆಸಹಕೂಡದು ಅರಳಿದ ಅಲರ್ಗಳಕಂಪನೆಯುಹಾರ ಧರಿಸಕೂಡದು, ವಿಷಯಾದಿಗಳಲ್ಲಿ ಆಸಕಿ ಪುಟ್ಟುವ ನೃತ್ಯ, ನಾಟ್ಯ, ಸಂಗೀತಗಾನ, ಮೃದಂಗಾದಿ ವಾದ್ಯಗಳ ಬಾರಿಸ ಕೂಡದು ಕಾಲೊಳಗೆ, ಜೋಡು (ರಕ್ಷಾ) ಮೆಡಬಾರದು ಮಂಚದಮೇಲೆ ಮಲಗಕೂಡದು ಇಸಪೆಟ್, ಚದುರಂಗಾದಿ ಜುವ್ವಾ ಜೂಜಾಟ ಪಂದ್ಯಾಟ ಗಳನ್ನಾಡಬಾರದು ಸ್ತ್ರೀಯರನ್ನು ಕಣ್ಣೆತ್ತಿ ನೋಡಬಾರದು ಸ್ತ್ರೀಯರ ವಿಷಯವಾಗಿ ಯಾವತರದ ಮಾತುಗಳನ್ನಾಡಕೂಡದು. ನಿಯಮಿತವಾಗಿ ಲಘುಪದಾರ್ಥಗಳ ಭೋಜನಮಾಡುವದು. ಮೃದು ಅಂದವಾದ ವಸ್ತ್ರಗ ಳನ್ನು ಧರಿಸಬಾರದು ದೇವತೆಗಳು ಋಷಿಗಳು, ಗುರುಗಳ ಪೂಜಾ, ಮತು ಸೇವಾ ನಿರಂತರ ಮಾಡಬೇಕು ಯಾರ ಸಂಗಡಲೂ ವಾದವಿವಾದಮಾಡ ಕೂಡದು, ಯಾರ ನಿಂದ್ಯೆಯೂ ಮಾಡಬಾರದು ಸಂತತ ಪರರಿಗೆ ಅಹಿತ ವಾಗದೇ ಇದ್ದ ಸತ್ಯಮಾತಾಡುತ್ತಲಿರಬೇಕು. ಯಾರ ತಿರಸ್ಕಾರ, ನಿಂದ ಅವಹೇಲನಮಾಡಬಾರದು. ಪರರಿಗೆ ಉಪದ್ರವಕೊಡದೇ ಇದ್ದ ಅಹಿಂಸಾ ಧರ್ಮವನ್ನು ಕಾಯಾವಾಚಾ ಮನಸ್ಸಿನಿಂದ ಪಾಲನಮಾಡಬೇಕು, ಕಾಮ ಕ್ರೋಧ, ಲೋಭಗಳು ಸರ್ವಥಾ ಎಲ್ಲರೀತಿಯಿಂದತ್ಯಾಗಮಾಡಬೇಕು. (ಬಿಡ ಬೇಕು) ಒಬ್ಬನೇ ಮಲಗಬೇಕು. ಯಾವಾಗ್ಯೂ ಯಾವರೀತಿಯಿಂದಲೂ ವೀರ್ಯ ಪಾತ ಆಗಗೊಡಬಾರದಂತೆ ಜಾಗ್ರತೆಯಿಂದ ವೀರ್ಯ ರಕ್ಷಣ ಮಾಡುವದು ಇಂಥ ಕಠಿಣ ತರವಾದ ಅನೇಕ ನಿಯಮಗಳನ್ನು ಚನ್ನಾಗಿ

ಪಾಲನಮಾಡುವದು ಇವೇ ಮೊದಲಾಗಿ ಬ್ರಹ್ಮಚಾರಿಯ ವ್ರತನಿಯಮ ಗಳಿವೆ.

ಶ್ರೀಕೃಷ್ಣ ಭಗವಾನನು ಇಲ್ಲಿ ಬ್ರಹ್ಮಚಾರಿಯ ವ್ರತ ನಿಯಮಗಳನು ಹೇಳುವದಲ್ಲದೆ, ಆಶ್ರಮಧರ್ಮದ ಉತ್ತಮ ಸಂಕೇತವೂಮಾಡಿ ತೋರಿದ್ದಾನೆ ಯಾವ ಇತರ ಗೃಹಸ್ಥವಾನಪ್ರಸ್ಥ ಸನ್ಯಾಸಿ ಮುಂತಾಶ್ರಮದ ಜನರು ಧ್ಯಾನಯೋಗದ ಸಾಧನಮಾಡುವರೊ ಅವರಿಗೂ ಕೂಡ ವೀರ್ಯ ಧಾರಣ ಸಂರಕ್ಷಣ, ಮಾಡುವದು ಅತ್ಯಾವಶ್ಯವಿದೆ ವೀರ್ಯಧಾರಣಮಾಡ ವಲ್ಲಿ ಮೇಲೆ ಹೇಳಿದ ಬ್ರಹ್ಮಚಾರಿ ವ್ರತಗಳನ್ನು ಎಲ್ಲರೂ ಪಾಲನಮಾಡು ವದು ಅತ್ಯಾವಶ್ಯಕ ಸಹಾಯಕವಾಗಿವೆ ಇವೆ ಬ್ರಹ್ಮಚಾರಿಗಳ ವ್ರತಗಳಿವ್ಹೇ ಮತ್ತು ಮನಸ್ಸುಬಿಗಿಹಿಡಿದು ನೃಥನಾಗಿ ಸಾಧನಮಾಡುವದೇ ಬ್ರಹ್ಮಚರ್ಯ ವ್ರತದ ಸ್ಥಿರ ಸ್ಥಿತಿಗತಿಯಿದೆ

**ಪ್ರಧಾನವಾಗಿ ಮುಖ್ಯ ಬ್ರಹ್ಮಚರ್ಯದ ತತ್ವವೇನೆಂದರೆ ವೀರ** ಬಿಂದುಗಳ ಸಂಶೋಧನ ಪೂರ್ವಕ, ಸಂರಕ್ಷಣೆ ಇದರಿಂದ ವಿಷಯವಾಸನಾ ನಾಶವಾಗಿ ಪರಬ್ರಹ್ಮಪ್ರಾಪ್ತಿಯ ಧ್ಯಾನಯೋಗಕ್ಕೆ ಬಹು ಸಹಾಯ ದೊರೆಯುತ್ತದೆ ಊರ್ಧ್ವರೇತಸ್ಕರಾದ ನೈಷ್ಠಿಕ ಬ್ರಹ್ಮಚಾರಿಗಳವೀರ್ಯವು ಯಾವ ಅವಸ್ಥೆಯಲ್ಲಿಯೂ ಸಹ ಅಧೋಮುಖವಾಗುವದಿಲ್ಲ ಈ ಕಾರಣದಿಂದ ಅನಾಯಾಸದಿಂದ ಪರಬ್ರಹ್ಮನನ್ನು ಪಡುಕುವ ಮಾರ್ಗದಲ್ಲಿ ಮುಂದೆ ಹೋಗುತ್ತಲಿರುತ್ತಾರೆ

ಈ ನೈಷ್ಠಿಕ ಬ್ರಹ್ಮಚಾರಿಗಳ, ಕೆಳಗಿನ ತರಗತಿಯುವರು ಯಾರಿರುವರೋ ಅಂದರೆ, ಅವರ ವೀರ್ಯ ಬಿಂದುವು ಕೆಲವು ಸಮೇಳೆಯು ಅಧೋಮುಖವಾಗಿ ಅಲ್ಪ ಜರಿದಾಗ್ಯೂ ಅವರೂ ಸಹ ಮನ, ವಚನ, ಕಾಯದಿಂದ ಮೈಥುನ ಸರ್ವಥಾ ತ್ಯಾಗಮಾಡಿ, ವೀರ್ಯಸಂರಕ್ಷಣಮಾಡಿಕೊಂಡಿರುವರೋ ಇದು ಸಹ ಒಂದು ತರಹದ ಬ್ರಹ್ಮಚರ್ಯವಿದೆ. ಗರುಡ ಪುರಾಣದಲ್ಲಿಯೂ ಹೇಳಿದೆ

**ಕರ್ಮಣಾಮನಸಾವಾಚಾ, ಸರ್ವಾವಸ್ಥಾತು ಸರ್ವದಾ| ಸರ್ವತ್ರಮೈಥುನ ತ್ಯಾಗೋ ಬ್ರಹ್ಮಚರ್ಯ ಪ್ರಚಕ್ಷತೆ ||** ಇದೇಕಾರಣದಿಂ

ದೆಯೇ ಆಶ್ರಮ ವ್ಯವಸ್ಥಾ ಭೇದ ಮಾರ್ಮಿಕ ಲಕ್ಷ್ಯವು ಸಹ ಪರಬ್ರಹ್ಮನಾದ ಶ್ರೀಹರಿಯ ಪ್ರಾಪ್ತಿಗೋಸುಗವೆ ಇವೆ ಬ್ರಹ್ಮಚರ್ಯ ಎಲ್ಲದಕಿಂತಲೂ ಮೊದಲನೇ ಆಶ್ರಮವಿದೆ. ಈ ಬ್ರಹ್ಮಚರ್ಯದಲ್ಲಿ ವಿಶೇಷ ಸಾವಧಾನ ಚಿತ್ತ ದಿಂದ ಬ್ರಹ್ಮಚರ್ಯದನಿಯಮವನ್ನು ಪಾಲನಮಾಡಬೇಕಾಗುತ್ತದೆ. ಇದೇ ಕಾರಣದಿಂದೆಯೇ ಪರಬ್ರಹ್ಮನ ಇಚ್ಛೆಮಾಡುವ ಬ್ರಹ್ಮಚಾರಿಯು, ಬ್ರಹ್ಮ ಚರ್ಯದ ಆಚರಣೆಗಳನ್ನು ಪಾಲನಮಾಡುತ್ತಾನೆ.

## ೪ ಭಾಗವತದಲ್ಲಿ ಬ್ರಹ್ಮಚರ್ಯನಿಯಮ

ಸಪ್ತಮಸ್ಕಂಧ ಭಾಗವತದಲ್ಲಿ ಶ್ರೀ ನಾರದರು ಧರ್ಮರಾಜನ ಗೋಸ್ಕರ ಉಪದೇಶಮಾಡಿದ್ದು ಶುಕರು ಪರಿಕ್ಷತರಿಗೆ ಚನ್ನಾಗಿ ಉಪ ದೇಸಿದ್ದೇನೆಂದರೆ ಬ್ರಹ್ಮಚಾರಿಗಳು ಬ್ರಹ್ಮಚರ್ಯದಿಂದ ಇಂದ್ರಿಯನಿಗ್ರಹ ಮಾಡಿ ಗುರುಗಳ ಗೃಹದಲ್ಲ ವಾಸಮಾಡಬೇಕು, ಈಗೀನ ಕಾಲಗುರುಗೃಹ ಕೆಲಸವೇ ಇಲ್ಲ ಬ್ರಹ್ಮಚರ್ಯಪಾಲನವೆಲ್ಲಿ ? ಸೇವಕನತೆರ ಬಹುವಿನೀತ ನಾಗಿ ನಡೆಯುತಕ್ಕದ್ದು. ಗುರುಗಳ ಹಿತ ಚಿಂತನೆಮಾಡುತ್ತ ಗುರುಗಳಲ್ಲಿ ಅತಿ ದೃಢಭಕ್ತಿ ಇಡಬೇಕು. ಮುಂಜಾನೆ ಸಂಜಿ ಕಾಲದಲ್ಲಿ ಗುರು ಅಗ್ನಿ ಸೂರ್ಯ ಇವರಲ್ಲಿರುವ ಶ್ರಿ ವಿಷ್ಣುವಿನ ಉಪಾಸನೆಮಾಡುವದು. ತ್ರಿಕಾಲ ಸಂ ಧ್ಯಾವೇಳೆ ವೇಳೆಯಲ್ಲಿ ಮಾಡುತ್ತ ಏಕಾಗ್ರ ಚಿತ್ತದಿಂದ ಗಾಯತ್ರಿಮಂತ್ರ ಜಪಮಾಡಬೇಕು ಸೂರ್ಯೋದಯ ಮತ್ತು ಸೂರ್ಯಾಸ್ತಸಮಯ ಸಂಧ್ಯಾ ಕಾಲ ನಿಮಿತ್ತವಾಗಿ ಮೌನಧಾರಣ ಮಾಡಬೇಕು. ಗುರುಗಳು ಕರೆದ್ಕೂಡಲೆ ತಡಮಾಡದೆ ಹೋಗಿ ಅವರಾಜ್ಞೆಯಂತೆ ಒಳ್ಳೇರಿತಿಯಿಂದ ಕುಳಿತು ಗುರುಗಳು ಹೇಳಿದ ವೇದ ಪಾಠ ಕಲಿಯಬೇಕು ಪಾಠ ಪ್ರಾರಂಭ. ಪಾಠ ಮುಗಿದಮೇಲೆಯೂ ಸಹ ಗುರುಗಳಿಗೆ ನಮನಮಾಡಬೇಕು ಶಾಸ್ತ್ರದಲ್ಲಿ ಹೇಳಿದಂತೆ ಮೇಖಲ ಹುಲ್ಲಿನ ಉಡದಾರ ಕೃಷ್ಣಾಜಿನ ಜಟಾಯಜ್ಞೋ ಪವೀತದಂಡಕಮಂಡಲು, ಪವಿತ್ರ ಬಲಗೈಯಲ್ಲಿ ದರ್ಭಧಾರಣಮಾಡು ವದು ಗುರುವಾಜ್ಞೆಯಂತೆ ಪ್ರಾತಃ ಸಾಯಂಕಾಲ ಭಿಕ್ಷಾಟಣೆಮಾಡಬೇಕು.

ಭಿಕ್ಷಾದದಲ್ಲಿ ದೊರೆತದ್ದೆಲ್ಲ ತಂದು ಗುರುಗಳ ಸನ್ನಿಧಿ ಅರ್ಪಿಸಬೇಕು. ಗುರುಗಳು ಆಜ್ಞಾ ಇತ್ತರೆ ಮಿತ ಭೋಜನ ಮಾಡುವದು, ಒಂದಾನೊಂದು ಸಮಯ ಗುರುಗಳು ಊಟಮಾಡಲು ಆಜ್ಞಾ ಮಾಡದಿದ್ದರೆ ಆದಿನ ಉಪೋಷಣೆಮಾಡಬೇಕು. ವೀರ್ಯರಕ್ಷಣಮಾಡುತ್ತ ಬ್ರಹ್ಮಚರ್ಯದಿಂದ ತ್ರಿಸ್ವಾಭಾವಿ ಮಿತ ಆಹಾರಿ ಕಾರ್ಯದಕ್ಷತೆ ಜಿತೇಂದ್ರಿಯ ಹರಿಗುರು ಭಕ್ತಿಯುತನಾಗಿರಬೇಕು ಸ್ತ್ರೀ ಅಥವಾ ಸ್ತ್ರಿ ಲಂಪಟ ಪುರುಷರ ಸಂಗಡಮಾತನಾಡಕೂಡದು, ಮತ್ತು ಸ್ತ್ರೀಯರ ಸಂಬಂಧ ಯಾವ ಮಾತುಸಹ ಆಡಬಾರದು ಇಂದ್ರಿಗಳು ಮಹಾ ದುರಂತ ಬಲವತ್ತರವಾದವು ಒಳ್ಳೇ ಮಹತ್ತರವಾದ ಜಿತೇಂದ್ರಿಯ ಪುರುಷರ ಮನಸ್ಸು ಮೂರಾ ಬಟ್ಟೆಮಾಡಿಕೆಡಿಸಿ ಬಿಡುತ್ತವೆ ಮತ್ತು ತರುಣ ಬ್ರಹ್ಮಚಾರಿಯು ಅನ್ಯರಿಂದ ಸ್ತ್ರೀಯರಿಂದಲೂ ತನ್ನ ಕೂದಲುಗಳನ್ನು ಹಿಕ್ಕಿಸಿಕೊಳ್ಳುವದು ಮೈ ಕೈ ಕಾಲು ಒತ್ತಿಕೊಳ್ಳುವದು ಎಂಣೆ ಹಚ್ಚಿಯರಕೊಳ್ಳುವದು. ಸರ್ವಥಾ ಮಾಡಕೂಡದು ಸಾಕ್ಷಾತ್ ಗುರುಪತ್ನಿಯರಿಂದಾದರೂ ಯಾವಾಗಲೂ ತೈಲಾದಿಗಳನ್ನು ಹಚ್ಚಿಸಿಕೊಳ್ಳಬಾರದು. ಸ್ತ್ರೀಯರು ಪ್ರತ್ಯಕ್ಷ ಅಗ್ನಿಯಿದ್ದಂತೆ. ಪುರುಷರು ಹೆತ್ತುಪ್ಪದಿಂದ ತುಂಬಿದ ಮಣ್ಣಿನಕೊಡದಂತೆ ಇರುವರು ಕನ್ಯಾಗಳಿಂದ ಸಹ ಯಾವಕಾರಣ ಹೊತ್ತಾಗಿ ಮಾತಾಡಕೂಡದು ಏಕಾಂತದಲ್ಲಂತೂ ಯಾವ ಸ್ತ್ರೀಯರ ಸಂಗಡಲೂ ಮಾತನಾಡಬಾರದು ಬ್ರಹ್ಮಸಾಕ್ಷಾತ್ಕಾರ ಆಗುವ ಪರಿಯಂತ ಇನೆ ಧೃಢನಿಯಮ ಗೃಹಸ್ಥ ವಾನಪ್ರಸ್ಥ ಸನ್ಯಾಸಿಗಳು ಸಹ ಪಾಲನಮಾಡಬೇಕು

## ೫ ಮತ್ತು ಏಕಾದಶಸ್ಕಂಧ ಭಾಗವತ

ಉದ್ಧವನಿಗೆ ಶ್ರೀ ಕೃಷ್ಣಭಗವಾನನು, ಉಪದೇಶಮಾಡಿದ ಬ್ರಹ್ಮಚರ್ಯ ಮುಖ್ಯ ಸಾರಂಶವೇನದರೆ. ಈ ಎಲ್ಲ ವಿಷಯವು ಒಂದೇ ಇದ್ದರೂ ಶ್ರೋತೃವಕ್ತೃಕಾಲಭೇದದಿಂದ, ಅನೇಕ ವಿಚಾರ ತರಂಗಗಳು ಬೇರೆ ಬೇರೆ ಇರುವವು ಆ ವಿಚಾರದ ಮಾಧುರ್ಯವೂ ಇದರ ಫಲವು ಬೇರೆ, ವಿಧವಾಗಿ ಪರಿಣಮಿಸುವಾದಕಾರಣ ಎಲ್ಲವೂ ವಿಚಾರಕ್ಕೆ ಯೋಗ್ಯವಾದುವು.

ಉದ್ಧವನನ್ನು ಕುರಿತು ಶ್ರೀ ಕೃಷ್ಣನು ಹೇಳಿದ್ದೇನಂದರೆ ಬ್ರಹ್ಮಚಾರಿಗಳಲ್ಲಿ ಎರಡು ವಿಧರಾಗಿರುತ್ತಾರೆ.

**೧ ಉಪಕುರ್ವಾಣ ಬ್ರಹ್ಮಚಾರಿ ಮತ್ತು**
**೨ ನೈಷ್ಟಿಕ ಬ್ರಹ್ಮಚಾರಿ ಎಂದು** ಎರಡುವಿಧ

೧ ಯಾವ ಬ್ರಹ್ಮಚಾರಿಯು ಮುಂದೆ ಗ್ರಹಸ್ಥಾಶ್ರಮ ಅಥವಾ ಎರಡನೇ ಆಶ್ರಮ ಸ್ವೀಕಾರಮಾಡುವನಿರುತ್ತಾನೊ ಆತನಿಗೆ ' ಉಪಕುರ್ವಾಣ ಬ್ರಹ್ಮಚಾರಿ ಎಂತಲೂ, ೨. ಯಾವ ಬ್ರಹ್ಮಚಾರಿಯು ಆ ಮರಣಾಂತರ ಬ್ರಹ್ಮಚರ್ಯ ವ್ರತದಿಂದಲೇ ಇರುವದು, ನೈಷ್ಟಿಕ ಬ್ರಹ್ಮಚಾರಿ ಎಂದು ಕರೆಸುವರು ಬ್ರಾಹ್ಮಣ ಕ್ಷತ್ರಿಯ ವೈಶ್ಯ, ಈಮೂರುವರ್ಣದವರಿಗೆಮಾತ್ರ ' ದ್ವಿಜ ಎಂತ ಸಂಜ್ಞಾ ಇದೆ. ಕಾರಣವೇನಂದರೆ ಈ ತ್ರೈವರ್ಣದವರ ನೈಸರ್ಗಿಕ ಸ್ವಾಭಾವಿಕ ಜನನ ರೀತ್ಯಾ ಒಂದು ಜನ್ಮ, ಮತ್ತೊಂದ ವಿಧ್ಯುಕ್ತ ಸಂಸ್ಕಾರದಿಂದ ಎರಡನ್ನೆ ಜನ್ಮವೆಂದು ವಿಧಿಯುಕ್ತ ಜನ್ಮದ ಪರಾಪರೆ ಎಂದರೆ ಗರ್ಭಾಧಾನ ಸಂಸ್ಕಾರ ಮೊದಲು ಪ್ರಾರಂಭಿಸಿ ಉಪನಯನ [ಮುಂಜಿವಿ] ವರಿಯುಂತವಾಗಿ ದ್ವಿಜ ಜನ್ಮಸಿದ್ಧವಾಗುತ್ತದೆ.

**೬ ಉಪಕುರ್ವಾಣ ಬ್ರಹ್ಮಚಾರಿಗಳ ಧರ್ಮ** ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಈ ಮೂರುವರ್ಣದ ಪುರುಷರು ದ್ವಿಜಜನ್ಮಹೊಂದಿದಮೇಲೆ ಅಂದರೆ ಮೌಂಜಿಬಂಧನ ನಂತರ ಗುರುಗಳ ಆಶ್ರಮದಲ್ಲಿದ್ದು ಮೊದಲಿಗೆ ಇಂದ್ರಿಯ ನಿಗ್ರಹಮಾಡಲಿಕ್ಕೆ ಸಾಧನಗಳನ್ನು ಲಕ್ಷಿಸಿಕಲಿಯಬೇಕು. ಮತ್ತು ಗುರುಗಳು ಅಧ್ಯಯನ ಮಾಡಲಿಕ್ಕೆ ಕರೆದರೆ ಅವರಿಂದ ವೇದ ವೇದಾಂಗಗಳ ಪಾಠವನ್ನು ಕಲಿತು ಅದರ ಅರ್ಥವನ್ನು ಚನ್ನಾಗಿ ಮನನಮಾಡಬೇಕು ಬ್ರಹ್ಮಚಾರಿಯು, ಮೇಖಲ. ಉಡುದಾರ ಮೃಗಾಜಿನ, ದಂಡ ತುಳಸಿಮಾಲಾ ಯಜ್ಞೋಪವೀತ ಕಮಂಡಲು, ದರ್ಭ ಇವುಗಳನ್ನು ಧಾರಣಮಾಡಬೇಕು ಅಭ್ಯಂಗ ಎಣ್ಣೆಹಚ್ಚಿ ಯುರಕೊಳ್ಳುವದು ಬಿಟ್ಟು ಜಟಾ ಬೆಳಸಬೇಕು ಪಳ್ಳೇ ಬಿಳೇ ರೇಶಿಮಿ ಮೆತ್ತನ ಮತ್ತು ತೆಳ್ಳನ ಸುಂದರವಾದ ಹೊಳೆಯುವ

ವಸ್ತ್ರಗಳನ್ನುಡಬಾರದು ಅಂಥ ವಸ್ತ್ರಗಳ ಹವ್ಯಾಸಕ್ಕೆ ಹೋಗಕೂಡದು ಕುಳ್ಳಿರುವ ಪೀಠಾಧಿಗಳು ಚಿತ್ರ ವಿಚಿತ್ರವಾದ ಮಣೆಗಳಿರಬಾರದು. ಬ್ರಹ್ಮಚಾರಿಗಳು, ಸ್ನಾನ ಹೋಮ, ಜಪ ಊಟ ಮಲ ಮೂತ್ರ ವಿಸರ್ಜನಕಾಲಗಳಲ್ಲಿ ಮಾತಾಡದೆ. ಸುಮ್ಮನಿದ್ದು ಮೌನಧರಿಸಬೇಕು. ಕೇಶನಖಗಳು ತೆಗಸಬಾರದು ಅಂದರೆ ಆಯುಷ್ಯಕರ್ಮಮಾಡಿಸಕೂಡದು ಬ್ರಹ್ಮಚಾರಿಗಳು ವೀರ್ಯಪತನ ಯಾವಕಾಲದಲ್ಲಿಯೂ,ಯಾವರೀತಿಯಿಂದಲೂ ಮಾಡಕೂಡದು ಅಕಸ್ಮಾತ್ತಾಗಿ ತನ್ನಿಂದ ತಾನೆ ವೀರ್ಯಪತನವಾದರೆ ಸ್ನಾನಮಾಡ ಆಚಮನಮಾಡಿ ಪ್ರಾಣಾಯಾಮ ಪೂರ್ವಕ ಗಾಯತ್ರಿ ಮಂತ್ರ ಜಪಮಾಡಬೇಕು. ಸ್ವಚ್ಛವಾಗಿಯೂ, ಸದಾಚರಣೆಯಿಂದ ಇರುತ್ತ ದೇವ ಅಗ್ನಿ ಸೂರ್ಯ ಗುರು ಗೋಬ್ರಾಹ್ಮಣ, ಮಾತಾಪಿತೃಗಳು ಮತ್ತು ಹಿರಿಯರಾದವರೂ ಮತ್ತು ಜ್ಞಾನಿಗಳ ಸೇವಾ ಏಕಚಿತ್ತದಿಂದಮಾಡುವದು ಪ್ರಾತಃ ಸಾಯಂಕಾಲಗಳಲ್ಲಿ ಮೌನ ವ್ರತದಿಂದ ಸಂಧ್ಯಾವಂದನಾರ್ಥವನ್ನು ತಿಳಿದು ಸಂಧ್ಯಾಮಾಡಬೇಕು.

**ಆಚಾರ್ಯ** ವೇದಾಧ್ಯಯನಮಾಡಿಸುವ ಗುರುಗಳಲ್ಲಿ ಹರಿಯೆ ಇದ್ದಾನೆಂದು ತಿಳಿದು ಗುರುಗಳಲ್ಲಿ ಭಕ್ತಿಮಾಡಬೇಕು ಗುರುಗಳ ಅವಜ್ಞೆತೆ ಯಾವಾಗಲೂ ಮಾಡಕೂಡದು. ಗುರುಗಳ ಇವರೊಬ್ಬರು ನಮ್ಮಂತೆ ಮಾನವರೆಂಬ ಇಂಥ ದುರ್ಬುದ್ಧಿ ಎಂದೂ ಮಾಡಕೂಡದು. ಈ ಗುರುಗಳಲ್ಲಿ ಸಕಲದೇವತೆಗಳ ವಿಭೂತಿ ಅದೆಂಬ ದೃಢ ವಿಶ್ವಾಸವಿರಬೇಕು. ಪ್ರಾತಃ ಸಾಯಂಭಿಕ್ಷಾಟನೆಯಂ ಮಾಡಿ ದೊರೆತದ್ದು ಗುರುಗಳಿಗೆ ತಂದು ಅರ್ಪಿಸಬೇಕು ಅದರಲ್ಲಿ ಗುರುಗಳು ಏನಾದರೂ ಕೊಟ್ಟರೆ ಅಷ್ಟೇ ಸಂತೋಷದಿಂದ ಸ್ವೀಕರಿಸಿ ಅದರಮೇಲೆಯೆ ಉದರ ನಿರ್ವಾಹಮಾಡಬೇಕಲ್ಲದೆ ಹೆಚ್ಚಿನದು ಬಯಸಬಾರದು.

ಗುರುಗಳಸೇವೆ ಮಾಡುವದು ಬ್ರಹ್ಮಚಾರಿಗಳ ಮುಖ್ಯ ಕರ್ತವ್ಯವಿದೆ, ಗುರುಸೇವೆಮಾಡುವಕಾಲ ನಾನು ಬಹು ಕೀಳಮನುಜ. ಎಲ್ಲ ಜ್ಞಾನಿಗಳ ಭೃತ್ಯದಾಸನೆಂಬ ಭಾವನೆಯು ಮನದಲ್ಲಿರಬೇಕು ಗುರುಗಳು ಎಲ್ಲಿಯಾದರೂ ಹೊರಗೆ ಹೊರಟರೆ ಶಿಷ್ಯನಾದ ಬ್ರಹ್ಮಚಾರಿಯು, ಮೆಲ್ಲನೆ ಅವರ

ಹಿಂದೆ ಹಿಂದೆ ಹೋಗಬೇಕು ಗುರುಗಳು ಮಲಗಿದರೆ, ಗುರುಗಳ ಸಮೀಪ ದಲ್ಲಿಯೇ ಬಹು ಎಚ್ಚರದಿಂದ ಮಲಗಬೇಕು. ಗುರುಗಳು ಶ್ರಮಪಟ್ಟಿದ್ದರೆ ಅವರ ಕೈಕಾಲು ಒತ್ತಬೇಕ. ಗುರುಗಳು ಕುಳಿತಿದ್ದರೆ, ತಾನು ಅವರ ಸಮೀ ಪದಲ್ಲಿ ಕೈಜೋಡಿಸಿಕೊಂಡು ಗುರ್ವಾಜ್ಞೆ ಯಾವಾಗ್ಗೆ ಏನಾಗುವದೆಂಬ ಉಲ್ಹಾಸದಿ, ವಿನಯದಿಂದ ನಿಲ್ಲಬೇಕು. ಸರ್ವಥಾ ಗುರುಗಳದುರಿಗೆ ಕೂಡ್ರ ಬಾರದು.

ಉಪಕುರ್ವಾಣ ಬ್ರಹ್ಮಚಾರಿಗಳು ಈ ಪ್ರಕಾರ ಆಚರಿಸುತ್ತ ಉಪ ಭೋಗಗಳನ್ನು ವರ್ಜನಮಾಡಬೇಕು. ಮತ್ತು ಬ್ರಹ್ಮ ಮೀಮಾಂಸಾವಿದ ರನ್ನ ಯೋಗ್ಯತೆಯಂತೆ ಮುಗಿಯುವವರೆಗೆ ಬ್ರಹ್ಮಚರ್ಯಧಾರಣಮಾಡಿ ಕೊಂಡು ಗುರುಗ್ರಹದಲ್ಲಿಯೇ ಇರಬೇಕು.

## ೭ ನೈಷ್ಠಿಕ ಬ್ರಹ್ಮಚಾರಿಗಳ ಧರ್ಮ

ವೇನೆಂದರೆ ಬ್ರಹ್ಮಚರ್ಯದ್ವಾರಾ ಜ್ಞಾನಸಂಪಾದನೆಮಾಡಿ ಜ್ಞಾನ ಜನ್ಯವಾದ ಮಹರ್ಲೋಕ ದ್ವಾರಾ, ಬ್ರಹ್ಮಲೋಕ (ವೈಕುಂಠ)ಹೊಂದುವ ಇಚ್ಛೆಯುಳ್ಳವನಾಗಿ, ಬ್ರಹ್ಮನ ಉಪಾಸನಾರೂಪ ಧ್ಯಾನಯೋಗ ಸಾಧನ ಮಾಡಲು, ತನ್ನ ದೇಹ ಪ್ರಾಣ ಸರ್ವಸ್ವವೂ ಗುರುಗಳ ಸ್ವಾಧೀನಮಾಡ ಬೇಕು. ಅಗ್ನಿ ಗುರುಗಳಲ್ಲಿ ತನ್ನಲ್ಲಿ ಮತ್ತು ಸಕಲ ಚರಾಚರ ಪ್ರಾಣಿಗಳಲ್ಲಿ ಭಗವಂತನ ಪೂರ್ಣ್ಯ ವ್ಯಾಪ್ತಿಯಿದೆ ಎಂದು ತಿಳಿದು ವರ್ತಿಸಬೇಕು. ಹೀಗೆ ನಿರಂತರ ಸಕಲರಲ್ಲಿ ವ್ಯಾಪ್ತ ಅಂತರ್ಗತನಾದ ಪರಮಾತ್ಮನಚಿಂತನೆ ಮಹಾ ಯೋಗದಿಂದ ನೈಷ್ಠಿಕ ಬ್ರಹ್ಮಚಾರಿಯ ಚಿತ್ತ ನಿರ್ಮಲವಾಗಿ ತೇಜಸ್ವಿಯಾಗಿ ಲೊಕೋತ್ತರ ಸ್ವರ್ಗಾದಿ ಮೇಲಿನ ಲೋಕದಲ್ಲಿ ಅಸದೃಶ ಕೀರ್ತಿವಂತ ಮಾನಿನೀಯಪುರುಷನಾಗಿ ಅತಿ ತೇಜಃಪುಂಜನಾಗುತ್ತಾನೆ ಮತ್ತು ಭಗವಂತನ ಸರ್ವತ್ರವ್ಯಾಪ್ತಿ, ವ್ಯಕ್ತಿ ಕ್ರಿಯಾಶಕ್ತಿ ಅಂದರೆ ಸರ್ವವು ಪರಮಾತ್ಮನೇ ಮಾಡಿಸುತ್ತಾನೆ. ಎಲ್ಲರಲ್ಲಿಯೂ ಇರುವ ಶ್ರೀಹರಿಯೊಬ್ಬ ನೇಯೆಂಬ ಭಾವ, ಕ್ರಿಯ ದ್ರವ್ಯಾದ್ವೈತಗಳ ಅನುಭವವು ಸರ್ವತ್ರ ಬರು ತ್ತಿದೆ.

ನೈಷ್ಠಿಕ ಬ್ರಹ್ಮಚಾರಿ ವಾನಪ್ರಸ್ಥ ಸನ್ಯಾಸಿ ಇವರುಗಳು ಸಹ ಸ್ತ್ರೀಯರ ಕಡೆಗೆ ಕಾಮಜನ್ಯವಾದ ದೃಷ್ಟಿಯಿಂದ ಯಾವಾಗಲೂ ಎಂದೂ ಸರ್ವಥಾ ನೋಡಕೂಡದು. ಅವರ ಸಂಗಡ ಮಾತುಕಥೆ ವಿನೋದ ನಗು ಕೆಲಿಯುವದು ಸಹ ಸರ್ವವು ಬಿಡಬೇಕು. ಯಾವ ಪಶುಪಕ್ಷ್ಯಾದಿ ಪ್ರಾಣಿಗಳ ಮೈಥುನ ಕ್ರಿಯೆಯು ದೃಷ್ಟಿಗೆ ಅಕಸ್ಮಾತ್ ಬಿದ್ದಿತೆಂದರೆ ಕಣ್ಣೆತ್ತಿ ಸಹ ನೋಡಬಾರದು ಬೆನ್ನು ಮಾಡಿ ಹಿಂದಿರುಗಬೇಕು. ದೇಹಶುದ್ಧಿ ಆಚಮನ ಸ್ನಾನ ಸಂಧ್ಯಾವನ ಸುಳರೀತಿ ನಡಾವಳಿ ತೀರ್ಥಯಾತ್ರಾ ಜಪ ಇವುಗಳ ಕಡಿಗೆ ವಿಶೇಷ ಲಕ್ಷವಿಡಬೇಕು. ಮುಟ್ಟಲಿಕ್ಕೆ ಅಯೋಗ್ಯಪದಾರ್ಥಗಳನ್ನು ಯಾವಾಗಲೂ ಮುಟ್ಟಬಾರದು. ನಿಷೇಧ ಪದಾರ್ಥಗಳನ್ನು ಯಾವಾಗ್ಲೂ ತಿನ್ನಬಾರದು. ಆ ನಿಷೇಧ ಪದಾರ್ಥಗಳ ವಿಷಯಕ್ಕೆ ಆದರ ರುಚಿಕರ ವಿಷಯ ಮಾತನಾಡಕೂಡದು. ಸ್ಥಾವರ ಜಂಗಮ ಪ್ರಾಣಿಗಳಲ್ಲಿ ಶ್ರೀ ಭಗವಂತನ ಪೂರ್ಣವ್ಯಾಪ್ತಿ ವಕ್ಯಕ್ತತ್ವ ಅಂತರ್ನಿಯಾಮಕತ್ವ ತಿಳಿದು ಸಂತತವರ್ತಿಸುವದಲ್ಲದೆ, ಕಾಯಾ ವಾಚಾ ಮನೋಜನ್ಯ ದುಷ್ಟ ಕ್ರೀಯಾಗಳನ್ನು ಸಹನದಿಂದ ನಿಗ್ರಹಿಸಬೇಕು. ಇದು ನಾಲ್ಕು ಆಶ್ರಮದವರು ಅವಶ್ಯಮಾಡಬೇಕು.

ನೈಷ್ಠಿಕ ಬ್ರಹ್ಮಚಾರಿಗಳಿಗೆ ಬ್ರಹ್ಮ ಚಿಂತನವಾದ ಧ್ಯಾನಯೋಗದಿಂದ ಅಗ್ನಿಯಂತೆ ಅತ್ಯುಜ್ವಲ ತೇಜಸ್ಸು ಉತ್ಪನ್ನವಾಗಿ ಆ ಜ್ಞಾನಾಗ್ನಿಯಿಂದ ಸಕಲ ಬಹಿದುಷ್ಕರ್ಮಗಳು ನಾಶವಾಗಿ ಚಿತ್ತ ಶುದ್ಧನಾಗಿ ಮನೋಜನ್ಯ ವಾಸನಾಗಳನ್ನು ಭಸ್ಮಮಾಡಿ ಬಿಡುವನು. ಶ್ರೀಹರಿಯ ಧಾರಣ ಧ್ಯಾನಯೋಗರೂಪ ಪ್ರಸಾದ ತಪಶ್ಚರ್ಯದಿಂದ, ಕೊನೆಗೆ ಶ್ರೀಹರಿಯ ಸಂದರ್ಶನಾನಂದ ನಿಜಮುಕ್ತಿಯನ್ನು ಹೊಂದುತ್ತಾನೆ. ಉದ್ಧವಾ ಈ ಪ್ರಕಾರ ನೈಷ್ಠಿಕ ಬ್ರಹ್ಮಚಾರಿಗಳ ವ್ರತಧರ್ಮ ತಿಳಿ ಎಂದು ಶ್ರೀಕೃಷ್ಣಭಗವಾನನು ನಿರೂಪಿಸಿದ್ಧಾನೆ.

## ೮ ಉಪಕುರ್ವಾಣ ಬ್ರಹ್ಮಚರ್ಯದ ಉಪಸಂಹಾರ

ಯಾವ ಉಪಕುರ್ವಾಣ ಬ್ರಹ್ಮಚಾರಿಗಳು ಗೃಹಸ್ಥಾಶ್ರಮ ಅಥವಾ ಎರಡನೇ ಆಶ್ರಮ ಸ್ವೀಕರಿಸುವ ಇಚ್ಛಾ ಇದ್ದರೆ ಅವರು ವೇದಾಧ್ಯಯನ

ಪಾಠ ಅರ್ಥಪೂರ್ವಕವಾಗಿ ಕಲಿತು, ಮುಗಿದ ನಂತರ ಸ್ವಶಕ್ತ್ಯಾನುಸಾರ ಗುರುಗಳಿಗೆ ದಕ್ಷಿಣೆಯನ್ನುಕೊಡಬೇಕು. ಆಮೇಲೆ ಗುರುಗಳ ಆಜ್ಞೆಯನ್ನು ತೆಗೆದುಕೊಂಡು,ಅಭ್ಯಂಗಸ್ನಾನಮಾಡಿ ಸಮಾವರ್ತನೆ, (ಷೋಡಶಮುಂಜಿವಿ) ಮಾಡಿಕೊಳ್ಳಬೇಕು ಬ್ರಹ್ಮಚರ್ಯಾಶ್ರಮಮುಗಿದನಂತರಯಾರ: ವಿಹಿತವಾದ ಸ್ತ್ರೀಸುಖ ಅಪೇಕ್ಷೆಯುಳ್ಳವರು ಗೃಹಸ್ಥಾಶ್ರಮ ಸ್ವೀಕರಿಸಬೇಕು ಯಾವ ಬ್ರಹ್ಮಚಾರಿಗಳು ಚಿತ್ತಶುದ್ಧತೆಯನ್ನು ಹೊಂದಲಪೇಕ್ಷೆಯುಳ್ಳವರೊ ಅವರು ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಬೇಕು. ಮತ್ತು ಯಾರಿಗೆ ಬ್ರಹ್ಮಚರ್ಯ ಆಶ್ರಮದಲ್ಲಿಯೇ ಪೂರ್ಣ ಚಿತ್ತಶುದ್ಧಿಯಾಗಿ ಶ್ರೀಭಗವಂತನ ಕೃಪೆಯಾಗಿದೆಯೋ ಅವರು ಮಾತ್ರ ಬ್ರಹ್ಮಚರ್ಯಾಶ್ರಮದಿಂದಲೇ, ಸನ್ಯಾಸಾಶ್ರಮ ಸ್ವೀಕರಿಸಬೇಕು. ಈ ಸನ್ಯಾಸ ಆಶ್ರಮವನ್ನು ಸಹ ಬ್ರಾಹ್ಮಣಜಾತಿಯಲ್ಲಿ ಉತ್ಪನ್ನರಾದವರೇ ಸ್ವೀಕರಿಸಬೇಕೆ ಹೊರತಾಗಿ ಕ್ಷತ್ರಿಯ ವೈಶ್ಯಜಾತಿಯವರು ಸರ್ವಥಾಸನ್ಯಾಸ ಆಶ್ರಮ ಸ್ವೀಕರಿಸಬಾರದು. ಸ್ವೀಕರಿಸಿದರೆ ಅನರ್ಥಕ್ಕೆ ಕಾರಣ. ಮುಖ್ಯವಾಗಿ ಹೇಳುವದೇನೆಂದರೆ ಯಾರು ಭಗವಂತನನ್ನು ಹೊಂದಲಪೇಕ್ಷೆಯುಳ್ಳ ಭಗವನ್ನಿಷ್ಟಿಗಳೊ ಅತ್ಯಾವಶ್ಯವಾಗಿ ಬ್ರಹ್ಮಚರ್ಯ ವ್ರತವನ್ನು ಪಾಲನಮಾಡಬೇಕು. ಮಾನವನು ಬ್ರಹ್ಮಚಾರಿ ವ್ರತವು ಪೂರ್ಣವಾದಿಂದಲೇವೆ ತನ್ನ ಅಧಿಕಾರಾನುಸಾರ ಕ್ರಮವಾಗಿ ಗಾರ್ಹಸ್ಥ್ಯ ವಾನಪ್ರಸ್ಥ ಸನ್ಯಾಸಿ ಆಶ್ರಮಗಳನ್ನು ತೆಗೆದುಕೊಳ್ಳಬೇಕು. ಯಾವವಸ್ಥೆಯಲ್ಲಿಯೂ ಯಾವ ಆಶ್ರಮ ಧರ್ಮಗಳಿಲ್ಲದೆ ಅನಾಶ್ರಮಿಗಳಾಗಿರಬಾರದು. ಮತ್ತು ಆಶ್ರಮಗಳ ಯುವ್ಯತ್ಕ್ರಮನಸಹ ಮಾಡಬಾರದು ಅಂದರೆ ಗ್ರಹಸ್ಥನು ಪುನಃ ಬ್ರಹ್ಮಚಾರಿಯಾಗಬಾರದು, ವಾನ ಪ್ರಸ್ಥನು ಗ್ರಹಸ್ಥಾಮಕ್ಕೆ ಪುನಃ ಬರಬಾರದು. ಅಭಾವ ವೈರಾಗ್ಯದ ಸನ್ಯಾಸಿಗಳು ಆದ ಮೇಲೆ, ಪುನಃ ಗ್ರಹಸ್ಥ ವಾನಪ್ರಸ್ಥಾಶ್ರಮವನ್ನು ಸರ್ವಥಾ ಸ್ವೀಕಾರ ಮಾಡಬಾರದು. ಇದು ಲಕ್ಷದಲ್ಲಿಡತಕ್ಕದ್ದು ಎಂದೂ ಮರೆಯಲಾಗದು. ಮತ್ತೂ

೯ ಸದಾಚಾರ ಸ್ಮೃತಿಯಲ್ಲಿ ಶ್ರೀ ಮಧ್ವಾಚಾರ್ಯರು ಸಹ

“ ಏಷ ನಿತ್ಯಸದಾಚಾರೋ ಗೃಹಿಣೋವನಿನಸ್ತಥಾ || ವೈಶ್ವ ದೇವಂ ಬಲಿಂ ದಂತ ಧಾವನಂ ಚಾಪ್ಯತೇವಮೋ ||

ಹಿಂದೆ ಹೇಳಿದ ಸದಾಚಾರಗಳಲ್ಲಿ ಶೌಚ–ಆಚಮನಸ್ನಾನ—ಜಪ ಮೊದಲಾದ ಭುಕ್ತಿ ನಿದ್ರಾಪರಿಯಂತವಾಗಿ ಎಲ್ಲ ಸತ್ಕರ್ಮಗಳು ಗೃಹಸ್ಥಾಶ್ರಮಿಯೂ ವಾನಪ್ರಸ್ಥನೂ ನಿಯಮದಿಂದ ಮಾಡಬೇಕು. ಈ ಸದಾಚಾರಗಳ ಮಧ್ಯದಲ್ಲಿ ವೈಶ್ವದೇವ ಬಲಿಹರಣ ದಂತಧಾವನ ಹೊರತಾಗಿ ಉಳಿದ ಎಲ್ಲ ಸತ್ಕರ್ಮಗಳು. ವಟೋರಪಿ, ಬ್ರಹ್ಮಚಾರಿಗೂ ಕೂಡ ನಿಯಮದಿಂದ ಮಾಡತಕ್ಕದ್ದು. ಇನ್ನು ಬ್ರಹ್ಮಚಾರಿಗಳು ನಿತ್ಯೋಪಾಸನಾ ಅಗ್ನಿಕಾರ್ಯವನ್ನು ಸಹ ಮಾಡತಕ್ಕದ್ದು.

“ ಸಮಿದ್ಧೋಮೋವಟೋಶ್ಚೈವಸ್ಮೃತ್ವಾ ವಿಷ್ಣುಂಹುತಾಶನೇ ”

ಬ್ರಹ್ಮಚಾರಿಗೂ ಕೂಡ ಅಗ್ನ್ಯಧಿಕರಣದಲ್ಲಿ ಪ್ರಾಣಾಂತರ್ಗತ ಪರಶುರಾಮನನ್ನು ಸ್ಮರಿಸಿಕೊಂಡೇ ಸಮಿದ್ಧೋಮ ಮಾಡತಕ್ಕದ್ದು.

## ೧೦ ಪದ್ಮ ಪುರಾಣದಲ್ಲಿಯೂ ಸಹ ಇದರ ವಿವರಣೆ

ಚನ್ನಾಗಿದೆ. ಅದನ್ನು ಸಹ ವಿವೇಚನ ಮಾಡತಕ್ಕ ಅವಶ್ಯವಿದೆ. ಬ್ರಾಹ್ಮಣ ಜಾತಿಯಲ್ಲಿ ಉತ್ಪನ್ನರಾದವರು ಗರ್ಭದಿಂದಎಂಟನೇ ವರುಷದಲ್ಲಿ ಉಪನೀತರಾದ ಮೇಲೆ ಯಜ್ಞೋಪವೀತವನ್ನು ಧಾರಣ ಮಾಡಿ ದಂಡ ಮೇಖಲ, ( ಹುಲ್ಲಿನ ಉಡದಾರ ) ಮತ್ತು ಹಿಂಸಾ ಇಲ್ಲದೆ ದೊರಕಿದ ಕರಿಯಚಿಗರೆ ಚರ್ಮ, ಕೃಷ್ಣಾಜಿನಧಾರಣ ಮಾಡುವದು. ವೇದಾಧ್ಯಯನಗೋಸುಗ ಗುರು ಗೃಹದಲ್ಲಿರುವದು. ಭಿಕ್ಷಾನ್ನಗ್ರಹಣ ಮಾಡಬೇಕು. ಸದಾ ಗುರುಗಳ ಅಜ್ಞಾ ಪರಿಪಾಲನೆ ಮಾಡಲು ಅವರಾಜ್ಞೆ ಯಾವಾಗ್ಗೆ ಏನಾಗುವುದೋ ಎಂಬೋ ಆತುರದಲ್ಲಿ ಗುರುಗಳ ಮುಖವನ್ನೆ ನೋಡುತ್ತಿರಬೇಕು. ಗುರುಗಳೆಂದರೆ ಯಾರು ? ಉಪಾಧ್ಯಾಯ ಗುರು, ತಂದೆ, ಹಿರಿಯ ಅಣ್ಣ, ರಾಜ, ಸೋದರ ಮಾವ, ಹೆಂಣು ಕೊಟ್ಟ ಮಾವ, ಹೆಂಣು ಮುತ್ಯಾ, ಗಂಡು ಮುತ್ಯಾವರ್ಣದಲ್ಲಿ ತನ್ನಕಿಂತಲೂ ಶ್ರೇಷ್ಠನು, ತಂದೆಯ ತಮ್ಮ, ಕಕ್ಕ, ಸಾಮಾನ್ಯವಾಗಿ ಇವರು ಗುರುಗಳೆಂದು ಹೇಳಿದೆ. ತಾಯಿ ಹೆಂಣ್ಣು ಮುತ್ತವಿ, ಗುರುಪತ್ನಿ ಆಜಿ, ಅತ್ತೆ, ಗಡಜ್ಜಿ, ಅಕ್ಕ, ಚಿಕ್ಕ

ಸಿದ್ದಾಗ ಮೊಲೆ ಹಾಲುಣಿಸಿದವಳು, ಇವರು ಇಂಥ ಗುರುಜನರ ಶುಶ್ರೂಷೆ ಮಾಡುವದು. ಅವರು ಬಂದ ಕೂಡಲೇ ಏಳುವದು ಕೈಮುಗಿದು ಪ್ರಣಾಮ ಸಾಷ್ಟಾಂಗ ನಮನಮಾಡಬೇಕು ಇವರ ಸಂಗಡ ಆಸನಮೇಲೆಕುಳ್ಳಿರಬಾರದು, ಕಾಯಾವಾಚಾ ಮನಸ್ಸಿನಿಂದ ಇವರಿಗೆ ಅನುವಾದ ಯೋಗ್ಯ ಆಚರಣೆ ಮಾಡಬೇಕು. ತನ್ನ ಜೀವನ ರಕ್ಷಣಾರ್ಥ ದ್ವೇಷ ಅಸೂಯ ಬುದ್ಧಿಯಿಂದ ಮಾತನಾಡಕೂಡದು. ಈ ಎಲ್ಲ ಗುರುಗಳಲ್ಲಿಯೂ ೫ ಜನರು ವಿಶೇಷ ಪೂಜ ಈ ೫ ಜನಗಳಲ್ಲಿಯೂ ಸಹ, ಪಿತಾ, ಮಾತಾ, ಗುರು (ಆಚಾರ್ಯ)ಗೆ ಮೂವರು ಮತ್ತೂ ಹೆಚ್ಚಿಗೆ ಪೂಜ್ಯರು ಮಾತೆಯು ಸರ್ವರಿಂದಲೂ ಅಧಿಕ ಪೂಜ್ಯಳು. ಹುಟ್ಟಿಸತಕ್ಕವನು ತಂದೆ, ಜನ್ಮಕೊಡುವವಳು ತಾಯಿ, ಬ್ರಹ್ಮೋಪದೇಶ ಮಾಡುವವನು ಗುರು. ಅಣ್ಣ ಮತ್ತು ಸ್ವಾಮಿ, ಶ್ರೇಷ್ಠರಲ್ಲಿ ನಿಯಮೇನ ಭಕ್ತಿ ಮಾಡುತ್ತ ಬರಬೇಕು.

ಬ್ರಹ್ಮಚಾರಿಯು ಪ್ರತಿದಿನ ಮನಸ್ಸು ಮತ್ತು ಇತರ ಎಲ್ಲ ಇಂದ್ರಿಯುಗಳನ್ನು ನಿಗ್ರಹಿಸುತ್ತ ಭಿಕ್ಷಾನ್ನವನ್ನೇ ತರುವದು. ತಂದುದು ಗುರುಗಳಿಗೆ ಅರ್ಪಿಸುವದು ಗುರುಗಳು ಅದರಲ್ಲಿ ಎಷ್ಟು ಕೊಡುವರೊ ಅಷ್ಟೇ ತೆಗೆದುಕೊಂಡು ಮೌನದಿಂದ ಭೋಜನಮಾಡಬೇಕು. ಬ್ರಾಹ್ಮಣ ಬ್ರಹ್ಮಚಾರಿಯು ಭವತ್ ಶಬ್ದವನ್ನು ಮೊದಲಿಗೆ ಉಚ್ಚರಿಸಬೇಕು. ಅಂದರೆ ಭವತಿ ಭಿಕ್ಷಾಂ ಮೇ ದೇಹಿ ಎಂದು ಭಿಕ್ಷಾ ಮಾಡಬೇಕು ಕ್ಷತ್ರಿಯ ಬ್ರಹ್ಮಚಾರಿಭವತ್ ಶಬ್ದ ನಡುವೆ, ವೈಶ್ಯಬ್ರಹ್ಮ ಚಾರಿಯು, ಭವತ್ ಶಬ್ದ ಕೊನೆಗೆ ಉಚ್ಚರಿಸಬೇಕು ಕ್ಷತ್ರಿಯ ಬ್ರಹ್ಮಚಾರಿ ಭಿಕ್ಷಾಂಭವತಿ ಮೇ ದೇಹಿ ವೈಶ್ಯನು ಭಿಕ್ಷಾಂ ಮೇ ದೇಹಿ ಭವತಿ ಈ ಪ್ರಕಾರ ಭಿಕ್ಷಾಟನೆಮಾಡುವದು ಉತ್ತಮರ ಗೃಹದಲ್ಲಿಯೇ ಭಿಕ್ಷಾಟನೆಮಾಡುವದು ಹೊರ್ತಾಗಿ, ಪತಿತ ಮುಂತಾದ ಪಾಪಿ ಕೀಳ ಜನರಲ್ಲಿ ಭಿಕ್ಷೆ ಬೇಡಬಾರದು ಪ್ರತಿನಿತ್ಯವೇದಾಧ್ಯಯನ ಮಾಡುವರ ಮನೆಯಲ್ಲಿಂದ ಯಜ್ಞಯಾಗಾದಿ ಕರ್ಮಗಳು ನಡೆಯುವರಲ್ಲಿ ದೈವಿ ಭಕ್ತಿ ಮಂತರಲ್ಲಿಂದಲ್ಲೇ ಜಿತೇಂದ್ರಿಯನಾದ ಬ್ರಹ್ಮಚಾರಿ ಪ್ರತಿದಿನ ಭಿಕ್ಷೆ ತರಬೇಕು. ಗುರುಗಳ ಕುಲದಲ್ಲಿ ತಮ್ಮ ಕುಟುಂಬ ಮತ್ತು ಸಮ್ಬಂಧಿಕರ ಮನೆ

ಯಲ್ಲಿ ಭಿಕ್ಷಾನ್ನ ಕರಕೂಡದು. ಎರಡನೇ ಉತ್ತಮ ಮನೆಗಳು ಸಿಗದಿದ್ದರೆ, ಯಥಾಶಾಸ್ತ್ರವಾಗಿ ಮೇಲೆ ವಿವರಿಸಿದವಲ್ಲಿ ಕಿಂಚಿತ್ ಕಾಲ ಭಿಕ್ಷೆ ತೆಗೆದುಕೊಳ್ಳಬಹುದು ಇಂಥ ಮನೆಗಳು ಸಹ ಸಿಗುವದು ದುರ್ಲಭವಾಗಿರಲು ಒಳ್ಳೆ ಸಮೂಹ ಜನವಸತಿ ಇರುವ ಊರಲ್ಲಿ ಭಿಕ್ಷಾಟನ ಪಚಾರ ಮಾಡುತ್ತಾ ಮನಸ್ಸು ಸ್ವಾಧೀನದಲ್ಲಿಟ್ಟುಕೊಂಡು ಮೌನದಿಂದಿರುತ್ತ ಅತ್ತಿತ್ತ ದೃಷ್ಟಿ ಚಲಿಸದಂತಿರಬೇಕು ಈ ಪ್ರಕಾರ ಸರಳ ಸ್ವಭಾವದಿಂದ ಅವಶ್ಯಾನುಸಾರ ಭಿಕ್ಷಾಟನ ಮಾಡುವದು. ಯಾವಾಗಲೂ ಜಿತೇಂದ್ರಿಯನಾಗಿರಬೇಕು ಹೀಗೆ ಮೌನಧಾರಣ ಮಾಡುತ್ತ ಬ್ರಹ್ಮಚಾರಿಯು ಭಿಕ್ಷಾನ್ನದಿಂದಲೇ ಪ್ರಾಣ ಧಾರಣ ಮಾಡಬೇಕು ಒಂದೇ ಸ್ಥಳದ ಅನ್ನವನ್ನು ಉಣ್ಣಬಾರದು. ಭಿಕ್ಷಾಟನದಿಂದ ಬಂದ ಅನ್ನವನ್ನು ಮಿತ ಭೋಜನ ಮಾಡುವದು ಬ್ರಹ್ಮಚಾರಿಗೆ ಉಪವಾಸ ಸಮಾನವೆಂದು ಶಾಸ್ತ್ರ ಸಮ್ಮತವಾಗಿದೆ. ಭಿಕ್ಷೆಯಲ್ಲಿ ಬಂದ ಅನ್ನವನ್ನು ನಿಂದ್ಯ ಮಾಡದೆ ಗರ್ವದಿಂದ ಬಿಸುಟಿ ಹಾಕದೆ ಒಳ್ಳೇದೆಂದು ಬಹು ಸನ್ಮಾನದಿಂದಲೇ ನೋಡಿ ದೇವರು ಉಪಜೀವನಾರ್ಥ ಪ್ರಾಣಧಾರಣಕ್ಕೆ ಯೋಗ್ಯಾನ್ನವನ್ನಿತ್ತಿರುವನೆಂದು ಹರ್ಷ ತೋರುತ್ತ ಮನದಲ್ಲಿ ಪ್ರಸನ್ನನಾಗಿರಬೇಕು. ಸರ್ವ ಪ್ರಕಾರದಿಂದಲೂ ದೊರೆತ ಭಿಕ್ಷಾನ್ನವನ್ನು ಅಭಿನಂದಿಸಬೇಕು. ಅಧಿಕವಾಗಿ ಮನಬಂದಂತೆ ಹೆಚ್ಚು ಉಣ್ಣುವದು, ದೇಹಕ್ಕೆ ಅನಾರೋಗ್ಯ ಆಯುಸ್ಸುಹಾನಿ ಮತ್ತು ಸ್ವರ್ಗಾದಿ ಊರ್ಧ್ವ ಪ್ರಾಪ್ತಿಗೆ ಹಾನಿಕರವೆಂದು ಹೇಳಿದೆ. ಬಾಹುಳಿಕತನವು ಪುಣ್ಯನಾಶವೂ ಲೋಕನಿಂದಿತವಾಗಿದೆ. ಈ ಕಾರಣದಿಂದ ಅಧಿಕಾನ್ನ ಭೋಜನವು ಯಾವಾಗಲೂ ಬಿಟ್ಟು ಬಿಡಲೇಬೇಕು.

ಪೂರ್ವಾಭಿಮುಖವಾಗಿ ಅಥವಾ ಸೂರ್ಯನಿರುವ ಕಡೆಗೆ ಮುಖ ಮಾಡಿ ಭೋಜನ ಮಾಡಬೇಕು ಉತ್ತರಾಭಿಮುಖನಾಗಿ ಕುಳಿತು ಉಣ್ಣಬಾರದು ಹೀಗೆ ಭೋಜನ ವಿಷಯ ಪೂರ್ವಜರ (ಸನಾತನ) ವಿಧಿ ಇರುವದು. ಭೋಜನ ಮಾಡತಕ್ಕ ಪುರುಷನು ಬ್ರಹ್ಮಚಾರಿ ಉತ್ತಮವಾದ ಜಲದಲ್ಲಿ ಕೈ ಕಾಲು ತೊಳೆದುಕೊಂಡು ಶುದ್ಧವಾದ ಸ್ಥಳದಲ್ಲಿ ಕುಳಿತುಕೊಂಡು ಆಚಮನ ಮಾಡಿ ಭೋಜನ ಮಾಡಬೇಕು ಭೋಜನಾಂತರದಲ್ಲಿಯೂ ಸಹ ದ್ವಿರಾಚಮನ್ಯ ಎರಡು ಸಲ ಆಚಮನ ಮಾಡಬೇಕು.

## ೧೧ ಆಚಮನ[illegible]

ಇನ್ನು ಬ್ರಹ್ಮಚಾರಿ ಮುಂತಾದ ನಾಲ್ಕು ಆಶ್ರಮದ ಜನರೂ ಸಹ ಯಾವಾಗ್ಗೆ ಆಚಮನ ಮಾಡಬೇಕು ಆಚಮನಮಾಡುವದರಿಂದ ಏನು ಪ್ರಯೋಜನ ಇವರ ವಿಚಾರವು ಸಹ ಬಹು ಇದೆ ಇಲ್ಲಿ ಸಂಕ್ಷಿಪ್ತವಾಗಿ ಪದ್ಮಪುರಾಣದಂತೆಯೇ ವಿವೇಚಿಸಿದೆ. ವಾಚಕರು ಬೇಸರಗೊಳ್ಳದೆ ಓದಿ ಆಚಮನ ಮಹತ್ವವನ್ನು ತಿಳಿದುಕೊಳ್ಳಬೇಕಾಗಿ ವಿನಂತಿ. ಬ್ರಹ್ಮಚಾರಿಗಳಿಗೆ ಆಚಮನ ವಿಧಿಯು ಮಹತ್ತರವಾದದ್ದು. ಭೋಜನಮಾಡಿದಮೇಲೆ, ನೀರುಕುಡಿದಿಂದ ಮಲಗಿ ಎದ್ದಮೇಲೆ ಸ್ನಾನಮಾಡಿದಮೇಲೆ, ಓಣಿಗಳಲ್ಲಿ ತಿರಿಗಿಬಂದ ಮೇಲೆ ತುಟಿನೆಕ್ಕಲು ಅಥವಾ ತುಟಿಗಳ ಸ್ಪರ್ಶಮಾಡಿದಮೇಲೆ, ವಸ್ತ್ರಉಟ್ಟುಕೊಂಡಾಗ, ಅಕಸ್ಮಾತ್ ವೀರ್ಯಪತನ, ಸ್ನಾನನಂತರ, ಮಲಮೂತ್ರ ವಿಸರ್ಜನನಂತರ, ಅನುಚಿತ ಮಾತಾಡುವದರಿಂದ, ಉಗುಳಿದನಂತರ, ಅಧ್ಯಯನ ( ಪಾಠ ) ಆರಂಭಕಾಲದಲ್ಲಿ, ಕೆಮ್ಮುದಮ್ಮು ಎದ್ದನಂತರ, ರಾಜಬೀದಿ ಶ್ಮಶಾನಾದಿಗಳಲ್ಲಿ ತಿರುಗಿ ಬಂದಮೇಲೆ. ಸಂಧ್ಯಾವನ ಮಾಡುವ ಕಾಲದಿ, ಶ್ರೇಷ್ಠನಾದ ದ್ವಿಜನು ಎದ್ಯಪಿ ಮೊದಲಿಗೆ ಆಚಮನ ಮಾಡಿದ್ದರೂ ಪುನಃ ಆಚಮನ ಮಾಡಬೇಕು. ಚಾಂಡಾಲರು ಮತ್ತು ಮ್ಲೇಛ ಸಂಗಡ ಮಾತಾಡಿದ ಮೇಲೆ, ಸ್ತ್ರೀ ಶೂದ್ರ, ಅಥವ ಸುಳ್ಳು ಮಾತಾಡತಕ್ಕ ಪುರುಷರ ಸಂಗಡ ಮಾತಾಡಿದರೆ, ಮತ್ತು ಕಣ್ಣೀರು ಸುರಿಸಿದರೆ, ಅಥವ ಕಣ್ಣು ಮೂಗು ಕಿವಿಗಳಲ್ಲಿ ರಕ್ತಬಿದ್ದರೆ ಸಹ ಆಚಮನ ಮಾಡಬೇಕು. ತನ್ನ ಶರೀರಕ್ಕೆ ಸ್ತ್ರೀ ಪುರುಷ ಅದಿತೆಂದರೆ, ತನ್ನ ತಲೆ ಮೈಗೂದಲು ಸ್ಪರ್ಶ, ಉಟ್ಟ ಅರಿವೆಗಳು ಜಾರಿ ಬಿದ್ದುದರಿಂದ ಅದರ ಸ್ಪರ್ಶವಾದ ಮೇಲೆಯು, ಧರ್ಮ ದೃಷ್ಟಿಯಿಂದ ಆಚಮನ ಮಾಡಬೇಕು.

ಆಚಮನಕ್ಕೆ [ಜಲ] ನೀರು ಹೇಗಿರುವದೆಂದರೆ, ನೀರು ಬಿಸಿ ಇರಬಾರದು. ನೀರಲ್ಲಿ ಬುರುಗು ಇರಲಾಗದು, ಸವಳ ನೀರು ಉಪ್ಪು ನೀರು ಸರ್ವಥಾ ಆಚಮನಕ್ಕೆ ಆಗದು. ಒಳ್ಳೇ ಸೀನೀರು ಸ್ವಚ್ಛವಾಗಿಯೂ ತಣ್ಣಗಾಗಿ ಇರಬೇಕು. ಸದಾ ಪವಿತ್ರತೆ ಇಚ್ಛಾವುಳ್ಳವನು, ಪೂರ್ವಾಭಿಮುಖ

ವಾಗಿಯೂ ಉತ್ತರಾಭಿಮುಖವಾಗಿಯೂ ಕುಳಿತುಕೊಂಡೇ, ಆಚಮನ ಮಾಡ ಮಾಡಬೇಕು. ಆ ಸಮಯ ತಲೆ ಕುತ್ತಿಗೆಗಳನ್ನು ವಸ್ತ್ರದಿಂದ ಮುಚ್ಚಿಕೊಂಡಿರಬೇಕು. ಅಂದರೆ ಮೈಮೇಲೆ ದೋತರ ಹೊದ್ದಿರಬೇಕು. ಶಿಖಾ ಕಟ್ಟಿರಬಾರದು. ಹೊರಗಿನಿಂದ ತಿರುಗಾಡಿ ಬಂದ ಮನುಷ್ಯ ಎರಡೂ ಕಾಲು ಕೈ ತೊಳಕೊಳ್ಳದ ಹೊರತು ಪವಿತ್ರ ಆಗಲಾರನು. ಬ್ರಹ್ಮಜ್ಞಾನಿಗಳು, ಪಾಮಟಿಗೆಯ ಮೇಲೆ ಅಥವ ಜಲದಲ್ಲಿ ನಿಂತು ಅಥವ ತಲೆ ಮೇಲೆ ವಸ್ತ್ರ ಸುತ್ತಿಕೊಂಡು ಆಚಮನ ಮಾಡಬಾರದು. ಮಳೆ ನೀರಿನಿಂದಲೂ ಎದ್ದು ನಿಂತೂ, ಪಾತ್ರೆಯೊಳಗಿಂದ ಕೈಲೆ ನೀರು ತೆಗೆದುಕೊಂಡೂ ಆಚಮನ ಮಾಡಬಾರದು. ಒಂದೇ ಕೈಯಿಂದ ನೀರು ತಂದುಕೊಟ್ಟರೆ, ಮತ್ತು ಜನಿವಾರವಿಲ್ಲದೆಯೆ ಆಚಮನ ಮಾಡುವದು ಶಾಸ್ತ್ರ ನಿಷಿದ್ಧವಿದೆ. ಕಾಲೊಳಗೆ ಕಡಾವಿಗಿ ಹಾಕಿಕೊಂಡು ಮತ್ತು ಕೈಗಳು ಮೊಳಕಾಲು ಹೊರಗೆ ಮಾಡಿಯೂ ಆಚಮನ ಮಾಡಬಾರದು. ಮಾತಾಡುತ್ತ ನಗುತ್ತ, ಎರಡನೇದವರ ಕಡೆಗೆ ನೋಡುತ್ತ ಮತ್ತು ಹಾಸಿಗೆಯಲ್ಲಿ ಮಲಗಿದಾಗ ಆಚಮನ ಮಾಡುವದು ನಿಷಿದ್ಧವಿದೆ. ಯಾವ ಜಲ ಚೆನ್ನಾಗಿ ನೋಡಿಲ್ಲವೋ ಸೋಸಿಲ್ಲವೋ ಆ ನೀರಿನಲ್ಲಿ ಬುರುಗು ಮುಂತಾದ ಹೊಲಸು ಇರುವ ನೀರು ಶೂದ್ರನು ತಂದ ನೀರು, ಅಥವ ಹೊಲಸು ಕೈಲೆ ಅಪವಿತ್ರವಾದವರ ಕೈಲೆ ತಂದ ಉದಕ, ಮತ್ತು ಉಪ್ಪು ನೀರು ಇವುಗಳಿಂದ ಆಚಮನ ಮಾಡುವದು ಉಚಿತವಲ್ಲ. ಆಚಮನ ಕಾಲದಲ್ಲಿ ಅಂಗುಲಿ ಬೆರಳುಗಳಿಂದ ಶಬ್ದ ಮಾಡಕೂಡದು. ಮನಸ್ಸಿನಲ್ಲಿ ಎರಡನೆ ಮಾತು ಸಹ ಯೋಚಿಸಬಾರದು ಕೈ ಎದ್ದಿದ ಅಪವಿತ್ರನಾದ ನೀರಿನಿಂದ ಆಚಮನ ಮಾಡಬಾರದು.

## ಚತುವರ್ಣಾಶ್ರಮ ಆಚಮನ ಕ್ರಮ

ಬ್ರಾಹ್ಮಣ ಬ್ರಹ್ಮಚಾರಿಯು, ಇತರ ಮೂರು ಆಶ್ರಮಿಗಳು ಸಹ ಆಚಮನ ಮಾಡಿದ ನೀರು ಹೃದಯ ಪರಿಯಂತ ಮುಟ್ಟುವವರೆಗೂ ಅಷ್ಟು ಜಲದಿಂದ, ಕ್ಷತ್ರಿಯನು ಕಂಠದವರೆಗೆ ಆಚಮನ ನೀರು ಮುಟ್ಟುವಷ್ಟು, ಆಚಮನ ಜಲದಿಂದ ಶುದ್ಧನಾಗುತ್ತಾನೆ. ವೈಶ್ಯನು ಜಿಹ್ವಾದಿಂದ ಆಸ್ವಾದನ

( ರುಚಿ ) ಮಾಡುವಷ್ಟು ಜಲ ಆಚಮನದಿಂದ ಶುದ್ಧನು. ಸ್ತ್ರೀ ಶೂದ್ರಾದಿಗಳು ಜಲ ಸ್ಪರ್ಶ ಮಾಡುವದರಿಂದ ಶುದ್ಧರಾಗುತ್ತಾರೆ ಹೀಗೆ ಕ್ರಮದಿಂದ ಸ್ವಲ್ಪ ಸ್ವಲ್ಪ ನೀರಿನಿಂದಲೇ ಆಚಮನ ಮಾಡಬೇಕಲ್ಲದೆ ಕಂಡಂತೆ ಹೆಚ್ಚಿನ ಜಲ ದಿಂದ ಮಾಡಬಾರದು. ಪೂರ್ವ ಕಾಲದಿಂದ ಸಂಧ್ಯಾವನ ಪವಟು ಎಂದು ಚಿಕ್ಕದಾಗಿ ಮಾಡಿದ್ದಾರೆ. ಆ ಪವಟಿನಿಂದಲೂ ಸಹ ಬಾಯಿಯಲ್ಲಿ ಕೇರು ನೀರು ಹಾಕಿಕೊಳ್ಳುವ ಆಚಮನ ಪದ್ಧತಿಯು ಬಹುತಪ್ಪಾದುದು. ಸಂಧ್ಯಾ ಪವಟನಿಂದ ಜಲವನ್ನು ತನ್ನ ಅಂಗೈಯಲ್ಲಿ ಹಾಕಿಕೊಂಡೇ ಬಲಗೈಯಲ್ಲಿ ಬ್ರಾಹ್ಮ್ಯ ತೀರ್ಥದಿಂದಲೇ ಆಚಮನ ಮಾಡುವದು.

ಬಲಗೈಯಲ್ಲಿ ಅಂಗುಷ್ಠ ಮೂಲರೇಖಾ ಅಂದರೆ ಮಧ್ಯ ಅಂಗೈಯಲ್ಲಿ ಬ್ರಾಹ್ಮ್ಯತೀರ್ಥ, ಅಂಗುಷ್ಠ ತರ್ಜನಿ ಬೆರಳಂತರದಲ್ಲಿರುವದು ಪಿತೃತೀರ್ಥ ವೆಂದು, ಕನಿಷ್ಠಾಂಗುಲಿ ಮೂಲದಲ್ಲಿ – ಪ್ರಜಾಪತ್ಯ. ಆರ್ಷ ತೀರ್ಥವೆಂದು ಅಂಗುಲ್ಯಾಗ್ರದಲ್ಲಿ ದೇವ ತೀರ್ಥ, ಅಂಗೈ ಮಧ್ಯದಲ್ಲಿ ಅಗ್ನಿ ತೀರ್ಥವೆಂದು ಈ ಅಗ್ನಿ ತೀರ್ಥಕ್ಕೆ ಸೌಭಿಕ ತೀರ್ಥವೆಂತಲೂ ಅನ್ನುವರು.

ದಕ್ಷಿಣಾಂಗುಷ್ಠ ಮೂಲೇತು ತೀರ್ಥಂಬ್ರಹ್ಮ ಮುದಾಹೃತಂ | ಕನಿ ಷ್ಠಂಮೂಲಗಂ ಏತತ್ ಪ್ರಾಜಾಪತ್ಯಂ ತದಾರ್ಷಕಂ| ತರ್ಜನೀ ಮೂಲದೇ ಶೇತುಪಿತ್ರ್ಯಕಂ | ತೀರ್ಥಮುಕ್ತಂ ಮುಪ್ಪ್ ಅಂಗುಲ್ಯಾಗ್ರೇದೈವತೀರ್ಥಂ ಅಗ್ನೇ ಯಂಕರ ಮಧ್ಯಗಂ ಎಂದು ಮಾನವಸ್ಮೃತಿ ಇದೆ. ಇದನ್ನು ತಿಳಿದಮನುಷ್ಯನು ಮೋಹವಲ್ಲಿ ಸರ್ವಥಾ ಬೀಳಲಾರನು ಬ್ರಹ್ಮಚಾರಿಯೂ, ಬ್ರಾಹ್ಮಣರೂ, ಬ್ರಾಹ್ಮ್ಯ ತೀರ್ಥದಿಂದ ಆಚಮನ, ದೇವತೀರ್ಥದಿಂದ ದೇವತೆಗಳಿಗೆ ತರ್ಪ ಣ ಋಷಿ ತೀರ್ಥದಿಂದ ಋಷಿಗಳಿಗೆ ತರ್ಪಣೆ, ಅಪಸವ್ಯದಿಂದ ಪಿತೃ ತೀರ್ಥ ದಿಂದ ಪಿತೃಗಳಿಗೆ ತರ್ಪಣ, ದೇವ ತೀರ್ಥದಿಂದ ದಾನ ಕೊಡುವದು ಅಂಗೈ ಯೊಳ್ಗಿನ ಅಗ್ನಿ ತೀರ್ಥದಿಂದ, ಸಮಸ್ತ ಪಾಪ ಭಸ್ಮಪೂರ್ವಕ ದಾನ ತೆಗೆದು ಕೊಳ್ಳತಕ್ಕದ್ದು. ಗೌರವ ತೀರ್ಥದಿಂದ ಭೋಜನಾನಂತರ ಉತ್ತರಾ ಪೋಶನವನ್ನು ಅರ್ಘ ತೆಗೆದುಕೊಂಡು ಅರ್ಘ ಪಾತ್ರ ಬಹಿಯಲ್ಲಿ ಜಲವನ್ನು ಬಿಡಬೇಕು

ಬ್ರಾಹ್ಮಣನು ಯಾವಾಗಲೂ ಬ್ರಹ್ಮತೀರ್ಥದಿಂದಲೇ ಆಚಮನ ಮಾಡ ಬೇಕು, ದೇವತೀರ್ಥದಿಂದ ಆಚಮನ ಇಚ್ಛಾಮಾಡುವದುಚಿತ ಪಿತೃ ತೀರ್ಥದಿಂದ ಸರ್ವಥಾ ಆಚಮನಮಾಡಬಾರದು ಮೊದಲಿಗೆ ಮನ ಮತ್ತು ಇಂದ್ರಿಯಗಳ ಸಂಯಮನ ನಿಗ್ರಹ ಇಟ್ಟುಕೊಂಡೇ ಬ್ರಹ್ಮತೀರ್ಥದಿಂದಲೇ ಮೂರು ಸಲ ಆಚಮನ ಮಾಡುವದು. ಪುನಃ ಬಾಕಿ ೨೧ ಸ್ಥಳಗಳನ್ನು ಬೆರಳಿನಿಂದ ಮುಟ್ಟಿಕೊಳ್ಳುವದು ಅಂಗುಟದಿಂದ ಮೋರೆಯನ್ನು ಅಂಗುಷ್ಠ ಅನಾಮಿಕದಿಂದ ಎರಡೂ ನೇತ್ರಗಳ ಸ್ಪರ್ಶ, ತರ್ಜನಿ ಅಂಗುಷ್ಟದಿಂದ ಎರಡೂ ನಾಸಾರಂಧ್ರಗಳನ್ನು ಕನಿಷ್ಠಾಂಗುಟದಿಂದ ಎರಡುಕಿವಿಗಳ, ಐದೂ ಅಂಗುಲಿಗಳಿಂದ ಹೃದಯ ಕರತಳದಿಂದ ಮಸ್ತಕ ಅಂಗುಷ್ಟದಿಂದ ಎರಡೂ ಭುಜಗಳ ಸ್ಪರ್ಶಮಾಡುವದೆಂದು ಪದ್ಮ ಪುರಾಣವಚನ.

## ಇವುಗಳ ಸ್ಪರ್ಶದ ಮುಖ್ಯಕಾರಣ

ಮೂರುಸಲ ಆಚಮನ ಮಾಡುವದರಿಂದ ಬಹ್ಮಾ ವಿಷ್ಣು ಮಹೇಶ್ವರರು ತೃಪ್ತರಾಗುವರು ಮುಖ ಪರಿಮಾರ್ಜನೆಯಿಂದ ಗಂಗಾಯಮುನೆಗಳ ತೃಪ್ತಿ, ಎರಡೂ ನೇತ್ರಗಳ ಸ್ಪರ್ಶದಿಂದ ಸೂರ್ಯಚಂದ್ರರ ತೃಪ್ತಿ ಎರಡೂ ನಾಸಾ ಛಿದ್ರಗಳ ಸ್ಪರ್ಶದಿಂದ ಅಶ್ವಿನೀ ಕುಮಾರರ ಎರಡು ಕರ್ಣಗಳ ಸ್ಪರ್ಶದಿಂದ ದಿಗ್ ದೇವತೆಗಳು ಮತ್ತು ವಾಯು ಅಗ್ನಿಗಳ ತೃಪ್ತಿಯಾಗುತ್ತದೆ. ಹೃದಯಸ್ಪರ್ಶಮಾಡುವದರಿಂದ ಎಲ್ಲದೇವತೆಗಳ ಪ್ರಸನ್ನತೆ. ಮಸ್ತಕ ಸ್ಪರ್ಶದಿಂದ ಅದ್ವಿತಿಯ ಪುರುಷ ಅಂತರ್ಯಾಮಿ ಮೋಕ್ಷಪ್ರದ ವಾಸುದೇವನ ಪ್ರಸನ್ನತೆ ಇದೆಲ್ಲ ಆಚಮನ ವಿಧಿಯಲ್ಲಿ ಹೇಳುವದಲ್ಲದೇ.

ಮತ್ತು ಅನ್ನ ಊಟ ಜಲಪಾನಮಾಡುವ ಮನುಜನಕೈಯಲ್ಲಿ ಏನಾದರು ವಸ್ತು ಇದ್ದರೂ ಕೆಳಗಿಟ್ಟು ಆಚಮನಮಾಡಿ ಆ ವಸ್ತುಗಳಮೇಲೆಯೂ ನೀರು ಶಿಡಸಬೇಕು ವಸ್ತುಗಳು ಯಾವ ಪದಾರ್ಥಗಳಾದರೂ ಕೈಯಲ್ಲಿ ಹಿಡಿದುಕೊಂಡು ಆಚಮನಮಾಡಿದರೆ ಸ್ವಯಂತಾನೆ ಅಶುದ್ಧನಾಗುವನು ಆದರೆ ಉಟ್ಟುಹೊದ್ದ ವಸ್ತ್ರಗಳು ಭೂಮಿಯಲ್ಲಿಟ್ಟರೂ ಆಚಮನ ನಂತರ ಜಲ ಅಥವಾ ತೀರ್ಥ ಪ್ರೋಕ್ಷಿಸಬೇಕು ಈ ಪದ್ಧತಿ ಪೂರ್ವದಿಂದ ಉಂಟು.

೧೨ **ಮಲಮೂತ್ರ ಶೌಚವಿಸರ್ಜನವ್ಯತ್ರಿಕಾ ಶೌಚವಿಧಿ** ರಾತ್ರಿ ವೇಳೆ ಅಡವಿಯಲ್ಲಿ ಕಳ್ಳರೂ ಹುಲಿ ಕರಡಿಗಳಲ್ಲಿರುವ ಹಾದಿಗಳಲ್ಲಿ ನಡೆಯುತಕ್ಕ ಪುರುಷನು ಕೈಯಲ್ಲಿ ಏನಾದರೂ ಪದಾರ್ಥಗಳಿದ್ದರೂ ಮಲಮೂತ್ರಾದಿಗಳನ್ನು ಮಾಡಿದರೆ ದೂಷಿತನಾಗುವುದಿಲ್ಲ ಜನಿವಾರ ಬಲಗಿವಿಗೆ ಹಾಕಿಕೊಂಡು ರಾತ್ರಿವೇಳೆ ದಕ್ಷಿಣಕ್ಕೆ ಅಭಿಮುಖನಾಗಿಯೂ ಹಗಲಿನಲ್ಲಿ ಉತ್ತರಕ್ಕೆ ಅಭಿಮುಖನಾಗಿಯೂ ಮಲಮೂತ್ರ ವಿಸರ್ಜನೆ ಮಾಡಬೇಕು. ಗಂಧಮಯಿಾ ಪೃಥ್ವಿಯಲ್ಲಿ ಕಟ್ಟಿಗೆ ಚೂರು ಒಣಗಿದೆಲೆ ಹುಲ್ಲು ಹಾಕಿಯೇ ಮಲಮೂತ್ರ ವಿಸರ್ಜನ ಮಾಡುವದು ತನ್ನ ತಲೆಯಮೇಲೆ ವಸ್ತ್ರವನ್ನು ಸುತ್ತಿಕೊಂಡೆ ಮಲಮೂತ್ರ ಗೈಯ್ಯುವದು. ಗಿಡದ ಬುಡದಡಿ ಗಿಡದ ನೆರಳಲ್ಲಿ, ಭಾವಿದಡದಲ್ಲಿ, ನದಿತೀರದಲ್ಲಿ. ಗೋಶಾಲಾ ಹತ್ತರ, ದೇವರಗುಡಿಯ ಸಮೀಪ ಜಲದಲ್ಲಿ ಹಾದಿಯಲ್ಲಿ ಅಗ್ನಿಯಲ್ಲಿ ಶ್ಮಶಾನ ಭೂಮಿಯಲ್ಲಿಯೂ ಸಹ ಮಲಮೂತ್ರಮಾಡಬಾರದು. ಗೊಬ್ಬರ ಗೋಶಗಣಿಮೇಲೆ ಸಣ್ಣ ಸಣ್ಣ ವೃಕ್ಷಗಳ ಮೇಲೆ ಹಸಿಹುಲ್ಲಿನ ಮೇಲೆಯೂ ಶೌಚ ಮೂತ್ರಾದಿಗಳನ್ನು ಮಾಡಬಾರದು. ಇವೆಲ್ಲವು ಬಹಳನಿಷೇಧವೆಂದು ಹೇಳಿದ್ದಾರೆ ನಿಂತುಕೊಂಡು ಮತ್ತು ಬತ್ತಲೆ ಮಲಮೂತ್ರ ಮಾಡುವದು ಬಹು ಅನುಚಿತ ಪರ್ವತ ಮಧ್ಯದಲ್ಲಿ ಹಾಳು ಹಳೇ ದೇವಾಲಯದಲ್ಲಿ ಯಾವದಾದರೂ ತಗಿನಲ್ಲಿ ಶೌಚ ಮೂತ್ರಗಳನ್ನು ಮಾಡುವದು ಬಹು ನಿಷಿದ್ಧವಿದೆ ಪಶುಗಳಂತೆ ನಡೆಯುತ್ತ ಸರ್ವಥಾ ಶೌಚ ಮೂತ್ರಗಳನ್ನು ಮಾಡಕೂಡದು. ಹೊಟ್ಟೆ ಇದ್ದಲಿ ಬೋಕಿಗಳು ಬೆಳೆಯುವ ಹೊಲದಲ್ಲಿ ಪರ್ವತಗುಹೆ ಬಿಲಗಳಲ್ಲಿ, ತೀರ್ಥಗಳಲ್ಲಿ ನಾಲ್ಕುಹಾದಿ ಕೂಡಿದಲ್ಲಿ ಮಾರ್ಗದಲ್ಲಿ ತೋಟಗಳಲ್ಲಿ, ಜಲಾಶಯವಿದ್ದಲ್ಲಿ ನಿಂತ ನೀರಿನಲ್ಲಿ ಮಡಿಕೆಹೊಡಿದ ಭೂಮಿಯಲ್ಲಿ ಊರು ಪಟ್ಟಣಗಳು ಇವೆಲ್ಲಸ್ಥಳಗಳಲ್ಲಿ ಮಲಮೂತ್ರ ವಿಸರ್ಜನೆಮಾಡಕೂಡದೆಂದು ಶಾಸ್ತ್ರ ನಿಯಮ.

ಕಾಲೊಳಗೆ ಕಪಾವಿಗೆ ಪಾದುಕಗಳನ್ನು ಹಾಕಿಕೊಂಡೂ ಮೇಲುಪ್ಪರಿಗೆಯಲ್ಲಿಯೂ ಸ್ತ್ರೀ [illegible] ರು ಬ್ರಾಹ್ಮಣ [illegible] ದೇವತಾ ದೇವಾಲಯ ಜಲಪ್ರವಾಹಗಳ ಸಮ್ಮುಖನಾಗಿ ಕುಳಿತು ನಕ್ಷತ್ರಗಳು ಗ್ರಹಚಲನೆಗಳು ನೋ

ಡುತ್ತ ಮುಖವನ್ನೆತ್ತಿ ಸೂರ್ಯ ಚಂದ್ರರು ಅಗ್ನಿಯನ್ನು ನೋಡುತ್ತ ಎಂದಿಗೂ ಮಲಮೂತ್ರ ಮಾಡಬಾರದು ಇಷ್ಟು ನಿಯಮವು ಪದ್ಮ ಪುರಾಣ ದಲ್ಲಿ ಹೇಳಿದ್ದು. ಇವರ ಕೈಲಿ ಚುಟ್ಟಾ ಸಿಗರೇಟು ಹಿಡಿದು ಸೇದುತ್ತ ಮಲ ಮೂತ್ರ ಮಾಡುವದು ನಿಷಿದ್ಧವೆಂಬುದು ತನ್ನಿಂದ ತಾನೆ ಸಿದ್ಧ. ಆರೋಗ್ಯ ಹಾನಿ ನಾನಾ ರೋಗಗಳ್ಗೆ ಕಾರಣ.

ಹೀಗೆ ಮಲಮೂತ್ರ ವಿಸರ್ಜನ ನಿಯಮದಿಂದ ಮಾಡಿದಮೇಲೆ ಮೃತ್ತಿಕಾ ಶೌಚಕ್ಕೆ ಒಳ್ಳೇ ಬಿಳುಪು ಮಣ್ಣು ಬ್ರಾಹ್ಮಣನಿಗೆ, ಕೆಂಪು ಮಿಶ್ರವಾದದ್ದು ಕ್ಷತ್ರಿಯನಿಗೆ. ಇತರ ವರ್ಣದ ವರು ಇತರರಿಗೆ ಹೀಗೆ ಹೇಳಿದೆ. ಶುದ್ಧವಾದ ಸ್ಥಳದಲ್ಲಿಂದ ಮೇಲೆ ತಂದಿಟ್ಟದ್ದು, ತೆಗೆದದ್ದು ಆಗಿರ ಬೇಕು ಹೊರತಾಗಿ, ಶೌಚ ಮೂತ್ರಾದಿಗಳ ಭೂಮಿ ಕೊನೆಯಲ್ಲಿದ್ದ ಮಣ್ಣು ಉಪಯೋಗಿಸಬಾರದು ಶುದ್ಧವಾದ ಮಣ್ಣಿನಿಂದಲೇ ಬಹಿರ್ಜಲದಲ್ಲಿ ದು ರ್ಗಂಧ ಹೋಗುವ ಮಣ್ಣಿನಿಂದ ಮೃತ್ತಿಕಾ ಶೌಚಮಾಡುವದು. ಉಸುಗು ಕೂಡಿದ ಮಣ್ಣು ಕೆಸರು ಕಲೆತ ಕಶ್ಮಲ ಮಣ್ಣು ಹಾದಿಯಲ್ಲಿರುವ ಮಣ್ಣು ಹವಳ ಭೂಮಿಯ ಮಣ್ಣು ಎರಡನೇದವರು ಮೃತ್ತಿಕಾ ಶೌಚ ಮಾಡಿಕೊಂಡು ಉಳಿದ ಮಣ್ಣಿನಿಂದ ಸರ್ವಥಾ ಮೃತ್ತಿಕಾ ಶೌಚ ಮಾಡ ಕೂಡದು ದೇವಸ್ಥಾನದಿಂದ ಭಾವಿಯಲ್ಲಿದ್ದ ಮಣ್ಣು ಮನೆಗೋಡೆಯ ಮಣ್ಣು ನೀರೊಳಗಿರುವ ಮಣ್ಣು ಸರ್ವಥಾ ಎಂದೂ ಉಪಯೋಗಿಸಬಾ ರದು ಶಾಸ್ತ್ರ ವಿಧಾನದಂತೆ ಮೃತ್ತಿಕಾ ಶೌಚಮಾಡಿಕೊಂಡು ಕೈಕಾಲು ಗಳನ್ನು ತೊಳೆದು ಬಾಯಿ ಮುಕ್ಕಳಿಸಿಕೊಂಡು ಮುಖ ಪ್ರಕ್ಷಾಲನಾದಿಗ ಳನ್ನು ಮಾಡಿ ಆಚಮನಮಾಡುವದು, ಇದು ಬ್ರಹ್ಮಚಾರಿ ಮುಂತಾದ ನಾಲ್ಕು ಆಶ್ರಮದವರು ಮಾಡಬೇಕು

೧೩ ಇನ್ನು ಸಂಕ್ಷೇಪವಾಗಿ ಬ್ರಹ್ಮಚಾರಿ ಶಿಷ್ಯಸಧರ್ಮ ಶ್ರೀ ವ್ಯಾಸದೇವರು, ಕೆಲವನ್ನು ಕುರಿತು ಹೇಳಿದ್ದಾರೆ ಈ ಪ್ರಕಾರ ನಿಯಮ ದಿಂದಿದ್ದು ಅಂದರೆ ದಂಡ ಮೇಖಲಿ ಉಪವೀತ ಕೃಷ್ಣಾಜಿನ ದರ್ಭಧಾರಣ ಮಾಡಿನ ಶೌಚಾಚಾರನಾದ ನಂನಂತನ್ನ ಬ್ರಹ್ಮಚಾರಿಯು ಗುರುಗೃಹ ದಲ್ಲಿ ವಾಸವಾದತ್ತ, ಗುರುಗಳ ಮನೆಯಾಸ ಬೋಧನ ಮಾಡುತ್ತಿರಬೇಕು

ಯಾವಾಗ್ಗೆ ಅವರು ಕರೆದರೋ ಆಗಲೇ ಅವರ ಹತ್ತರ ಹೋಗಿ ವೇದಾಧ್ಯಯನವಮಾಡಬೇಕು ಯಾವಾಗಲೂ ಕೈ ಜೋಡಿಸಿಕೊಂಡೆ ಇರುವದು ಸದಾಚಾರನಾಗಿಯೂ ಇಂದ್ರಿಯ ನಿಗ್ರಹಿಯಾಗಿಯೂ ಇರಬೇಕು. ಯಾವಾಗ್ಗೆ ಗುರುಗಳು ಕೂಡ್ರಲು ಆಜ್ಞಾ ಕೊಡುತ್ತಾರೊ ಆಗ್ಗೆ ಅವರ ಮುಂದೆ ವಿನಯದಿಂದ ಕೂಡುವದು ಗುರುಗಳ ಮಾತುಕೇಳುವದು ಅವರ ಸಂಗಡ ಮಾತನಾಡುವದು ಈ ಎರಡು ಕಾರ್ಯಗಳು ಮಲಗಿಕೊಂಡು ಮಾಡಕೂಡದು. ಊಟಮಾಡುವ ವ್ಯಾಳ್ಯದಲ್ಲಿಪಾತ್ರಾಲಾಪಮಾಡಬಾರದು. ಭೋಜನವಾಳ್ಯ ನಿಂದ್ರಬಾರದು ಮತ್ತು ಎರಡನೇಕಡಿಗೆ ಮೋರೆ ತಿರಿಗಿಸಬಾರದು. ಗುರುಗಳ ಸಮೀಪ ಮತ್ತು ಗುರುಗಳ ಹಾಸಿಗೆಕಿಂತಲೂ ಕೆಳಭಾಗ ಸಮೀಪದಲ್ಲೇ ಕೂಡುವದಾದರೂ ಕೆಳಗೆವೇ ಕುಳ್ಳಿರ ಬೇಕು. ಎಲ್ಲಿಯವರೆಗೆ ಗುರುಗಳ ದೃಷ್ಟಿ ಬೀಳುವದೋ ಅಲ್ಲಿಯವರೆಗೆ ಮನಬಂದಂತೆ ಆಸನದ ಮೇಲೆ ಕುಳ್ಳಿರಬಾರದು. ಗುರುಗಳು ಎದುರಿಗಿಲ್ಲದಾಗ್ಗೆ ಅವರ ಹೆಸರು ಸಹತೆಗೆದು ಮಾತಾಡಕೂಡದು ಗುರುಗಳನಡೆ ಅವರಂತೆನುಡಿ ಮತ್ತು ಅವರುಮಾಡುವ ಚೇಷ್ಟಾದಿಗಳನ್ನು ಸಹ ಮಾಡಕೂಡದು. ಎಲ್ಲಿ ಗುರುಗಳ ಮೇಲೆ ನಿಷ್ಕಾರಣ ಅಪವಾದ ಕಟ್ಟುವರೋ ಅಥವಾ ಗುರುಗಳ ನಿಂದಾ ಮಾಡುತ್ತಾರೋ. ಅದನ್ನು ಕಿಂವಿಯಿಂದಕೇಳದೆ ಕಿಂವಿ ಮುಚ್ಚಿಕೊಳ್ಳಬೇಕು. ಅಥವ ಆ ಜಾಗಾದಿಂದ ಎರಡನೇ ಕಡಿಗೆ ಎದ್ದು ಹೋಗಬೇಕು ದೂರದಲ್ಲಿಂದಲೆ ನಿಂತು ಅಥವಾ ಶಿಟ್ಟುತುಂಬಿಕೊಂಡು ಅಥವಾ ಸ್ತ್ರೀಸಮೀಪದಲ್ಲಿದ್ದು ಗುರುಗಳ ಪೂಜೆ ಮಾಡಬಾರದು ಗುರುಗಳ ಮಾತಿಗೆ ಪ್ರತ್ಯುತ್ತರಕೊಡಬಾರದು ಯಾವಾಗ್ಗೆ ಗುರುಗಳು ಬಂದು ಶಿಷ್ಯನ ಹತ್ತರ ನಿಂತುಕೊಂಡರೆ ಶಿಷ್ಯನಾದವ ತಾನು ಕೂಡ್ರಬಾರದು ಗುರುಗಳಿಗೆ ನಿತ್ಯ ಮೃಣ್ಮಯ ಪಾತ್ರೆಯಲ್ಲಿ ನೀರು ಕುಶದರ್ಭೆ ಹೂವು ತುಳಸಿ ಮತ್ತು ಔಪಾಸನೆಗೆ ಸಮಿಧಾ ಕಟ್ಟಿಗೆ ತಂದು ಕೊಡಬೇಕು. ಪ್ರತಿದಿವಸ ಗುರುಗಳಮನೆ ಅಥವಾ ಆಶ್ರಮ ಅಂಗಳವನ್ನು ಸ್ವಚ್ಛವಾಗಿ ಬಳಿದು ಗೋಮಯಥಳಿಹಾಕಿ ಸಾರಿಸಿ ರಂಗವಲ್ಲ್ಯಾದಿಗಳನ್ನು ಹಾಕಬೇಕು ಗುರುಗಳ ಉಪಭೋಗಕ್ಕೆ ಅಂದರೆ ಅವರ ಸೇವನಿಗೆ ಬಂದ ಪದಾರ್ಥಗಳಮೇಲೆ ಅವರ ಹಾಸಿಗೆ ಅವರ ಖಡಾವಿಗೆ ಅವರ ಪಾದ

ರಕ್ಷೆ ಮತ್ತು ಆಸನಭಾಯಾ ನೆರಳು ಮೊದಲಾದವುಗಳಮೇಲೆ ಯೆಂದಿಗೂ ಕಾಲು ಇಡಬಾರದು ಗುರುಗಳಿಗೆ ದಂತಧಾವನಕ್ಕಾಗಿ ಹಲ್ಲುಜ್ಜುವ ಕಡ್ಡಿಗಳನ್ನು ತಂದುಕೊಡಬೇಕು ಭಿಕ್ಷ್ಯದಲ್ಲಿ ಏನು ಬಂದದ್ದು ಗುರುಗಳಿಗೆ ಅರ್ಪಿಸಬೇಕು ಗುರುಗಳ ಆಜ್ಞಾ ಕೇಳದೆ ಎಲ್ಲಿಯೂ ಹೋಗಕೂಡದು. ನಿರಂತರ ಗುರುಗಳ ಪ್ರೀತಿಗೆ ಪಾತ್ರನಾಗಿ ಗುರುಗಳಹಿತವನ್ನೇ ಬಯಸುತ್ತಿರಬೇಕು. ಗುರುಗಳೆದುರಿಗೆ ಸಮಾಸದಲ್ಲಿಯೂ ಸಹ ಎಂದಿಗೂ ಕಾಲುಚಾಚಬಾರದು ಗುರುಗಳೆದುರಿಗೆ ಮಣಾಚಂಭದ ಮಾತಾಡೋದು, ನಗುವದು ಕೆಮ್ಮಿಯುವುದು ಗುಕ್ಕಿನಾತಾಡುವದು ಆಕಳಿಸುವದು ಇಂಥನೆಲ್ಲ ಸರ್ವಥಾ ಮಾಡಬಾರದು ಸದಾ ಜಾಗ್ರತೆಯಿಂದ ಇವನ್ನೆಲ್ಲ ಬಿಡಬೇಕು. ಸಮಯಾನುಸಾರವಾಗಿ ಗುರುಗಳು ಎಲ್ಲಿ ಪರಿಯಂತರ ಬೇಸರಗೊಳ್ಳುವದಿಲ್ಲವೋ, ಅಲ್ಲಿಯವರೆಗೆ ಅಂದರೆ ಅಷ್ಟು ವೇಳೆ ಗುರುಗಳಿಂದ ಅಧ್ಯಯನಮಾಡಬೇಕು. ಗುರುಗಳ ಹತ್ತರ ಗುರುಗಳಿಂದಲೂ ಕೆಳಗೆ ಆಸನವಿಲ್ಲದೆ ಕೂಡಬೇಕು ಏಕಾಗ್ರಚಿತ್ತದಿಂದ ಅವರ ಸೇವೆಯಲ್ಲಿ ನಿರತನಾಗಿರಬೇಕು ಗುರುಗಳ ಆಸನ ಹಾಸಿಗೆ ಮತ್ತು ಅವರು ಹತ್ತುವ ಕುದುರೆ ಮುಂತಾದವುಗಳ ಮೇಲೆ ಕೂಡಬಾರದು ಗುರುಗಳು ಮುಂದಾಗ್ಗೆ ಓಡುತ್ತ ಹೋಗುವರೂ ಅವರ ಬೆನ್ನು ಬಿಡದೆ ತಾನು ಅವರಹಿಂದೆಯೆ ಓಡುತ್ತ ಹೋಗಬೇಕು ಪ್ರಯಾಣದಲ್ಲಿ ಎತ್ತಿನಗಾಡಿ ಕುದುರೆಯಗಾಡಿ ಮಂಟೆಗಾಡಿ ಮುಂತಾದವು ನಾವಿಗಳಲ್ಲಿ ಗುರುಗಳ ಸಂಗಡ ವಿನಯದಿಂದ ಶಿಷ್ಯನು ಕೂಡಬಹುದು.

ಬ್ರಹ್ಮಚಾರಿಯಾದ ಶಿಷ್ಯನು ನಿರಂತರಗುರುಸೇವಾ ಜಿತೇಂದ್ರಿಯನು, ಮನಸ್ಸು ವಶಪಡಿಸಿ ಕ್ರೋಧ ರಹಿತನಾಗಿಯೂ, ಪವಿತ್ರನಾಗಿರಬೇಕು. ಯಾವಾಗಲೂ ಮಧುರ ನುಡಿ ಹಿತನುಡಿಗಳನ್ನಾಡುತ್ತಲಿರಬೇಕು. ಗಂಧ ಹಚ್ಚಿಕೊಳ್ಳುವದು ಒಳ್ಳೇಸುವಾಸನೆ ಹೂವಿನ ಹಾರಧರಿಸುವದು, ರುಚಿಕರ ಪದಾರ್ಥ ತಿನ್ನುವದು, ಪ್ರಾಣಿಗಳ ಹಿಂಸೆ ಎಂಣೆಯು ತಿಕ್ಕಿಸಿಕೊಳ್ಳುವದು ಕಣ್ಣಿಗೆ ಕಾಡಿಗೆ ಹಚ್ಚುವದು ಪಾದರಕ್ಷೆಗಳನ್ನು ಮೊದಲಾಗಿ ಕುಡಿಯುವದು ಛತ್ರಿಹಿಡಿಯುವದು ಕಾಮ ಲೋಭ ಭಯ ನಿದ್ರಾ ಮಾಡುವದು ಬಾರಿಸುವದು ಎಡೋನಡವನ್ನು ಹಚ್ಚಿಗೆಬ್ಬಿಸುವದು ಇವುಗಳಮೇಲೆ ಯಾವದೂ

ವರ್ಣಾ ಸಿಂಪ್ಪಿ ಹೊರಿಸುವದು ಸ್ತ್ರೀಯರ ಕಡೆಗೆ ನೋಡುವದು ಸ್ತ್ರೀಯರ ಸ್ಪರ್ಶಮಾಡುವದು, ಎರಡನೇದವರಿಗೆ ಹಿಂಸಾ ಬಿಡಿಸುವದು. ಚಾಗಲಿ ಹೇಳುವದು, ಇವೆಲ್ಲ ಕೆಟ್ಟಗುಣಗಳು ಮಹ ದೋಷವೆಂದು ತಿಳಿದು ಪ್ರಯತ್ನ ಪೂರ್ವಕದಿಂದ ಬಿಟ್ಟು ಬಿಡಬೇಕು ಜಲ ನೀರ ತುಂಬಿದ ಕೊಡ ಹೂವು ಗೊಳಗಣಿ ಒಳ್ಳೆಯವುಣ್ಣು ಮತ್ತು ದರ್ಶನಗಳನ್ನು ಅವಶ್ಯಾನುಸಾರವಾಗಿ ಸಂಗ್ರಹಮಾಡುವದು ನಿತ್ಯದಲ್ಲಿಯು ಗುರುಗಳಾಜ್ಞೆಯಿಂದ ಭಿಕ್ಷ್ಷ ಭಿಕ್ಷಾಕ್ಕೆ ಹೋಗುವದು ತುಪ್ಪ ಉಪ್ಪು ಕಂಗಳ ಅನ್ನ ಇವು ಬ್ರಹ್ಮಚಾರಿಗೆ ನಿಷಿದ್ಧವಿದ್ದು ಇವನ್ನು ವರ್ಜನಮಾಡಬೇಕು ಬ್ರಹ್ಮಚಾರಿಗಳು ನಾಟ ನೃತ್ಯ ಎಂದಿಗೂ ನೋಡಬಾರದು ನಿರಂತರ ವಿಷಯದಲ್ಲಿ ಮನವೆರಗುವ ಸಂಗೀತ ನೃತ್ಯಾದಿಗಳಿಂದ ದೂರನಾಗಿ ನಿಸ್ಪೃಹನಾಗಿರಬೇಕು. ದಂತಧಾವನ ಕಟ್ಟಿಗೆಗಳಿಂದ ಮಾಡಬಾರದು ಹಲ್ಲು ತಿಕ್ಕಬಾರದು ಬ್ರಹ್ಮಚಾರಿಗಳಿಗೆ ಸ್ತ್ರೀಯರಸಂಗದ ಏಕಾಂತದಲ್ಲಿ ಮಾತು ರೂಪಾದಿಗಳಿಂದ ಸಮಾಚಾರಗಳು ಹರಟೆಮಾತಾಡುವದು ಬಹಳ ನಿಷಿದ್ಧವದೆ. ಮತ್ತು ಬ್ರಹ್ಮಚಾರಿ ಶಿಷ್ಯನು ಗುರು ಉಚ್ಛಿಷ್ಟನ್ನು ಮತ್ತು ಔಷಧ ಸ್ನೇಹ್ಯಯಿಂದ ಊಟ ಭೋಗಿಸಬಾರದು.

೧೪ ಇನ್ನು ಗುರು ವಿಚಾರಹೇಗಿರಬೇಕೆಂದರೆ ಬ್ರಹ್ಮಚಾರಿಯಾದ ಶಿಷ್ಯನು ಬ್ರಾಹ್ಮಣನ ಗುರುವಿನನ್ನು ಬಿಡುವ ವಿಚಾರ ಸರ್ವಥಾ ಮನದಲ್ಲಿ ತರಕೂಡದು ಒಂದುವೇಳೆ ಶಿಷ್ಯನು ಮೋಹ ಮತ್ತು ಲೋಭ ಯುಕ್ತನಾಗಿ ಗುರುಗಳ ತ್ಯಾಗಮಾಡಿದರೆ ಅವನು ಪತಿತ ದರ್ಮಭ್ರಷ್ಟನಾಗುತ್ತಾನೆ. ಯಾವ ಗುರುವಿನಿಂದ ಲೌಕಿಕ ವೈದಿಕ ಮತ್ತು ಆಧ್ಯಾತ್ಮಿಕ ವಿದ್ಯಾದಜ್ಞಾನ ಸಂಪಾದನೆ ಮಾಡಿದ್ದಾನೋ ಆ ಗುರು ದೇವನಿಂದ ಎಂದಿಗೂ ದ್ರೋಹ ಮಾಡಬಾರದು. ಯಾವಾಗ್ಗೆ ಗುರು ಮಹಾ ಧನವಂತಿಯಾಗಿ ಆತ್ಮಾನಂದು ಪದಿಂದ ಸಾರಾಸಾರಾವಿಚಾರವನ್ನರಿಯದೇ ಕುಮಾರ್ಗದಲ್ಲಿ ಅಂದವರ ಪರಸ್ತ್ರೀಗಮನ ವೃಥಾ ಹರಟೆ ಕೊಚ್ಚಣಬೇಕಾದಷ್ಟುವೇಳೆ ನಿಸ್ಸರೂ ಕಾಲಕ್ಕೆ ಸಂಧ್ಯಾಮಾಡದಿರೋಣ, ಸಮೀಪ ದೇವ ಗುರುಮಂದಿರದಲ್ಲಿ ಉತ್ಸವಾದಿಗಳು ನಡೆದಿರಲು ಉತ್ಸವಕ್ಕೆ ಹೋಗದಿರೋಣ, ಜನರಲ್ಲಿ ಜಗಳಾಟಹುಟ್ಟಿಸಿ

ತಾನು ಒಂದೆಡೆಗಾಗಿ ಸುಳ್ಳುಸಾಕ್ಷಿಹೇಳೋಣ ಬ್ರಾಹ್ಮಣಮಿತ್ರ ದ್ರೋಹಿತ
ಸುಹೃದರ ತಾಡನವು, ನೇಳಿಗೆ ಗಾಯತ್ರಿ ಜಪತ್ಯಾಗ ಪರನಿಂದ್ಯವು ಸ್ತ್ರೀ
ವಾರ್ತಾಲಾಪ ಇತ್ಯಾದಿಗಳಿಂದ ಬ್ರಾಹ್ಮಣತ್ವದಿಂದ ಪತಿತನಾಗುತ್ತಾನೆ.
ಇಂಥ ದುರ್ಬುದ್ಧಿಯುಳ್ಳವನು ಬ್ರಾಹ್ಮಣನೆಂದು ಕರೆಯಲು ಸಹ ಸಂಶಯ.
ಬ್ರಾಹ್ಮಣ್ಯತ್ವದಿಂದ ಪತಿತನಾದ ಇಂಥ ಬ್ರಾಹ್ಮಣಗುರುವನ್ನು ಸಹ
ಬಿಟ್ಟುಬಿಡಬೇಕೆಂದು ಮನುವಿನ ಆಜ್ಞೆ ಇದೆ. ಇಂಥ ಪತಿತ ಗುರುವನ್ನು
ಮಾತ್ರ ತ್ಯಾಗ ಮಾಡುವದು ತನ್ನ ಗುರುಗಳ ಗುರುವು ಬಂದರೆ ಆ ಪರಮ
ಗುರುಗಳಿಗೆ ಸಹ ತನ್ನ ಪಿಸಂತಿ ಆದರ ಸತ್ಕಾರ ನಮನಾದಿಗಳನ್ನು
ಮಾಡಿದ ಮೇಲೆ ಪರಮಗುರು ಆಜ್ಞಾಮಾಡಿದಮೇಲೆ ಅನಾಕ್ಕ ಬಂದು
ತನ್ನ ಗುರುವಿಗೆ ನಮಸ್ಕರಿಸಬೇಕು ಯಾರು ವಿದ್ಯಾಗುರುವೋ ಅವರ
ಲ್ಲಿಯೂ ಸಹ ಇದೆ ಪ್ರಕಾರ ವರ್ತಮಾನ ಇರಬೇಕು ಯಾರು ಯೋಗಿ
ಪುರುಷರಿದ್ದು ಅಧರ್ಮ ಮಾರ್ಗವನ್ನು ಬಿಡಿಸಿ ಹಿತವಾದ ಮಾತಿನಿಂದ
ಹಿತೋಪದೇಶಮಾಡುವರೋ ಅವರಲ್ಲಿಯೂ ಸಹ ಗುರುಜನಕ್ಕೆ ಉಚಿತ
ವಾದ ಆದರ ಸತ್ಕಾರ ನಮನಾದಿಗಳನ್ನು ಮಾಡಬೇಕು. ಗುರುಪುತ್ರ ಗುರು
ಪತ್ನಿ ಮತ್ತು ಗುರುಗಳ ಬಂಧು ಬಾಂಧವರ ಸಂಗಡ ಗುರುಗಳ ಸಮಾನ
ರೆಂದು ತಿಳಿದು ಗುರುಗಳಲ್ಲಿ ವರ್ತಿಸುವಂತೆ ನಡೆದುಕೊಳ್ಳುವದು ಇದರಿಂದ
ಪರಮ ಶ್ರೇಯಸ್ಸಿಗೆ ಕಾರಣವಾಗುತ್ತದೆ. ಬಾಲಕನು ಅಂದರೆ ಚಿಕ್ಕವನು
ಅಥವಾ ಶಿಷ್ಯನಾದವನು ಯಜ್ಞಯಾಗಾದಿ ಕರ್ಮಗಳಲ್ಲಿ ಸನ್ಮಾನೀಯ
ರಾದ ಉತ್ತಮರನ್ನು ಆದರಿಸಬೇಕು.

ಒಂದುವೇಳೆ ಗುರುಪುತ್ರ ಸಹಾ ಪಾಠಹೇಳಿ ಓದಿಸಿದರೆ ಗುರುಗಳಂತೆ
ಸನ್ಮಾನ ಪಡೆಯಲು ಯೋಗ್ಯ ಅಧಿಕಾರಿಗಳೆಂದು ತಿಳಿದು ಆದರಮಾಡ
ಬೇಕು. ಆದರೆ ಗುರುಪುತ್ರರಿಗೆ ಕೈಕಾಲು ಒತ್ತುವದು ಸ್ನಾನಮಾಡಿಸು
ವದು ಕೈಕಾಲು ತೊಳೆಯುವದು ಗುರುಪುತ್ರ ಉಚ್ಛಿಷ್ಟ ಭೋಜನಮಾಡ
ಲಾರದು. ಗುರುಪತ್ನಿಯರಿಗೆ ಯಣ್ಣೆ ಹಚ್ಚುವದು ಕೈಕಾಲು ಒತ್ತುವದು
ಎರೆಯುವದು ಕೂದಲು ಹಿಕ್ಕುವದು ಹೂ ಮುಡಿಸುವ ಅಲಂಕಾರಾದಿ
ಗಳನ್ನು ಎಂದಿಗೂ ಮಾಡಕೂಡದು. ಗುರುಸ್ತ್ರೀ ಯುವತಿ ಪ್ರಾಯದವ

ಳಿದ್ದರೆ ಚರಣಮುಟ್ಟಿ ನಮಸ್ಕಾರ ಪಠನಮಾಡಕೂಡದು ದೂರಿಂದಲೇ ತಲೆ
ಬಾಗಿ ಪೃಥ್ವಿಯಲ್ಲಿ ನಮಿಸಿ ಅಮುಕ ನಾನು ಇಂಥ ಶಿಷ್ಯನಿದ್ದೇನೆ ನಮಿಸುವೆ
ನೆಂದು ಹೇಳುವದು ಅವರ ಕಡೆಗೆ ಕಣ್ಣೆತ್ತಿ ನೋಡಬಾರದು ಗುರುಪತ್ನಿ
ಯರು ವೃದ್ಧರಾಗಿದ್ದರೆ ಮಾತ್ರ ಶಿಷ್ಯನಾದವನು ಹೊರಗಿನಿಂದ ಬಂದರೆ
ಗುರುಪತ್ನಿ ಕಾಲುಮುಟ್ಟಿ ನಮನ ಮಾಡಬಹುದು ಸತ್ಪುರುಷರ ನಿರಂತರ
ಧರ್ಮವನ್ನು ಸ್ಮರಿಸಿ ಆಚರಿಸತಕ್ಕ ಶಿಷ್ಯನಧರ್ಮವಿದು. ಅಜ್ಜಿ ಸೋದರ
ಮಾವನ ಹೆಂಡತಿ ಹೆಣ್ಣುಕೊಟ್ಟ ಅತ್ತೆ ಇವರೆಲ್ಲರೂ ಗುರುಪತ್ನಿಯ ಸಮಾನರು
ಗುರುಪತ್ನಿಯಂತೆ ಸಹ ಇವರಿಗಾದರೂ ನಮನಮಾಡುವದು ಮಾತೆಯೂ
ಎಲ್ಲರಿಗಿಂತಲೂ ಹೆಚ್ಚಿನ ಪೂಜ್ಯಗಳು.

ಯಾವ ಬ್ರಹ್ಮಚಾರಿ ಶಿಷ್ಯನು ಈ ಪ್ರಕಾರ ಸುಸಂಪನ್ನನಾಗಿ ಇಂದ್ರಿ
ಯಗಳನ್ನು ಜಯಿಸಿ ತನ್ನ ಮನವಶದಲ್ಲಿಟ್ಟು ದಂಭರಹಿತನಾಗಿ ಅಧ್ಯಯನ
ಮಾಡಬೇಕು. ಯಾವಾತ್ಯ ಶಿಷ್ಯನು ಈ ಪ್ರಕಾರ ಒಂದುವರ್ಷ ಪರಿಯಂತ
ಗುರುಕುಲವಾಸಮಾಡಿದ ಮೇಲೆ ಮತ್ತು ಆ ಒಂದು ವರ್ಷವೇಳೆ ಅವಧಿ
ಯಲ್ಲಿ ಗುರುಗಳು ಇವನಿಗೆ ಜ್ಞಾನೋಪದೇಶ ಮಾಡದಿದ್ದರೆ, ಗುರುಗಳು
ತಮ್ಮಲ್ಲಿರುವ ಶಿಷ್ಯನ ಎಲ್ಲ ಪಾಪಗಳನ್ನು ಹರಣಮಾಡುತ್ತಾರೆ ಆಚಾರ್ಯ
ಪುತ್ರಃ ಶುಶ್ರೂಷೂ ಜ್ಞಾನದೋ ಧಾರ್ಮಿಕಃ ಶುಚಿಃ ಶಕ್ತೋನ್ನದೋ
ಅಂಬುದಃ ಸಾಧುಃ ಸ್ವೋಧ್ಯಾಪ್ಯಾ ದಶಧರ್ಮತಃ॥ ಗುರುಪುತ್ರ ಸೇವಾ
ಪರಾಯಣನಾದ ಆಚಾರ್ಯರ ಶಿಷ್ಯ, ಜ್ಞಾನಕೊಡುವವ ಧರ್ಮಾತ್ಮಾ
ಶುಚಿಯುಳ್ಳವ ಶಕ್ತಿಶಾಲಿ ಎಂದರೆ ಪಾಠ ಹೇಳಲಿಕ್ಕೆ ಶಕ್ತಿಯುಳ್ಳವ, ಅನ್ನದಾತೃ
ಉದಕ ದಾತೃ, ಸಾಧುಪುರುಷ ತನ್ನಿಂದ ಚೆನ್ನಾಗಿ ಓದಿದ ಶಿಷ್ಯ ಇವರೆಲ್ಲ
ಜ್ಞಾನವಂತರಾಗಿದ್ದರೆ, ಈ ಹತ್ತು ಜನ ಅಧ್ಯಯನಮಾಡಿಸಲು ಯೋಗ್ಯ
ವಾಗಿದ್ದಾರೆ (ಇದು ಪದ್ಮಪುರಾಣ ಸಾಮಾನ್ಯನಿಯಮ ತನ್ನ ಶಿಷ್ಯ ಎಂ
ಬುದು ವಿಚಾರಾಂಶವಿದೆ ತನ್ನ ಪೂರ್ವಜರಲ್ಲಿ ಅಧ್ಯಯನಮಾಡಿದ ಪೂರ್ವ
ಜರ ಶಿಷ್ಯ ವಿದ್ಯಾವಾನನಾಗಿ ಗುರು ಗುರುಪುತ್ರರು ಗುರು ವಂಶೀಕರಲ್ಲಿಯೂ
ಗುರುಭಾವನೆಯನ್ನಿಟ್ಟು ಶಿಷ್ಯನಾಗಿ ನಡೆಯುವ ತನ್ನ ಶಿಷ್ಯ, ಮತ್ತು ಕೃತ
ಜ್ಞನೂ ದ್ರೋಹಿಯೂ ಆಗದೆ ಇದ್ದವನು, ಮೇಧಾವಿ ಒಳ್ಳೇ ಬುದ್ಧಿಶಾಲಿ,

ಸಂಶಯ ಛೇತ್ತಾಗರು, ವಿಶ್ವಾಸಪಾತ್ರ ಮತ್ತು ಪ್ರಿಯರಾದ ಅರುಜನ ದ್ವಿಜರು ವಿಧಿಪೂರ್ವಕವಾಗಿ ಅಧ್ಯಯನ ಮಾಡಿಸಲಿಕ್ಕೆ। ಯೋಗ್ಯರಿರುವರು ಅನಾಧ್ಯಾಯ ಕಾಲಬಿಟ್ಟು ಒಳ್ಳೆಕಾಲದಲ್ಲಿ ಅಧ್ಯಯನ ಮಾಡುವದು.

೧೫ ಪ್ರಾಣಾಯಾಮ ಗಾಯತ್ರಿ ಜಪ

ಬ್ರಹ್ಮಚಾರಿಯು ಪ್ರತಿನಿತ್ಯ ಪ್ರಾತಃಸಾಯಂಕಾಲ ಮಧ್ಯಾಹ್ನಕಾಲ ದಲ್ಲಿ ಆಚಮನ ವಿಧಿ ಪೂರ್ವಕವಾಡಿ. ಪ್ರಾಣಾಯಾಮ ಮಾಡಬೇಕು ಸಂಧ್ಯಾ ಅರ್ಥ ತಿಳಿದೆಯೇಮಾಡುವದು, • ಬ್ರಹ್ಮಚರ್ಯಕ್ಕೆ ಮುಖ್ಯ ಪ್ರಾಣಾಯಾಮ, ಈ "ಪ್ರಾಣಾಯಾಮದಿಂದ," ಇಂದ್ರಿಯ ವಶ, ನಿಷ್ಟನಡತಿ ಯಿದು ಎಂದು ಬೋಧವದದಿ ಯಮನಿಯಮಾದಿಗಳ ದಾರಢ್ಯದಿ ಕಮಲಾ ಸ್ವ ಸ್ತಿಕ ದಾಸನದಿ | ಸಮಚಿತ್ತದಿರೇಚಕ ಪ್ರಮುಖದಲಿಂ | ಸಮೀರನ ಬಂಧಿಸಿ ಜಪವನು ಮಾಳ್ಪದೆ || ಸ್ವಾಗರ್ಭಕ ಅಗರ್ಭಕ ಎಂಬುವ ಯೋಗದ ಲಕ್ಷಣ ತಿಳಕೊಂಡು || ನಾಸಿಗಿನ ತುದಿಯನೆ ನೀಕ್ಷಿಸುತಲಿ ಶ್ರೀ ಭಾಗೀರಥಿ ಪಿತನ ನೀಕ್ಷಿಸುತಿಪ್ಪದೆ ||೩೧|| ಪ್ರಾಣೇಶ ವಿಠಲರು.

ರೇಚಕ, ಪೂರಕಕುಂಭಕ ಮೂರು ಪ್ರಾಣಾಯಾಮದಿಂದ ಪವಿತ ನಾಗಿ ಓಂಕಾರ ಜಪಕ್ಕೆ ತಕ್ಕ ಅಧಿಕಾರಿಯಾಗುತ್ತಾನೆ. ಹೀಗೆ ಓಂಕಾರ ಅಧಿಕಾರನುಸಾರ ಜಪಮಾಡಬೇಕು. ಮೊದಲಿಗೆ ಮುಖ್ಯವಾಗಿ ನಿಯಮ ದಿಂದ ಹೆಚ್ಚಿನಕಿಂತಲೂ ಹೆಚ್ಚಿಗೆ ಒಂದು ಸಹಸ್ರ ಮಧ್ಯಮ ಸ್ಥಿತಿಯಲ್ಲಿ ನೂರು ಅಗದಿ ಕನಿಷ್ಟ (೧೦) ಹತ್ತು ಜಪಮಾಡಬೇಕು. ಇದು ಜಪಯಜ್ಞ ವೆಂತ ಕರಿಸಿಕೆಳ್ಳುತ್ತದೆ.

ಗಾಯತ್ರಿ ಚೈವ ವೇದಾಂಶ್ಚ ತುಲಯಾ ತೋಲಯತ್ಪ್ರಭುಃ || ಏಕತಶ್ಚತುರೋ ವೇದಾ ಗಾಯತ್ರೀಚ ತಥೈಕತಃ || ಪೂರ್ವದಲ್ಲಿ ಭಗ ವಂತನು ಗಾಯತ್ರಿ, ಮತ್ತು ನಾಲ್ಕು ಬೇದಗಳನ್ನು ತಕ್ಕಡಿಯಲ್ಲಿ ತೂಗಲು ಎಲ್ಲವೇದಗಳಿಗೆ ಸಮವಾಗಿ-ಗಾಯತ್ರಿ ಮಂತ್ರಪಾದಿತು. ಬ್ರಾಹ್ಮಣ ಬ್ರಹ್ಮ ಚಾರಿಯು ಶ್ರದ್ಧಾವಾನಾಗಿ ಏಕಾಗ್ರಚಿತ್ತದಿಂದ ಮೊದಲಿಗೆ ಓಂಕಾರದಿಂದ ಭೂಭುವಃ ಸ್ವಃ ಈ ಮೂರು ವ್ಯಾಹೃತಿಯ ಜಪುಗನಾತನದಿಂದ ಉತ್ಪನ

ವಾಗಿವೆ. ಈ ವ್ಯಾಹೃತಿಯು ಎಲ್ಲ ಪ್ರಕಾರ ಅಮಂಗಳ ನಾಶಮಾಡುವದಿದೆ. ಈ ಮೂರು ವ್ಯಾಹೃತಿಗಳನ್ನು ಕ್ರಮವಾಗಿ ಪ್ರಧಾನ ಪುರುಷ ಕಾಲರೂಪಿ ವಿಷ್ಣು ಬ್ರಹ್ಮ ಶಿವ ತಥಾ ಸತ್ವ, ರಜೋ ತಮೋಗುಣದ ಪ್ರತೀಕವಾಗಿವೆ "ಓಂಕಾರಸ್ತತ್ಪರ ಬ್ರಹ್ಮಸಾವಿತ್ರೀ ಸ್ಯಾತದುತ್ತರಮ್, ಏಷಮಂತ್ರೋ ಮಹಾಯೋಗಃ ಸಾರಾತ್ಸಾರ ಉದಾಹೃತಃ, ಯೋಧೀತೇ ಹನ್ಯ ಹನ್ಯೇ ತಾಂ ಗಾಯತ್ರೀ ವೇದಮಾತರಂ| ವಿಜ್ಞಾಯಾರ್ಥ ಬ್ರಹ್ಮಚಾರಿ ಸಯಾತಿ ಪರಮಾಂಗತಿಂ| ಗಾಯತ್ರಿವೇದ ಜನನೀ| ಗಾಯತ್ರ್ಯಾನ ಪರಂಜಪ್ಯವೇತ ದ್ವಿಜ್ಞಾಯಯುಮುಚ್ಯತೇ|| ಪದ್ಮಪುರಾಣ,

ಮೊದಲಿಗೆ ಓಂಕಾರ, ನಂತರ ಬ್ರಹ್ಮ ಅಂದರೆ ವ್ಯಾಹೃತಿ ತದನಂತರ ಗಾಯತ್ರಿ ಮಂತ್ರ ಹೀಗೆ ಉಚ್ಚಾರಮಾಡಬೇಕು. ಇವೆಲ್ಲ ಕೂಡುವದರಿಂದ ಮಹಾ ಯೋಗವೆಂಬುವ ಮಂತ್ರನಾಗುತ್ತದೆ. ಸಕಲಮಂತ್ರಗಳಿಗೂ ಸಾರ ಭೂತವಾದುದುದು. ಯಾವ ಬ್ರಹ್ಮಚಾರಿಯು ಪ್ರತಿದಿನ ವೇದಮಾತೆಯಾದ ಗಾಯತ್ರಿ ಅರ್ಥ ತಿಳಿದು ಜಪಮಾಡುತ್ತಾನೋ ಆತನು ಉತ್ತಮವಾದ ಪದವಿಯನ್ನು ಹೊಂದುತ್ತಾನೆ. ಗಾಯತ್ರಿ ಸಕಲ ವೇದಗಳ ಜನನಿ ಗಾಯತ್ರಿ ಸಂಪೂರ್ಣ ಸಂಸಾರದಲ್ಲಿದ್ದ ಯೋಗ್ಯರನ್ನು ಪವಿತ್ರಮಾಡುವಳು ಗಾಯತ್ರಿಕಿಂತಲೂ ಹೆಚ್ಚಿನ ಯಾವ ಮಂತ್ರವೂ ಇಲ್ಲವೆಂದು ತಿಳಿದು ಎಲ್ಲ ಮಂತ್ರಗಳಿಗಿಂತಲೂ ಜಪಮಾಡಲಿಕ್ಕೆ ಯೋಗ್ಯವೆಂದು ಅರ್ಥಾನುಸಂಧಾನ ಪೂರ್ವಕ ಜಪಮಾಡುತ್ತಾನೋ ಅವನು ಮುಕ್ತನಾಗುತ್ತಾನೆ. ಇದ ಪದ್ಮಪುರಾಣ ವಚನ.

ಭಾರತ ಹರಿವಂಶ ಯೋಗಖಂಡದಲ್ಲಿ ಯೋಗಲಕ್ಷಣ ಯೋಗ ಅಂಗ, ಅಷ್ಟಾಂಗ ಯೋಗಫಲ ಯೋಗ ವಿಘ್ನ ನಾಶ್ಯವ ಉಪಾಯ ಓಂಕಾರ ಪ್ರಣಾಯಾಮಕ್ರಮ ೧. ಬಾಹ್ಯವೃತ್ತಿ ಪ್ರಾಣಾಯಾಮ ಅಭ್ಯಂತರ ವೃತ್ತಿ ಪ್ರಾಣಾಯಾಮ ೩ ಸ್ತಂಭವೃತ್ತಿ ಪ್ರಾಣಾಯಾಮ ೪ ಬಾಹ್ಯಾಭ್ಯಂತರಾಪೇಕ್ಷಿ ಪ್ರಾಣಾಯಾಮ ಹೀಗೆ೪ ವಿಧ ಪ್ರಾಣಾಯಾಮದಲ್ಲಿ ಹೇಳಿ ಪ್ರಾಣಾಯಾಮ ಸಂಕ್ಷಿಪ್ತ ೧೪ ಶಿಹೇಳಿ ಮೂರುನಾಡಿಗಳಲ್ಲಿ ಶ್ವಾಸ ಧಾರಣವ

ವಿಧಿವುಂತಾದವುಗಳನ್ನು ಗುರುಗಳಿಂದ ತಿಳಿಯಬೇಕು ಸಂಧ್ಯಾ ವಿಚಾರದಲ್ಲಿ ಇವೆಲ್ಲ ಸವಿಸ್ತರ ಹೇಳಲಾಗುತ್ತದೆ.

**ಶ್ರೀಮನ್ ಮಹಾಭಾರತ ಶಾಂತಿಪರ್ವ ಅಧ್ಯಾಯ ೧೯೧ರಲ್ಲಿ ಭರಧ್ವಾಜರನ್ನು ಕುರಿತು ಭೃಗು ಋಷಿಗಳು ಹೇಳಿದ್ದು.**

ಲೋಕ ಹಿತ ಕರ್ತಾರನಾದ ಬ್ರಹ್ಮದೇವನು ಧರ್ಮ ಸಂರಕ್ಷಣಾರ್ಥವಾಗಿ ಪೂರ್ವದಲ್ಲಿಯೇ ನಾಲ್ಕು ಆಶ್ರಮವನ್ನು ಮಾಡಿದನು. ಆದರಲ್ಲಿ ಮೊದಲನೇ ಆಶ್ರಮ ಬ್ರಹ್ಮಚರ್ಯ ಆಶ್ರಮವು ಈ ಬ್ರಹ್ಮಚರ್ಯ ಆಶ್ರಮದಲ್ಲಿರುವರು ಒಳ್ಳೇ ಉಕ್ತ ಪ್ರಕಾರವಾಗಿ ಶುಚಿರ್ಭೂತನಾಗಿರಬೇಕು, ಸಂಸ್ಕಾರ ವಿಷಯವಾಗಿ ನಿಯಮ ಉಕ್ತವಾದ ವ್ರತಗಳಮಾಡುವ ವಿಷಯದಲ್ಲಿ ಅಂತಃಕರಣ ಶುದ್ಧಿಯಿಂದ ತ್ರಿಕರಣ ಪೂರ್ವಕ ಶುದ್ಧ ಸದಾಚಾರದಲ್ಲಿ ತತ್ಪರನಾಗಿರಬೇಕು. ಮನೋ ಆಲಸ್ಯ ಬಿಡಬೇಕು ಪ್ರಾತಃ ಸಂಧ್ಯಾವೇಳೆಯಲ್ಲಿ ಸೂರ್ಯ ಅಗ್ನಿ ಮತ್ತು ಇತರ ದೇವತೆಗಳಂತಸ್ಥ ಶ್ರೀ ಹರಿಯನ್ನು ಪೂಜಿಸಿ ಧ್ಯಾನಿಸಬೇಕು. ಧಂದಾಟ ಆಲಸ್ಯ ಬಿಟ್ಟು ಗುರುಗಳ ವಂದನ ವೇದಾಭ್ಯಾಸ, ಶಾಸ್ತ್ರ ಓದುವದು ಕೇಳುವದು ಮನನಮಾಡುವದು ಇಂಥ ಉಪಾಯಗಳಿಂದ ಅಂತಃಕರಣ ಪವಿತ್ರಮಾಡುತ್ತಿರಬೇಕು. ಮೂರು ವಾಳ್ಯದಲ್ಲಿ ಸ್ನಾನಮಾಡಬೇಕು ಇಂದ್ರಿಯಗಳ ನಿಗ್ರಹಿಸುತ್ತಲಿದ್ದು ಬ್ರಹ್ಮಚರ್ಯದಿಂದ ಇರುವುದು ಅಗ್ನಿ ಉಪಾಸನಾ ಗುರುಸೇವಾದಲ್ಲಿ ತತ್ಪರನಾಗಿರಬೇಕು. ಪ್ರತಿನಿತ್ಯ ಭಿಕ್ಷಾಟನಮಾಡುವದು ದೊರೆತ ಭಿಕ್ಷಾನ್ನವನ್ನು ಗುರುಗಳಿಗೆ ಅರ್ಪಿಸಬೇಕು ಗುರುಗಳ ಆಜ್ಞಾಪರಿಪಾಲನ ಮಾಡುತ್ತಿರಬೇಕಲ್ಲದೆ ಅವರಿಗೆ ವಿಮುಖರಾಗಿ ಪ್ರತಿಕೂಲನಾಗಬಾರದು ಗುರುಗಳ ಪ್ರಸಾದದಿಂದ ಅಧ್ಯಯನ ಮಾಡಿದ ಎಷ್ಟು ವಿದ್ಯಾ ಲಭಿಸಿತೋ ಚನ್ನಾಗಿ ಚಿಂತನೆಮಾಡಿ ದೃಢಪಡಿಸಿ ಅನುಭವದಲ್ಲಿ ತಂದು ಅದರಂತೆ ವರ್ತಿಸಬೇಕು.

ಗುರುಂ ವಸ್ತ್ರ ಸಮಾರಾಧ್ಯ ದ್ವಿಜೋ ವೇದಮವಾಪ್ನುಯಾತ್
ತಸ್ಯ ಸ್ವರ್ಗ ಫಲಾವಾಪ್ತಿಃ ಸಿಧ್ಯತೇ ಚಾಸ್ಯ ಮಾನಸಮ್ ||

ಯಾವ ಬ್ರಹ್ಮಚಾರಿಯು ಗುರುಗಳ ಸೇವೆಯಿಂದ ವೇದ ಸಂಪಾದನೆ

ಮಾಡುವನೋ ಆತನ ಮನೋರಥ ಪೂರ್ತಿಯಾಗಿ ಸ್ವರ್ಗಫಲ ಪ್ರಾಪ್ತಿಯಾಗುತ್ತದೆ. ಮುಂದೆ.

ಶ್ರೀಮಾನ್ ಮಹಾ ಭಾರತ ಶಾಂತಿಪರ್ವದ ಅಧ್ಯಾಯ ೨೪೨ರಲ್ಲಿ ಶುಕರಿಗೆ ಶ್ರೀ ವ್ಯಾಸರು ಹೇಳಿದಂತೆ ಭೀಷ್ಮಾಚಾರ್ಯರು ಧರ್ಮರಾಜನಿಗೆ ಉಪದೇಶಗೈದ ಬ್ರಹ್ಮಚರ್ಯ ಕಾಮವಿಷಯ ವಾಸನ ಪ್ರಾಣಿಗಳಲ್ಲಿ ದ್ವೇಷ ಬುದ್ಧಿಯಿಲ್ಲದೆ ಬ್ರಹ್ಮಚರ್ಯ ಪಾಲನ ಮಾಡಬೇಕು ಈ ಪ್ರಕಾರ ದ್ವೇಷಾಸೂಯೆಗಳಿಂದ ರಹಿತನಾಗಿ ವರ್ತಿಸುವನು. ಮುಕ್ತಿದಾರಿಯನ್ನು ಹಿಡಿಯಲು ಯೋಗ್ಯನಾಗುತ್ತಾನೆ ಬ್ರಹ್ಮಚರ್ಯಾದಿ ನಾಲ್ಕು ಆಶ್ರಮಗಳು ನಾಲ್ಕು ಕಾಲುಗಳುಳ್ಳ ಒಂದು ಪಾವಟಿಗೆ ಅಥವಾ ಪೀಠ ಇಂಥ ಪಾವಟಿಗೆಯನ್ನು ಹತ್ತಿ ಸಾಧನ ಮಾಡುವವರು ಬ್ರಹ್ಮಲೋಕದಲ್ಲಿ ಪೂಜಾರ್ಹರಾಗುತ್ತಾರೆ.

ಮಾನವರಿಗೆ ೧೦೦ ವರ್ಷ ಆಯುಷ್ಯ ಪರಿಮಿತಿ, ಅದರಲ್ಲಿ ಮೊದಲನೇ ಭಾಗ ವಂದಂಶ ಬ್ರಹ್ಮಚರ್ಯದಿಂದ ಇರಬೇಕು. ಯಾರಿಂದಲೂ ಮತ್ಸರ ಮಾಡಕೂಡದು. ಧರ್ಮತತ್ವ ಜ್ಞಾನ ಸಂಪಾದನ ಮಾಡಿಕೊಳ್ಳುತ್ತ ಗುರು, ಅಥವಾ ಗುರುಪುತ್ರರಲ್ಲಿ ಇರಬೇಕು. ಗುರುಗೃಹದಲ್ಲಿದ್ದು ಗುರುಗಳು ತನ್ನ ಬಂಧುಗಳ ಅನುಕೂಲ ಸೇವಾ ಮಾಡುತ್ತ, ಗುರುಗಳು ಮಲಗಿದ ಮೇಲೆ ಮಲಗುವದು ಗುರುಗಳಿಗಿಂತಲೂ ಮೊದಲೇ ಏಳುವದು. ಯಾವ ಕಾರ್ಯವು ಶಿಷ್ಯನಾದವನು, ದಾಸ ಸೇವಕನಾದವನು ಮಾಡಬೇಕೋ ಅದರಂತೇ ಗುರುಗಳ ಮನೆ ಎಲ್ಲ ಕೆಲಸಗಳನ್ನು ಮಾಡಬೇಕು ಗುರುಗಳ ಸನ್ನಿಧಿಯಲ್ಲೀ (ಸಮೀಪದಲ್ಲಿ) ವಿನಿಯದಿಂದ ನಿಂತಿರಬೇಕು. ಅಭ್ಯುದಯ ಹೊಂದತಕ್ಕ ಶಿಷ್ಯನು ಗುರುಗಳ ಮನ ಒಲಿಸಿ ಅವರು ಹೇಳದ ಪೂರ್ವದಲ್ಲೇ ಸಮಯಾನುಸಾರ, ಎಲ್ಲ ಕೆಲಸಗಳನ್ನು ಮಾಡುತ್ತ ಗುರುಗಳ ಹತ್ತಿರ ಅಧ್ಯಯನ ಮಾಡಬೇಕು ಸರಳ ಸ್ವಭಾವಿನಾಗಿರುವದು ಯಾವಾಗಲು ಒಳ್ಳೇ ಮೃದು ಮಧುರ ಸವಿ ಮಾತುಗಳನ್ನಾಡುತ್ತಿರಬೇಕಲ್ಲದೆ ಕಠಿಣ ದುಷ್ಟ ಮಾತುಗಳನ್ನು ಆಡಬಾರದು

ಗಳು ಕರೆದಾಕ್ಷಣವೇ ಹೋಗಿ ಎದುರಿಗೆ ನಿಂತು ಅವರ ಮಾತನಾಲಿಸಬೇಕು. ಶುಚಿರ್ಭೂತನಾಗಿಯೂ, ಕಾರ್ಯದಕ್ಷನಾಗಿಯೂ ಇತ್ಯಾದಿ ಗುಣಾವಳಿ ಸಂಪನ್ನ ಶಿಷ್ಯನು ಸಂಧ್ಯಾ ಮಧ್ಯದಲ್ಲಿ ಸಮಯಾನುಸಾರ ಗುರು ಪ್ರೀತಿಕರವಾದ ಮಾತುಗಳನ್ನಾಡಬೇಕು ಜಿತೇಂದ್ರಿಯನಾದ ಶಿಷ್ಯನು ಸ್ವಸ್ಥ ಮನಸ್ಸಿನಿಂದಲೂ, ಪ್ರಿಯ ದೃಷ್ಟಿಯಿಂದಲೂ, ಗುರುಗಳನ್ನು ನೋಡಬೇಕು. ಗುರುಗಳು ಭೋಜನ ಮಾಡಿದ ಮೇಲೆ ತಾನು ಭೋಜನ ಮಾಡಬೇಕು. ಗುರುಗಳು ಜಲಾದಿ ಪ್ರಾಶನ ಮಾಡಿದ ಮೇಲೆ ತಾನು ಪ್ರಾಶನ ಮಾಡಬೇಕು. ಗುರುಗಳು ಕೂಡದ ಹೊತ್ತು ಕೂಡ್ರಬಾರದು. ಅವರು ಮಲಗದ ಹೊತ್ತಾಗಿ ತಾನು ಮಲಗಬಾರದು. ವಂದನ ಮಾಡುವ ವೇಳೆಯಲ್ಲಿ ಕೈ ಜೋಡಿಸಿ ನಮನ ಮಾಡುತ್ತ ಮೆಲ್ಲಗೆ ಗುರುಪಾದಗಳನ್ನು ಮುಟ್ಟಬೇಕು ತನ್ನ ಬಲ ಕೈಯಿಂದ ಗುರು ಬಲಗಾಲು, ತನ್ನ ಎಡಗೈಯಿಂದ ಗುರುವಿನ ಎಡಗಾಲು ಕೈಯಿಂದ ಸ್ಪರ್ಶ ಮಾಡಿ ನಮಸ್ಕಾರ ಮಾಡಬೇಕು. ಈ ಪ್ರಕಾರ ನಮಿಸಿ ವಿನಯದಿಂದ ಹೇ ಸ್ವಾಮಿನ್ ನನಗೆ ಅಧ್ಯಯನ ಮಾಡಿಸಬೇಕೆಂದು ಪ್ರಾರ್ಥನೆ ಮಾಡಬೇಕು ಹೇ ಬ್ರಹ್ಮನಿಷ್ಠರಾದ ಗುರುಗಳೇ, ತಾವು ಆಜ್ಞೆಯಿತ್ತಂತೆ ನಾನು ಆ ಕೆಲಸವೆಲ್ಲ ಮಾಡಿದ್ದೇನೆ, ಮಾಡುತ್ತಲಿದ್ದೇನೆ ಮುಂದೆ ಸಹ ತಮ್ಮ ಆಜ್ಞಾ ಪೂರಕನೇ ಆಗುವೆನೆಂದು ಗುರುಗಳ ಪ್ರೀತಿಗೋಸುಗ ಹೇಳುತ್ತ, ಗುರುಗಳ ಆಜ್ಞೆಯಂತೆ ಎಲ್ಲ ಕೆಲಸವನ್ನು ಸಾಂಗವಾಗಿ ಯೋಗ್ಯರೀತಿ ಮಾಡಬೇಕು ಮುಖದಿಂದ ಗುರುಗಳಿಗೆ ಎಲ್ಲ ಹೇಳಬೇಕು. ಬ್ರಹ್ಮಚರ್ಯದಲ್ಲಿರುವನು, ಗಂಧ ಮಾಲೆಗಳನ್ನು ಹಚ್ಚಬಾರದು ಉತ್ತಮವಾದ ಮಧುರಪೇಯ ಕುಡಿಯಬಾರದು ರುಚಿಯಾದ ಇಂದ್ರಿಯ ಲೋಲುಪವಾದ ರಸವನ್ನು ಸ್ವೀಕರಿಸಬಾರದು ಸಮಾವರ್ತನಾನಂತರ ಸೇವನ ಮಾಡಬೇಕೆಂದು ಶಾಸ್ತ್ರ ನಿಯಮವು. ಬ್ರಹ್ಮಚರ್ಯ ಸಂಬಂಧವಾದ ಯಾವ ಉತ್ತಮ ನಿಯಮಗಳನ್ನು ಶಾಸ್ತ್ರಗಳಲ್ಲಿ ಹೇಳಿದೆಯೋ ಅವೆಲ್ಲವನ್ನು ಗುರುಗಳಿಂದ ತಿಳಿದು ಸತ್ಯದಲ್ಲಿ ಆಚರಿಸಬೇಕು. ಗುರುಗಳ ದೂರದಲ್ಲಿರಬಾರದು. ಈ ರೀತಿ ಬ್ರಹ್ಮಚರ್ಯಾಶ್ರಮ ಸಂಪೂರ್ಣವಾಗಿ ಪಾಲನ ಮಾಡುತ್ತ ಯಥಾ ಶಕ್ತ್ಯನುಸಾರ:

ಗುರುಗಳನ್ನು ಸಂತೋಷಪಡಿಸಿ ಪ್ರಸನ್ನೀಕರಿಸಿಕೊಳ್ಳಬೇಕು. ಮುಂದೆ ಒಂದು ಆಶ್ರಮದಿಂದ ಎರಡನೇ ಆಶ್ರಮ ಸ್ವೀಕರಿಸಿ ಆಯಾ ಆಶ್ರಮೋಚಿತ ಕರ್ಮಗಳನ್ನು ಮಾಡುವದು.

ಆಯುಷ್ಯದ ಒಂದು ನಾಲ್ಕಾಂಶ ಭಾಗ ವೇದಾಧ್ಯಯನಕ್ಕೆ ಸಂಬಂಧಿಸಿದ ವ್ರತಧಾರಣ ಮಾಡಿ ಆಚರಿಸುತ್ತ, ವೇದಾಧ್ಯಯನ ಮುಗಿದ ಮೇಲೆ ಗುರುದಕ್ಷಿಣೆಯನ್ನಿತ್ತು, ಗುರುವಾಜ್ಞೆಯಂತೆ ಸಮಾವರ್ತನ ಮಾಡಿಕೊಂಡು ಯೋಗ್ಯ ಸ್ತ್ರೀ ಸಂಗಡ ವಿವಾಹಿತನಾಗಿ, ಅಗ್ನಿಹೋತ್ರಾದಿ ಗೃಹಕರ್ಮಗಳಲ್ಲಿ ನಿರತನಾಗಿ ಆಯುಷ್ಯ ಎರಡೇ ಭಾಗ ಚತುರ್ಥಾಂಶದಲ್ಲಿ ಗೃಹಸ್ಥಾಶ್ರಮಿಯಾಗಿರಬೇಕು. ಭಾರತ ವಚನದಂತೆ, ದಾಸರ ವಚನ.

"ಪ್ರಥಮ ಚರಣದಲಿ ಗುರುಕುಲವಾಸವಿರಬೇಕು। ದ್ವಿತೀಯದಲಿ ಹರಿಸುರಾರ್ಚನೆ ಮಾಡಲಿಬೇಕು। ತೃತೀಯದಲಿ, ತೀರ್ಥಯಾತ್ರೆಗಳಚರಿಸಬೇಕು। ಚತುರ್ಥದಲಿ ಹರಿಸ್ಮರಿಸಬೇಕು। ಮಾನವತನ ಹೀಗೆ ಸತ್ಕರ್ಮದಲ್ಲಿ ಕಳೆಯಬೇಕು ॥೩॥ (ಪ್ರಾಣೇಶ ವಿಠ್ಠಲರು)

ಮತ್ತು ಶಾಂತಿಪರ್ವ ಅಧ್ಯಾಯ ೨೧೪ ರಲ್ಲಿ ಇಂದ್ರಿಯ ನಿಗ್ರಹ ಉಪಾಯವನ್ನು :-

ಭೀಷ್ಮ ಪಿತಾಮಹರು ಯುಧಿಷ್ಠಿರನನ್ನು ಕುರಿತು, ಹೇಳಿದ್ದೇನೆಂದರೆ, ಹೇ ಯುಧಿಷ್ಠಿರನೆ ಇಂದ್ರಿಜಯ ವಿಷಯದಲ್ಲಿ ಯೋಗ್ಯ ಉಪಾಯವನ್ನು ಹೇಳುತ್ತೇನೆ. ಬ್ರಹ್ಮಚರ್ಯವು ಪರಬ್ರಹ್ಮನಾದ ಶ್ರೀ ಹರಿಯ ಮುಖ್ಯ ಅಧಿಷ್ಠಾನಕ್ಕೆ ಕಾರಣವಾದುದು. ಅದು ಎಲ್ಲ ಧರ್ಮಗಳಲ್ಲಿಯೂ ಶ್ರೇಷ್ಠವಾದುದು. ಬ್ರಹ್ಮಚರ್ಯದ ಆಚರಣೆಯಿಂದ ಮೋಕ್ಷ ಪ್ರಾಪ್ತಿಯಾಗುತ್ತದೆ ಬ್ರಹ್ಮಚಯದ ಆಚರಣೆಯಿಂದ ಲಿಂಗ ಶರೀರದ ಸಂಬಂಧ ಉಳಿಯುವುದಿಲ್ಲ. ಶಬ್ದ ಸ್ಪರ್ಶಾದಿ ವಿಷಯಗಳ ಸಂಬಂಧವೂ ಆಗುವದಿಲ್ಲ. ದೋಷ ಸಂಪರ್ಕವಿಲ್ಲದ ಶುದ್ಧವಾದ ಬ್ರಹ್ಮಚರ್ಯವೆಂದರೆ ಕೇವಲ ಮನೋಮಯವಾಗಿ ಶುದ್ಧ ಸ್ವರೂಪದಿಂದಲಿರುವದು ಕಾರಣ, ಶ್ರೋತ್ರೇಂದ್ರಿಯ

ದ್ವಾರಾ ಆಗತಕ್ಕ ಶಬ್ದ ಜ್ಞಾನವು ಶ್ರವಣ ನೇತ್ರದಿಂದಾಗುವ ರೂಪ ಜ್ಞಾನವು ಬ್ರಹ್ಮಚರ್ಯವೆ! ವಾಕ್ಯದಿಂದ ಆ ಬ್ರಹ್ಮಚರ್ಯ ವರ್ಣನೆ ಮಾಡಿ ಹೇಳಲು ಶಕ್ಯವಾದರೂ. ಆ ಬ್ರಹ್ಮಚರ್ಯದ ಸ್ವರೂಪದ ನಿಶ್ಚಯವನ್ನು ಬುದ್ಧಿಯಿಂದಲೇ ಮಾಡುವದು. ಈ ಪ್ರಕಾರ ಬ್ರಹ್ಮಚರ್ಯ ಸಂಪಾದನೆ ಮಾಡಿದರೆ ಉತ್ತಮವಾದ ನಡಾವಳಿಯಿಂದ ಬ್ರಹ್ಮಲೋಕ ಪ್ರಾಪ್ತಿಯಾಗುತ್ತದೆ ಮಧ್ಯಮ ವರ್ತನೆಯಿಂದ ದೇವಲೋಕ ಕನಿಷ್ಠ ಪ್ರಕಾರದ ಬ್ರಹ್ಮಚರ್ಯ ಆಚರಣೆಯಿಂದ ಬ್ರಾಹ್ಮಣ ಶ್ರೇಷ್ಠನು ಎರಡನೇ ಜನ್ಮದಲ್ಲಿ ವಿದ್ವಾನ್‌ನಾಗುತ್ತಾನೆ.

ಧರ್ಮರಾಜನೇ ಕೇಳು ಬ್ರಹ್ಮಚರ್ಯ ಆಚರಣ ಮಾಡತಕ್ಕ ನಿಯಮಗಳು ಬಹಳ ಕಠಿಣ ಅವೆ. ಆಚರಿಸತಕ್ಕ ಉಪಾಯವನ್ನು ನಿನ್ನಗೋಸುಗ ಹೇಳುತ್ತೇನೆ. ಕೇಳು ಬ್ರಹ್ಮಚರ್ಯ ಆಚರಣ ಮಾಡಬೇಕೆನ್ನುವ ಬ್ರಾಹ್ಮಣನು ತನ್ನಲ್ಲಿರುವ, ಮತ್ತು ಹೆಚ್ಚಾಗಿ ಸಂಭವಿಸುವ ರಜೋಗುಣವನ್ನು ನಿಗ್ರಹಿಸಬೇಕು. ಸ್ತ್ರೀಯರ ಸಂಬಂಧ ಮಾತುಗಳನ್ನು ಎಂದಿಗೂ ಕಿವಿಯಿಂದ ಕೇಳಕೂಡದು. ಮತ್ತು ಸ್ತ್ರೀಯರ ಕಡೆ ಕಣ್ಣೆತ್ತಿ ನೋಡಕೂಡದು. ಕದಾಚಿತ ವಸ್ತ್ರ ಹೀನ ಸ್ತ್ರೀ ಮೈಮೇಲೆ ಶರಗು ಜಾರಿದರೆ ಸ್ತ್ರೀ ದರ್ಶನವಾದರೆ, ಕಣ್ಣು ಮುಚ್ಚಿಕೊಳ್ಳಬೇಕು. ಯಾಕೆಂದರೆ ಯಾವ ತರದಿಂದಲೂ ಸ್ತ್ರೀ ದರ್ಶನವಾದಾಗ್ಯೂ ಇಂದ್ರಿಯ ನಿಗ್ರಹ ಮಾಡತಕ್ಕ ಶಕ್ತಿಯಿಲ್ಲದ ಪುರುಷರಲ್ಲಿ ಮೊದಲಿಗೆ ರಜೋಗುಣ ಪ್ರವೇಶವಾಗುತ್ತದೆ ಅಂದರೆ ಸ್ತ್ರೀಯರನ್ನು ನೋಡಿದ ಪುರುಷರ ಮನಸ್ಸಿನಲ್ಲಿ ಆ ಸ್ತ್ರೀಯ ವಿಷಯ ಪ್ರೀತಿ ಹುಟ್ಟುತ್ತದೆ. ಹೀಗೆ ಬ್ರಹ್ಮಚರ್ಯ ಆಚರಣ ಮಾಡತಕ್ಕವನ ಮನಸ್ಸಿನಲ್ಲಿ ಸ್ತ್ರೀ ವಿಷಯ ಚಿಂತನ ಬರಲು, ಕೃಚ್ಛ್ರಸಂವಜ್ಞ ಎಂಬ ಪ್ರಾಯಶ್ಚಿತ್ತ ಮಾಡಬೇಕು. ಅಂದರೆ ಭೋಜನದಲ್ಲಿ ಮಿತವಾಗಿರಬೇಕು. ಮೂರು ದಿನ ಮಿತಭೋಜನ ನಂತರ ಭಿಕ್ಷಾಟನ ಮಾಡದೇ ಅಯಾಚಿತವೃತ್ತಿಯಿಂದ ಇದ್ದು ಅನ್ನ ಊಟ ಮಾಡಬಾರದು. ಈ ನಿಯಮದಿಂದ ವೀರ್ಯ ವೃದ್ಧಿಯಾಗದಂತೆ ಉಪೋಷಣವನ್ನು ಮಾಡಬೇಕು. ಅತಿಶಯ ವೃದ್ಧಿಯಾಗಿ ಮನಸ್ಸು ಬಿಗಿಹಿಡಿಯುವ ಶಕ್ತಿ ಸಾಲದಿದ್ದರೆ, ಜಲಪ್ರವೇಶ ಮಾಡಿ ಮುಳುಗ

ಹಾಗೆ ಅಘಮರ್ಷಣ ಸ್ನಾನವನ್ನು ಮಾಡಬೇಕು. ಒಂದುವೇಳೆ ಅತ್ಯಷ್ಟದಿಂದ ಸ್ವಪ್ನದಲ್ಲಿ ವೀರ್ಯಪತನವಾದರೂ, ಜಲದಲ್ಲಿ ಮುಳುಗಿ ಅಘಮರ್ಷಣ ಮಂತ್ರ ಜಪಿಸಬೇಕು. ಈ ಪ್ರಕಾರ ನಿಯಮದಿಂದ ರಜೋಗುಣವೆಂಬುವ ಪಾಪವನ್ನು ಭಸ್ಮಮಾಡುವದು ಜ್ಞಾನನಿಷ್ಠ ವಿಚಾರ ಶಕ್ತಿ ಪುರಷನ ಕರ್ತವ್ಯ. ಹೇಗೆ ಮಾಂಸಾದಿ ಅಪವಿತ್ರ ಪದಾರ್ಥಗಳು ಶರೀರಕ್ಕೆ ಬಾಧಕವೋ ದೇಹದಲ್ಲಿರತಕ್ಕ ರಕ್ತ ಮಜ್ಜಾ ಮಾಂಸಾದಿಯುಕ್ತ ಕರುಳುಗಳು ಇವು ಶರೀರ ಬಂಧನಕ್ಕೆ ಕಾರಣವಾಗಿವೆಯೋ ಇದರಂತೆ ಶರೀರದಲ್ಲಿರತಕ್ಕ ಅಶು ಜೀವನ ಬಂಧನವನ್ನು ಮಾಡುವದೆಂದು ತಿಳಿಯಬೇಕು ಮನುಷ್ಯನ ಶರೀರದಲ್ಲಿರತಕ್ಕ ರಸ, ನಾಡಿನಾಳ ದ್ವಾರದಿಂದ ಎಲ್ಲ ಶರೀರದಲ್ಲಿ ಪಸರಿಸಿ, ವಾತ, ಪಿತ್ತ, ಕಫ, ರಕ್ತ, ತ್ವಚ, ಮಾಂಸ, ಸ್ನಾಯು, (ನರಗಳು) ಮಜ್ಜಾ, ಮತ್ತು ಅಸ್ಥಿ ಇವುಗಳಿಗೆ ಪುಷ್ಟಿ ಮಾಡುತ್ತದೆ, ಈ ಶರೀರದಲ್ಲಿ ಹತ್ತು ನಾಳದ್ವಾರ-ಮುಖ್ಯನಾಡಿ ಇದ್ದು ಅವುಗಳಿಂದ ಅನ್ನರಸವನ್ನು ಪೊಂದಿಸುತ್ತ ಶಬ್ದಾದಿ ಪಂಚ ಇಂದ್ರಿಯಗಳಿಗೆ ವಿಷಯಗಳ ಗ್ರಹಣ ಮಾಡುವ ಶಕ್ತಿಯನ್ನು ಹುಟ್ಟಿಸುತ್ತದೆ. ಈ ಹತ್ತು ಮುಖ್ಯ ನಾಳಗಳಿಗೆ ಹತ್ತಿಕೊಂಡೆ ಮತ್ತೂ ಸಾವಿರಾರು ಸೂಕ್ಷ್ಮ ನಾಳಗಳು ಶರೀರದಲ್ಲಿ ಹಬ್ಬಿವೆ. ಇವೆಲ್ಲ ನಾಡಿಗಳು ನಾಳಗಳ ಒಂದು ಪ್ರಕಾರದ ನದಿಗಳಿದ್ದು. ( ನದಿ ಪಾತ್ರೆ ) ಇದ್ದು ಅನ್ನರಸ ಇದರಲ್ಲಿಯ ಜಲವಿರುತ್ತದೆ. ಯಾವ ಪ್ರಕಾರ ನದಿಗಳು ತಮ್ಮ ಪತಿಯಾದ ಸಮುದ್ರವನ್ನು ತೃಪ್ತಿಪಡಿಸುತ್ತವೆಯೋ ಅದರಂತೆ ಶಿರಾ ( ನಾಡಿ ) ರೂಪಿ ನದಿಗಳು ದೇಹ ರೂಪವಾದ ಸಮುದ್ರವನ್ನು ಯೋಗ್ಯ ಕಾಲದಲ್ಲಿ ತೃಪ್ತಿಪಡಿಸುತ್ತಲಿರುತ್ತವೆ ಹೃದಯದ ಮಧ್ಯಭಾಗದಲ್ಲಿ ಮನೋವಹಾ, ನಾಮಕ ಒಂದು ನಾಡಿ ಇರುವದು. ಸಂಕಲ್ಪ ಮಾತ್ರದಿಂದ ಈ ನಾಡಿಯು ಪುರುಷರ ಸರ್ವ ಶರೀರದಲ್ಲಿ ವೀರ್ಯವನ್ನು ಆಕರ್ಷಣ ಮಾಡುತ್ತ ಜನನೇಂದ್ರಿಯವಾದ ಶಿಶ್ನ ಕಡೆಗೆ ಮುಟ್ಟಿಸುವುದು. ಆ ಮನೋವಹಾ, ನಾಮಕ ನಾಡಿಗೆ ಹತ್ತಿಕೊಂಡು ಎಲ್ಲ ಶರೀರದಲ್ಲಿ ಪಸರಿಸಿ ಹಬ್ಬಿರುವ ಕೆಲವು ನಾಳ ನಾಡಿಗಳಲ್ಲಿ ತೇಜಸ್ಸಿನ ಗುಣ, ತೇಜಸ್ಸು ವ್ಯಾಪಿಸಿ, ಪಸರಿಸುತ್ತ ತೇಜೋಪ್ರವಾಹ ನಡೆವಿಗೆ ಇವೆಲ್ಲ ಸೂಕ್ಷ್ಮ ನಾಳಗಳು ತೇಜೋಮಯ ರಕ

ಪ್ರವಹಿಸುತ್ತ ನೇತ್ರ ಕಂಣಿಗೆ ಬಂದು ಕಲೆತು ಹತ್ತಿಕೊಂಡು ಕಂಣಿನ ತೇಜಸ್ಸು ಪ್ರಖರಗೊಳಿಸುತ್ತದೆ. ಯಾವ ಪ್ರಕಾರ ಹಾಲಿನಲ್ಲಿರತಕ್ಕ ತುಪ್ಪವು ಹಾಲಿಗೆ ಸಂಸ್ಕಾರಮಾಡಿ ಕಡಗೋಲಿನಿಂದ ಕಟೆದರೆ ಬೆಣ್ಣೆ ಅದರಿಂದ ಘೃತವು ಹೊರಬೀಳುತ್ತದೆಯೋ ಅದರಂತೆಯೇ ಶರೀರದಲ್ಲಿರುವ ಅಪ್ರಕಟಿತ ಪ್ರಕಟವಾಗದಿದ್ದ ವೀರ್ಯವು ಸಂಕಲ್ಪ ಜನ್ಯ (ಮನೋಮಾತ್ರ ಬಯಕೆ) ಎಂಬ ವಿಷಯರೂಪವಾದ ಕಡಗೋಲಿನಿಂದ ಕಡೆದ ಮಾತ್ರದಿಂದ ಅಂತಃ ಕರುಣಕ್ಷುಬ್ಧ ವ್ಯಾಕುಲ ಭಯಭೀತವಾಗಿ ವೀರ್ಯ ಬಹಿರದಿ ಉತ್ಪನ್ನವಾಗುತ್ತ ವ್ಯಕ್ತವಾಗುತ್ತದೆ ವೀರ್ಯ ಇದು ಸಂಕಲ್ಪ ಜನ್ಯ ಮನೋ ಬಯಕೆಯ ವಿಕಾರವಿದೆ ಇದೇ ಕಾರಣದಿಂದ ಅಂತಃ ಕರಣ (ಮನೋ ಇಚ್ಛಾ) ಸಂಕಲ್ಪಮಾತ್ರದಿಂದ ಸ್ತ್ರೀ ವಿಷಯಕ ಪ್ರೇಮ ಉತ್ಪನ್ನವಾಗಿ ಸ್ವಪ್ನದಲ್ಲಿ ಸ್ತ್ರೀ ಸಮಾಗಮವಾಗುತ್ತದ ಆಗ್ಗ ಮನೋವಹಾ ಎಂಬನಾಡಿಸಂಕಲ್ಪ ಜನ್ಯವಾದ ಶುಕ್ರ(ವೀರ್ಯ)ವನ್ನು ಶರೀರದಿಂದಪತನಮಾಡಿ ಹೊರಗೆಡಹುತ್ತದೆ ಅನ್ನರಸ ಮನೋವಹಾನಾಡಿ ಮತ್ತು ಸಂಕಲ್ಪ(ಇಚ್ಛಾ)ಈಮೂರು ವೀರ್ಯೋತ್ಪತ್ತಿಗೆ ಕಾರಣವಾದವು

ಈ ವೀರ್ಯ ಉತ್ಪತ್ತಿ ಯಾವಪ್ರಕಾರವಾಗುತ್ತದೆಂಬುದು ಅತ್ರಿ ಮಹ ಋಷಿಗಳು ತಿಳಿದಿದ್ದರು. ಈ ಶುಕ್ರಕ್ಕೆ ಇಂದ್ರನೇ ದೇವತೆಯಾಗಿದ್ದಾನೆ. ಕಾರಣ ಇದಕ್ಕೆ ಇಂದ್ರಿಯ ಎಂತಲೂ ವೀರ್ಯಕ್ಕೆ ಹೆಸರುಂಟು ಇದೇ ಶುಕ್ರವೆ ವರ್ಣಗಳಲ್ಲಿ ಸಂಕೀರ್ಣಮಾಡಿ ಉತ್ಪನ್ನಮಾಡಲು ಕಾರಣೀ ಭೂತವಾದದ್ದು. ಇಂಥ ವೀರ್ಯದಸ್ಥಿತಿಗತಿಯನ್ನು ಯಾವ ವಿರಕ್ತನಾದ ಪುರುಷನು ತಿಳಿಯುತ್ತಾನೋ ಆತನ ಎಲ್ಲ ದೋಷಗಳು ಭಸ್ಮವಾಗುತ್ತಲಿವೆ. ಪುನಃ ಅವನಿಗೆ ದೇಹ ಪ್ರಾಪ್ತಿಯಾಗುವದಿಲ್ಲ. ನಿರಂತರ ಅಂತಃಕರಣವನ್ನು ಯೋಗಮಾರ್ಗದಲ್ಲಿಯೇ ಇಟ್ಟು ಯೋಗಬಲದಿಂದಲೇ ನಿರ್ವಿಕಲ್ಪ (ಸ್ಥಿರ ನಿಶ್ಚಿತ) ಸ್ಥಿತಿಯನ್ನು ದೊರಕಿಸತಕ್ಕದ್ದು. ಮುಂದೆ ಅಂತ್ಯದಿ ಇದೆ ಯೋಗಮಾರ್ಗದಿಂದ ಪ್ರಾಣವನ್ನು ಸುಷುಮ್ನಾನಾಡಿಯಲ್ಲಿ ಪ್ರವೇಶ ಗೈಸಲು ಮುಕ್ತನಾಗುತ್ತಾನೆ. ಉತ್ಪನ್ನವಾಗುವ ಎಲ್ಲ ವಾಸನಾಗಳೆಲ್ಲವು ಮನೋಜನ್ಯ ವಿಕಲ್ಪಗಳಿವೆ. ಮನಸ್ಸಿಗೆ ಇವರ ಜ್ಞಾನವಿದೆ. ಪ್ರಣವ ಮಂತ್ರ ಚನ್ನಾಗಿ ತಿಳಿದು

ಉಪಾಸನೆಮಾಡಿದರೆ ಮನೋವಾಸನಾಗಳಿಲ್ಲ ನಾಶವಾಗಿ ಮರ್ಗವು ಮಾರ್ಗವಾದ ಸಂಸಾರ ಬಂಧನದಿಂದ ಮುಕ್ತನಾಗುತ್ತಾನೆ.

**೧೭ ಮನ ಬುದ್ಧಿ ಇವುಗಳ ನಿಜ ಸ್ವರೂಪ ವರ್ಣನೆ, ಮುಂದೆ ಶಾಂತಿ ಪರ್ವ ಅಧ್ಯಾಯ ೨೪೮ರಲ್ಲಿ ಶ್ರೀ ಶುಕರ** ಪ್ರಶ್ನೆಗೆ ವ್ಯಾಸರುಹೇಳಿದ್ದನ್ನೇ ಭೀಷ್ಮ ಪಿತಾಮಹರು ಧರ್ಮರಾಜನನ್ನು ಕುರಿತು ಹೇಳುತ್ತಾರೆ ಮನ ಬುದ್ಧಿ ಅಹಂಕಾರ ಅಂತಃಕರಣದ ಮೂರು ಪ್ರಭೇದ ಇರುತ್ತವೆ. ಮನ ಸಂಕಲ್ಪ ಇಚ್ಛಾ ಮಾತ್ರದಿಂದಲೇ ನಾನಾ ಪ್ರಕಾರ ಪ್ರದಾರ್ಥಗಳನ್ನು ಮನದಲ್ಲಿ ಹುಟ್ಟಿಸುತ್ತಲಿದೆ. ಬುದ್ಧಿ ಆ ಪದಾರ್ಥಗಳ ಸಂಬಂಧ ನಿಶ್ಚಯ ಮಾಡುತ್ತಲಿದೆ. ಅಹಂಕಾರ ಆ ಪದಾರ್ಥಗಳ ಅನುಕೂಲ ಅಥವಾ ಪ್ರತಿಕೂಲ ಇದನ್ನು ತಿಳಿದಿದ್ದು ಈ ಪ್ರಕಾರ ಅಂತಃಕರಣದ ಕ್ರಿಯಾಕರ್ಮಗಳ ಪ್ರವೃತ್ತಿ ಇರುವದಾಗಿದೆ. ಸಂಕಲ್ಪ (ಇಚ್ಛಾ) ಮಾತ್ರದಿಂದಲೇ ಉತ್ಪನ್ನ ಆದ ಕೂಡಲೇ ವಿಷಯಗಳು ಇಂದ್ರಿಯಗಳಿಗಿಂತಲೂ ಸೂಕ್ಷ್ಮವಾಗಿರುವರಿಂದಲೂ ಮತ್ತು ವಿಷಯಗಳಕಿಂತಲೂ ವಿಷಯಗಳ ಉಪಾದಾನ ಕಾರಣವೆಂದರೆ ಹುಟ್ಟಿಸತಕ್ಕ ಮನನ್ನುಸೂಕ್ಷ ಮನದಕಿಂತಲೂ ಬುದ್ಧಿ ಸೂಕ್ಷ್ಮವಿದೆ, ಬುದ್ಧಿಗಿಂತಲೂ ಆತ್ಮ ಸೂಕ್ಷ್ಮವಿದೆ. ಅಂದರೆ ವಿಷಯ ಮನಬುದ್ಧಿ ಜಡವು ಜಡಪದಾರ್ಥಗಳಕಿಂತಲೂ ಆತ್ಮ ಪ್ರಾಣಚೇತನ ಸೂಕ್ಷ್ಮ ವಿದೆ ನಿಶ್ಚಯ ಜ್ಞಾನಕ್ಕೆ ಬುದ್ಧಿ, ಚೇತನ ನಿಷ್ಟವಾದ ಆತ್ಮನಧರ್ಮವೇನೆಂದರೆ ತನ್ನಲ್ಲಿನಾನಾ ಪ್ರಕಾರದ ವಿಷಯ ಉತ್ಪನ್ನವಾಗಲು ಆ ವಿಷಯ ಉತ್ಪನ್ನಸ್ಥಾನಕ್ಕೆ ಮನವೆಂದು ಸಂಜ್ಞೆ ಇದೆ ಇಂದ್ರಿಯಗಳ ವಿಷಯಗಳು ಬೇರೆ ಬೇರೆ ಇದ್ದ ಕಾರಣ ಬುದ್ಧಿ ಗ್ರಹಣಕಾಲದಲ್ಲಿ ಬೇರೆಬೇರೆಯಾಗುತ್ತದೆ. ಶಬ್ದ ಕೇಳುವ ವ್ಯಾಳ್ಯದಲ್ಲಿ ಶ್ರವಣೇಂದ್ರಿಯ ಸ್ಪರ್ಶಕಾಲದಲ್ಲಿ ತ್ವಗೇದ್ರಿಯ ನೋಡುವ ಕಾಲದಲ್ಲಿ ರೂಪ ದೃಷ್ಟಿ ರಸ ಆಸ್ವಾದನಮಾಡುವಕಾಲದಲ್ಲಿ ರಸನೇಂದ್ರಿಯ (ಜಿಂಹ್ವಾ) ವಾಸನೆ ಮೂಸಿನೋಡುವ ಕಾಲದಲ್ಲಿ ಘ್ರಾಣೇಂದ್ರಿಯ (ನಾಸಿಕ) ವಾಗುತ್ತದೆ, ಬುದ್ಧಿ ಯಾವ ಭಿನ್ನಭಿನ್ನ ರೂಪವನ್ನು ಧಾರಣಮಾಡುತ್ತದೆಯೋ ಅದಕ್ಕೇನೆ ಇಂದ್ರಿಯಗಳೆಂದು ಕರೆಸುತ್ತವೆ. ಸೂಕ್ಷ್ಮ ರೂಪನಾದ ಆತ್ಮಾ ಜೀವ ಇವುಗಳ

ನಿಯಂತಾ ಅಂದರೆ ನಿಯಮನ ಮಾಡುವವನಿದ್ದಾನೆ. ಆತ್ಮದ ಆಶ್ರಯದಲ್ಲಿರುವ ಬುದ್ಧಿಯು ಸತ್ವ ರಜೋತಮ ಹೀಗೆ ಮೂರು ಪ್ರಕಾರವಾಗುತ್ತದೆ. ಆದುದರಿಂದ ಒಂದು ವೇಳೆ ಆನಂದ ಒಂದು ವೇಳೆ ದುಃಖ ಮತ್ತೊಂದು ಪ್ರಸಂಗದಲ್ಲಿ ಸುಖದುಃಖ ಇವೆರಡರ ಸಮ್ಮಂಧವಾಗುತ್ತದೆ ಈ ಮೂರು ಗುಣಾತೀತವಾದಾಗ್ಗೆ ಈಮೂರರ ಸಂಬಂಧವೂ ಇಲ್ಲದೆ, ನಿರ್ಲೇಪನಾಗುತ್ತಾನೆ. ಈ ತೆರದಿಂದ ಬುದ್ಧಿಯಾವಾಗ್ಗೆ ತ್ರಿಗುಣಾತ್ಮಕವಾಗಿದೆಯೋ ಆಗ್ಗೆ ದೊಡ್ಡ ತೆರೆಗಳಿಂದ ಯುಕ್ತವಾದ ನದಿಗಳ ಪತಿಯಾದ ಸಮುದ್ರ ರಾಜನು ಯಾವ ಪ್ರಕಾರ ತನ್ನ ದಡವನ್ನು ಅತಿ ಕ್ರಮಿಸುತ್ತ ಮುಂದೆ ದೊಡ್ಡ ತೆರೆಗಳು ದಂಡಿ ಮಾರಿ ಹೋಗಿ ಒಡಿಯುವ ತೆರ, ಬುದ್ಧಿ ತ್ರಿಗುಣಗಳ ಅತಿಕ್ರಮಣಮಾಡುತ್ತ ಒಂದು ವಸ್ತುವಿನ ಅಭಿಲಾಷೆ ಮಾಡುತ್ತದೆ. ಆ ವ್ಯಾಖ್ಯದಲ್ಲಿ ಇದಕ್ಕೆ ಮನವೆಂತ ಸಂಜ್ಞಾ, ರೂಪರಸಾದಿ ವಿಷಯವಾದ ಜ್ಞಾನದ ಸಾಧನೆ ಇಂದ್ರಿಯಗಳು ಎಲ್ಲ ಬುದ್ಧಿಯ ಬೇರೆ ಬೇರೆ ಅಧಿಷ್ಠಾನಗಳಾಗಿವೆ. ಈ ಎಲ್ಲ ಇಂದ್ರಿಯಗಳನ್ನು ಸರ್ವ ಪ್ರಕಾರದಿಂದ ಗೆಲ್ಲಲಿಕ್ಕೆ ಬೇಕು. ಬುದ್ಧಿಯು ಪೂರ್ವ ಅವಸ್ಥಾದಲ್ಲಿ ಬೇರೆಬೇರೆಸ್ವರೂಪದಿಂದ ಇರದೆಇದ್ದಾಗ್ಯೂ ಇಂದ್ರಿಯಗಳಸಂಬಂಧ ಯಾವಾಗ್ಗೆ ಆಗುತ್ತದೆಯೋಆಗ್ಗೆ ಆಇಂದ್ರಿಯಗಳದ್ವಾರದಿಂದಲೇ ಇಚ್ಛಾಮಾಡಿದ ವಸ್ತುಗಳಲ್ಲಿ ಕ್ರಮದಿಂದ ಸಂಬಂಧ ಸ್ಥಿರವಾಗುವದು. ವಿಷಯಗಳಲ್ಲಿ (ಸಂಕ್ರಾಂತ) ಬೆರೆತು ಹೋಗುವ ಎರಡನೇ ಪ್ರೀತಿ ಮುಂತಾದ ಧರ್ಮಗಳಿವೆಯೋ ಅವೆಲ್ಲ ಧರ್ಮಗಳು ಬುದ್ಧಿಯಲ್ಲೆ ಇರುವವಾಗಿವೆ. ಹೇಗೆ ರಥವನ್ನು (ಬಂಡಿ) ಮುಂದೆಸಾಗಿಸಲಿಕ್ಕೆ ಎಳೆಯಲು ಅನುಕೂಲತೆ ಯಾಗಲು, ರಥದಲ್ಲಿರುವ ಇರನು ಎಳೆಯಲು, ಗಾಲಿಗಳು ತಿರುಗಿ ನಡಿಯಲಿಕ್ಕೆ ಹತ್ತುತ್ತವೆಯೋ ಅದರಂತೆಯೇ ಮನ ಬುದ್ಧ್ಯಾದಿಗಳ ಅನುಕೂಲತೆಯಿಂದ, ಆಯಾ ಧರ್ಮಗಳ ಪ್ರವೃತ್ತಿಯಾಗುತ್ತದೆ. ವಿಷಯಗಳಸಂಬಂಧವಾಯಿತೆಂದರೆ ವೃತ್ತಿರೂಪದಿಂದ ಅವುಗಳಲ್ಲಿ ಸಂಚಾರಮಾಡುವವಾದರೂ ವಾಸ್ತವವಾಗಿ ಉದಾಸೀನವಾಗಿರುವ ಯಾವ ಇಂದ್ರಿಯಗಳು ವಿಷಯಸಂಬಂಧವಾದ ಮನಬುದ್ಧಿಯ ಆಧಾರಗ್ಗೆಸುವ ಪ್ರವೃತ್ತಕ, ತದ್ರೂಪ, ಮನೋಬುದ್ಧಿಯಲ್ಲಿಯೂ ಇಂದ್ರಿಯಗಳಲ್ಲಿಯೂ ವಿಷಯಗಳಲ್ಲಿತದ್ರೂಪ, ತದಾಕಾರ, ತದ್ವಾಚ್ಯನಾಗಿ ತಪ್ಪೆರಕ

ನಾಗಿರುವ ಹರಿಯು ಇವುಗಳಿಂದ ಭಿನ್ನನಾದರೂ ಅಂತಃ ಪ್ರೇರಕನಾಗಿ ವಿಷಯಾದಿಗಳನ್ನು ಇಂದ್ರಿಯಗಳಲ್ಲಿಪ್ರೋಗಿಸಿ, ಇಂದ್ರಿಯಗಳ ದೀಪ್ತಿಗೊಳಿಸುತ್ತ ಕಾರ್ಯ ಪ್ರವೃತ್ತಿಮಾಡಿಸುತ್ತಾನೆ. ಹೇಗೆ ದೀಪವು ಯಾವ ಪ್ರಕಾರ ತನ್ನಕಿರಣಗಳಿಂದ ಕತ್ತಲೆ ಹರಿಸಿ ನಾಶಮಾಡಬೇಕೋ ಅದರಂತೆಯೇ ಮನ ಇಂದ್ರಿಯ ರೂಪಕಿರಣಗಳದ್ವಾರ ವಿಷಯಗಳನ್ನು ಆವೃತ್ತಮಾಡುವ ಅಂದರೆ ಸುತ್ತುತ್ತಿರುವ ವಿಷಯಗಳ ಸಂಬಂಧ ಅಜ್ಞಾನವನ್ನು ನಾಶಮಾಡುತ್ತದೆ. ಸಾರಂಶವೇನೆಂದರೆ ಶ್ರೀ ಜಗನ್ನಾಥದಾಸವರ್ಯರಾದರೂ ಹರಿಕಥಾಮೃತಸಾರದಲ್ಲಿ.

ಮನ ವಿಷಯದೊಳಗಿರಿಸಿ ವಿಷಯವ । ಮನದೊಳಗೆ ನೆಲೆಗೊಳಿಸಿ ಬಲುನೂ। ತನವು ಸುಖವಿರಾಚೀನವಿದುಪಾದೇಯವೆಂದರುಪಿ ॥ ಕನಸಿಲಾದರು ತನ್ನಪಾದದ। ನೆನವನೀಯದೆ ಸರ್ವರೊಳಗಿದ್ದನುಭವಿಸುವನು ಸ್ಥೂಲ ವಿಷಯವ ವಿಶ್ವನೆಂದೆನಿಸಿ ॥ ಸಂಧಿ (೩) ಪದ್ಯ ೧೫.

ಮುಂದೆ ಮಹಾಭಾರತದಿ ಶ್ರೀ ವ್ಯಾಸದೇವರು ಶುಕರಿಗೆ ಹೇಳುತ್ತಾರೆ. ಎಲೋತಾತ ಕೇಳು ದುಃಖಪ್ರದ ಕರ್ಮಮಾಡುವರ ಅಂತಃ ಕರುಣ ಶುದ್ಧ ಆಗದೆ ಇದ್ದ ಪುರುಷರಿಗೆ ವಿಷಯಗಳ ಕಡೆ ನೀರಹರಿಯಂತೆ ಧಾವಿಸಿಹೋಗುವ, ಇಂದ್ರಿಯಗಳು ನಿರ್ದೋಷಗಳಾಗಿದ್ದರೂ ಪರಮಾತ್ಮನ ವಿಷಯಕಜ್ಞಾನವಾಗುವದು ಶಕ್ಯವಿಲ್ಲ ಆದರೆ ಇಂದ್ರಿಯಗಳಿಗೆ ಮನಸ್ಸಿನಸಂಯೋಗದಿಂದ ಇಂದ್ರಿಯಗಳ ವೃತ್ತಿ ವ್ಯಾಪಾರ ಕಾರ್ಯರೂಪವಾದ ಕಿರಣಗಳ ಉತ್ತಮಪ್ರಕಾರ ನಿಯಮನ, ನಿಗ್ರಹಮಾಡಲ್ಪಡುತ್ತದೆಯೋ ಆಗ್ಗೆ ದೀಪದ ಬೆಳಕಿಗೆ ಪ್ರಕಾಶಿತವಾಗಿ ವಸ್ತುಗಳು ಕಣ್ಣಿಗೆ ಕಾಣುತ್ತವೆಯೋ ಆಗ್ಗೆ ಆತ್ಮ ಪರಮಾತ್ಮನ ಜ್ಞಾನವಾಗುತ್ತದೆ. ಬಂಧಕಕ್ಕೂ ಮೋಚಕಕ್ಕೂ ಮನಸ್ಸೇವೆ ಮುಖ್ಯ ಕಾರಣ. ಮತ್ತು ಯಾವಪ್ರಕಾರ ಕವಿಸಿದ ಕಗ್ಗತ್ತಲೇ ಸೂರ್ಯನು ಉದಯಕ್ಕೆ ನಾಶವಾದಮೇಲೆ ಬೆಳಗಾಗಿ ಸರ್ವಪ್ರಾಣಿಗಳಿಗೆ ಪದಾರ್ಥಗಳು ಕಣ್ಣಿಗೆ ಕಾಣುತ್ತವೆ. ಅದೇ ಪ್ರಕಾರವಾಗಿಯೇ ಈ ವಿಷಯವಿದೆಂದು ತಿಳಿಯುವದು.

## ೧೮ ವಿಷಯ ನಿರ್ಲೇಪ

ಮತ್ತು ಯಾವ ಪ್ರಕಾರಕ್ಕೆ ಜಲಚರ ಪ್ರಾಣಿಗಳು ಜಲದಲ್ಲಿ ಸಂಚಾರಮಾಡುತ್ತಿದ್ದಾಗ್ಯೂ ಆ ಜಲದ (ಲೇಪ) ಬಾಧೆ ತಗಲದೆ ಇರುತ್ತವೆ. ಅರ್ಥಾತ್ ಜಲಚರ ಪ್ರಾಣಿಗಳಿಗೆ ನೀರಿನ ಸಂಪರ್ಕ ಆಗುವದಿಲ್ಲ. ಅದೇ ಪ್ರಕಾರ ಮುಕ್ತ ಸ್ಥಿತಿಯಲ್ಲಿ ಇರತಕ್ಕಯೋಗಿಯು ಸಂಸಾರದೊಳಗಿದ್ದರೂ ಅವರಿಗೆ ವಿಷಯ ಜನ್ಯದೋಷಗಳ ಲೇಪವಾಗುವದಿಲ್ಲ ಕಾರಣವೇನೆಂದರೆ ಜ್ಞಾನ ಸಂಪನ್ನ ಮನುಷ್ಯನು ಎಲ್ಲಿಯೂ ಯಾವ ಕಾಲದಲ್ಲಿಯೂ ಯಾವ ವಿಷಯಗಳಲ್ಲಿಯೂ ಆಸಕ್ತ (ರತಿಯುಳ್ಳನಾಗಿರದ) ವಿಷಯಗಳ ಉಪಭೋಗಮಾಡಿದರೂ, ಆಜ್ಞಾನಿಗೆ ದೋಷ ಎಂದಿಗೂ ಹತ್ತುವದಿಲ್ಲ. ಸನಾತನ ನಿತ್ಯವಾದ ವೇದಗಳು ಇದರ ವಿಭಾಗವನ್ನು ಚನ್ನಾಗಿ ಹೊಗುಳುತ್ತವೆ. ಅದನ್ನೇ ಭಾರತಶಾಂತಿಪರ್ವತದಲ್ಲಿ ಹೇಳಿದ್ದಾರೆ ಇದೇವಿಷಯವನ್ನೇ ಶ್ರೀ ಗುರುಪುರಂದರ ವಿಠ್ಠಲರು ವಿಜಯ ವಿಠ್ಠಲರು ಮೋಹನ ವಿಠ್ಠಲರು ಗುರುವಿಜಯ ವಿಠ್ಠಲರು ಶ್ರೀ ಪರಮಾತ್ಮ ನಿಜಭಕ್ತರಾದ ಜ್ಞಾನಿಗಳ ಮನಸ್ಸೆದುರ್ವಿಷಯ ಕಡೆಗೆಹೋಗದು ಭಗವಂತ ಭಕ್ತನಿಗೆ ಯಾವದೋಷಲೇಪ ಮಾಡನು ಎಂಬುದಾಗಿ ಸುಳಾದಿಗಳಲ್ಲಿ ಬಹು ವಿಶದವಾಗಿ ಬಣ್ಣಿಸಿದ್ದಾರೆ.

ಗುರುಪುರಂದರ ವಿ|| ಸು|| ರಾಗವರಾಳಿ ಧ್ರುವತಾಳ|| ದುರ್ವಿಷಯಗಳ ಸನ್ನಿಧಿಯ ಲೀಯ। ಸನ್ನಿಹಿತವಾದರೆ ಮನವೆಚ್ಚಲೀಯ। ಮನಮೆಚ್ಚಿದರೆ ಸಂಬಂಧಿಸಲೀಯ। ಸಂಬಂಧಿಸಿದರೆ ಮನವೆರಗಲೀಯ। ಮನವೆರಗದರೆನ್ನಾರಟ್ಟಿ ಭೂತಮಾಡಿ। ಮರಳೆನ್ನ ಆ ಕಡೆ ನೋಡಲೀಯಾ। ಈ ಪರಿಯಲಿ ಎನ್ನ ತನುವಿಗೆ ಪಾಪದ ಬಟ್ಟೆಯ ತೊಲಗಿಸಿ। ಶ್ರೀಪತಿ ಗುರುಪುರಂದರ ವಿಠಲ ನಿನ್ನ। ಶ್ರೀಪಾದ ಶರಣರೊಳೆನ್ನ ಕೂಡಿಸುವದು.

ವಿಜಯ ವಿಠ್ಠಲರಸುಳಾದಿ ಧ್ರುವತಾಳದಲ್ಲಿ

ಮನದುಸ್ಸಂಗತಿಗೆ ಯೋಚನೆ ಮಾಡಿದರೆ ಯೊಚನೆ ಮಾಡಲಿಸಿಯ್ಯಾ ಯೋ।ಚನೆಮಾಡಿದರೆ ಅಲ್ಲಿಗೆ ಎರಗಲೀಸಿಯ್ಯಾ। ಮನವೆರಗಿದರೆ ಅತ್ತ ಪೋಗಲಿಸಿಯ್ಯಾ। ಆ ಆ ಆ ಆ। ಕ್ಷಣಪೋದರೆ ಅಲ್ಲಿ ನೋಡ

ಲೀಸಿಯಾ। ನೆನಸಿನೋಡಿದರು ನಿಲ್ಲರಕು, ಲೀಸಿಯ್ಯಾ। ಮನ ದುಸ್ಸಂಗತಿಗೆ। ಆಸುವಾಗಿ। ಅಲ್ಲಿ ಲ್ಲಿಮಾತಾಡಲೀಸಿಯ್ಯಾ ]ಜನಗುವಮಾತಾಡಿದರು ಅಪವಾದ ಬರಲಿಸಿಯ್ಯಾ। ಜನರ ಪವಾದವು ಒಂದರು ಭಕ್ತನಿಗೆ ಇರಲಿಸಿಯ್ಯ। ಮನ ಎರಗಿದವಂಚನೆ ಪ್ರಯೋಜನಂಗಳು। ಅಣುಗೊತ್ತಿಕಾವುತಿಪ್ಪ ಅಣೋರಣಿ ಮಹಾ ವಿಭುವೆ।ವಿಜಯವಿಠಲರೇಯ ಮನದುಸ್ಸಂಗತಿಗೆ ಯೋಚನೆ ಮಾಡಲೀಸಿಯಾ ॥೧॥

ಮೋಹನ ವಿಠ್ಠಲರ ಸು॥ ತ್ರಿವಿಡಿತಾಳದಲ್ಲಿ. ಹರಿಯು ತನಗೆ ಬೇಕಾದವನ ಮನಸು ೧ ಎರಗಲೀಸನು ಅನ್ಯ ಸತಿಯರಲ್ಲಿ। ೨ ಎರಗಿಸಿದರೆ ಬೇಗ ತಿರಗಿಸುವನಯ್ಯ। ೩ ತಿರುಗಿಸದಿದ್ದರೆ ಬೆರೆಯ ಲೀಸ। ೪ ಬೆರೆದರೆ ಬೆರೆಯಲಿ ರತಿಯ ಪುಟ್ಟಿಸಲೀಸ। ೫ ರತಿ ಪುಟ್ಟಿಸಿದರೆ ಏನು ಕಾಕು ಮಾಡಲೀಸನಯ್ಯ। ಕರುಣಾಸಾಗರ ನಮ್ಮ ಮೋಹನ ವಿಠಲ್ಲರೇಯನ ಪಾವನ। ಚರಣವನು ತೀವ್ರದಲಿ ಭಜಿಸೊ ॥೩॥

ಗುರುವಿಜಯ ವಿಠಲರ ಸುಳಾದಿ ಅಟ್ಟತಾಳ

ಭಕ್ತರ್ಗೆ ಪಾಪಕೃತ್ಯಗಳೇ ಇಲ್ಲ। ಕೃತ್ಯಗಳಿದ್ದರೂ ಲೇಪನವೇ ಇಲ್ಲ। ಕೃತ್ಯವ ಲೇಪಿಸೆ ಭೋಕ್ತೃವ್ಯವೆ ಇಲ್ಲ। ಭೋಕ್ತ್ರವ್ಯವಾದರು ನರಕ ಯಾತನೆ ಇಲ್ಲ। ಭಕ್ತನಾದವ ವೊಂದು ದುಷ್ಕೃತ್ಯಮಾಡಲಾಗಿ। ಉತ್ತಮರ ದೋಷ ನೀಚರುಂಬುವರು। ಯುಕ್ತಿ ಪೂರ್ವಕವಾಗಿ ಇನ್ನಿತುಮಾಡುವ। ಪ್ರತ್ಯಕ್ಷವೆ ಸರಿಸುರಪತಿ ದೋಷವ। ಧ। ರಿತ್ರಿಗೆ ವಿಭಾಗಮಾಡಿದೆ ಕಾರುಣ್ಯದಿ। ಇತ್ತ ಲೀಗಲು ಅವರಂತೆ ಸರಿಯನ್ನು। ಮುಕ್ತರಾಶ್ರಯ ಗುರುವಿಜಯ ವಿಠಲರೇಯ। ಮಿತ್ರ ನೀನೆಗತಿ ಆವಕಾಲದಲಿ ॥೪॥

## ೧೯ ಪದ್ಮಪುರಾಣ ಸ್ವರ್ಗಖಂಡದಲ್ಲಿ ಸ್ತ್ರೀಸಂಗದ ನಿಂದಾವಿಶದವಾಗಿದೆ

ಯಾವ ಭಕ್ತನಾದವನು ಇಂದ್ರಿಯಗಳ ಜಯಹೊಂದಿ ಆ ಇಂದ್ರಿಗಳನ್ನು ತನ್ನವಶಪಡಿಸಿಟ್ಟುಕೊಂಡಿರುವನೋ ತನ್ನ ಹೃದಯದಲ್ಲಿ ಹರಿಮೂರ್ತಿ ನೋಡುತ್ತ ತ್ರಿಲೋಕ ವಿಜಯವನ್ನು ಹೊಂದುತ್ತಾನೆ. ಆದರೆ ಅಂಥ ಮಹತ್ಮರಿಗಾದರು ಸ್ತ್ರೀಯರು ಅಥವಾ ಆ ಸ್ತ್ರೀಯರುಗಳ ಅಧಿಕ ಸಂಗಮಾಡುವ

ಪುರುಷರ ಸಹವಾಸ ಸಹನಾಗಿ ಭಕ್ತರಿಗೆ ಬಾಧೆಯನ್ನು ಕೊಡುತ್ತದೆ. ಅಂದ ಮೇಲೆ ಇತರರ ಪಾಡೇನು ?

## ಸ್ತ್ರೀಯಲ್ಲಿರುವ ವಶೀಕರಣಗಳು

ಸ್ತ್ರೀಯರುಗಳು ನೇತ್ರದ ಕಟಾಕ್ಷದಿಂದ ಯಾವ ಸಂಕೇತಮಾಡುತ್ತಾರೋ ಅವರನೋಟವನ್ನು ಉಲ್ಲಂಘನಮಾಡಿ ಗೆಲ್ಲುವದು ದೇವತೆಗಳಿಂದ ಸಹ ಕಠಿಣವಾಗಿದೆ ಸ್ತ್ರೀಯರ ಕಟಾಕ್ಷ ವೀಕ್ಷಣವನ್ನು ಗೆಲ್ದವನೆ ಪರಮಾತ್ಮನ ಭಕ್ತನಾಗುತ್ತಾನೆ. ಮನನಶೀಲರಾದಮುನಿಗಳುಸಹಿತ ಈ ಲೋಕದಲ್ಲಿ ಸ್ತ್ರೀಯರ ಚರಿತ್ರದ ಮೇಲೆ ಲುಬ್ಧರಾಗಿ ಮತಿ ಭ್ರಾಂತರಾಗುತ್ತಾರೆ. ಯಾವ ಪುರುಷರು ನಾರಿಯರ ಭಕ್ತರಾಗಿ ನಾರಿಯರ ಆಶ್ರಯಮಾಡಿರುವರೊ ಅವರಿಗೆ ಭಗವಂತನಲ್ಲಿ ಭಕ್ತಿ ಹೇಗೆ ಪ್ರಾಪ್ತವಾದೀತು ?

ನಾರೀಣಾಂ ನಯನಾದೇಶಃ ಸುರಾಣಾಮಪಿದುರ್ಜಯಃ । ನಯೇನ ವಿಜಿತೋ ಲೋಕೆ ಹರಿಭಕ್ತಃ ಸ ಉಚ್ಯತೇ॥ ಮಾದ್ಯಂತಿ ಮುನಯೋಽಪ್ಯತ್ರ ನಾರೀಚರಿತಲೋಲುಪಾಃ । ಹರಿಭಕ್ತಿಃ ಕುತಃ ಪುಂಸಾಂ ನಾರೀ ಭಕ್ತಿಜುಷಾಂದ್ವಿಜಾಃ ॥(ಪದ್ಮಪುರಾಣ) ಸೂತರುಶೌನಕ ಬ್ರಾಹ್ಮಣರನ್ನು ಕುರಿತು-ಹೇದ್ವಿಜರೆ ಎಷ್ಟೋಜನ ಹೆಣ್ಣು ರಾಕ್ಷಸಿಯರು ಸುಂದರವಾದ ಕಾಮಿನೀ ವೇಷವನ್ನು ಧರಿಸಿಕೊಂಡು ಈ ಸಂಸಾರದಲ್ಲಿ ಕಾಮುಕಿಯರಾಗಿ ತಿರುಗುತ್ತ ಅವರು ಸದಾ ಮನುಜರಬುದ್ಧಿ ವಿವೇಕವನ್ನು ತಮ್ಮ ಗ್ರಾಸ (ಅಶನ) ಮಾಡಿರುತ್ತಾರೆ. (ಕಾಮಿನಿಯರು ರಾಕ್ಷಸ ಸ್ವಭಾವದವರು)

ಸುಂದರ ಸ್ತ್ರೀಯ ಚಂಚಲನೇತ್ರ ಕಟಾಕ್ಷ ವೀಕ್ಷಣವು ಸಂಪೂರ್ಣ ಧರ್ಮವನ್ನೇ ಲೋಪಮಾಡುವದು. ಇಂಥ ಚಂಚಲ ನೋಟ ಪುರುಷನ ಮೇಲೆ ಎಲ್ಲಿಯವರೆಗೆ ಬಿದ್ದಿಲ್ಲವೋ ! ಅಲ್ಲಿಯವರೆಗೆ ಅವನಲ್ಲಿರುವ ವಿದ್ಯೆಯು ತಿಳುವಳಿಕೆಯು ಏನಾದರೂ ಮಾಡಲು ಸಮರ್ಥವಾಗಿದೆ ಅಲ್ಲಿಯವರೆಗೆ ಅವನಜ್ಞಾನ ತಿಳುವಳಿಕೆ ಚನ್ನಾಗಿರುತ್ತದೆ. ಸ್ತ್ರೀ ಕಟಾಕ್ಷ ವೀಕ್ಷಣವರೆಗೆ

ಶಾಸ್ತ್ರ ಶಾಸ್ತ್ರಾರ್ಥಧಾರಣಮಾಡುವ ಅವನ ಮೇಧಾಶಕ್ತಿ ನಿರ್ಮೂಲನಾಗಿರುತ್ತದೆ. ಅಲ್ಲಿಯವರೆಗೆ ಜಪತಪ ತೀರ್ಥಯಾತ್ರೆಯಲ್ಲಿ ಮನಸ್ಸು ಇಡುತ್ತ ಅದರಲ್ಲಿ ನಿಮಗ್ನನಾಗಿ ಅನುಕೂಲವಾಗಿರುವವು ಅಲ್ಲಿಯವರೆಗೆ ಗುರುಗಳ ಸೇವಾ ಮಾಡುವ ಸಂಭವವಿದೆ ಮತ್ತು ಅಲ್ಲಿಯವರೆಗೆ ಈ ಸಾಗರದಿಂದ ಪಾರುಗಾಣುವ ಸಾಧನಗಳಲ್ಲಿ ಇವನ ಮನಸ್ಸು ಇರುತ್ತದೆ ಇಷ್ಟೇ ಅಲ್ಲ ದುಷ್ಟ ಸ್ತ್ರೀಯ ಅಂಗಾಂಗ ದೃಷ್ಟಿ ಬೀಳುವವರೆಗೆ, ಉಪದೇಶ ವಿವೇಕ ಸತ್ ಸಮಾಗಮದರುಚಿ ಪೌರಾಣಿಕ ಮಾತುಕಥೆಗಳ ಕೇಳುವ ಆತುರತೆ ಅಲ್ಲಿಯ ಪರಿಚಯುಂತ ಇರುತ್ತದೆ ಯಾವನು ಭಗವಂತನ ಚರಣಾರವಿಂದ ಮಕರಂದವನ್ನು ಸ್ವಲ್ಪನಾದರೂಸೇವಿಸಿ ಆನಂದ ಮಗ್ನವಾಗಿರುವನೋ ಅಂಥ ಪುರುಷರ ಮೇಲೆ ಸ್ತ್ರೀಯರ ಚಂಚಲ ಕಟಾಕ್ಷವೆಂಬ ಕುಡಿಗಂಣಿನ ನೋಟದ ಪ್ರಭಾವಬೀಳುವದಿಲ್ಲ. ಯಾರು ಹಿಂದಿನ ಜನ್ಮ ಜನ್ಮಾಂತರಗಳಲ್ಲಿ ಹೃಷೀಕೇಶ ಭಗವಂತನ ಸೇವೆಯಾರು ಮಾಡಿರುವರೋ ಪಾತ್ರರಾದ ಬ್ರಾಹ್ಮಣರಿಗೆ ದಾನಮಾಡಿರುವರೋ ಅವರುಗಳಿಗೇನ ವಿಷಯದಿಂದ ವೈರಾಗ್ಯ ಹೊಂದಿದವರಾಗಿ ಇಂದ್ರಿಯ ಜಯಿಗಳಾಗುತ್ತಾರೆ.

**ಸ್ತ್ರೀಯರ ಸೌಂದರ್ಯ, ವ್ಯಾಮೋಹವೆಂತು?** ಸ್ತ್ರೀಯರಲ್ಲಿ ಸೌಂದರ್ಯವೆಂಬುವ ವಸ್ತುವಾದರೂ ಏನಿದೆ !! ಕೀವು ಮಲ ಮೂತ್ರ ಕಫರಕ್ತ ಮಾಂಸತ್ವಚ ಮಜ್ಜಾಮೇಧಸ್ಸು ಅಸ್ಥಿ ಈ ಹೊಲೆ ಹೊಲಸಿನಿಂದ ಹೊದಿಸಿದ ಹೊದಿಕೆ ಅದೆ. ಅದರ ಹೆಸರೆ ಶರೀರ, ಅಹೋ ಇಂಥ ಕಶ್ಮಲದೇಹದಲ್ಲಿ ಸೌಂದರ್ಯವೆಲ್ಲಿಂದ ಬಂತು ?

ಮೇಲೆ ಹೇಳಿದ ಎಲ್ಲ ವಸ್ತುಗಳನ್ನು ಬೇರೆ ಬೇರೆ ಮಾಡಿದಾಗ್ಗೆ ಅಥವ ಪ್ರತ್ಯೇಕ ಗೈಸಿ ಅವುಗಳನ್ನು ಮುಟ್ಟಿದರೆ ಸ್ನಾನಮಾಡಿದ ಮೇಲೆಯೇ ಮನುಷ್ಯನು ಶುದ್ಧನಾಗುತ್ತಾನೆ. ಅಹೋ ನೋಡಿ !! ಇವೆಲ್ಲ ಅಪವಿತ್ರ ಪದಾರ್ಥದಿಂದ ಕೂಡಿದ ಶರೀರವಿದು, ಕಾಮುಕರಿಗೆ ಸೌಂದರ್ಯ ಕಾಣುತ್ತದೆ. ಅಹೋ ಇದು ಮನುಜರ ಮಹಾದುರ್ದೈವ ಇದೆ ದುರ್ಭಾಗ್ಯವಶದಿಂದಲೇ

ಘಟನವಾಗುತ್ತದೆ. ಸ್ತ್ರೀಯರ ಅಪಾಂಗ ನೋಟವಲ್ಲದೇ ಪುರುಷನು ಸ್ತ್ರೀಯರ ದುಂಡಾದ ಕುಚದಿಂದ ಯುಕ್ತ ಶರೀರಕ್ಕೂ ಮರುಳಾಗುತ್ತಾನೆ. ಕಾಮಿನಿಯರಿಗ ವಶನಾಗುವನು. ಕುಚಕುಂಭದಲ್ಲಿ ಮುಂದೆ ಜನಿಸುವ ಬಾಲನಿಗೆ ಹಾಲು ಭಗವಂತನು ತುಂಬಿಟ್ಟಿರುವನೆಂಬುದು ಅರಿತೇ ಇಲ್ಲ. ಇದನ್ನರಿಯದೇ ಮೋಹಿಸದ ಸ್ತ್ರೀಯ-ಳಾವಳು, ಪುರುಷನಾವನು ?

ಈ ಕಾರಣದಿಂದ ಸಾಧು ಸತ್ಪುರುಷರು ಭಗವಂತನ ಭಕ್ತರಾದವರು ಸ್ತ್ರೀ ಸಂಗವೇ ಪರಿತ್ಯಾಗಮಾಡಬೇಕು ಅಹಾ! ಸ್ತ್ರೀಯರ ಆಶ್ರಯಮಾಡಿ ಯಾವ ಪುರುಷನು ಇಹಲೋಕದಲ್ಲಿ ಸಿದ್ಧಿಯನ್ನು ಹೊಂದುತ್ತಾನೆ ? ಕಾಮಿನಿ ಮತ್ತು ಕಾಮಿನಿಸಂಗಮಾಡುವ ಕಾಮುಕ ಪುರುಷರಸಂಗವನ್ನು ಬಿಡಬೇಕು. ಇವರ ಸಂಗವು ರೌರವ ನರಕಕ್ಕೆ ಕಾರಣ ಈ ಮಾತು ಪ್ರತ್ಯಕ್ಷ ಅನುಭವ ಸಿದ್ಧವಾದದ್ದು ಯಾವ ಪುರುಷರು ಅಜ್ಞಾನ ವಶದಿಂದ ಸ್ತ್ರೀಯರ ಮೇಲೆ ಲುಬ್ಧರಾಗಿರುವರೋ ಅವರನ್ನು ಅವರ ದೈವವು ಠಕ್ಕಿಸುವ ನಾರಿಯ ಯೋನಿ (ಶರೀರವು) ಸಾಕ್ಷಾತ್ ನರಕಕುಂಡವೆ ಇದೆ. ಕಾಮಿ ಪುರುಷರು ಇದರಲ್ಲಿಯೇ ಕುದಿದು ಬೆಂದು ಹೋಗುತ್ತಾರೆ. ಏಕೆಂದರೆ ಆ ಕಾಮಿ ಪುರುಷರ ಜನ್ಮವು ಯಾವ ಭೂಮಿಯಿಂದಾಗಿದೋ ಅಲ್ಲೇ ಆವನು ಮತ್ತು ರಮಣ ಮಾಡುತ್ತಾನೆ. ಅಹೋ! ಯಾವ ಯೋನಿಯಿಂದಹೊಲೆಹೊಲಸು ಮೂತ್ರ ಮತ್ತು ರಜ ಮುಟ್ಟು ಹರಿಯುತ್ತದೆಯೋ ಅಲ್ಲಿಯೇ ಮನುಜನು ರಮಣ ಮಾಡುತ್ತಾನೆ.

ಅದರಕಿಂತಲೂ ಹೆಚ್ಚಿನ ಅಪವಿತ್ರ ಸ್ಥಳಯಾವುದು? ಅಲ್ಲಿ ಮಹಾಕಷ್ಟ ವಿದ್ದರೂ ತಿಳಿದು ತಿಳಿದು ಮನುಷ್ಯನು ಅದರಲ್ಲಿಯೇ ಮತ್ತೂ ಪ್ರವೃತ್ತನಾಗುತ್ತಾನೆ. ಆಹೋ ಇದೇನು ದೇವರ ವಿಡಂಬನ !! ಅಂಥ ಅಪವಿತ್ರಯೋನಿಯಲ್ಲಿ ವಾರಂವಾರ ಪುನಃಪುನಃ ರಮಿಸುವದುಮಾನವರ ಎಂಥ ನಾಚಿಕೆಗೇಡಿತನ ವಿದು.

ಈ ಕಾರಣ ಬುದ್ಧಿವಂತ ಪುರುಷರು ಸ್ತ್ರೀ ಸಂಗದಿಂದಾಗುವ ಮಹತ್ತರ ದೋಷಗಳನ್ನು ವಿಚಾರಮಾಡಿ ಅದರಿಂದ ದೂರಿರಬೇಕು. ಸ್ತ್ರೀ ಸಂಗದಿಂದ ಬಲ ಶಕ್ತಿನಾಶವಾಗುತ್ತದೆ. ಬಲನಾಶದಿಂದ ಬಹು ಆಲಸ್ಯ ಬರಹತ್ತುತ್ತದೆ.

ಆಲಸ್ಯದಿಂದ ನಿದ್ರಾ ಬಹಳ ನಿದ್ರೆಯಿಂದ ಎಚ್ಚರಿಲ್ಲದ ಮನುಜರ ಆಯುಷ್ಯ ಕಡಿಮೆ. ಇದೇ ಕಾರಣದಿಂದ ಬುದ್ಧಿವಂತ ಪುರುಷರ ಒಳ್ಳೆ ಕರ್ತವ್ಯವೇನೆಂದರೆ, ಅವರು ಸ್ತ್ರೀಯರನ್ನು ತಮ್ಮ ಮೃತ್ಯುವಿನಂತೆ ತಿಳಿಯಬೇಕು. ಮನಸ್ಸನ್ನು ಪ್ರಯತ್ನ ಪೂರ್ವಕ ಭಗವಂತನ ಚರಣಕಮಲದಲ್ಲಿ ಇಡಬೇಕು. ಗೋವಿಂದನ ಪಾದಾರವಿಂದ ಭಕ್ತಿಯು ಇಹಪರಲೋಕ ಸುಖ ಕೊಡುವದಾಗಿದೆ ಗೋವಿಂದ ಭಕ್ತಿಯನ್ನು ಬಿಟ್ಟು ಮೂರ್ಖ ಪುರುಷನು ಸ್ತ್ರೀಯರ ಚರಣ ಸೇವಕನಾಗುವನು ಭಗವಂತನ ಚರಣ ಸೇವಾ ಮೋಕ್ಷವನ್ನೇ ಕೊಡುವದಾಗಿದೆ ಸ್ತ್ರೀಯರ ಯೋನಿಯ ಸೇವಿಯು (ಅಲ್ಲಿ ರತಿಯು) ಪುನಃ ಜನನ ಮರಣಾಖ್ಯ ಘೋರ ಎಂಬುವ ಯೋನಿಯಲ್ಲೇ ಹಾಕತಕ್ಕದ್ದಾಗಿದೆ. "ಮೈಥುನಾತ್ಬಲ ಹಾನಿಃ ಸ್ಯಾನಿದ್ರಾ ಪ್ರೀತಿ ತರುಣಾಯತೇ। ನಿದ್ರಯಾಪಹೃತೋಜ್ಞಾನೋಹ್ಯಲ್ಪಾಯುರ್ಜಾಯತೇ ನರಃ॥ ತಸ್ಮಾತ್ ಪ್ರಯತ್ನತೋ ಧೀಮಾನ್ ನಾರೀಂ ಮೃತ್ಯುಮಿವಾತ್ಮನಃ। ಪಶ್ಯೇದ್ಗೋವಿಂದ ಪಾದಾಬ್ಜೇ ಮನೋನ್ಯಸ್ಯ ರಮುಯೇದ್ಬುಧಃ॥ ಇಹಾಮುತ್ರ ಸುಖಂ ತದ್ಧಿ ಗೋವಿಂದಪದಸೇವನಮ್। ವಿಹಾಯ ಕೋ ಮಹಾಮೂಢೋ ನಾರೀ ಪಾದಂ ಹಿ ಸೇವತೇ॥ ಜನಾರ್ದನಾಂಘ್ರಿಸೇವಾ ಹಿ ಹ್ಯಪುನರ್ಭವದಾಯಿನೀ॥ ನಾರೀಣಾಂ ಯೋನಿಸೇವಾ ಹಿ ಯೋನಿಸಂಕಟಕಾರಿಣೀ॥ ಯೋನಿಸೇವಾದಿಂದ ಪುನಃ ಪುನಃ ಯೋನಿಯಲ್ಲೇ ಬೀಳಬೇಕಾಗುತ್ತದೆ. ತಿಲಗಾಣದಲ್ಲಿ ಅಥವಾ ತಿರುಗುವ ಯಂತ್ರದಲ್ಲಿ ಬಿದ್ದು ತಿರುಗುವನು ಎಷ್ಟು ಕಷ್ಟ ಅನುಭೋಗಿಸುವನೋ, ಯೋನಿ ಸೇವಿಯು ರತನಿಗೂ ಅಂಥ ಕಷ್ಟವೇ ಅನುಭೋಗಿಸಬೇಕಾಗಿದೆ. ಆದರೂ ಮತ್ತು ಪುನಃ ಪುನಃ ಯೋನಿ ಸೇವೆಯ ಅಭಿಲಾಷೆಯೆ ಮಾಡುತ್ತಾನೆ. ಇಂಥ ಪುರುಷರಿಗೆ ಧಿಕ್ಕಾರ ಇರಲಿ. ಚೆನ್ನಾಗಿ ತಿಳಿದು ವಿಚಾರಿಸಿರಿ ಯಾತನಾಮಯವಾದ ಯೋನಿಯಲ್ಲಿ ಮನವಿಡುವದು ಬಿಟ್ಟು ಗೋವಿಂದ ಚರಣದಲ್ಲಿ ಮನವಿಡಿರಿ.

ಯಾವ ಪುರುಷನು ಸ್ತ್ರೀಯರ ಆಸಕ್ತಿ ಬಿಟ್ಟು ವಿಚಾರಶೀಲನಾಗುತ್ತಾನೋ ಆವನು ಅಶ್ವಮೇಧ ಯಜ್ಞಮಾಡಿದ ಫಲವನ್ನು ಹೊಂದುತ್ತಾನೆ ಯಾವಾಗ್ಗೆ ಗ್ರಹಸ್ಥಾಶ್ರಮಿಗೆ ದೈವಯೋಗದಿಂದ ಉತ್ತಮ ಕುಲದಲ್ಲಿ ಜನಿತಳಾದ ಪತಿವ್ರತೆ ಸಾಧ್ವಿ ಸತಿ, ಸ್ತ್ರೀಯಳಿಂದ ವಿವಾಹ ಆದಮೇಲೆ ಆ

**ಸತಿಯಲ್ಲಿ ಪುತ್ರೋತ್ಪತ್ತಿಯಾದಮೇಲೆ ಪುನಃ ಸ್ವಸ್ತ್ರೀಸಂಗಮಾಡಬಾರದು.** ಇಂಥ ಪುರುಷನ ಮೇಲೆ ಜಗನ್ನಿಯಾಮಕ ಭಗವಂತನು ಸಂತುಷ್ಟನಾಗುತ್ತಾನೆ. ಇದರಲ್ಲಿ ಕಿಂಚಿತ್ ತಿಲಮಾತ್ರವೂ ಸಂದೇಹವಿಲ್ಲ. ಧರ್ಮಜ್ಞ ಪುರುಷರು ಸ್ತ್ರೀಯರ ಸಂಗಕ್ಕೆ ಅಸತ್ ಸಂಗವೆಂದು ಹೇಳುತ್ತಾರೆ. ಇಂಥ ಅಸತ್ ಸಂಗದಿಂದ ಭಗವಂತನಾದ ಶ್ರೀ ಹರಿಯಲ್ಲಿ ಸುದೃಢ ಭಕ್ತಿ ಹುಟ್ಟುವದಿಲ್ಲ. ಇದೇ ಕಾರಣದಿಂದ ಎಲ್ಲ ತರದ ವಿಷಯ ಸಂಗ **ಪರಿತ್ಯಾಗ** ಮಾಡಿ ಭಗವಂತನಲ್ಲಿ ಭಕ್ತಿ ಮಾಡಬೇಕು

ಈ ಎಲ್ಲ ಗ್ರಂಥಗಳ ಮಥಿತಾರ್ಥವನ್ನು ತೆಗದು ಶ್ರೀಮಧ್ವಾಚಾರ್ಯರು **ಕೃಷ್ಣಾಮೃತ ಮಹಾರ್ಣವದಲ್ಲಿಯೂ** ಜಿತೇಂದ್ರಿಯನಾಗಿಯೇ ಹರಿಯ ಭಜಿಸುವದೆಂದು ಹೇಳಿರುವರು. 'ತದೈವ ಪುರುಷೋ ಮುಕ್ತೋ ಜನ್ಮದುಃಖ ಜರಾದಿ ಭಿ. ॥ ಜಿತೇಂದ್ರಿಯೋ ವಿಶುದ್ಧಾತ್ಮಾ ಯದೈವ ಸ್ಮರತೇ ಹರಿಂ॥

ಯಾವಪುರುಷನು ಸರ್ವೇಂದ್ರಿಯಗಳನ್ನು ಜಯಿಸಿದವನಾಗಿ ಶುದ್ಧಾಂತಃ ಕರಣದಿಂದ ಹರಿಯನ್ನು ಯಾವಾಗ್ಯೆ ಸ್ಮರಿಸುತ್ತಾನೋ ಆಗಲೇ ಅವನು ಜನನಮರಣ ಮುಪ್ಪು ದುಃಖಾದಿಗಳಿಂದ ದೂರನಾಗುವನು.

## ೨೦ ಇಲ್ಲಿ ಕೆಲವು ಶಂಕಾಗಳು

ಇಲ್ಲಿಯ ವರಗೆ ವೇದೋಪನಿಷತ್ ಗೀತಾಭಾಗವತ ಭಾರತಪದ್ಮಪುರಾಣದಲ್ಲಿ ವಿವರಿಸಿದ, ಬ್ರಹ್ಮಚರ್ಯ ಸ್ವರೂಪ ಬ್ರಹ್ಮಚರ್ಯ ವ್ರತಪಾಲನೆ ಬ್ರಹ್ಮಚರ್ಯದ ತನ್ನಿಯಮನ, ಜಿತೇಂದ್ರಿಯತ್ವ ಸ್ತ್ರೀಯರ ನಿಂದ್ಯೆ, ಇವೆ ಮೊದಲಾವು ವಿಶದವಾಗಿಯೂ ಕೆಲ ಸಂಕ್ಷಿಪ್ತವಾಗಿಯೂ ಹೇಳಲ್ಪಟ್ಟಿತು. ಆದರೆ ಇಲ್ಲಿ ಅನೇಕ ಜನರು ಅನೇಕ ಶಂಕಾ ಮಾಡಬಹುದಾಗಿದೆ.

ಪೂರ್ವಕಾಲದಂತೆ ಚತುರ್ವರ್ಣಾಶ್ರಮ ಧರ್ಮಗಳೇ ಲೋಪವಾಗಿವೆ. ಗುರುಕುಲವೇ ಇಲ್ಲ ಬೋಧಿಸುವ ಗುರುಗಳೇ ಇಲ್ಲವೆಂದ ಮೇಲೆ

ಬ್ರಹಚರ್ಯದಿಂದ ಶಿಷ್ಯರು ಇರುವದೆಂತು? ಉಪದೇಶ ಗೈವರಾರು? ಗೈದರೂ ಕೇಳುವರಾರು? ನಡೆಯುವರಾರು? ಸದ್ಯ ಕಾಲದಲ್ಲಿ ಬ್ರಹ್ಮಚರ್ಯದ ಬಗೆ ಹೇಗೆ? ಎಂಬ ಅನೇಕ ಪ್ರಶ್ನೆಗಳಿವೆ.

(೧) ಬ್ರಹ್ಮಚರ್ಯ ಶಬ್ದಾರ್ಥವೇನು? ಇದರವಿವರಣೆ ಯಾವಯಾವ ಗ್ರಂಥಗಳಲ್ಲಿ ಹೇಗೆ ಮಾಡಿರುವರು. ಅವೆಲ್ಲವುಗಳ ಸಮನ್ವಯವುಹೇಗೆ?

(೨) ಭಾಗವತಾದಿ ಗ್ರಂಥಗಳಲ್ಲಿ ಉಪಕುರ್ವಾಣ ಬ್ರಹ್ಮಚರ್ಯದಿಂದಿದ್ದು. ವಿದ್ಯಾಭ್ಯಾಸ ಮುಗಿಸಿ ಗುರುದಕ್ಷಣಾ ಕೊಟ್ಟ ನಂತರ ಸ್ನಾತಕನಾಗಿ ಕುಲೀನಳಾದ ಸು ಸ್ತ್ರೀಯಳಿಂದ ವಿವಾಹಿತನಾಗಬೇಕು ಋತುಕಾಲದಲ್ಲಿ ಮಾತ್ರ ಸ್ತ್ರೀ ಸಂಭೋಗಮಾಡಿದರೆ ಬ್ರಹ್ಮಚರ್ಯ ಸಮಾನವೆಂದು ಹೇಳಿದೆ. ಇಂದ್ರಿಯ ನಿಯಮನ ವಿಲ್ಲದಮೇಲೆ ಇದುಹೇಗೆಬ್ರಹ್ಮಚರ್ಯ ಸ್ವಾಮಿ? ನಿಮ್ಮ ಶಾಸ್ತ್ರ ಪುರಾಣಾದಿಗಳು ವಿಷಯುಗಳಿಗೆ ಅನುಕೂಲವೋ?

(೩) ಗ್ರಹಸ್ಥಾಶ್ರಮಿಗಳಿಗೆ ಸ್ತ್ರೀಯರು ಹೇಗಿರಬೇಕು? ಸತಿ ಪುರುಷರ ನಡಾವಳಿ ಆಚರಣೆ ಹೇಗೆ? ಸತಿಯಳಿದ್ದಂತೆ ಪತಿಯು ಸಹ ಇರಬೇಕಲ್ಲವೆ? ಸ್ತ್ರೀ ಪುರುಷರ ಬ್ರಹ್ಮಚರ್ಯ ಪಾಲನೆ ಹೇಗೆ?

(೪) ಸಾಮಾನ್ಯವಾಗಿ ಹಿಂದೆ, ಪುರಾಣಾದಿಗಳ ವಚನದಂತೆ ದಾಸರು ಸಹಿತ ಸ್ತ್ರೀ ನಿಂದ್ಯ ಸ್ತ್ರೀಯರ ದುಸ್ವಭಾವ, ಸ್ತ್ರೀಯರಲ್ಲಿ ವ್ಯಾಮೋಹ ವರ್ಜ ಮಾಡಬೇಕೆಂದು ಹೇಳಿದ್ದಾರೆ. ಇದರಂತೆ ವಿಶದವಾಗಿ ಪುರುಷರ ದುಸ್ವಭಾವ ಪುರುಷ ದುರಾಚಾರ ಪುರುಷರ ನಿಂದ್ಯೆ ಏಕೆ ಮಾಡಿಲ್ಲ. ವಾಸ್ತವವಾಗಿ ಸ್ತ್ರೀಯರ ಕಟಾಕ್ಷ ವೀಕ್ಷಣಗೆಲ್ಲುವದು ದುರ್ಜಯವಾದರೂ, ದುರಾಚಾರಿಯಾದ ಕಾಮುಕ ಪುರುಷನು ಸ್ತ್ರೀಯರ ಕಡೆಗೆ ನೋಡದೆ ಇದ್ದರೆ ಸ್ತ್ರೀಯರು ಏನು ಮಾಡ್ಯಾಳು? ಎದ್ಯಪಿ ಸ್ತ್ರೀಯರ ಕಾಮೋದ್ದೀಪನವು ಪುರುಷರ ಕಾಮೋದೀಪನಕಿಂತಲೂ ಹತ್ತು ಮಡಿ ಹೆಚ್ಚಿಗಿದ್ದರೂ, ಒಮ್ಮೊಂದೊಮ್ಮೇ

ವ್ಯಕ್ತಿಗೊಳಿಸುವದಿಲ್ಲ. ಮೊದಲಿಗೆ ಪುರುಷನ ಸೂಚನೆ ಕಂಗಳ ನೋಟವು ಸ್ತ್ರೀಯರಿಗೆ ಅನುಕೂಲವಾಗಿ ಕಾಮೋತ್ತೇಜನಕ್ಕೆ ಕಾರಣವಾಗುವದು. ಕಾರಣ ಕಾಮುಕ ಪುರುಷರ ಕಣ್ಣು ಕಿತ್ತಿಸಬೇಕೆಂದು ಇತರ ಸಂತಾನಾದಿ ಶಾಸ್ತ್ರಗಳಲ್ಲಿ ಹೇಳಿದೆ. ಇದು ಅನುಭವಸಿದ್ಧಂ ಅಂದಮೇಲೆ ಸ್ತ್ರೀಯರ ನಿಂದ್ಯೆಯೇ ಏತಕ್ಕೆ ಉತ್ತಮರಾದ ಸ್ತ್ರೀಯರೇ ಇಲ್ಲವೆ? ಮೊದಲಿಗೆ ಪುರಷನೇ ಮೋಹ ಪುಟ್ಟಿಸಲು ಕಾರಣನು ಕಾಮಿ ಪುರುಷರು ಸಹ ನಿಂದ್ಯರಲ್ಲವೆ?

(೫) ವಿಷಯ ವೈರಾಗ್ಯ ವಿಲ್ಲದ ವಿನಾ ಇಂದ್ರಿಯ ಜಯವಾದ ಬ್ರಹ್ಮಚರ್ಯ ಲಭಿಸುವದು ದುರ್ಲಭ. ವೈರಾಗ್ಯ ಭಾಗ್ಯಲಕ್ಷಣಕ್ಕೂ ಬ್ರಹ್ಮಚರ್ಯಕ್ಕೂ ವೈಲಕ್ಷ್ಯಣ್ಯವೇನು ?

(೬) ಜ್ಞಾನಿಗಳ ಅಪರಾಧ ಪರಮಾತ್ಮನು ಕ್ಷಮಿಸುತ್ತಾನೆಂದ ಮೇಲೆ ಈ ನಿಯಮದಿಂದ ಶಾಸ್ತ್ರ ಓದಿದವರು ಕರ್ಮಠರೆಂದು ಭಾವಿಸಿದ ಕೆಲಪುರುಷರು ಅರಿಯೂ ಅರಿದೂ ಪುನಃ ಪುನಃ ದುಷ್ಕರ್ಮಾಚರಣೆ ರತರಾದವರಿಗೆ ಶ್ರೀಹರಿನಾಮವು ತಾರಕವೆ? ಇಂಥವರ ಅಪರಾಧ ಕ್ಷಮಿಸುವನೆ ?

(೭) ಈಗಿನ ಕಾಲದಲ್ಲಿ ಎಷ್ಟೋ ಜನರು ಬ್ರಹ್ಮಚರ್ಯ ಪಾಲನಮಾಡುವರಿಲ್ಲವೆ? ಅವರಿದ್ದ ಬಗೆಹೇಗೆ? ಅವರುಸಹ ಬ್ರಹ್ಮಚರ್ಯಪಾಲನ ನಿಯಮ ಅದರ ಮರ್ಮ ಹೇಗೆ ವಿವರಿಸಿರುವರು. ಅವು ಹಿಂದಿನ ನಿಯಮಕ್ಕೆ ಸರಿಹೋಗುವವೆ ? ಅದರಲ್ಲಿ ವ್ಯತ್ಯಾಸವೇನು ?

(೮) ಶೂದ್ರನಿಗೆ ಇತರ ತ್ರೈವರ್ಣದವರ ಶುಶ್ರೂಷೆ ಸೇವಾವೃತ್ತಿಯೇ ಬ್ರಹ್ಮಚರ್ಯವೆಂದು ಹಿಂದೆ ಹೇಳಿತು. ಈ ಸೇವಾವೃತ್ತಿಯು ಬ್ರಹ್ಮಚರ್ಯ ಹೇಗೆ ?

(೯) ಸಧ್ಯಕಾಲದಲ್ಲಿ ಉಪನಯನಕಾಲ ವಿಧಿ ಮೀರಿಹೋಗಿದೆ, ಅದನ್ನು ಸರಿಯಾದ ಪದ್ಧತಿಗ ತರುವುದು ಹೇಗೆ? ಉಪನಯನವಾದ ನಂತರ ಬ್ರಹ್ಮಚಾರಿ ಗುರು ಮಾತಾಪಿತಾ ಪಿತೃಗಳ ಕರ್ತವ್ಯವಾವುದು. ದಂಪತಿಗಳ ಆಚರಣೆ ಹೇಗಿರಬೇಕು.

(೧೦) ಈ ಪ್ರಚಲಿತವಾದಸ್ಥಿತಿಯಲ್ಲಿಅನುಕೂಲವಾದ ನಿಯಮ ಬ್ರಹ್ಮಚರ್ಯಪಾಲನೇ ಆತ್ಮಸಂಯಮನ ಅದರ ಅಭ್ಯಾಸವು ಹೇಗೆ ?

ಹೀಗೆ ಅನೇಕ ಪ್ರಶ್ನರೂಪವಾದ ಉದ್ಗಾರಗಳು ಹೊರಡುತ್ತಿವೆ ಉಪನಿಷತ್ ಪುರಾಣಾದಿಗಳ ವಾಕ್ಯಗಳಿಗೂ ದಾಸರಾಯರುಗಳ ಉಪದೇಶಿಸಿದ ದಾಸ ಸಾಹಿತ್ಯದಲ್ಲಿರುವ ಬ್ರಹ್ಮಚರ್ಯ ಪಾಲನೆಗೂ ಕೂಲಂಕಷವಾಗಿ ತುಲನಾತ್ಮಕ ವಿಚಾರ ಗೈಯ್ಯುವದು ಅತ್ಯಾವಶ್ಯಕವಾಗಿದೆ.

ನಿಜವಾಗಿಯೂ ಈಗಿನ ಕಾಲದಲ್ಲಿ ಎಲ್ಲ ವರ್ಣಾಶ್ರಮ ಧರ್ಮಗಳು ಲೋಪವಾಗ ಹತ್ತಿವೆ. ಕರ್ಮರೂಪವಾದ ಧರ್ಮವು ಲೋಪವಾದರೂ ಜ್ಞಾನ ರೂಪವಾದ ಧರ್ಮವು ಇನ್ನು ಲೋಪವಾಗದೇ ಜ್ಞಾನಜನ್ಯ ಧರ್ಮದಲ್ಲಿ ವ್ಯತ್ಯಾಸ ಬರಹತ್ತಿದೆ. ಇದಕ್ಕೆ ಕಾರಣವಾದರೂ ಸದ್ಯಕಾಲದಲ್ಲಿರುವ ಜೀವರ ಯೋಗ್ಯತೆ ಅವರ ಸ್ವಭಾವವು ಈಸ್ವಭಾವವು ಆರಂದಲೂ ಬದಲುಮಾಡಲು ಶಕ್ಯವಿಲ್ಲವಾದರೂ, ಆಗಾಗ್ಗೆ ನಿಜಧರ್ಮಗಳ ವಿಚಾರ ಅವರಲ್ಲಿ ಅವರ ವೃಟ್ಟಿ ಸುವಿಕೆ ಈ ಜ್ಞಾನ ಪ್ರಚಾರವಾದರೂ ಅತ್ಯಾವಶ್ಯಕತೆಯಾಗಿದೆ

**೨೧ ಬ್ರಹ್ಮಚರ್ಯವೆಂದರೆ ಇದರ ವಿಗ್ರಹ,** ಬ್ರಹ್ಮಣಿ ಚರತಿ ಇತಿ ಬ್ರಹ್ಮಚಾರಿ. ಬ್ರಹ್ಮಚಾರಿಣಃ ಭಾವಬ್ರಹ್ಮಚರ್ಯಂ, ಚರಗತಿ ಭಕ್ಷಣೆ ಇತಿ ಧಾತೋಃ ಸಕಾಶಾತ್ ಏಗತ್ಯರ್ಥ್ಯಕ ಧಾತವಃ ತೇ ಜ್ಞಾನಾರ್ಥಕಾ ಭವಂತಿ. ಬ್ರಹ್ಮಜ್ಞಾನವಾನ್, ಸಕಲ ಇಂದ್ರಿಯವಿಷಯ ವರ್ಜಿತನಾಗಿ, ಪರ ಬ್ರಹ್ಮನ ಕಡೆಗಸಾಗಿ ಬ್ರಹ್ಮಜ್ಞಾನಪಡೆಯುವದು. ಬ್ರಹ್ಮಜ್ಞಾನವಾನನಾಗುವದೆಂದು ಮುಖ್ಯ ತಾತ್ಪರ್ಯ.

ಬ್ರಹ್ಮ ವೇದಾಧ್ಯಯನವ್ರತಂ ಚರತೀತಿ ಬ್ರಹ್ಮಚಾರಿ – ವೇದಾಧ್ಯಯನಾರ್ಥ ಬ್ರಹ್ಮಚರ್ಯ ವ್ರತ ಧಾರಣಮಾಡುವಿಕೆ, ನಿಯಮದಿಂದ ವರ್ತನಮಾಡುವಿಕೆ.

" ಮನಾದೀನಾಂಬ್ರಹ್ಮಣೀ ಚರಣಾತ್ ಬ್ರಹ್ಮಚರ್ಯಂ" (ಗೀತಾ ತಾತ್ಪರ್ಯ (೧) ಸರ್ವೇಂದ್ರಿಯ ನಿಗ್ರಹಲಕ್ಷಣ ವಿಶೇಷತೋಪಿ ಬ್ರಹ್ಮ

ಚರ್ಯೇಣ'' (ಶ್ರೀ ಟೀಕಾಕೃತ್ಪಾದರು) ಇಂದ್ರಿಯಮಾತ್ರ ನಿಗ್ರಹ ವಾಚೀನಾ ತಪಃ ಶಬ್ದೇನ ಗುಹ್ಯೇಂದ್ರಿಯ ನಿಗ್ರಹರೂಪ, ಬ್ರಹ್ಮಚರ್ಯ ವಾಚಿನೋ, ಬ್ರಹ್ಮಚರ್ಯ ಶಬ್ದ ಸ್ಯಾಗತಾರ್ಥತ್ವಾಯ ಪಿಶೇಷತೋಪೀತ್ಯುಕ್ತಂ॥ (ಮಾಂ ಕಾಲೀಯ) ವರ್ಜಯೇತ್ಪ್ರಮದಾಗಾಥಾ ಮಗ್ರಹಸ್ತೋ ಬೃಹದ್ವ್ರತಾ। ಇಂದ್ರಿಯಾಣೀ ಪ್ರಮಾಥೀನಿ ಹರಂತ್ಯಪಿಯತೇರ್ಮನಃ (ಭಾಗವತ) ಬೃಹ ದ್ವ್ರತೋ ಬ್ರಹ್ಮಚಾರೀ ಸ್ತ್ರ್ಯಾದಿವ್ಯವಹಾರ ವರ್ಜನ ನಿಮಿತ್ತ್ಯ ಮಾಹ। ಇಂದ್ರಿಯಾಣೀತಿ ನಿರ್ಜಿತೇಂದ್ರಿಯ ಗ್ರಾಮೋಯತಿ (ವಿಜಯಧ್ವಜೀಯ) ಪ್ರಮದಾ ಎಂದರೆ ಸ್ತ್ರೀ ಎಂತ ಪ್ರಸಿದ್ಧ ಇದಕ್ಕೆ ಭಾಗವತ ತಾತ್ಪರ್ಯ ಏಕಾ ದಶಸ್ಕಂಧದಲ್ಲಿ ಶ್ರೀಮದಾಚಾರ್ಯರ ವಾಕ್ಯವೇನೆಂದರೆ ''ಕೇಶವೇತ್ವನ್ಯಥಾ ಬುದ್ಧಿಃ ಸ್ತ್ರೈವಸ್ತ್ರೀ ಸಂಪ್ರಕೀರ್ತಿತಾ ಅನ್ಯಥಾ ಬುದ್ಧಿ ಸ್ತ್ರೀ ಶಬ್ದ ವಾಚ್ಯಾ ಯೋಷಿತ್ ಸಂಗಾತ್ ಯಥಾ ಪುಂಸಾ,—ಇತ್ಯತ್ರ ಯೋಷಿತ್ಪದಂ ಪ್ರಸಿದ್ಧ ಯೋಷಿತ್ ವಾಚ್ಯೇವೇತಿ, ಪ್ರಸರಸ್ಯಾನುಪಪತ್ತಿ ರೇವೆತ್ಯಾಶಂಕ್ಯ ಯೋ ಷಿತ್ ಪದಮಪಿ ಭಗದ್ವಿಷಯ ಅನ್ಯಥಾ ಜ್ಞಾನ ವಾಚೀತಿ ಭಾವೇನ ತದಪಿ ನಿರ್ವಕ್ತಿ ಪ್ರಮದಾಕರತ್ವಾದಿತಿ-ಪ್ರಕೃಷ್ಟೋ ಮದೋಯಸ್ಯಾಃ ಸಕಾ ಶಾತ್ ಪ್ರಮದಾ''

ಬೃಹದ್ವ್ರತಂ ನೈಷ್ಠಿಕ ಬ್ರಹ್ಮಚಾರಿ. ವಿಷ್ಣುಪಂ ಸರ್ವೇಷಾಣಾಶ್ರಯಂ ಬ್ರಹ್ಮ ನಾರಾಯಣಾಖ್ಯಂ ಪರಂಬ್ರಹ್ಮಾಪರೋಕ್ಷನ್ ಪ್ರಾಪ್ತಕಾಮೋ ಅಸಾ ವಾಧಿಕಾರೀ ಬ್ರದ್ವ್ರತೋ ಯಾವಜ್ಜೀವಂ ಬ್ರಹ್ಮಚರ್ಯ ವ್ರತ ಸಂಕರಿಷ್ಯ ಇತಿ, (ಭಾವಪ್ರದೀಪ-ಏಕಾದಶಸ್ಕಂಧ ಭಾಗವತ್'' ಬ್ರಹದ್ವ್ರತಿಮಹನ್ ಶ್ರೇಷ್ಟವಾದ ಅನೇಕ ವ್ರತ ಉಳ್ಳವ ಸತ್ಯಧರ್ಮವುಳ್ಳವ ಮತ್ತು ಶ್ರೀ ಮದ್ಭಾ ಗವತ ಸಾರೋದ್ಧಾರ ಧರ್ಮೋಪದೇಶ ಪ್ರಕರಣದಲ್ಲಿ ಶ್ರೀ ವಿಷ್ಣು ತೀರ್ಥ ರಾದ ಆಡವಿಸ್ವಾಮಿಗಳು ಅಪ್ಪಣೆ ಕೊಡಿಸಿರುವರೇನಂದರೆ.

''ನನು ಸ್ಮರಣಂ ಕೀರ್ತನಂ ಕೇಲಿಃ ಪ್ರೇಕ್ಷಣಂ ಗುಹ್ಯ ಭಾಷಣಂ॥ ಸಂಕಲ್ಪೋಧ್ಯವ ಸಾಯಶ್ಚ ಕ್ರೀಯಾ ನಿರ್ವೃತ್ತಿರೇವಚ। ಏತ ವ್ಮೈಥುನ

ಮುಷ್ಟಾಂಗಂ ಪ್ರವದಂತಿ ಮನಿಷಿಣ, ಇತ್ಯುದಿತಸ್ಯಾ ಅಷ್ಟವಿಧಸ್ಯ ಮೈಥುನಸ್ಯ ಕರ್ಮಣಾ ಮನಸಾವಾಚಾ ಸರ್ವಾವಸ್ಥಾಸು ಸರ್ವದಾ ಸರ್ವತ್ರ ಮೈಥುನತ್ಯಾಗಂ ಬ್ರಹ್ಮಚರ್ಯಂ ಪ್ರಚಕ್ಷತ ಇತಿ'' ಸ್ತ್ರೀ ವಿಷಯ ಮನಸ್ಸಿನಲ್ಲಿ ಪದೆಪದೆ ನೆನೆಸೋಣ, ಅವಳ ಗುಣಗಾನ ಮಾಡೋಣ, ಆವಳೊಡನೆ ಆಟ ಬ್ಯಾಟ ಸುನೋಟ ಏಕಾಂತದಲ್ಲಿ ಸನ್ನೆ ಮಾತಾಡೋಣ ಸ್ತ್ರೀಯರ ಕೂಟಸಂಕಲ್ಪ, ಅದರ ಧೃಡ ನಿಶ್ಚಯು, ಸಂಭೋಗಗೀಗೆ ಎಂಟು ವಿಧ ಕೂಟಲಕ್ಷಣಗಳಿಂದು ಜ್ಞಾನಿಗಳಿಂದ ಹೇಳಿದೆ. ಇಂಥ ಎಂಟು ವಿಧ ಮೈಥುನ ತ್ಯಾಗವನ್ನು ಸರ್ವಾವಸ್ಥೆಗಳಲ್ಲಿ ಕಾಯಾವಾಚಾ ಮನಸ್ಸಿನಿಂದ ಸಹ ಬಿಡುವದು ಮೈಥುನಗಳಿಂದ ಶೂನ್ಯವೆಂದಲ್ಲ. ಆದರೆ ಬ್ರಹ್ಮಚರ್ಯ ಮುಖ್ಯ ಸಮಂಜಸಾರ್ಥ ವೇನೆಂದರೆ. '' ಸರ್ವೇಂದ್ರಿಯಾಣಾಂ ತದ್ವೃತ್ತೀನಾಂ ಕಾಯಸ್ಯ ತದ್ವ್ಯಾಪಾರಾಣಾಂ ಚೇತಿ ಸರ್ವೇಷಾಂ ಬ್ರಹ್ಮಣಿ ಚರಣಮೇವ ಬ್ರಹ್ಮಚರ್ಯಂ ಇತಿ ಸ್ವೀಕಾರಾತ್'' ಸರ್ವೇಂದ್ರಿಯ ವ್ಯಾಪಾರಗಳನ್ನು ಪರಮಾತ್ಮನ ಪ್ರೀತ್ಯರ್ಥವಾಗಿಯೇ ಆಚರಿಸುವದು ಬ್ರಹ್ಮ ವಸ್ತುವಿನಲ್ಲೇ ಸಂತತರತಿಯುಳ್ಳವನಾಗಿರುವದು.

ಇಲ್ಲಿ ವಿಚಾರಾಂಶವೇನಂದರೆ ಜಿತೇಂದ್ರಿಯನಿಗೇವೆ ಬ್ರಹ್ಮನಲ್ಲಿ ರತಿ ಪುಟ್ಟುದು ನಿಜ. ವಿಷಯಾಸಕ್ತರಾದ ಅಜಿತೇಂದ್ರಿಯರ ಸಕಲ ಕರ್ಮಗಳು ಸಾವಿರಾರು ತೂತುಬಿದ್ದ ಅಥವಾ ಹಸಿಯ ಮಣ್ಣು ಕೊಡದಲ್ಲಿಯ ನೀರು ಸೋರಿದಂತೆ ಇಂದ್ರಿಯಜಿಗುಳಿವ್ಯರ್ಥವಾಗುತ್ತದೆ. ಬ್ರಹ್ಮನಪ್ರಾಪ್ತಿಗೆ ಜಿತೇಂದ್ರಿಯವೇ ಮನೋ ಜಯಕ್ಕೆ ಮುಖ್ಯ.

''ಬ್ರಹ್ಮಣಿ ಹರೌ ಚರಣ ಮೇವ ಬ್ರಹ್ಮಚರ್ಯನಾಮ। ಚರಣಂಚ ತತ್ ಸೇವಯಾ ಚಿಂತನಾದಿ ರೂಪಯಾ ಸಂಪಾದ್ಯಂ ತದ್ವಿಷಯತ್ವಂ। ತತ್ರ ಕಾರಣಾನಿ ಷಟ್ ಮನ ಆದೀನಿ। ಸಾಚ ಷಡಂಗ ಸೇವಾ ಭಕ್ತಿ ಸಾಧನ ಭೂತೇತಿಗೀಯತೇ॥ ಇನ್ನು ಸರ್ವೇಂದ್ರಿಯ ವ್ಯಾಪಾರಗಳು ಬ್ರಹ್ಮನಲ್ಲಿರತವಾಗಿರುವದೇ ಬ್ರಹ್ಮಚರ್ಯವೆಂದು ಕರೆಸುವದು. ''ಚರಣಂಚ'' ಆಪರಬ್ರಹ್ಮನ

ಸೇವಾದಿ ಚಿಂತನರೂಪ ಪ್ರತಿಯೊಂದು ಇಂದ್ರಿಯಗಳಿಂದ ಆ ಪರಬ್ರಹ್ಮನ ವಿಷಯವನ್ನೇ ಸಂಪಾದಿತವಾದಂಥಾದ್ದು ಇವರಲ್ಲಿ ಮನಾದಿ ಷಡಂಗಳು ಮುಖ್ಯವಾದುವು

"ತತ್ಸೇಮನೋ ದರ್ಶನೇದೃಗಪಿಸ್ಪೃತೌಚ ವಾಕ್ಕರ್ಮಣೀ ಹ್ಯಪಿಕರೌ ಶ್ರವಣಂ ಕಥಾಯಾಂ। ಸಂಸೇವಯಾ ತ್ವಯಿ ವಿನೇತಿ ಷಡಂಗಯಾ ಕಿಂ ಭಕ್ತಿಂಜನ ಪರಮಹಂಸ ಗತೌಲಭೇತ್॥ ಭಾಗವತಸಾರೋದ್ಧಾರ ಶ್ಲೋಕ ೨೫೮ ॥ ಸದಾ ಪರಮಾತ್ಮನನ್ನೇ ವಿಷಯೀಕರಿಸುವ ಮನಸ್ಸು ಭಗವದ್ದರ್ಶನದಲ್ಲಿ ಉತ್ಸುಕವಾದ ಕಣ್ಣುಗಳು, ಹರಿಸ್ತುತಿಯಲ್ಲಿಯೇ ಪ್ರವರ್ತವಾದ ಮಾತುಗಳು, ಹರಿಪೂಜಾ ಮತ್ತು ಪೂಜಾ ಸಾಧನಗಳಾದ ಹರಿಮಂದಿರದ ಮಾರ್ಜನಾದಿಗಳಲ್ಲಿ ನಿರತವಾದ ಕೈಗಳು, ಮತ್ತು ದೇಹವು (ಉಪಲಕ್ಷಣದಿಂದ, ಪಾಣಿ ಪಾದಾದಿ ಕರ್ಮೇಂದ್ರಿಯ ಸಹಿತವಾದ ದೇಹವು) ಪರಮಾತ್ಮನ ದಿವ್ಯವಾದಚರಿತ್ರೆಗಳೇ ಆಲಿಸುವಕಿವಿಗಳು, ಇವುಗಳಿಂದ ಷಡಂಗರೂಪ ಸೇವೆಯನ್ನು ಸಲ್ಲಿಸುವ ವಿನಾ, ಮುಮುಕ್ಷುವು ಧೃಡಭಕ್ತಿಯನ್ನೂ ಭಾಗವತ ಜನರ ಆಶ್ರಯವನ್ನು ಎಂದಿಗೂ ಹೊಂದಲಾರನು.

ಇಲ್ಲಿ ಕರ್ಮೇಂದ್ರಿಯಗಳಾದ ಗುಹ್ಯ ಉಪಸ್ಥ ಇವುಗಳ ವ್ಯಾಪಾರ ಪರಮಾತ್ಮನಲ್ಲಿ ರತಿ ಹೊಂದಿಸುವ ಬಗೆ ಹೇಗೆಂದು ಮುಂದ ಜನಶಂಕಾ, ಮಿತ್ ಭುಕ್, ಮಿತಾಹಾರಪಾನಾದಿಗಳಿಂದ ಆರುಜಲ, ಮೂರುಮಲ, ಮಟ್ಟಿಗೆ ವಿಸರ್ಜನದಿಂದ-ದೇಹಕ್ಕೆ ಸ್ವಾಸ್ಥ್ಯವು ಮಿತಭೋಜನದಿಂದಲೇ ಇಂದ್ರಿಯಗಳಿಗೆ ಹೆಚ್ಚಿನ ಪಾಟವವಿಲ್ಲದೆ ಇಂದ್ರಿಯದಮನ ಶಕ್ತಿಯು ಉಂಟಾಗಿ ಮನಸ್ಸು ಸ್ವಾಸ್ಥ್ಯದಿಂದ ಪರಮಾತ್ಮನಲ್ಲಿ ರತಿ ಪುಟ್ಟಲಿಕ್ಕೆ ಮುಖ್ಯವಾಮದು ಕಾರಣ ಸರ್ವೇಂದ್ರಿಯಗಳೂ ಪರಬ್ರಹ್ಮನಚಿಂತನೆಸೇವಾದಲ್ಲಿಯೇ ನಿರತವಾಗಿರುವದೆಂದು ದಾಸಾರ್ಯರ ಉಕ್ತಿ ಸಹ ಇದೆ.

ಇಂದಿರೇಶ ವಿಠಲ-ಶೇಷನಾಮಾಖ್ಯ ಕವಿಗಳು ದಾಸರು. ತಮ್ಮ ಕನ್ನಡ ಭಗವದ್ಗಿತೆಯಲ್ಲಿ ಹೇಳುವದೇನಂದರೆ. ಗೀತಾ ೮ ನೇ ಅಧ್ಯಾಯ ಶ್ಲೋಕ ೧೧-೧೨ ಪದ್ಯಗಳಲ್ಲಿ ಭಾವಿಸಿಪಟ್ಟದಿ.

ವೇದವಿದರಾವುದನೆ ಅಕ್ಷರ ।
ನಾದಿ ಯೆಂದ್ಹೇಳುವರೋ ಕೇಳ್ಕಿ ।
ಹೋದರಾಗವನುಳ್ಳ ಯತಿಗಳು ಹೊಗುವರಾವುದನು ॥
ಮೋದಿನಿ ಯೊಳಾವುದನಪೇಕ್ಷಿಸಿ ।
ಸಾಧಿಪರೊ ವರಬ್ರಹ್ಮಚರ್ಯವ ।
ಬೋಧಿಸುವೆ ನಿನಗದನು ಕೇಳ್ ಸಂಕ್ಷೇಪದಿಂದೆಂದ॥ ೧೧

ಅಷ್ಟಪದೀಗದ್ಯ

ಎಲ್ಲ ಇಂದ್ರಿಯಗಳನೆ ನಿಗ್ರಹಿಸಿ ಮನವ ಸಿರಿ ।
ವಲ್ಲಭನ ಧ್ಯಾನದಲಿ ನೆಲಿಗೊಳಸಿ ಚಲಿಸಿಧ್ಯಾ ।
ಗೆಲ್ಲು ತನ್ನಯ ಪ್ರಾಣವಾಯುವನ್ನು ಮೂರ್ಧಿಯಲಿ
ನಿಲ್ಲಿಸುತ ಹರುಷದಿಂದ ॥

ಸಲ್ಲಲಿತ ಯೋಗಧಾರಣದಿ ಸಂಸ್ಥಿತನಾಗಿ ।
ಎಲ್ಲವೇದಕೆ ಮೂಲವಾದ ಓಂ ಎಂಬ ಈ ।
ಬಲ್ಲಿದ ಪರಬ್ರಹ್ಮನಾಚಕೊಂವಕ್ಷರವ ಮೆಲ್ಲನೇ ಉಚ್ಚರಿಸುತ ॥ ೧ ॥

ಮತ್ತು ಗೀತಾ ೩ನೇ ಅಧ್ಯಾಯಪದ್ಯ ೪೦-೪೧ ರಲ್ಲಿಯೂ ಸಹ, ಪದ ಅಟ್ಟತಾಳದಿ, ಇಂದ್ರಿಯಗಳು ಮನೋ ಬುದ್ಧಿ ಈಕಾಮಕೆ ಮಂದಿರವೆಂದ್ಹೇಳುತಿಹರೊ ॥ ಮುಂದೆ ದೇಹಿಗಳ ನಾಚ್ಛಾದಿಪುದಿದ । ರಿಂದ ಮೋಹವನೈದುತಿಹರೋ ॥ ೪೦ ॥ ಅದು ಕಾರಣದಿ ನೀನು ಇಂದ್ರಿಯಗಳನ್ನೆಲ್ಲ ॥ ಮೊದಲೇ ನಿಗ್ರಹಿಸೀ ಪಾಪಿಯನು ॥ ಸದಮಲಜ್ಞಾನನಾಶಕನನ್ನು । ಸದಾ ಗೆಲ್ಲು ಕಾಮ ಕ್ರೋಧನನು ॥ ೪೧ ॥

ಇನ್ನು ಪಾಶ್ಚಾತ್ಯರಾದರೂ ಬ್ರಹ್ಮಚರ್ಯಶಬ್ದಾರ್ಥಕ್ಕೆ Religious Self—Restraint(ರಿಲಿಜಸ್ ಸೆಲ್ಫ್-ರೆಸ್ಟ್ರೆಂಟ್)(ಆತ್ಮಸಂಯಮನ)

Chastity (ಚಾಸ್ಟಿಟಿ) ಶುದ್ಧಾಂತಃಕರಣ, ಹೀಗೆ ಕಿಟ್ಟೆಲ್ರು ತಮ್ಮ ಕೋಶ ದಲ್ಲಿ ಹೇಳಿದ್ದಾರೆ. ಇಂದ್ರಿಯ ನಿಗ್ರಹಿಸೆ ಬ್ರಹ್ಮಚರ್ಯ ವೇನಕ್ಕೆ.

ಅನೇಕ ಗ್ರಂಥವಲ್ಲಿ ಈಗಿನ ಅನೇಕ ಜನರು ಹಿಂದಿನ ತತ್ವ ವಿಚಾರಕ್ಕೆ ಅನುಸರಿಸಿಯೇ ಪುಸ್ತಕಗಳಲ್ಲಿ ಬರೆದಿರುವರು. ಆದರೆ ಆಚರಣೆಯುಂತೋ ' ಗಾಂಧೀದೋಹನ ವಿಚಾರದಲ್ಲಿಯೂ, ''ಶ್ರೀ ಕಿಶೋರಲಾಲ ಮಶರೂವಾಲಾ, ಇವರು ಸನಾತನ ತತ್ವಕ್ಕೆ ಬಾಧೆಬಾರದಂತೆ ಬರೆದಿರುವರು. ಆಧುನಿಕ ವಿಚಾರ ಚನ್ನಾಗಿ ಮನಿಪರಿವುದು. ಜಾತಿ ಭೇದವಾದರೆ ನೀತಿಗೆಂದಿಗೂ ಭೇದವಿಲ್ಲ. ನೀತಿಯು ಸಕಲ ಜಾತಿಯ ಉತ್ಪತ್ಯ ಸ್ಥಿತಿ ತವರೂರು.

೧. ಅವರು ಹೇಳಿದ್ದೇನೆಂದರೆ, ಯಾವ ಪ್ರಕಾರ ಅಹಿಂಸೆಯು ಹೊರತು ಸತ್ಯದ ಸಾಕ್ಷಾತ್ಕಾರವಾಗುವ ಸಂಭವವಿಲ್ಲವೋ ಅದೇ ಪ್ರಕಾರ ಬ್ರಹ್ಮಚರ್ಯದ ಹೊರತು ಸತ್ಯದ ಹಾಗೂ ಅಹಿಂಸೆಯ ಪೂರ್ಣ ಆಚರಣವು ಅಶಕ್ಯ.

೨. ಬ್ರಹ್ಮಚರ್ಯವೆಂದರೆ ಬ್ರಹ್ಮನ ಅಥವಾ ಪರಮಾತ್ಮನ ಕಡೆಗೆ ಸಾಗುವದು. ಅರ್ಥಾತ್ ಪರಮಾತ್ಮನನ್ನು ಪಡೆಯುವ ಸಾಧನ ಮಾರ್ಗದಲ್ಲಿ ಇಂದ್ರಿಯ ಮನಗಳನ್ನು ತೊಡಗಿಸುವದು.

೩. ರಾಗಾದಿ ವಿಕಾರಗಳ ಹೊರತು ಅ ಬ್ರಹ್ಮಚರ್ಯವೆಂದರೆ ಇಂದ್ರಿಯ ಪರಾಯಣತೆಯು ಸಂಭವಿಸಲಾರದು ಮತ್ತು ವಿಕಾರೀ ಮನುಷ್ಯನು ಸತ್ಯದ ಹಾಗು ಅಹಿಂಸೆಯ ಪೂರ್ಣಪಾಲನೆಯನ್ನು ಮಾಡಲಾರನು. ಅಧ್ಯಾತ್ಮಿಕ ಪೂರ್ಣತೆಯನ್ನು ಪಡೆಯಲಾರನು

೪. ಆದುದರಿಂದ ಬ್ರಹ್ಮಚರ್ಯವೆಂದರೆ, ಕೇವಲ ವೀರ್ಯ ರಕ್ಷಣೆ ಕಾವ ಜಯ ಇಷ್ಟೇ ಅಲ್ಲ. ಆದರೆ ಬ್ರಹ್ಮಚರ್ಯ ಪಾಲನೆಯಲ್ಲಿ ಸರ್ವೇಂದ್ರಿಯಗಳ ಸಂಯಮವು ಆವಶ್ಯಕ

೫. ಸತ್ಯದ ಸ್ಥೂಲ ಅರ್ಥವು ಸತ್ಯವಾಣಿಯೆಂದೂ, ಅಹಿಂಸೆಯ ಸ್ಥೂಲ ಅರ್ಥವು ಹಿಂಸೆಕೊಡದಿರುವದೆಂದೂ, ಜನರು ತಿಳಿದಿರುವಂತೆ, ಬ್ರಹ್ಮಚರ್ಯವೆಂದರೆ ಕಾಮಜಯವೆಂದು ಮಾತ್ರ ಜನರು ತಿಳಿದಿರುತ್ತಾರೆ. ಕಾಮಜಯವೇ ಕಠಿಣತಮವಾದ ಇಂದ್ರಿಯಜಯವೆಂದು ಮನುಷ್ಯನಿಗೆ ಎನಿಸುತ್ತಿರುವದೇ ಇದಕ್ಕೆ ಕಾರಣವು.

೬. ವಾಸ್ತವಿಕವಾಗಿ ಅನ್ಯ ಇಂದ್ರಿಯಗಳ ಸ್ವಲ್ಪ ಭೋಗವಾದರೂ ಜೀವನವನ್ನು ಸುಖರೂಪವಾಗಿ ನಡೆಯಿಸಲು ಆವಶ್ಯಕವಿರುವದು. ಆದರೆ ಬ್ರಹ್ಮಚರ್ಯದಿಂದ ಜೀವನವು ಅಶಕ್ಯವಾಗುವದಿಲ್ಲ. ಇಷ್ಟೇ ಅಲ್ಲ ಅದು ಚನ್ನಾಗಿಯೂ ತೇಜಸ್ವಿಯಾಗಿಯೂ ಸಾಗುವದು

೭ ಜೀವನ ಸ್ಫೂರ್ತಿ ಮತ್ತು ಪರಮಾನಂದದ ಪ್ರಾಪ್ತಿ ಇವುಗಳನ್ನು ಪಡಕೊಳ್ಳಲು, ಆಜೀವ ನೈಷ್ಠಿಕ ಬ್ರಹ್ಮಚಾರಿಗೆ ಯಾವ ಅಡೆ ಅನುಕೂಲತೆಗಳಿರುವವೋ ಅವು ಆ ಬ್ರಹ್ಮಚಾರಿಗೆ ಇರುವದಿಲ್ಲ. ಇಂಥ ಸ್ತ್ರೀ ಪುರುಷರ ಜೀವನವು, ಅವಿವಾಹಿತರಿಗೆ ಹಾಗೂ ವಿವಾಹಿತರೆಗೆ ಕೈ ದೀಪದಂತೆಯೇ ಇರುತ್ತದ. ಹೀಗೆ ಅನೇಕರು ತಾವು ಬರೆದ ಗ್ರಂಥಗಳಲ್ಲಿ ಹಿಂದಿನವರ ತತ್ವಕ್ಕೆ ಬಾಧೆ ಇಲ್ಲದಂತ, ವಿಶದೀಕರಿಸುವರು ಇವೇ ಬ್ರಹ್ಮಚರ್ಯದ ಮುಖ್ಯ ಲಕ್ಷಣಗಳು.

೩೨ ನೈಷ್ಠಿಕ ಬ್ರಹ್ಮಚರ್ಯ, ಉಪಕುರ್ವಾಣ ಬ್ರಹ್ಮಚರ್ಯ ಸಮಾನವೆ ?

ಪ್ರತಿಯೊಬ್ಬನು ನೈಷ್ಠಿಕ ಬ್ರಹ್ಮಚಾರಿಯಾಗಿ ಜಿತೇಂದ್ರಿಯನಾದರೆ, ಸೃಷ್ಟಿ ಹೇಗೆ ? ಪೂರ್ವದಲ್ಲಿ ಪ್ರಜಾಸೃಷ್ಟಿಯು ಕೇವಲ ಮಿಥುನಿ ಭಾವದಿಂದ್ದಿಲ್ಲ. ದೇವರು, ತನ್ನ ಯಿಚ್ಛಾಮಾತ್ರದಿಂದ ನಾನಾ ತರದ ಸೃಷ್ಟಿಮಾಡಿ, ದೇವತೆಗಳಿಗೂ ಅಂಥ ಪ್ರಜಾಸೃಷ್ಟಿ ಶಕ್ತಿಕೊಟ್ಟನು. ಕೆಲವರು ಮನಸ್ಸಿನಿಂದ ಕೆಲವರು ಭ್ರುಕುಟಿಯಿಂದ, ನೇತ್ರ, ಕರ್ಣ, ಸ್ತನ ಹೃದಯ ಊರು ಜಾನುಜಂಘೆ

ಪಾದಾದಿ ಅವಯುವಗಳಿಂದಕೆಲಬರನ್ನುಪುಟ್ಟಿಸಿರುವರು ಮತ್ತು ಸ್ವಾಯಂಭು ಮನು ಶತ ರೂಪಾದೇವಿ ಇವರ ದ್ವಾರವೇ ಮಿಥುನೀ ಸೃಷ್ಟಿ ಪ್ರಾರಂಭವಾಯಿತು. ವೇದ ಪುರಾಣಾದಿಗಳಲ್ಲಿ ಪ್ರಸಿದ್ಧ. ಇದಕ್ಕೆ ಮೂಲಾಧಾರವೇನು? ಇದರ ಫಲವೇನೆಂಬುವ ನಿಜ ತತ್ವ ವಿಚಾರಿಸಿದರೆ.

ಷಟ್ ಪ್ರಶ್ನೋಪನಿಷತ್ತು ಪಶ್ನ (೧) ಮಂತ್ರ ೮ ೯.೧೦ ರಲ್ಲಿ ವೇದ ಪುರಷನ ಅಪ್ಪಣೆ.

ಅಥೋತ್ತರೇಣ, ತಪಸಾ, ಬ್ರಹ್ಮಚರ್ಯೇಣ, ಶ್ರದ್ಧಯಾ, ವಿದ್ಯಯಾ ಆತ್ಮನ ಮನ್ವಿಷ್ಯಾದಿತ್ಯಮಭಿಜಯಂತೇ। ಏತದ್ವೈ ಪ್ರಾಣಾನಾಮಾಯತನ ಮೇತದ್ರಮೃತಮಭಯ ಮೇತತ್ಪರಾಯಣ ಮೇತಸ್ಮಾನ್ನಪುನರಾವರ್ತತೇ ಇತ್ಯೇಷ ನಿರೋಧಃ ॥

ಅಥ= ಹಿಂದೆ ಹೇಳಿದ ಕಾಮ್ಯಕರ್ಮವ್ಯತಿರಿಕ್ತರಾದ ಮೋಕ್ಷವನ್ನು ಅಪೇಕ್ಷಿಸುವರು, ತಪಸಾ =ಕೃಚ್ಛ್ರ ಚಾಂದ್ರಾಯಣಾದಿ ತಪಸ್ಸೇನು, ಬ್ರಹ್ಮಚರ್ಯೇಣ =ಸರ್ವೇಂದ್ರಿಯ ನಿಯಮನ ರೂಪವ್ರತವೇನು, ಶ್ರದ್ಧಯಾ= ಆಸ್ತಿಕ್ಯ ಬುದ್ಧಿಯೇನು, ವಿದ್ಯಯಾ= ಶ್ರವಣಮನನಾದಿರೂಪ ಬ್ರಹ್ಮವಿಚಾರವೇನು, ಇವುಗಳಿಂದಲೂ, ಹಿಂದೆ ಹೇಳಿದ ಯಾಗ ಅನ್ನದಾನ ಮುಂತಾದ ಸತ್ಕರ್ಮಗಳಿಂದಲೂ, ಅಂದರೆ (ಈ ಯಾಗದಾನಾದಿಗಳು ಬ್ರಹ್ಮಾರ್ಪಣವೆಂದು, ಪರಮಾತ್ಮನಲ್ಲಿ ಸಮರ್ಪಣಮಾಡಿ, ಜ್ಞಾನ ಭಕ್ತಿ ಹರಿಪ್ರೀತಿ ಎಂಬುವ ಫಲಹೊರತು, ಮಿಕ್ಕ ಭಾರ್ಯಪುತ್ರ ಸಂಪತ್ತು ಮುಂತಾದ ಕಾಮ್ಯಕರ್ಮಗಳನ್ನು ಫಲರಹಿತರಾಗಿಮಾಡಿ) ಆತ್ಮಾನ ಮನ್ವಿಷ್ಯ (ವಿದಿತ್ವಾಚ) ವಿಚಾರಮಾಡಿ ಪರಮಾತ್ಮನನ್ನು ತಿಳಿದುಕೊಂಡು,ಉತ್ತರೇಣಗತಾಃ =ದೇವಯಾನಯೆಂದು ಹೇಳಲ್ಪಟ್ಟ ಉತ್ತರಾಯಣಮಾರ್ಗದಿಂದ ಯಾವ ಬ್ರಹ್ಮಜ್ಞಾನಿಗಳು ಹೋಗುತಾರೋ ಅವರುಗಳು, ಆದಿತ್ಯಮಭಿಜಯಂತೇ =ಪ್ರಾಣದೇವರಿಂದ ಅಧಿಷ್ಠಿತವಾದ ಆದಿತ್ಯ ಲೋಕವನ್ನು ಹೊಂದುತ್ತಾರೆ. (ತತ್ಪ

ಪರಮ್ಮಂ ಬ್ರಹ್ಮ)= ಆದಿತ್ಯಾಂತರ್ಗತ ಮುಖ್ಯ ಪ್ರಾಣ ಪ್ರಸಾದದಿಂದ ಪರಬ್ರಹ್ಮನನ್ನು ಹೊಂದುತ್ತಾರೆ. ಏತದ್ವೈ= ದೇವಯಾನದಿಂದ ಪ್ರಾಪ್ತವಾದ ಪರಬ್ರಹ್ಮವೇ ಪ್ರಾಣಾನಾಂ= ದಶದಿಕ್ಪಾಲಕರಾದ ಇಂದ್ರಾದಿ ದೇವತೆಗಳಿಗೆ, ಆಯತನಂ =ಆಧಾರವು ಏತದಮೃತಂ =ಇಲ್ಲಿಸೇರಿದವರಿಗೆಮರಣವಿಲ್ಲ, ಅಭಯಂ =ಮತ್ತು ಯಾವವಿಧ ಭಯಗಳೂ ಇಲ್ಲ, ಏತತ್ಪರಾಯಣಂ =ಈ ಪರಬ್ರಹ್ಮವೇ ಶ್ರೇಷ್ಠವಾದ ಮುಕ್ತರಿಗೂ ಮುಖ್ಯಾಧಾರವು, ಏತಸ್ಮಾನ್ನ ಪುನರಾವರ್ತತೇ ಇತಿ =ಆದಿತ್ಯನ ದ್ವಾರಾ ಈ ಬ್ರಹ್ಮನನ್ನು ಹೊಂದಿದವರು, ಸಂಸಾರ ದುಃಖವನ್ನು ಮತ್ತೂ ಎಂದೆಂದಿಗೂ ಅನುಭವಿಸುವದಿಲ್ಲ ವಾದ್ದರಿಂದಲೇ, ಏಷನಿರೋಧಃ= ಈ ಆದಿತ್ಯನು ಜ್ಞಾನಿಗಳನ್ನುಮಾತ್ರ ಮೋಕ್ಷಕ್ಕೆ ಕರೆದೊಯ್ದು, ಅಜ್ಞಾನಿಗಳಿಗಳನ್ನು ಮೋಕ್ಷಕ್ಕೆ ಕರದೊಯ್ಯದೇ, ಅಜ್ಞಾನಿಗಳಿಗೆ ಮೋಕ್ಷ ತಡೆಮಾಡುವದರಿಂದ,ನಿರೋಧ= ಎಂದರೆ ತಡೆಯುವನೆಂದು ತಿಳಿಸಿಕೊಳ್ಳಲ್ಪಡುತ್ತಾನೆ. ಈ ಪ್ರಮೇಯವೂ ಋಗ್ವೇದದಲ್ಲಿಯೂ ಹೇಳಲ್ಪಟ್ಟದೆಂದು ಅಥರ್ವವೇದ ಪುರುಷನು ಹೇಳುತ್ತಾನೆ

ಈ ಮಂತ್ರದ ಮುಖ್ಯಾಭಿಪ್ರಾಯವೇನಂದರೆ ಯಾವನು ಫಲರಹಿತನಾಗಿ ನಿಷ್ಕಾಮ್ಯಕರ್ಮಗಳನ್ನುಮಾಡುತ್ತ,ತಪಸಾ= ಅನೇಕವ್ರತಾದಿಗಳಿಂದ ಸರ್ವೇಂದ್ರಿಯ ದಮನರೂಪ ಬ್ರಹ್ಮಚರ್ಯ, ಬ್ರಹ್ಮನ ವಿಷಯ ಶ್ರವಣಮನನಾದಿಗಳನ್ನು ಮಾಡಿದವರು ಉತ್ತರೇಣ= ಉತ್ತರಾಯಣ ಮಾರ್ಗ ದೇವಯಾನದಿಂದ ಆದಿತ್ಯಾಂತಸ್ಥ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಬ್ರಹ್ಮನನ್ನು ಹೃತ್ಕಮಲದಲ್ಲಿ ನೋಡಿ ಮೋಕ್ಷವನ್ನು ಹೊಂದುವರು.

ದೇವಯಾನ, ಪಿತೃಯಾನ ಇಲ್ಲಿ ಉತ್ತರಾಯಣ ದಕ್ಷಣಾಯನ ಮಾರ್ಗವೇನೆಂಬುದು ಮುಂದಿನ ಮಂತ್ರದಲ್ಲಿ ಹೇಳುತ್ತಾರೆ ಷಟ್ಪ್ರಶ್ನೆ (೧) ಮಂತ್ರ ೯.

" ಮಾಸೋ ವೈ ಪ್ರಜಾಪತಿಃ। ತಸ್ಯ ಕೃಷ್ಣ ಪಕ್ಷ ಏವರಯಿಃ। ಶುಕ್ಲಃ ಪ್ರಾಣಃ। ತಸ್ಮಾ ದೇತೇ ಋಷಯಃ ಶುಕ್ಲ ಇಷ್ಟಿಂ ಕುರ್ವಂತಿ। ಇತರ ಇತರ

ಸ್ಮಿನ್ ಅಹೋ ರಾತ್ರೇವೈ ಪ್ರಜಾಪತಿಃ ತಸ್ಯ ಅಹರೇವ ಪ್ರಾಣೋ ರಾತ್ರಿಃ ರೇವರಯಿಃ। ಪ್ರಾಣಂ ವಾ ಏತೇ ಪ್ರಸ್ಕಂದಂತಿ ಯೇ ದಿವಾರತ್ಯಾ ಸಂಯುಜ್ಯಂತೇ। ಬ್ರಹ್ಮಚರ್ಯಮೇವ, ತದ್ಯದ್ರಾತ್ರೌ ರತ್ಯಾಸಂಯುಜ್ಯಂತೆ ॥೯॥ ಉಳಿದ ೮ನೇ ಅರ್ಥವ ಂತ್ರದಲ್ಲಿ ಮಾಸಗಳು ಉತ್ತರಾಯಣ ದಕ್ಷಿಣಾಯನ ಕ್ರಮವನ್ನು ವಿಶದವಾಗಿ ಹೇಳಿದ್ದಾರೆ.

ಈ ಒಂಭತ್ತನೇ ಮಂತ್ರದಲ್ಲಿ ಪ್ರಜಾಪತಿ ನಾಮಕ ಪರಮಾತ್ಮನು ಮಾಸಗಳಲ್ಲಿಯೂ, ಪಕ್ಷಗಳಲ್ಲಿಯೂ ಇದ್ದು ಪ್ರಜಾ ಸೃಷ್ಟಿಮಾಡುತ್ತಾನೆಂದು ಹೇಳುತ್ತಾರೆ.

ಮಾಸಇತಿ- ಪ್ರಜಾಪತಿನಾರಾಯಣನು, ಮಾಸೋವೈ =ಮಾಸಾತ್ಮಕವಾದ ಕಾಲದಲ್ಲಿ ಇದ್ದುಕೊಂಡು, ಅಂದರೆ ಮಾಸಾಭಿಮಾನಿ ದೇವತಾಂತರ್ಗತನಾಗಿದ್ದು, ಪ್ರಜೆಗಳನ್ನು ಸೃಷ್ಟಿಮಾಡುತ್ತಾನೆ. ತಸ್ಯಕೃಷ್ಣ ಪಕ್ಷ ಏವರಯಿಃ= ಮಾಸದ ಅರ್ಧಭಾಗವಾದ ಕೃಷ್ಣ ಪಕ್ಷಕ್ಕೆ ಅಭಿಮಾನಿಯಾದ ದೇವತೆಯನ್ನು ಅಧಿಷ್ಠಾನಮಾಡಿಕೊಂಡು ರಯಿಃ =ಭಾರತೀದೇವೇರು ಇರುತ್ತಾರೆ, ಶುಕ್ಲ ಪ್ರಾಣಃ = ಪ್ರಾಣದೇವರು ಶುಕ್ಲ ಪಕ್ಷಾಭಿಮಾನಿಯನ್ನು ಅಧಿಷ್ಠಾನಮಾಡಿಕೊಂಡು ಇರುತ್ತಾರೆ ಈ ದಂಪತಿಗಳು ಕೃಷ್ಣ ಶುಕ್ಲ ಎಂಬುವ ಎರಡು ಪಕ್ಷಗಳಲ್ಲೂ ಇದ್ದು ಪ್ರಜಾಪತಿ (ನಾರಾಯಣನು)ಮಾಡುವ ಸೃಷ್ಟಿಗೆ ಕಾರಣರಾಗುತ್ತಾರೆಂದು ತಾತ್ಪರ್ಯವು ತಸ್ಮಾತ್= ಆದಿತ್ಯಮತ್ತು ಉತ್ತರಾಯಣಕ್ಕೆ ಅಧಿಷ್ಠಿತವಾದ ವಾಯುದೇವರು ಶುಕ್ಲ ಪಕ್ಷದಲ್ಲಿ ಇರುವದರಿಂದಲೇ "ಏತೇ ಋಷಯಃ, ಮೋಕ್ಷಾಪೇಕ್ಷಿಗಳಾದಜ್ಞಾನಿಗಳು, "ಶುಕ್ಲೇಇಷ್ಟಿಂ ಕುರ್ವಂತಿ= ಮುಖ್ಯ ಪ್ರಾಣ ಪೂಜಾತ್ಮಕವಾದ ನಿಷ್ಕಾಮ ಶುದ್ಧ ಕರ್ಮಗಳನ್ನು ಶುಕ್ಲ, ಪಕ್ಷದಲ್ಲಿ ಮಾಡುತ್ತಾರೆ. ಚಂದ್ರ ಮತ್ತು ದಕ್ಷಿಣಾಯನಾಧಿಷ್ಠಾತ್ರೀಯರಾದ ಭಾರತೀ ದೇವರು, ಕೃಷ್ಣ ಪಕ್ಷದಲ್ಲಿ ಇರುತ್ತಾರಾದ್ದರಿಂದ ಇತರೇ,= ಮೋಕ್ಷೇತರವಾದ ಐಹಿಕ ಫಲಾಪೇಕ್ಷಿಗಳು, ಇತರಸ್ಮಿನ್ = ಕೃಷ್ಣ ಪಕ್ಷದಲ್ಲಿ ರಯಿಪೂಜಾತ್ಮಕವಾದ ಕಾಮ್ಯೇಷ್ಟಿಗಳನ್ನು ಮಾಡುತ್ತಾರೆ.

ಪ್ರಜಾಪತಿಯು ಅಹೋರಾತ್ರಿ ಇದ್ದುಕೊಂಡು ಪ್ರಜಾಸೃಷ್ಟಿಮಾಡುವನೆಂಬ ಪ್ರಮೇಯವನ್ನು ಹೇಳುತ್ತದೆ. 'ಅಹೋರಾತ್ರ ಇತಿ, ಪ್ರಜಾಪತಿಃ= ಪರಮಾತ್ಮನು ಅಹೋರಾತ್ರೇ ವೈ= ಹಗಲು ಮತ್ತು ರಾತ್ರಿಯಿಂದ ಕೂದಡಿ ಸಂಪೂರ್ಣದಿನದಲ್ಲಿ ಇದ್ದು ಪ್ರಜಾ ಸೃಷ್ಟಿಮಾಡುತ್ತಾನೆ, ತಸ್ಯ = ಅದರಲ್ಲಿ, ಅಹರೇವ ಪ್ರಾಣಃ = ಬಲಪ್ರದರಾದ ಪ್ರಾಣದೇವರು ಹಗಲಿಗೆ ಅಭಿಮಾನಿಗಳು. ರಾತ್ರಿರೇವರಯಿಃ = ಭಾರತೀದೇವಿಯರು ರಾತ್ರಿಗೆ ಅಭಿಮಾನಿಯಾದವರು. (ದಂಪತೀ ವೈ ಪ್ರಜಾಪತಿಃ! ಪತಿರೇವ ಪ್ರಾಣೋಜಾಯೈೇವ ರಯಿಃ) ಎಂಬುದಾಗಿ ಉಪನಿಷತ್ತಿನಲ್ಲಿ ಅಧ್ಯಾಹಾರಮಾಡಿಕೊಳ್ಳುವದು) ಹೇಗೆ ಅಧ್ಯಾಹಾರ ಮಾಡಿಕೊಳ್ಳದೇ ಇದ್ದರೇ "ಪ್ರಾಣಂವಾ ಏತೇ ಪ್ರಸ್ಕಂದತಿ,, ಎಂಬುವದು ಅಸಂಬದ್ಧವಾಗುತ್ತದೆ. "ದಂಪತೀ ವೈ ಪ್ರಜಾಪತಿಃ,, ಪರಮಾತ್ಮಾದಂಪತಿಗಳಲ್ಲಿ ಅಂದರೆ ಸ್ತ್ರೀ ಪುರುಷರಲ್ಲಿ ಇರುತ್ತಾನೆ. ಆ ದಂಪತಿಗಳಲ್ಲಿ ಪತಿರೇವ ಪ್ರಾಣಃ= ಪ್ರಾಣದೇವರು ಪತಿಯಲ್ಲಿ ಸನ್ನಿಹಿತರಾಗಿರುತ್ತಾರೆ. ಜಾಯೈೇವರಯಿಃ= ಭಾರತೀದೇವೇರು ಹೆಂಡತಿಯಲ್ಲಿ ಸನ್ನಿಹಿತರಾಗಿರುತ್ತಾರೆ. ಆದ್ದರಿಂದದಂಪತಿಗಳು ಸಂಭೋಗ ಸುಖವನ್ನು ಅನುಭವಿಸಬೇಕಾದರೆ ರಾತ್ರಿಯೇ ಅನುಭವಿಸಬೇಕು. ಹಗಲುಕಾಲದಲ್ಲಿ ಸಂಭೋಗ ಕೂಡದು. ಅದೇಕೆಂದರೆ ಹಗಲಿಗೆ ಅಭಿಮಾನಿಯಾದ ಪ್ರಾಣದೇವರು ಪುರುಷರಲ್ಲಿಯೂ, ರಾತ್ರಿಗೆ ಅಭಿಮಾನಿಯಾದ ಭಾರತೀದೇವಿಯರು, ಸ್ತ್ರೀಯರುಗಳಲ್ಲಿಯೂ ಇರುವದರಿಂದ, ಯಾವ ಪುರುಷರು, 'ದಿವಾ, = ಹಗಲಿನಲ್ಲಿ 'ರತ್ಯಾ, = ರತಿ ಸುಖಕ್ಕೆ ಅಧಿಷ್ಠಾನಳಾದ ಸ್ತ್ರೀಯಿಂದ ಕೂಡಿ ಸಂಯುಜ್ಯಂತೇ, = ಸಂಭೋಗಮಾಡುತ್ತಾರೋ, ಏತೇ = ಈ ಪುರುಷರು ಪ್ರಾಣಂವೈ ಪ್ರಸ್ಕಂದಂತಿ,,= ಬಲಾಭಿಮಾನಿದೇವತೆಯಾದ ಪ್ರಾಣದೇವರನ್ನು ಅವರ ರತಿಗೆ ಪಾತ್ರರಾದ ಭಾರತೀ ದೇವಿಯರಲ್ಲಿ ಸೇರಿಸದೆ (ರತಿ ನಿಷಿದ್ಧಕಾಲವಾದ ಹಗಲು) ಆದರೆ ಭಾರತೀದೇವಿಯರಲ್ಲಿ ರತಿ ಕೊಡದೆ ಬಿಟ್ಟವರಾಗಿ ಆಗುತ್ತಾರೆ. 'ಯದ್ರಾತ್ರೌರತ್ಯಾಸಂಯುಜ್ಯಂತೇ,= ಪುರುಷರು ರಾತ್ರೀಕಾಲದಲ್ಲಿ ಸ್ತ್ರೀ ಸಂಭೋಗಮಾಡಿದರೆ "ಬ್ರಹ್ಮಚರ್ಯಮೇವ ತತ್,, ರಾತ್ರೀಕಾಲದಲ್ಲಿ ಭಾರತೀದೇವಿಯರು ಸ್ತ್ರೀಯರಲ್ಲಿ ಸನ್ನಿಹಿತರಾಗಿರುವದರಿಂದ, ತನ್ನಲ್ಲಿ

ಸನ್ನಿಹಿತರಾಗಿರುವ ಪ್ರಾಣದೇವರನ್ನು ಅವರ ರತಿಪಾತ್ರರಾದ ಭಾರತೀದೇವಿಯರಲ್ಲಿ ಸೇರಿಸುವದರಿಂದ, ಬ್ರಹ್ಮಚರ್ಯದ ಫಲವು ಆ ಪುರುಷರಿಗೆ ಬರುತ್ತದೆ

ಇದರಿಂದ ಲೌಕಿಕವಾದ ಒಂದು ಅರ್ಥವೂ ಧ್ವನಿತವಾಗುತ್ತದೆ. ಅದು ಯಾವದು ಎಂದರೆ ದಿವಾ ಮೈಥುನಮಾಡುವರಿಗೆ ಪಾರಲೌಕಿಕ ಅನರ್ಥ ಮಾತ್ರವಲ್ಲ. ಪುರುಷರ ಪ್ರಾಣವೆಂದರೆ ಬಲವೂ ಕಡಿಮೆಯಾಗುತ್ತದೆ, ರಾತ್ರಿ ಸ್ತ್ರೀ ಸಂಭೋಗದಿಂದ, ಬಲಕಡಿಮೆಯಾಗದೇ ಮತ್ತು ಅವರಿಗೆ ಬ್ರಹ್ಮಚರ್ಯ ವ್ರತದಿಂದಿರುವ ಪುರುಷರಂತೆ ಬಲವಿರತ್ತದೆಂದು ತಿಳಿಯುತ್ತದೆ

ಈ ಪರಿಯಂತ ಪ್ರಜಾ ಸೃಷ್ಟಿಗೆ ಪರಂಪರೆಯಾಗಿ ನಿಮಿತ್ತ ಕಾರಣಗಳನ್ನು ಹೇಳಿ, ಸಾಕ್ಷಾತ್ ಪರಿಣಾಮಿ ಕಾರಣಗಳಲ್ಲಿಯೂ, ಪರಮಾತ್ಮನು ಮತ್ತು ವಾಯು ಭಾರತಿಗಳು ನಿಯಾಮಕರಾಗಿದ್ದು ಸೃಷ್ಟಿಮಾಡುತ್ತಾರೆಂದು ಹೇಳುತ್ತಾರೆ.

## ೧೦ನೇ ಮಂತ್ರ

"ಅನ್ನಂ ವೈ ಪ್ರಜಾಪತಿಃ ತತೋಃ ಹ ವೈ ತದ್ರೇತಃ। ತಸ್ಮಾದಿಮಾಃ ಪ್ರಜಾಃ ಪ್ರಜಾಯಂತ ಇತಿ। ತದ್ಯೇ ಪೈ ತತ್ಪ್ರಜಾಪತಿ ವ್ರತಂ ಚರಂತಿ ತೇ ಮಿಥುನ ಮುತ್ಪಾದಯಂತೇ। ತೇಷಾ ಮೇ ವೈಷ ಬ್ರಹ್ಮಲೋಕೋ ಯೇಷಾಂತಪೋ ಬ್ರಹ್ಮಚರ್ಯ ಯೇಷು ಸತ್ಯಂ ಪ್ರತಿಷ್ಠಿತಂ। ತೇಷಾಮಸೌ ವಿರಜೋ ಬ್ರಹ್ಮಲೋಕೋ ನ ಯೇಷು ಜಿಹ್ಮಮನೃತಂ ನ ಮಾಯಾ ಚೇತಿ ॥೧೦॥ ಅನ್ನಂ ವೈ ಪ್ರಜಾಪತಿಃ। = ಅನ್ನವೆಂದರೆ ಸ್ತ್ರೀ ಪುರುಷರು ಉಂಬುವ ಪದಾರ್ಥಗಳಲ್ಲಿ ಪ್ರಜಾಪತಿ ಇರುತ್ತಾನೆ. ಆ ಅನ್ನಗಳ ಪೈಕಿ ಪುರುಷರುಗಳ ಉದರಗತವಾದ ಅನ್ನದಲ್ಲಿ ಪ್ರಾಣದೇವರು, ಮತ್ತು ಸ್ತ್ರೀ ಭೋಜನ ಮಾಡಿದ ಅನ್ನದಲ್ಲಿ ಭಾರತೀದೇವಿಯರು ಇರುತ್ತಾರೆ ಎಂದು ಶಾಸ್ತ್ರ ಸಮ್ಮತವು.

ತತೌಹವೈ ತದ್ರೇತಃ = ಪುರುಷರು ಉಂಡ ಅನ್ನದಿಂದ ಶುಕ್ಲವೂ ಮತ್ತು ಸ್ತ್ರೀಯರು ವುಂಡ ಅನ್ನದಿಂದ ಶೋಣಿತವೂ ಉಂಟಾಗುತ್ತದೆ. ಶುಕ್ಲದಲ್ಲಿ ಪ್ರಾಣ ದೇವರು ಮತ್ತು ಶೋಣಿತದಲ್ಲಿ ಭಾರತೀದೇವಿಯರು ಸನ್ನಿಹಿತರಾಗಿರುತ್ತಾರೆ, ತಸ್ಮಾತ್ ಇಮಾಃ ಪ್ರಜಾಃ ಪ್ರಜಾಯಂತೆ, ಆಶುಕ್ಲ ಶೋಣೋ

ತದಿಂದ ಈ ಪರಿವೃಶ್ಯಮಾನ ಪ್ರಜೆಗಳು ಹುಟ್ಟುತ್ತಾರೆ. ಇಲ್ಲಿ ಶುಕ್ಲವೇ ದೇಹಕ್ಕೆ ಉಪಾದಾನ ಕಾರಣವು ಅದು ಶೋಣಿತದಿಂದ ಉಪಚಿತಮಾತ್ರ ವಾಗುತ್ತದೆ. ಅಂದರೆ ವೃದ್ಧಿ ಹೊಂದುತ್ತದೆಂಬು ಕೆಲವ ಪಕ್ಷ ಇತಿ= ಪ್ರಜಾಪತಿಯು ಈ ಪ್ರಕಾರ ವಾಯುದೇವರನ್ನೂ ಮತ್ತು, ಭಾರತೀದೇವಿಯನ್ನು ನಿಮಿತ್ತಕಾರಣರನ್ನಾಗಿ ಇಟ್ಟುಕೊಂಡು, ಪ್ರಜಾಸೃಷ್ಟಿ ಮಾಡುತ್ತಾನೆಂದು ಪಿಪ್ಪಲಾದ ಋಷಿಗಳು ಉತ್ತರ ಹೇಳಿದರು.

ಹೇಗೆಂದರೆ ಮಣ್ಣುಗಡಿಗಿಗೆ, ಸುವರ್ಣವು, ಕುಂಡಲಮಾಡಲಿಕ್ಕೆ, ಉಪಾದಾನಕಾರಣವಾಗಿ ಗಡಿಗೆಯಲ್ಲಿ ಮಣ್ಣು ಸುವರ್ಣವು ಕುಂಡಲದಲ್ಲಿ ಇದ್ದೇಯಿರುತ್ತದೆ. ಇದರಂತೆ ಅನ್ನದ್ವಾರಾ ಪುರುಷ ಸ್ತ್ರೀಯರ ಶುಕ್ಲಶೋಣಿತವು ದೇಹಕ್ಕೆ ಉಪಾದಾನ ಕಾರಣ, (''ಆತ್ಮಾವೈ ಪುತ್ರನಾಮಾಸಿ,, ಈ ಶ್ರುತಿಯಲ್ಲಿಯೂ ಹೇಳುವ ಅರ್ಥವಿದು)ಗಡಿಗೆ ಮಾಡಲು ಕುಂಬಾರನು ಕುಂಡಲುಮಾಡಲು ಸ್ವರ್ಣಕಾರನು ನಿಮಿತ್ಯಕಾರಣದಂತೆಯೇ ಪ್ರಜಾಸೃಷ್ಟಿಗೆ ಭಾರತೀ ಪ್ರಾಣದೇವರ ದ್ವಾರಾ ಪ್ರಜಾಪತಿ (ನಾರಾಯಣನು) ನಿಮಿತ್ಯ ಕಾರಣವೆಂದು ಮಥಿತಾರ್ಥವನ್ನು ತಿಳಿದುಕೊಂಡವರಿಗೆ ಫಲವನ್ನು ಹೇಳುತ್ತಾರೆ 'ತದ್ಯ ಇತಿ,'' ತತ್= ಈ ಪ್ರಜೆಗಳಲ್ಲಿ, ಯೇ = ಯಾರು, ತತ್ಪ್ರಜಾಪತಿವ್ರತಂ= ನಾವು ಮಾಡುವ ಭೋಗ ನಮ್ಮಸುಖಾರ್ಥವಲ್ಲ. ಆದರೆ ನಾರಾಯಣನು ಮಾಡುವ ಪ್ರಜಾ ಸೃಷ್ಟಿಗೆ ಸಾಧಕವಾಗಿ ಇದು ಅವನ (ಆ ಪ್ರಜಾಪತಿ ಪರಮಾತ್ಮನ) ಸೇವಾರೂಪ ವ್ರತವನ್ನು ಮಾಡುತ್ತೇವೆಂದು ತಿಳಿದುಕೊಂಡು, 'ಚರಂತಿ =ಪುರುಷ ಸ್ತ್ರೀಯರಾರು ರತಿಸುಖವನ್ನನುಭೋಗಿಸುವರೋ, 'ತೇ. =ಆ ಸ್ತ್ರೀ ಪುರುಷರುಗಳು 'ಮಿಥುನ, ಮುತ್ಪಾದಯಂತೇ= ಯೋಗ್ಯರಾದ ಮಕ್ಕಳನ್ನು ಹುಟ್ಟಿಸುತ್ತಾರೆ ಇಷ್ಟುಮಾತ್ರವೇ ಅಲ್ಲ, ಹಾಗೆ ಯೇಜ್ಞಾನಿಗಳ ಮಧ್ಯದಲ್ಲೂ 'ಯೇಷಾಂ,= ಯಾರಲ್ಲಿ. ತಪಃ= ಕೃಚ್ಛ್ರ ಚಂದ್ರಾಯಣಾದಿ ತಪಸ್ಸು. ಬ್ರಹ್ಮಚರ್ಯ = ಗುಹ್ಯೇಂದ್ರಿಯ ನಿಯಮನ ರೂಪವಾದವ್ರತ, ವೆಂದರೆ, ಅಮಾವಾಸ್ಯ, ಪೌರ್ಣಮಾ, ದಶಮ್ಯಾದಿ ದಿನತ್ರಯ, **ಹಗಲು ಮುಂತಾದ ನಿಷಿದ್ಧ ಕಾಲಾದಿಗಳನ್ನು ಬಿಟ್ಟು, ಋತು ಕಾಲ (೩) ದಿನ ಬಿಟ್ಟು** ವಿಧ್ಯುಕ್ತ ಪ್ರಕಾರ ಸ್ತ್ರೀ ಗಮನಕ್ಕೆ ಬ್ರಹ್ಮಚರ್ಯ

ಯೆಂದು ನಾವು. ಸರ್ವಾತ್ಮನಾ ಸಂಭೋಗವನ್ನು ಬಿಡೋಣವೆಂದು ಅರ್ಥ ವಲ್ಲ. ಹಾಗೆ ಅರ್ಥಮಾಡಿದರೆ 'ಪ್ರಜಾಪತಿ ವ್ರತಂಚರಂತಿ, ಎಂದು ಹೇಳಿದ್ದು ಅಸಂಗತವಾಗುತ್ತದೆ. ಸತ್ಯಂ (ಚಾಸ್ತಿ) ಸತ್ಯವಚನವು ತಪ್ಪದೇ ಇರುತ್ತದೆ ಯೋ, (ಸತ್ಯಯೆಂದರೆ ಸಜ್ಜನರುಗಳಿಗೆ ಹಿತಕರವಾದ ಮಾತುಗಳು ಅಂದರೆ, ಸಜ್ಜನರುಗಳು ಗೋವುಗಳು ಇವರುಗಳಿಗೆ ಬಾಧಕ ಬರುವ ಹಾಗೆ ಇದ್ದರೆ ಅಂಥ ಕಾಲದಲ್ಲಿ (ಸತ್ಯ, ಇದ್ದದಿದ್ದಹಾಗೆ ಹೇಳಬೇಕೆಂಬುವ ನಿಯಮವಿಲ್ಲ, ಮತ್ತು ಸಜ್ಜನ ಗೋವುಗಳಿಗೆ ಯಾವ ವಿಧ ಹೇಳಿದರೆ ಅನುಕೂಲವೋ ಅದು ಅಸತ್ಯವಾಗಿದ್ದಾಗ್ಯೂ ಹಾಗೇ ಹೇಳೋಣವೆ ಸತ್ಯವು) " ತೇಷಾಮೇವೈಷ-ಬ್ರಹ್ಮಲೋಕಃ= ಅಂಥವರಿಗೆ ಈ ಸತ್ಯಲೋಕವೆಂಬ ಬ್ರಹ್ಮಲೋಕ ಪ್ರಾಪ್ತ ವಾಗುತ್ತದೆ, ಇಷ್ಟು ಮಾತ್ರವಲ್ಲದೇ, ಯೇಷು = ಯಾವ ಅಧಿಕಾರಿಗಳಲ್ಲಿ, 'ನ ಜಿಹ್ಮ,,— ವಕ್ರಬುದ್ಧಿ ಎಂದರೆ, ಹೇಗೆ ಪದಾರ್ಥಗಳನ್ನು ತಿಳಕೊಳ್ಳ ಬೇಕೋ, ಹಾಗೆ ತಿಳಿಯದೇ ಅವಕ್ಕೆ ವಿಪರೀತವಾಗಿ ತಿಳಿಯೋಣ ವಿಲ್ಲವೋ. ನಾನೃತಂ= ಸುಳ್ಳು ಅಂದರೆ, ಅಬದ್ಧ ಮಾತಾಡೋಣವು, ಇಲ್ಲವೋ, 'ನ ಮಾಯಾ ಚ,= ಮೋಸಮಾಡೋಣವು ಇಲ್ಲವೋ, 'ತೇಷಾ ಮೇವ = ಅವರುಗಳಿಗೇವೆ, ಆ ಸತ್ಯಲೋಕದಲ್ಲಿ ಬ್ರಹ್ಮಪ್ರಳಯ ಪರಿಯಂತರ ವಾಸ ಮಾಡಿದ ಮೇಲೆ 'ವಿರಜಃ, ಅಪ್ರಾಕೃತವಾದ ಅಸೌ ಬ್ರಹ್ಮಲೋಕಃ = ವೈ ಕುಂಠಾದಿ ಪರಬ್ರಹ್ಮ ಲೋಕಗಳು ಪ್ರಾಪ್ತವಾಗುತ್ತವೆ. 'ಇತಿ,= ಈಪ್ರಕಾರ ವಾಗಿ ಪಿಪ್ಪಲಾದ ಋಷಿಗಳು ಕಬಂಧೀ ಕಾತ್ಯಾಯನರು ಮಾಡಿದ ಪ್ರಶ್ನೆ ಗಳಿಗೆ ಉತ್ತರವಾಗಿ ಪ್ರಜಾಸೃಷ್ಟಿ ಕ್ರಮವನ್ನು ಹೇಳಿದ್ದಾರೆ.

ಇಂತು, ನಾರಾಯಣ ಲಕ್ಷ್ಮೀ ವಾಯು ಭಾರತೀ ಸನ್ನಿಧಾನವಾದ ವಾಮದೇವ ಯಜ್ಞವೆಂದು ತಿಳಿದು ಋತುಕಾಲದಲ್ಲಿ ಸ್ತ್ರೀ ಸಮಾಗಮ ಮಾಡಿ, ಪ್ರಜಾ ಉತ್ಪತ್ತಿಗೆ ಕಾರಣನಾಗುತ್ತಾನೋ ಬ್ರಹ್ಮಚರ್ಯ ವ್ರತ ಸಮಾನನೆನಿಸಿ, ಪರಬ್ರಹ್ಮನ ಅಪರೋಕ್ಷದಿಂದ ಮೋಕ್ಷವನ್ನು ಹೊಂದುತ್ತಾ ನೆಂತ ತಾತ್ಪರ್ಯವೇ, ಹೊರ್ತಾಗಿ ಶ್ರುತಿ ಸ್ಮೃತಿಗಳು ವ್ರತ ನಿಯಮಾಚರಣೆ ಯಿಂದ ಭಗವಂತನೊಲಿಸುವದೆಂಬ ಆಜ್ಞಾಕೊಡುತ್ತವೇ ಹೊರ್ತಾಗಿ ವಿಷಯ ಸುಖಾದಿಗಳು ಅನುಭವಸಬೇಕೆಂಬುದರಲ್ಲಿ ತಾತ್ಪರ್ಯವಿಲ್ಲ. ಮತ್ತು ಶ್ರೀ

ಭಾಗವತ ಸಪ್ತಮಸ್ಕಂಧ ಅಧ್ಯಾಯ ೧೨ ಶ್ಲೋಕ ೧೧ರಲ್ಲಿಯೂ,

'ಏತಚ್ಚಾನ್ಯ ದ್ಗ್ರುಹಸ್ಥಸ್ಯ ಸಮಾಮ್ನಾತಂ ಯತೇರಪಿ)

ಗುರು ವೃತ್ತಿರ್ವಿಕಲ್ಪೇನ ಗೃಹಸ್ಥಸ್ಯರ್ತು ಗಾಮಿನಃ ||೨೧ ॥

ಹಿಂದೆ ಹೇಳಿದ್ದು ಸಹ, ಎರಡನೇ ಗ್ರಹಸ್ಥಾಶ್ರಮಿಗೂ, ಯತ್ಯಾಶ್ರಮಿಗಳಿಗೂ ಉಕ್ತವಾಗಿದೆ, ಆದರೆ ಗುರುವೃತ್ತಿ ವಿಕಲ್ಪೇನ, ಗುರುಕುಲ ವಾಸ ಮಾಡಿದರೂ ಬರುತ್ತದೆ ಅಥವಾ ಬಿಟ್ಟರೂ ಬರುತ್ತದೆ, ಅಧ್ಯಯನ ಮಾತ್ರ ಮುಖ್ಯ ಕರ್ತವ್ಯ. ಗ್ರಸ್ಥಾಶ್ರಮಿಗಳಿಗೆಮಾತ್ರ ಋತು-ಗಾಮಿತ್ವ= ಋತುಕಾಲದಲ್ಲಿ ಗಮನವು ಅನಿಷಿದ್ಧವಾದದ್ದು. ಇದಕ್ಕೆ ಮುಂದನಂದಿನಿ ಟಿಪ್ಪಣಿಕಾರರು ಋತುಗಾಮಿತ್ವವು, ಗೃಹಸ್ಥಾಶ್ರಮಿಗಳಿಗೆ ನಿಷೇಧವಲ್ಲವೆಂದು ಹೇಳಿದ್ದಾರೆ. ಮತ್ತು ಶ್ರೀ ಶ್ರೀ ಸತ್ಯಧರ್ಮಸ್ವಾಮಿಗಳವರು ಭಾಗವತ ಟಿಪ್ಪಣಿಯಲ್ಲಿಯೂ "ಬ್ರಹ್ಮಚರ್ಯ ಆಶ್ರಮ ಇಲ್ಲದಲೇವೆ ಯಾವ ಆಶ್ರಮವೂ ಕೂಡುವದಿಲ್ಲ, ಯಾಕೆಂದರೆ ತಳಗಲ್ಲಾದ ಮೊದಲನೇ ಆಶ್ರಮ ಪೂರ್ವದಲ್ಲಿ ಅನುಭೂತವಾದ ಬ್ರಹ್ಮಚರ್ಯವು ಇತರ ಗ್ರಹಸ್ಥಾಶ್ರಮಾದಿಗಳಿಗೂ ಯೋಗ್ಯವೆಂದು ತೋರಿಸುತ್ತದೆ, ಗ್ರಹಸ್ಥ ಯತ್ಯಾಶ್ರಮಿಗಳಿಗೂ ಯೋಗ್ಯವೆಂದು ತಿಳಿಯಬೇಕು ಋತುಗಾಮಿತ್ವ ಸ್ವಭಾರ್ಯ ಋತುಗಾಮಿಯಾದ ಗ್ರಹಸ್ಥಾಶ್ರಮಿಗೇವಯುಕ್ತವಾದದ್ದು. ಮೊದಲು ಹೇಳಿದ ಗುರುಕುಲ ವಾಸ, ಬ್ರಹ್ಮಚರ್ಯ ಭಿಕ್ಷಾಟನ ಇತ್ಯಾದಿಗಳು ಅಂದರೆ ಬ್ರಹ್ಮಚಾರಿಯ ಧರ್ಮಗಳು ಮಾಡಿದರೂ ಬರುತ್ತದೆ ಅಥವಾ ಬಿಟ್ಟರೂ ಬರುತ್ತದೆ ಸಾಮಾನ್ಯವಾಡ ಬಾರದಂತಲ್ಲ ಗ್ರುಹಸ್ಥನಿಗೆ ಎಲ್ಲ ಮಾಡಬೇಕೆಂದೇ ಅರ್ಥ ಈ ಉಪನಿಷದರ್ಥವನ್ನೇ ಶ್ರೀ ಮೊದಲಕಲ್ಲ ಶೇಷದಾಸರಾಯರು ಅಪರೋಕ್ಷಜ್ಞಾನಿಗಳಾದ ಗುರುವಿಜಯ ವಿಠ್ಠಲರು. ದಾಂಪತ್ಯ ವಿವಾಹವು ಹೇಗೆಮಾಡಬೇಕು ಮತ್ತು ಇಂಥ ವಿವಾಹದಿಂದ ಸದ್ವಂಶವು ಹೇಗೆ ಬೆಳೆಯುತ್ತಲಿದೆಬೆಂದು ವಿಶದವಾಗಿ ವರ್ಣಿಸಿರುವರು.

ವಿವಾಹ ಸುಳಾದಿ ರಾಗ ಭೈರವಿ ಧ್ರುವತಾಳ

ವೈವಾಹಮಾಡಿದೆ ವಿಭವ ಪೂರ್ವಕದಿಂದ। ಆವದು ಇದಕೆ ಸಮವೆಂದು ತಿಳಿದು। ಭಾವದಲ್ಲಿ ಹಿಗ್ಗಿ ಬಳಲಿದರೆ ಇದಕೆ। ಭಾವಜ್ಞರಾದವರು

ಮೆಚ್ಚುವರೆ। " ಯದೇವ ವಿದ್ಯಯಾಕುರು ತೇ ಶ್ರದ್ಧಯಾ। ತದೇವ ವೀರ್ಯ ವತ್ತರಂಭವತಿ ಇತ್ಯುಪನಿಷತ್ ॥ (ಯದೇವ ವಿದ್ಯಯಾ ಕರೋತಿ ಶ್ರದ್ಧೆಯೊ ಪಾನಿಷದೇವಾ) ಏವಪಾದಿಗಳು ಈ ಪರಿವರಲುತಿರೆ, ಅ। ಭಾವಜ್ಞಾನದಿಂದ ಅಹಂಕಾರದಿ। ಸಾವಿರ ಸಂಖ್ಯವಾದ ಕೃತಿ (ಕೃತು)ಗಳು ವ್ಯಾಡಲಾಕ। ಪೇವದೇವನು ದೃಷ್ಟಿಯಿಂದ ನೋಡ। ಅವನಿಯೊಳಗೆ ಅಲ್ಪರ ಪುಧ್ಯಕೀರ್ತಿ। ಬಾಹೋದಲ್ಲವೆ ಅದಕ್ಕೇನಾಹದೋ। ಕೇವಲ ಶ್ರಮದಿಂದ ಅರ್ಥಸಂಪಾದಿಸಿ, ಆವೋದು ನಾಲದದಕೆ ಋಣವ ಮಾಡಿ। ಧಾವಂತ ಈಪರಿ ಘಟಣವಾದ ಕರ್ಮ। ಪಾಪಸ್ನವಾದ ಪುಣ್ಯವಾಗದಿರೆ। ಭುವನದಲ್ಲಿ ಬಗಿದೆ ಆಯಾಸ ಬಡ ಲೇಕೆ। ನೈವಾಹಪಾಡುವ ವಿಧಿಬ್ಯಾರುಂಟು। ಆವಾವ ಕರ್ಮದಿಂದ ಮೂ ರೇಳು ಗೋತ್ರದವರು। ಪವಿತ್ರರಾಗುವರು ಪಾಪದಿಂದ। ನಾವಧಾನದಿ ಕೇಳು ಭುಕುತಿಯಿಂದಲಿ ಮನವೆ। ನೋವು ನಿನಗಾಗದು ಭವದಲ್ಲಿಂದ। ಕಾವಕರುಣ ಸಿಧಿ ಗುರುವಿಜಯ ವಿಠ್ಠಲರೇಯಾ। ಸೇವಕನೆಂದವಗೆ ಸುಖ ವೀವನೊ ॥೧॥

ಮಟ್ಟತಾಳ

ಮಕ್ಕಳು ಎನಗಾರು ಅವನಿಗೆ ನಾನಾರು। ರಕ್ಕಸಾಂತಕ ತಾನು ಕರ್ಮಾ ನುಬಂಧದಲಿ। ಮುಖ್ಯವಾಗಿ ತನ್ನಕಲ್ಪಾನು ನಾರದಲಿ। ಅಕ್ಕರದಿಂದಲಿ ಆತ್ಮ ಜಗೆ ಪಿತನು। ಸೌಖ್ಯದ ನಿಮಿತ್ಯನತಿ ಮನಿಧನ ಪಶು। ವಿಕ್ಕಾದವರೆಲ್ಲ ಇತ್ತಿಹ ತೆರದಂತೆ। ಮಕ್ಕಳು ಮೊದಲಾದ ಸಂಪದವಿಯು ತಾನೆ ಆ।ಸಕ್ಕುತಿಯಿಂದಲಿ ಎನಗೆ ಇತ್ತಿಹನೆಂದನ್ನು। ಮುಕುಂದ ನಾರಾಧನಿಗೆ ಉಪಕರಣಗಳೆನ್ನು। ಕಕ್ಕು ಲಾತಿಯಲಿಂದ ನನ್ನದೆಂಬೋ ಭ್ರಾಂತಿಗೆ। ಸಿಕ್ಕದಲೇ ಗುಣಿಸು ಕಲಿಕೃತ- ಮೋಹವನು। ಧಿಕ್ಕರಿಸುವೆನು ಜ್ಞಾನ ಬಾಹುಳ್ಯದಿಸತತ। ವಿಕ್ರಮದಿಂದಲ್ಲಿ ಇಂದ್ರಿಯ ಗ್ರಾಮಗಳು। ಆಕ್ರಮಿಸಿ ಬರಲು ಪ್ರಾಪ್ತವಾದ ಮೋಹ। ಪ್ರಖ್ಯಾತ ಗರ್ಷಿಸುವದು ಸಂಶಯ ಮಾಡದಲೆ। ಭಕ್ತಿಪೂರ್ವಕದಿಂದ ಅರ್ಚಿಸು ಜ್ಞಾನ ದಲಿ। ಭೋಕ್ತ ಸಾರಗುರು ವಿಜಯ ವಿಠ್ಠಲರೇಯಾ। ದಕ್ಕುವನು ಇದನು ಗ್ರಹಿ ಸಿದನರರಿಗೆ ॥೨॥

ತ್ರಿವಿಡಿ ತಾಳ

ಹೃದಯದೊಳಗೆ ಹರಿ ಪ್ರೇರಿಸಿದದರೊಳು। ಮುದದಿ ನುಡಿವೆ ಗುರು

ಕೃಪಾಬಲದಿ। ಒದಗಿ ಕೇಳುವದು ವದನಾ ಲಕ್ಷಣವನ್ನು ಈ। ವಿಧದಿಂದ ಚಿಂತಿಸುವದು ಗುಪ್ತದಿಂದ॥ ಅಧಮಾಜನರುಗಳಿಗೆ ಅಂತ (ಅಂತು) ತಿಳಿಯಗೊಡದೆ। ಪ। ಪದೊಪದಿಗೆ ನಿನ್ನ ಹೃದಯದಲ್ಲಿ। ಪದುಮನಾಭನು ಅವರವರ ನಾಮರೂಪ ಬಿಡದೆ ಧರಿಸಿಹನೆಂಬೋ ಕೃತ್ಯದಿಂದ। ವಧುವರ ಶಬ್ದವಾಚ್ಯ ವಾಸುದೇವನೆ ಸರಿ। ಇದರೊಳು ಸೂಕ್ಷ್ಮವುಂಟು ಗ್ರಹಿಸುವದು। ಪದುಮಸಂಭವವಾಯು ಖಗ ಅಹಿವೇಶ ಸುರೇಶ। ಮದನ ಪ್ರಾಣಾನಿರುದ್ಧಾ ಮನು ಗುರು। ನಾದಕ್ಷಪ್ರಜೇಶ್ವರ ಪ್ರವಹ ಯಮ ರತಿ। ಆದಿತ್ಯವರುಣಾದಿ ಸುರರೆಲ್ಲರೂ। ಕಾದು ಕೊಂಡಿಪ್ಪರು ದೇವನ ಆಜ್ಞದಿ। ಸಾದರದಲಿ ತಿಳಿ ವರ ವಿಚಾರ। ಒದರ ಸಂಕಾರ ಗುರುವಿಜಯ ವಿಠ್ಠಲರೇಯನ। ಪದಗಳರ್ಚಿ ಪ್ರವರಕೆ ಆದಿ ದ್ವಾರವೊ ॥೩॥

ರೂಪಕ ತಾಳ

ಸುರಮುನಿ ಮೊದಲಾದ ಋಷಿಯು ಜನರೆಲ್ಲ। ನಿಯಮದೇ ನಿಂದಿಹರು ಸೂಕ್ಷ್ಮದಿಂದ। ಸುರಗಾಯಕವಿಡಿದು ನರ ನದಿ ಪರ್ವತ। ಪರಮಪವಿತ್ರಸಪ್ತ ವನಧಿಗಳು। ಅರಸು ತನ್ನಯ ನಿಜ ಭೃತ್ಯರಿಂದಲಿ ಕೂಡಿ। ಇರುವ ಸೊಬಗಿನಂತೆ ಹರಿಯು ತನ್ನ। ಪರಿವಾರ ಸಹವ್ಯಾಪ್ತ ವಿಭೂತಿಯನಿಸುವ। ಕಾರಣ ಕಾರ್ಯ ರೂಪದಿಂದ ನಿಂದು। ವದನಲ್ಲಿ ಇಪ್ಪನು ತತ್ ಶಬ್ದ ವಾಚ್ಯದಿ। ನರನೆ ಈ ಪರಿ ತಿಳಿದು ಪೂಜಿಸವನಾ। ಇರಲಿ ಇದನು ಮತ್ತೆ ಮುಂದಣದಲಿ ಕೇಳೊ। ಪರಮ ಮಂಗಳವಾದ ವಧುಗಳಲ್ಲಿ। ಸಿರಿದೇವಿ ಭಾರತೀ ಸರಸ್ವತಿ ಷಣ್ಮಹಿಷಿ। ಗಿರಿಜೆ ವಾರುಣಿ ಸೌಪರ್ಣಿ ಶಚಿ। ಸ್ಮರನ ಧರ್ಮಾಂಗಿ ಪ್ರಾಣಿ(ರತಿ) ತಾರಾ ಮಾನವಿ ಉಷ ವರದಾಕ್ಷಾಯಣಿ ಪ್ರಾವಹಿ ಶ್ಯಾಮಲಾರುತಾರಾಸಂಜ್ಞ। ಹರಿಪಾದದಿಂದ ಉದುಭವಿಸಿದ। ಪರಮ ಪಾವನ್ನ ಸ್ತ್ರೀಯರುಂಟು। ಸಿರಿಪತಿ ಅದರಂತೆ ಸ್ತ್ರೀರೂಪವನು ಧರಿಸಿ। ಪರಿವ್ಯಾಪ್ತನಾಗಿಪ್ಪ ಸ್ತ್ರೀಯರಲ್ಲಿ। ತರುವಾಯದಲಿ ಸ್ಥೂಲಬ್ರಹ್ಮಾಂಡದೊಳಗಿದ್ದ। ಹರಿಸಿರಿ ಮೊದಲಾದ ದಿವಿಜರನ್ನು। ಶರೀರದಲಿ ತಂದು ಐಕ್ಯ ಚಿಂತಿಸಿ ಈ। ತೆರದಿ ತಿಳಿದು ಪರಮ ಭಕುತಿಯಿಂದ। ವರ ವಧುಗಳಿಗಾಗಿ ಪರಿಪರಿ ವಸ್ತುಗಳ। ಪರಿಯಂ ಚಿಂತಿಸಿ ಹರಿಗರ್ಪಿಸು। ಸಿರಿದೇವಿ ಮೊದಲಾದ ಸ್ತ್ರೀಯರಲಂಕರಿಸಿ। ಪರಮ ಭಕುತಿಯಿಂದ ನಾರಾಯಣ

ನಿಗೆ| ಸಿರಿದೇವಿ ಗರ್ಭಸುಕ್ರಮದಿಂದ ವಿಧಿವಾಯು, | ಸುರರಿಗರ್ಭಸು ಅವರ ವರ ಸ್ತ್ರೀಯರ| ಅವರಲ್ಲಿ ಕೂಡಿಸು ವಿಧಿಯ ಪೂರ್ವಕ| ಪರಮ ಪುರುಷಹರಿ ತುಷ್ಟನಾಹ| ದುರುಳ ವರ್ಜನ ಗುರುವಿಜಯ ವಿಠಲ್ಠಲರೇಯ | ಪರಮ ಯಶಸ್ಸುನೀವ ಇಹಪರದಿ ||೪||

ಝಂಪಿ ತಾಳ

ದೇಹವೆಂಬೋ ವೃಕ್ಷ ಸನ್ನಿಧಾನದಲ್ಲಿ | ಲೋಹಿತಾಕ್ಷನೆಂಬೊ ಪಾತ್ರ ನಿಗೆ| ಅವ್ಯಾಹತಸ್ಥಾನ ವೈದಿಸು ನಿನ್ನ | ಸಹವಾಗಿ ಮೂರೇಳು ಗೋತ್ರದ ವರ| ಸಹಸ್ರರೂಪ ಗುರು ವಿಜಯ ವಿಠ್ಠಲರೇಯನ | ಮೋಹನಿನಗಾಗುವದು ಆವಕಾಲ ||೫||

ಅಟ್ಟ ತಾಳ

ಇನಿತು ಲಕ್ಷಣದಿಂದ ಚತುರ್ಥದಿನದಲ್ಲಿ| ಏನೇನು ಮಾಡತಕ್ಕದ್ದದ ಸಲ್ಲ| ದುನುಜಾರಿಗೆ ಇದು ಉಪಚಾರವೆಂದೆನ್ನು | ನೀನು ಕೊಡುವದಲ್ಲನೀನು ಕೊಂಬುವದಲ್ಲ| ಅನ್ವಯಿಸು-ಬಿಂಬನ ಪಾನ ಸನ್ನಿಧಿಯಲ್ಲಿ | ಇನಿತು ಮಾಡು ವವನ ಮನೆಯಲ್ಲಿ ಸುರರೆಲ್ಲ | ವನಜಾಕ್ಷನಾಜ್ಞದಿ ಶುಭವೆಕೊಡುತಿಪ್ಪುದು ಇನ ಶಶಿಮಂಡಲ ಪರಿಯಂತ ತಿಲಯಿನ| ಘನರಾಶಿ ಗಣಿತಾದಿ ನಿತು ಸತ್ಪುಣ್ಯವ| ಜನಿಸುವರಿಂದ ಬರಿದೆ ಮಾತುಗಳಲ್ಲ| ಅನುಮಾನ ಇವಕ್ಕಿಲ್ಲ ಶ್ರುತಿಸ್ಮೃತಿ ವಾಕ್ಯವು| ವನಜಾಧಿ ಪತಿ ಗುರು ವಿಜಯ ವಿಠ್ಠಲಂಗೆ| ಮನೆ ಯುವನೆನಿಸುವಿ ಇದರಿಂದ ಆವಾಗ ||೬||

|| ಆದಿತಾಳ ||

ಈ ಪರಿ ಮಾಡುವದೆ ಶುಭ ಲಗ್ನವೆನಿಪ್ಪುದು | ಈ ಪರಿ ಮಾಡಿದವನ ವಂಶವೆ ಸದ್ವಂಶ| ಈ ಪರಿ ತಿಳಿದವನ ಗೋತ್ರವೆ ಅಭಿವೃದ್ಧಿ| ಈ ಪರಿ ತಿಳಿವ ವನ ಮನೆಯಲ್ಲಿ ಸರ್ವಕಾಲ | ಲೋಪವಾಗದಂತೆ ಶುಭಜಾಲವಾಗುವದು | ಈ ಪರಿ ತಿಳಿಯದೆ ಶತ ಸಂಖ್ಯ ಕನ್ಯದಾನ| ಅಪಾರಮಾಡಲ್ಯಾಕೆ ಅವಗಿಲ್ಲ ಪುಣ್ಯವನ್ನು| ಶ್ರೀಪತಿ ಮೆಚ್ಚದಿಹ ನಾನಾಪಥ ಕರ್ಮಜಾಲ| ಪಾಪನಿವರ್ತಿಗೆ ಕಾರಣವಲ್ಲ ಕೇಳೊ| ಸೂ ಪ್ರಕಾಶವಾದ ಮಾಣಿಕ ಮಾರಿಕೊಂಡು | ಅಲ್ಪ ವಾದಜಿವಾನ ಪ್ರಾಪ್ತಿಮಾಡಿಕೊಂಡಂತೆ| ಆಪಾರ ಮಹಿಮನ್ನ ಅನುಸಂಧಾನ

ನಿಲ್ಲದೇ। ವ್ಯಾಪಾರ್ಗದಿಂದ ಬಂದಕ್ಷುದ್ರನಾದ ಪುಣ್ಯವನ್ನು। ಕೋಪಾದಿದ್ವಾರ ದಿಂದ ದೈತ್ಯರು ಕೊಂಬುವರು। ಈ ಪರಿ ತಿಳಿದವನ ಜನುಮವೆ ಸಫಲವೆನ್ನಿ। ಅಪವರ್ಗದಾತ ಗುರುವಿಜಯ ವಿಠಲರೇಯ॥ ಕಾಪ್ಯಾಡುವನು ಸತತ ಈ ಪರಿ ಗ್ರಹಿಸಿದವರ ॥೭॥

ಜತೆ

ಮದುವೆ ಯೆನಿಪದು ಸಿರಿ ನಾರಾಯಣರಿಗೆ॥ ಪದವಿಗೆ ಸೌಪಾನ ಗುರು ವಿಜಯ ವಿಠ್ಠಲ ವೊಲಿಪ ॥೮॥

ಈ ಸುಳಾದಿಯಲ್ಲಿ ದಾಸವರ್ಯರು ಸದ್ವಿವಾಹದ ಮರ್ಮವನ್ನು ತಿಳುಹಿರುವರಲ್ಲದೇ ಅನೇಕ ವಿಷಯಗಳನ್ನು ವಿಶದೀಕರಿಸಿ ಬೋಧಿಸುವರು. ಗೃಹಸ್ಥನಾಗಲು ಮುಖ್ಯ ಪತಿವ್ರತೆ ಸತಿಯೊಡನೆ ವಿವಾಹ ಋತುಕಾಲದಲ್ಲಿ ಗಮನ ಬ್ರಹ್ಮಚರ್ಯ ಸಮವೆಂದು ಶ್ರುತಿ ಸ್ಮೃತಿ ಸಿದ್ಧ ಪುರುಷರ ಬಲ ಭಾಗ ಎಲ್ಲನಾಡಿಗಳಲ್ಲಿ ಪರಮಾತ್ಮನು ಪುರುಷರೂಪಿ (ಆನಂದಮಯನು) ಎಡಭಾಗದ ನಾಡಿಯಲ್ಲಿ ಸ್ತ್ರೀರೂಪಿಯಾದಹರಿಯು ವಿಜ್ಞಾನಮಯ)ನಾಗಿದ್ದು ಪುರುಷರಿಗೆಬಿಂಬ ಆನಂದಮಯ ಶ್ರೀ ಲಕ್ಷ್ಮ್ಯಾದಿಗಳಿಗೆ ಶ್ರೀರೂಪಿವಿಜ್ಞಾನಮ ಯನು ಇರುವನು. ಇವೇಮುಖ್ಯಕಾರಣ ಸ್ವರಮಣನು ಸ್ವತಂತ್ರನಾದ ವಿಭು ವಿಂದಲೇ ಸಕಲಸೃಷ್ಟಿಯಾದರೂ ಬ್ರಹ್ಮಾದಿದೇವತೆಗಳ ದ್ವಾರ ಈ ವಿಚಾರ ದಿಂದಲೇ ಮೇಲೆ ಉದಹರಿಸಿದ ಸುಳಾದಿಯಲ್ಲಿ ಒಳ್ಳೇ ಪ್ರಮೇಯನ್ನು ಉದ ಹರಿಸಿರುವರು. ಇನ್ನು ಕೆಲರಭಿಪ್ರಾಯ ಶುಕ್ಲವು ಶೋಣಿತದಿಂದೊಡಗೂಡಿ ಉಪಚಯಹೊಂದುತ್ತದೆಂತ ಹೇಳುತ್ತಾರೆ. ಆದರೆ ಶುಕ್ಲಶೋಣಿತ ಎರಡೂ ಕಲೆತರೆ ಗರ್ಭೋತ್ಪತ್ತಿ ಶುಕ್ಲಾಧಿಕ್ಯಪುರುಷಜನನಕ್ಕೆಕಾರಣ ಶೋಣಿತಾಧಿಕ್ಯ ವು ಸ್ತ್ರೀ ಜನಕ್ಕೆ ಕಾರಣ. ಈ ವಿಷಯ ಅಧಿಕ ವಿಚಾರವು ಅಪ್ರಾಸಂಗಿಕ ವಾಗದು. ಶುಕ್ಲಕ್ಕೆ ಆದಿತ್ಯ ಅಭಿಮಾನಿ ಸ್ತ್ರೀ ಶೋಣಿತಕ್ಕೆ ಅಗ್ನಿ ಅಭಿ ಮಾನಿ ಉತ್ತಮದೇವತೆ ಆದಿತ್ಯನಲ್ಲಿ ಅಗ್ನಿಲಯ ಹೊಂದುತ್ತಾನೆ ಇದೇಕ್ರಮ ದಿಂದ ಸ್ತ್ರೀ (ರಕ್ತ) ಶೋಣಿತವು ಪುರುಷನ ರೇತಸ್ಸು (ಶುಕ್ಲಾಧೀನವಾಗಿ ವಿಕಾರ ಹೊಂದುತ್ತದೆನ್ನಲು ಕಿಂಚಿತ್‌ಸಂದೇಹವಿಲ್ಲ.

ಅಂದಮೇಲೆ ಯಾವಾಗಲೂ, ಸ್ತ್ರೀಯರ ರತಿ ಸುಖಕ್ಕೆ ಪುರುಷ

ಪ್ರಧಾನನು. ಆದಿತ್ಯನಲ್ಲಿ ಅಮಾವಸ್ಯ ದಿನ ರಾತ್ರಿ ಅಭಿಮಾನಿ ಚಂದ್ರನ ಕಲೆಗಳಲ್ಲಿ ಲೀನವಾಗುತ್ತವೆಂಬುವ ಈ ಕಾರಣದಿಂದ ಸ್ತ್ರೀಯರಕಿಂತಲೂ ಹೆಚ್ಚಿಗೆ ಸ್ವತಂತ್ರರಾಗಿ ಪುರುಷರು ಇರುವರು ಸ್ತ್ರೀಯರು ಯಾವಾಗಲೂ ಪುರುಷರ ಆಧೀನರೇ, ಹೊರತಾಗಿ ಸ್ವತಂತ್ರರಲ್ಲ ಇದು ಮರೆಯತಕ್ಕ ಮಾತಲ್ಲ. ಹಿಂದ ದೇವರು ಲಕುಮಿಯನ್ನು ಲಕ್ಕಿನಷೇ ಬ್ರಹ್ಮನನ್ನು ಹೊಕ್ಕಳಿಂದಲಿ ಪಡೆದ, ಬ್ರಹ್ಮದೇವರು ತನ್ನ ಅಂಗಗಳಿಂದಸಕಲ ದೇವತೆಗಳನ್ನು ಹುಟ್ಟಿಸಿದನು. ಇತರ ಎಷ್ಟೋ ದೇವತೆಗಳು ತಮ್ಮ ಅಂಗಗಳಿಂದ ಪ್ರಜಾ ಸೃಷ್ಟಿ ಮಾಡಿದ್ದಾರೆ. ಇದು ಪುರಾಣೇತಿಹಾಸ ಪ್ರಸಿದ್ಧ ಇಷ್ಟೇ ಅಲ್ಲ. ಯಜ್ಞಗಲ್ಲಿ ಮಂತ್ರೋದಕ ವನು ಪುರುಷನು ಕುಡಿದರೆ ಗರ್ಭಧರಿಸಿದನು. ಆದರೆ ಯಾವ ದೇವತಾ ಸ್ತ್ರೀಯರು ಸ್ವತಃ ತಾವೇ ಪುರುಷ ಪ್ರವೃತ್ತಿ ಇಲ್ಲದೇ ಯಾರನ್ನು ಹುಟ್ಟಿಸಿಲ್ಲ. ಈಗಿನ ಸ್ತ್ರೀ ಸ್ವಾತಂತ್ರ್ಯ ಕಾಲದಲ್ಲ್ಯಾದರೂ, ನೀತಿ ಗೆಟ್ಟು ಭೀತಿಗೆಟ್ಟು ಜಾತಿಗೆಟ್ಟು, ಸ್ತ್ರೀ ಪುರುಷರಲ್ಲಿ ಬ್ರಹ್ಮಚರ್ಯವೇ ಲೋಪವಾಗಲು ಮುಖ್ಯಕಾರಣ, ಸ್ತ್ರೀಯು ಪುರುಷನಂತೆ ಸ್ವತಂತ್ರಳಾಗಿದ್ದರೆ, ಪುರುಷರನ್ನು ಯಾಕೆ ಗರ್ಭವಂತರನ್ನಾಗಿ ಮಾಡಲಿಲ್ಲ, ಹಿಂದಿನ ಕೆಲದೇವಋಷಿಗಳು ಪುರುಷರಲ್ಲೇ ಗರ್ಭ ರೂಪವಾದ ಉತ್ಪತ್ತಿಮಾಡಿದ ಅನೇಕ ಐತಿಹಾಸಗಳಿರುವವು. ಒಟ್ಟಿನಮೇಲೆ ಸ್ತ್ರೀ ಪುರುಷರ ದಾಂಪತ್ಯ ಅನುಕೂಲವೂ ಸ್ತ್ರೀಯು ಯಾವಾಗಲೂ ಪುರಷನ ಆಧೀನಳೆಂಬುದು ಸರಿಯಾದುದೆಂದು ಶಾಸ್ತ್ರ ಮರ್ಯಾದೆ.

**೨೩ ಗ್ರಹಸ್ಥಾಶ್ರಮಿಗಳಿಗೆ ಸತಿಯಳು ಹೇಗಿರಬೇಕು ?** ಸ್ತ್ರೀ ಪುರುಷರ ಆಚರಣೆ ಒಳ್ಳೇದಾಗಿರಬೇಕು. ಸತಿಯಳಿದ್ದಂತೆ ಪತಿಯು ಸಹ ಸತಿಗೆ ಅನುಕೂಲವಾಗಿರಬೇಕು. ಉಭಯರೂ ಯಾವಾಗಲೂ ಬ್ರಹ್ಮಚರ್ಯ ಪಾಲನೆ ಮಾಡಬೇಕು. ಸೀತಾ ಆರುಂಧತಿ ತಾರಾದೇವಿ ದ್ರೌಪದಿ ಸಾವಿತ್ರೀ ಮೊದಲಾದ ಪತಿವ್ರತಾಸ್ತ್ರೀಯರ ಉತ್ತಮ ಗುಣ ಕಥನವು ಪುರಾಣಾದಿಳಲ್ಲಿ ಹೇಳಿದ್ದು ಕೇಳಿರುವದು ಮರೆಯಲಾಗದು. ಸೀತಾಅರುಂಧತಿ ಸಾವಿತ್ರ್ಯಾದಿ ಪ್ರತಿವ್ರತೆಯರಂಥ ಸ್ತ್ರೀ ಅಪೇಕ್ಷಿಸುವ ಪುರುಷರು ತಾವು. ರಾಮಭೀಮಸತ್ಯವಾನ್ನಾದಿ ಮಹಾ ಪುರುಷರ ನಡಾವಳಿಗನುಸರಿಸಿ, ಸತ್ಯಯಮ ನಿಯಮ, ಬ್ರಹ್ಮಚರ್ಯ ಧರ್ಮಪಾಲನೆ ನಿರತರಾಗಬೇಕು ಸತಿಯು ಹೇಗಿರಬೇಕೆಂಬು

ದನ್ನು ಶ್ರೀ ವಿಜಯ ದಾಸಾರ್ಯರು ಒಂದು ಪದದಲ್ಲಿ ಅನುಗುಣವಾಗಿ ಬಣ್ಣಿಸಿದ್ದಾರೆ.

ಪದ ರಾಗ ಮಾರವ, ಅಟ್ಟತಾಳ

ಪುಣ್ಯದೊರಕುವದೋ ಅನುಗುಣ್ಯವಾಗಿದ್ದ ಸತಿ ಇದ್ದ ಜನರಿಗೆ ॥ ॥ ಪಲ್ಲ ॥ ಬಡತನವಿದ್ದರೂ ನೆರೆಹೊರೆ ಮನೆಯಲ್ಲಿ। ನುಡಿಬಿಚ್ಚಿ ಪೇಳದೆ ಸೌಮ್ಯಳಾಗಿ॥ ಬಿಡದೆ ಮಾಡುವ ಗ್ರಹಕೃತ್ಯಂಗಳು। ಜಗದೊಡೆಯ ಗರ್ಪಿತ ವೆಂದು ಹಿಗ್ಗುತಲಿ ಅನುದಿನ ॥೧॥ ವಿಪರೀತಕಾಲಗಳಟ್ಟಿದ ಕಾಲಕ್ಕೊ। ಸ್ವಪನದಿ ಅವನು ಕಳವಳಿಸದಲೇ॥ ದಿಪುತ ಪ್ರಕಾಶ ವಂತಳಾಗಿ ಪತಿಸೇವೆ। ಅಫಲದಲಿ ಮಾಡಿ ವೊಲಿದೊಲಿದಾಡುವ ॥೨॥ ಲಾವಣ್ಯ ಪುರುಷರ ಕಂಡರೂ ಮನದಲ್ಲಿ। ಭಾವಿಸಬೇಕು ಸಹೋದರ ಯೆಂದು॥ ದೇವದೇವೇಶನ ವಿಭೂತಿ ರೂಪವ। ಆವಾವ ಬಗೆಯಲ್ಲಿ ನೆನಿಸಿ ನೋಡುತ ನಿತ್ಯ ॥೩॥ ಒಂದು ತಂದರೆ ಸಾವಿರಮಾಡಿ ಚಿಂತಿಸಿ। ಇಂದಿರೇಶನೆ ಪತೀರೂಪವೆಂದು॥ ಆಂದದಲಿದ್ದ ವಿಭವನುಸಾರ, ಆ ನಂದವಾಗಿ ಸಂಸಾರ ದೊಳಗಿರೆ ॥೪॥ ಪತಿಯ ಜನಕ ಮಾತೃಮಿಗಿಲಾದ ಜನರಿಗೆ। ಹಿತ ವಂತಳಾಗಿ ನುಡಿಸಿಕೊಳುತ॥ ಅತಿಶಯವಾಗಿ ತನ್ನಯಗಾತ್ರ ಸರ್ವದ॥ ಪ್ರತಿದಿನದಿ ನವೆನು ವಳಾನಾರಿ ಅಧಿಕಾರಿ ॥೫॥ ಚಕೋರ ಚಂದ್ರಮನಲ್ಲಿ ಮನಸ್ಸು ಇಟ್ಟು। ಸುಖಬಡುವಂತೆ ನಾನಾ ಪ್ರಕಾರ॥ ಕಕುಲಾತಿಯಿಂದ ಕಾಮುಕಳಾಗದೇ ಮಹ॥ ಭಕುತಿಯಿಂದಲಿ ಗುರುಹಿರಿಯರ ಸಮ್ಮತ॥೬॥ ಸಂತಜನರೆಂಬ ಕ್ಷೀರಾಂಬುಧಿ ಮಧ್ಯ। ಸಂತತ ಮೀನದಂದದಿ ಬಾಳುತ॥ ಸಂತೋಷಮತಿಯಲ್ಲಿ ಪತಿಧರ್ಮವೊಪ್ಪಿಸಿ ಶ್ರೀ। ಕಾಂತನ ಗುಣ ಕಥನ ಕೇಳಿ ಪೊಗಳಲಾಗಿ ॥೭॥ ನಾಮ ಮೊದಲುಮಾಡಿ ಪ್ರಕೃತಿ ಪರಿಯಂತ। ಪ್ರೇಮದಿಂದಲಿ ಗುಣಗಳ ಗುಣಿಸಿ॥ ಕಾಮದಿ ಚತುರ್ವಿಧ ಪುರುಷಾರ್ಥ ತನ್ನಯ ॥ ಸ್ವಾಮಿಯ(ಯಿಂ)ಲಿಂದಲಿ ಸಂಪಾದಿಸುತಿಪ್ಪ ॥೮॥ ಆವಾವ ಪ್ರಯೋಜನಮಾಡಲು ಸರ್ವದಾ। ದೇವದೇವೇಶನಾಧೀನವೆಂದು॥ ಭಾವದಲ್ಲಿ ತಿಳಿವನ್ಯ ಕರ್ಮವ ಬಿಟ್ಟು। ಪಾವನ ವಿಜಯ ವಿಠ್ಠಲನ ಭಕುತಿ ಯಿಂದ ॥೯॥ (ಭಾವಸಂ॥ ಫಾಲ್ಗುಣ ಬ॥ (೧) ಗುರುವಾರ) ರಚಿಸಿದ್ದು

ಇಂಥ ಪತಿವ್ರತೆ ನಾರಿಯರಿಂದ ಕುಲಪಾವನ, ಇದಲ್ಲದೇ ಅರಣ್ಯಪರ್ವ

ಶ್ರೀಮನ್ ಮಹಾ ಭಾರತದಲ್ಲಿಯೂ, ದ್ರೌಪದಾದೇವಿಯನ್ನು ಕಾಣಲು ಶ್ರೀ ಸತ್ಯಭಾಮೆ ಶ್ರೀ ರುಗ್ಮಿಣಿದೇವಿಯರು ಹೋದಾಗ್ಗೆ, ಕುಶಲ ಪ್ರಶ್ನೆ ನಂತರ ಭೋಜನಾದಿಗಳು ಆದವು ಶ್ರೀ ಸತ್ಯಭಾಮೆಯು ದ್ರೌಪದಿ ದೇವಿಗೆ ಹಾಸ್ಯದಿಂದ ದ್ರೌಪದಿಯೇ ನಾವು ಅಷ್ಟಮಹಿಷಿಯರಿದ್ದರೂ ಶ್ರೀ ಕೃಷ್ಣನೊಲಿಸುವದು ದುಸ್ಸಾಧ್ಯವಾಗಿದೆ ನೀನೊಬ್ಬಳೇ ಪಂಚಪಾಂಡವರ ಮನವೊಲಿಸಿದದು ಆಶ್ಚರ್ಯವಲ್ಲವೆ? ಎಂದು ನುಡಿಯಲು ಆಗ್ಗೆ ದ್ರೌಪದಿ ದೇವಿಯರು ಲೋಕಶಿಕ್ಷಾರ್ಥವಾಗಿ ಈ ಪ್ರಶ್ನೆಮಾಡಿದೆಯಮ್ಮ ಎಂದು, ವಿನಯದಿಂದ ಪತಿವ್ರತಾ ಸ್ತ್ರೀ ಲಕ್ಷಣ, ಪತಿಯ ಸೇವಿಯಿಂದ ಮನವ ನೊಲಿಸುವಬಗೆ, ಬ್ರಹ್ಮಚರ್ಯ ಪಾಲನೆ ಮುಂತಾದ ಅನೇಕ ಧರ್ಮಗಳನ್ನು ಹೇಳಿ, ಸತ್ಯಭಾಮೆಯರ ಅನುಗ್ರಹಕ್ಕೆ ಪಾತ್ರಳಾದುದೆಂದು ವರ್ಣಿಸಿದ್ದಾರೆ. ಸಾಮಾನ್ಯವಾಗಿರುವ ದುಷ್ಟಸ್ತ್ರೀಸ್ವಭಾವನಿಂದ್ಯೆಮಾಡಿರುವರೇ ಹೊರ್ತಾಗಿ ಉತ್ತಮ ಸ್ತ್ರೀಯರ ಗುಣ ಕಥನಮಾಡಿರುವರು. ಇದರಂತೆ ದುಷ್ಟ ಪುರುಷರ ನಿಂದ್ಯ ಮಾಡಿರುವರೇ ಹೊರತಾಗಿ ಪುಣ್ಯ ಪುರುಷರನ್ನು ಹೀಯಾಳಿಸದೆ ಹೊಗಳಿರುವರು. ಸಾಮಾನ್ಯವಾಗಿ ಜನಪದ ವಾಡಿಕೆಯಂತೆಬಾಯಿ, ಕೈ, ಕಚ್ಚೆ, ಶುದ್ಧ ನಾಗಿರಬೇಕೆಂಬ ನಿಯಮವು ಒಳ್ಳೇ ಶಾಸ್ತ್ರ ಸಮ್ಮತ.

ಇನ್ನು ಸ್ತ್ರೀಯರು ಸ್ವಭಾವದಿಂದಲೇ ಚಂಚಲವೃತ್ತಿಯವರು. ಅವರನ್ನು ನಂಬಬೇಡಿರೆಂದು ಅನೇಕ ಇತಿಹಾಸಗಳು ಮತ್ತು ಬ್ರಹ್ಮಚರ್ಯವನ್ನು ಹಾನಿ ಮಾಡತಕ್ಕ ದುಷ್ಟದುರಾಚಾರಿ ಸ್ತ್ರೀ ಪರ ಸ್ತ್ರೀಯರನ್ನು ಸರ್ವಥಾ ನೋಡಕೂಡದೆಂದು ಹಿಂದೆ ಹೇಳಿದೆ.

ಅದಕ್ಕೆ ಶ್ರೀವರದ ಪುರಂದರ ವಿಠ್ಠಲರು ಒಂದು ಪದದಲ್ಲಿ ಪರಸ್ತ್ರೀಯಿಂದ ಪಂಚ ಮಹಾ ಪಾತಕ ಲಭಿಸುವದು. ಕಾರಣ ಅದುಷ್ಟೆಯರನ್ನು ದೂರದಿಂದಲೂ ಸಹ ನೋಡಬೇಡವೆಂದು ಹೇಳಿದ್ದಾರೆ.

**ಪದ ರಾಗ ಆನಂದ ಭೈರವಿ, ಝಂಪೆತಾಳ**

ನೋಡದಿರು ಪರಸ್ತ್ರೀಯರ|| ನೋಡಿದರೆ ಕೇಡಹುದು ತಪ್ಪದಿದಕೋ ||ಪಲ್ಲ|| ನೋಡಿದರೆ ಸ್ತ್ರೀಹತ್ಯ, ನುಡಿಸಿ ಮಾ| ತಾಡಿದರೆ ಗೋಹತ್ಯವು|| ಕಾಡಿದರೆ ಶಿಶುಹತ್ಯ, ವೈ| ಗೂಡಿದರೆ ಬ್ರಹ್ಮಹತ್ಯವೊ||೧|| ಎರಗಳೆಂಗಳೆಯ

ರೊಲುನೆಗೆ ಮರುಳಾಗಿ। ಬರಿದೆ ನೀ ಕೆಡಬೆಡವೋ॥ ದರುಳರೆನು ಲೋಕ ದಲ್ಲಿ ಕರವೊಯ್ದು। ಉರಿಯುಗಂಬವ ನಪ್ಪಿಸುವರು ॥೨॥ ಮರಳುಪಾನವ ಕೇಳು ಪರಸತಿಯು ಉರಿಯೆಂದು ನೋಡು ನಿತ್ಯ॥ ವರದ ಪುರಂದರ ವಿಠಲ ನ್ನನೆನೆದರೆ। ಸ್ಥಿರವಾದ ಮುಕುತಿ ಯಹದು ॥೩॥

**ಅಹೋ ನೋಡಿ ಸ್ತ್ರೀಯನ್ನು ನೋಡಿದರೆ** ಸ್ತ್ರೀಹತ್ಯವಂತೆ ಪ್ರತಿ ನಿತ್ಯ ಈಗಿನ ಪುರುಷರು ಎಷ್ಟು ಸ್ತ್ರೀಹತ್ಯ ಗೋಹತ್ಯ ಶಿಶುಹತ್ತೆ ಬ್ರಹ್ಮಹತ್ಯ ಮಾಡುವರೋ ಎಣಿಕೆ ವಿಸಾರಿದಂದಾಗಿದೆ, ಇದರ ಭಾವವೇನು ಸ್ವಲ್ಪ ನಿಚಾ ರಿಸುವ. ನಿಜವಾಗಿ ಪರಸ್ತ್ರೀಯನ್ನು ಕಾಮುಕ ದೃಷ್ಟಿಯಿಂದ ನೋಡಲೇ ಬಾರದು. ಹೀಗಿರಲು ತನ್ನಗೆ ನಿಜಸತಿಯಳಾದರೂ ವಿಧಿಯುಕ್ತಕಾಲದ ವಿನಾ, ಅನ್ಯ ಸ್ತ್ರೀಯನ್ನು ಕಣ್ಣಿಂದ ನೋಡಿದರೆ, ಪರನಾರಿ ಮಾತಾ ಸಹೋ ದರಿಯರಲ್ಲವೆ? ಇಂತಿರಲು ಅವರನ್ನು ಕಾಮುಕತನದಿಂದ ನೋಡಿದರೆ ಸ್ತ್ರೀ ಯರನ್ನು ಕೊಂದ ಪಾಪ ಬರಲಿಲ್ಲವೆ? ದೃಷ್ಟಿ ನಯನೇಂದ್ರಿಯದಿಂದಲೂ ಬ್ರಹ್ಮಚರ್ಯಪಾಲನೆ ಮುಖ್ಯವಾದುದು. ಮತ್ತು ಯಾವ ಅಕಾರಾದಿ ಏಕ ಪಂಚಾಶದ್ವರ್ಣಗಳು ಭಗವಂತನ ರೂಪ, ಭಗವಂತನ ಅಧಿಷ್ಠಾನಕ್ಕೆ ಯೋಗ್ಯ, ವೇದಪ್ರತಿಪಾದ್ಯಗಳೇ ಅಂಥ ಒಳ್ಳೇಮಾತು, ಸತ್ಯನುಡಿ ಮಂತ್ರ ವೇದಗಳ ಸದೃಶವಾದುವಲ್ಲವೆ? ಅಂಥವನ್ನು ಬಿಟ್ಟು ಕೆಟ್ಟ ಕಾಮುಕ ಪರನಾರಿ ಯಲ್ಲಿ ಮನಸಿಟ್ಟು ಅವಳೊಡನೆ ವ್ಯಭಿಚಾರ ಮಾತುಗಳಾಡಲು ವೇದ = ಗೋ ಸದೃಶವಾದ ಮಾತುಗಳನ್ನು ವೃಥಾ ಉಪಯೋಗಮಾಡಲು ಗೋಹತ್ಯ ದೋಷ ಬರಲಿಲ್ಲವೆ?

ಶಿಶುಗಳಂತೆ ಅಪತಿವ್ರತಿಯು ಜೆಸ್ಥತ್ರಿ ಕಾಡಿ ಬೇಡಿ ಬಳಲಿಸಿದರೆ ನಿಷ್ಪಾ ಪಳೂ ಶಿಶುವಿನ ಸಮಾನ ಸ್ತ್ರೀಯಳನ್ನು (ಕೀಚಕನು ದ್ರೌಪತಿಯನ್ನು ಕಾಡಿ ದಂತೆ) ಕಾಡಿ ಶ್ರಮಕೊಟ್ಟರೆ= (ನಿಷ್ಪಾಪಳಾದ ಸ್ತ್ರೀ) ಶಿಶುವಿನ ಕೊಂದ ಪಾಪ ಬರಲಿಲ್ಲವೆ?

ವ್ಯೈಗೂಡಿದರೆ ಬ್ರಹ್ಮಹತ್ಯ ಇದೊಂದು ದೊಡ್ಡಪಾಪ ಅಯ್ಯೋ ಇದೇನು? ಎದೆಭುಗಿಲೆನುತ್ತದೆ. ಬ್ರಹ್ಮಹತ್ಯವೋ ಹೌದು ಬ್ರಹ್ಮಹತ್ಯವು ನಿಜವಾಗಿ ಒರುವದು ಅದು ಹೇಗೆ?

ಬ್ರಹ್ಮರಬ್ದ ಮುಖ್ಯಾಚ್ಯತ್ವವುಶ್ರೀಹರಿಯಲ್ಲಿ, ಅಮುಖ್ಯ ವೃತ್ತಿಯಿಂದ ಜೀವರಲ್ಲಿ. ಮತ್ತು ಚೇತನಿಗೆ ಭಿನ್ನವಾದ ಬ್ರಹ್ಮಾಂಡ ಬ್ರಹ್ಮನಿಗೆ ನಿವಾಸಯೋಗ್ಯ ದೇಹ ಕ್ಷೇತ್ರದಲ್ಲಿ ಕಂಡದೆ.

ಲೋಕದಲ್ಲಿ ಬೀಜಬಿತ್ತಲು ಬೆಳೆಯಲಿಕ್ಕೆ ಯೋಗ್ಯವಾಗದ ಸವಳು ಭೂಮಿ, ಮರುಭೂಮಿಯಲ್ಲಿ ಬೀಜ ಬಿತ್ತಿದರೆ ಅದರಲ್ಲಿದ್ದ ಅಂಕುರವು ಅಂಕುರಿಸದೇ ಸುಟ್ಟುಹೋಗುತ್ತದೆ. ಇತ್ತ ಬೀಜನಷ್ಟ ಫಲಬರುವ ದಂತೂ ಮೊದಲಿಗಿಲ್ಲ. ಆ ಬೀಜದಲ್ಲಿದ್ದ. ಜೀವನ (ಬೆಳೆಯು) ನಷ್ಟಮಾಡಿ ದಂತಾಗಿ ಸ್ಥಾವರ ಜೀವಿಗಳ ನಾಶಕ್ಕೆ ಕಾರಣವಲ್ಲವೆ? ಮತ್ತು ಚಲೋ ಭೂಮಿಯ ವಶಪಡಿಸಿಕೊಳ್ಳಬೇಕೆಂಬದುರಾಶೆಯಿಂದ ಬೀಜವನ್ನು ಜುಲುಮೆ ಯಿಂದ ಬಿತ್ತಲು, ಆ ಭೂಮಿಯ ಒಡೆಯನು ದುರಾಗ್ರಹಿಯನ್ನು ಹಳಿದು ಬಿತ್ತಿದ ಭೂಮಿಯನ್ನು ಮರಳಿ ಹರಗಿ ಪುನಃ ತನ್ನ ಎರಡನೇ ಬೀಜವನ್ನು ಬಿತ್ತಿ ಬೆಳನು ಬೆಳಸಿ ಅನುಭೋಗಿಸವನು. ದುರಾಗ್ರಹಿ ಶಠಿಯ ಬೀಜವೂ ನಷ್ಟ ಭೂಮಿಯೂ ಕೈವಶವಾಗದೇ ಬೆಳೆಯೂ ಸಿಗಲಿಲ್ಲ ಎಲ್ಲ ಮೂರು ವಿಧ ದಿಂದಲೂ ಹಾನಿ.

ಇದರಂತೆ ಪರದಾರಾ ಪರನಾರಿ ಪರಕ್ಷೇತ್ರವಾದ, ಭೂಮಿಯಲ್ಲಿ ಬಲ ವತ್ತರದಿಂದಲೂ ಅಥವಾ ಒಡಂಬಡಿಕೆಯಿಂದಲೂ ರಮಿಸಿ ಇಂದ್ರಿಯ ಜಿಗುಳಿ ಸಲು, ಇದೇ ಬ್ರಹ್ಮಹತ್ಯ ಪರಾದಾರ ಕ್ಷೇತ್ರ ಬ್ರಹ್ಮರೂಪ, ಹನನ, ಇಂದ್ರಿಯ ದಲ್ಲಿ ಜೀವ, ಮುಖ್ಯಪ್ರಾಣ ನಿರುವರ ಹಿಂಸೆ, ಇಂದ್ರಿಯವು ಗರ್ಭವನ್ನು ತಾಳದೆ, ವ್ಯರ್ಥವಾಗುವಿಕೆ, ಇಂದೊಂದು ಬ್ರಹ್ಮಹತ್ಯ, ಮತ್ತು ಈ ಇಂ ದ್ರಿಯ ರೇತಸ್ಸಿನಲ್ಲಿ ನಾರಾಯಣನೇ ಮುಖ್ಯಗರ್ಭೋತ್ಪತ್ತಿಗೆ ಕಾರಣನಾ ಗಿರುವ ಬ್ರಹ್ಮನನ್ನು ಸಹ ಹನನಮಾಡಿದ ಬ್ರಹ್ಮಹತ್ಯಾಪಾಪನಿಜವಾಗಿ ನಾಲ್ಕು ಬಗೆಯಿಂದ ಬಂದೊದಗುವದು.

ಅಲ್ಲದೆ ಜನನು ತಿರುಗಾಡುವ ಹಾದಿಯಲ್ಲಿ ಹುಲ್ಲು ಬೀಜಬಿದ್ದಿದ್ದರೂ ನಾಟದೇ ನಷ್ಟವಾಗುವಂತೆ, ಕುನಾರಿಯು ರಾದ ಜಾರೆ ಹೆಂಗಳೆಯರಲ್ಲಿ ಅನೇ ಕರು ಅನೇಕ ವಿಧ ಅವಚಾರ ಭೋಗಮಾಡಿರಲು ಗರ್ಭಾಶಯವುಕಂದಿ ಗರ್ಭಧಾರಣೆಯೋಗ್ಯವಾಗದೇ ಇಂದ್ರಿಯಪತನವು ವ್ಯರ್ಥವಾಗಿ, ಬ್ರಹ್ಮಹತ್ಯ

ದೋಷವೆ ಬರುವದು.

ಇನ್ನು ಅನೇಕ ಕಾರಣಗಳುಂಟು ಗ್ರಂಥ ವಿಸ್ತಾರಭಯ. ಹೀಗೆ ಪರ ನಾರಿಯರ ಸಂಗ ಬಿಡುವದೆಂದು ಭಾಗವತಾದಿಗಳಲ್ಲಿ ಹೇಳಿದಂತೆ. ಪೂಜ್ಯ ಆರ್ಯದಾಸಾರ್ಯರ ಹಿತನುಡಿಗಳನೇಕ ಧಾರಾಳವಾಗಿ ಲಭಿಸಿರುವದು ಸುದೈವೇಸರಿ.

ಅವುಗಳನ್ನು ಸರಿಯಾಗಿ ಪೂರುಭಾಗ ಗೈಸಿದ (೧) ಮೊದಲಿಗೆ, ಸ್ತ್ರೀ ಯರಲ್ಲಿರುವ ದುಸ್ವಭಾವ ದುರ್ಗುಣದಿಂದಾಗುವ ಹಾನಿ, (೨) ಇಂಥಜಾರಿ ಯರ ಕಣ್ಣೆತ್ತಿ ನೋಡಬೇಡಿರೆಂಬ ಉಪದೇಶ, (೩) ಮತ್ತು ಇಂಥ ಪಾಪ ಗಳಿಂದ, ಮುಕ್ತಮಾಡಲು ಪ್ರಾರ್ಥನಾ ಹೀಗೆ ಮೂರು ವಿಷಯಗಳನ್ನು ಶ್ರೀ ದಾಸಾಚಾರ್ಯರ ವಚನ ಪದ ಸುಳಾದಿಗಳನ್ನೆ ಕೊಡಲಾಗಿದೆ. ಇದೇ ಸತ್ಪ್ರ ಪ್ರಚಾರಕಾರ್ಯ ಮೂಲ ಉದ್ದೇಶ. ಮೊದಲು, ಒಂದು ವಸ್ತುವಿನಲ್ಲಿದ್ದ, ದುಷ್ಟಗುಣ ದುರ್ಗುಣಗಳನ್ನು ತಿಳಿದರೆ, ಅದು ಬೇಡವೆಂಬ ಹೇಯ ಬುದ್ಧಿ ಹುಟ್ಟುತ್ತದೆ.

## ೨೪ (೧) ಸ್ತ್ರೀ ದುಷ್ಟ ಸ್ವಭಾವ

ಶ್ರೀ ಪುರಂದರ ದಾಸರು ತನ್ನ ಸ್ತ್ರೀಯಾದರೂ ಪತಿವ್ರತೆಯೂ, ವಿನೀ ತಳೂ ಆಗಿರಬೇಕಲ್ಲದೇ ಚಂಡಿ ಮಕ್ಕಮಾರಿ ಹೆಂಣಿನ ಸಹವಾಸಬೇಡವೆಂದು ಪ್ರಾರ್ಥಿಸಿರುವರು

ಪದ ರಾಗ ಕಾಂಬೋದಿ ಛಾಪುತಾಳ

ಪತಿ ಭಕುತಿ ಇಲ್ಲದಿಹ ಸತಿಯುಸಂಗ। ವ್ರತಗೆಟ್ಟು ಸುಖಪಡೆಯಲಿಲ್ಲ ವೋ ರಂಗ ॥ ಪಲ್ಲ ॥ ಗಂಡಬಂದರೆ ಎದ್ದು ನಿಲ್ಲದೆ ಮಂಚದ ಮೇಲೆ। ಚಂದ ದಿಂದಲಿ ಕುಳಿತು ಮಾತಾಡುತಿಪಳ ॥ ಅಂದವಿಲ್ಲದ ಮಾರಿ ಕಾಡಿಬೇಡುವ ಸತಿಯು। ಗಂಡು ತೊತ್ತಿನ ಸಂಗವಭಿಮಾನ ಭಂಗ ॥೧॥ ಒಂದು ತಂದರ ಮನೆಗ ಹತ್ತೆಂದು ಭಾವಿಸದೆ। ತಂದರೆಹತ್ತು ಮನೆ ಲೊಂದು ಮಾಡಿ॥ ಇಂದೇ ನಿಲ್ಲವೊ ಎಂದು ಮುಖ ಮೂರು ಕಡೆ ತಿರಿವಿ। ಕೊಂಡು ಹೋಗುವನಾರಿ ದೊಡ್ಡ ಬಕಮಾರಿ ॥೨॥ ಮಕ್ಕಳಿಗೆ ಕೊಡಲಿಲ್ಲ ಮರಿಗಳಗೆ ಇಡಲಿಲ್ಲ ॥ ನಕ್ಕು ವರೆ (ನಾಲ್ಕುವರೆ) ಬಣ್ಣ ಭಂಗಾರವಿಲ್ಲ ॥ ಚಿಕ್ಕಿವಳು ನಿನ್ನ ಕೈಹಿಡಿದು ಕೆಟ್ಟೇ

ನೆಂಬ। ಮುಕ್ಕು ತೊತ್ತಿಯ ಸಂಗವಭಿಮಾನ ಭಂಗ ॥೩॥ ತಾಯಿ ಹೊರ ತೆನು ಮೊದಲಿ ತಂದೆ ದಾಯಾದ್ಯರಾ। ಮಾಯೆಯನು ಬಿಡು ನಿನಗೆ ಬೇಕಾ ದರೆ॥ ನ್ಯಾಯವಲಿ ಬೇರೆ ಮನೆಯನು ಕಟ್ಟು ಎಂದೆಂಬ। ಮಾಯಗಾತಿಯ ತೊತ್ತು ಹೆಡತಲೆ ಮೃತ್ಯು ॥೪॥ ಅಣ್ಣ ತಮ್ಮಂದಿರಾ ಹೆಣ್ಣು ಮೊಡ ಹುಟ್ಟಿ ದರ। ಇನ್ನು ಬಿಡ:ನಾ ನಿನಗೆ ಬೇಕಾದರೆ ॥ ಬನ್ನಣೆಯ ಮಾತಾಡಿ ಕ್ಲೇಶ ಬಡಿ ಸಳಬಡಿಸ। ಚನ್ನ ಶ್ರೀ ಪುರಂದರ ವಿಠ್ಠಲದಯಮಾಡೋ ॥೫॥

ಮತ್ತು ವಿರದವಾಗಿ ಸ್ತ್ರೀಯ ದುಷ್ಟಸ್ವಭಾವವನ್ನು ಹೇಗೆ ಮನದಣಿ ಯುವಂತೆ ವರ್ಣಿಸಿ ಸ್ತ್ರೀಯಲ್ಲಿ ಆಸಕ್ತಿ ಕಡಿಮೆಯಾಗಲು ಉಪಾಯ ಹೇಳಿ ದ್ದಾರೆ.

ರಾಗ ಪಂತುವಾಳಿ ಅಟ್ಟತಾಳ

ಹೆಂಡತಿ ಪ್ರಾಣ ಹಿಂಡುತಿ ದೊಡ್ಡ। ಕೊಂಡಕೋತಿಯಂತೆ ಕುಣಿ ಸುತ್ತಿ ॥ಪ॥ ಹೊತ್ತಾರೆ ಏಳುತ್ತಿ ಹೊರಗೆ ತಿರಿಗಾಡುತ್ತಿ। ಹೊತ್ತುಹೋ ಯಿತು ಭತ್ತ ತಾ ಯೆನ್ನುತ್ತಿ॥ ಉತ್ತಮ ಗುರುಹಿರಿಯರ ಮಾತು ಮಿರಾರುತ್ತಿ। ಮೃತ್ಯುದೇವತೆಯಂತೆ ಮನೆಯೊಳಗಿರುತಿ ॥೧॥ ಇಲ್ಲದ್ದು ಬೇಡುತ್ತಿ ಸುಳ್ಳು ಮಾತಾಡುತ್ತಿ। ಒಳ್ಳೇ ಊಟವನುಂಡು ಕುಳಿತಿರ್ಪೆನೆಂತಿ॥ ಎಳ್ಳಿನಷ್ಟು ಕೆಲಸ ಮಾಡಲಾರೆನೆಂತಿ। ಎಲ್ಲೆಲ್ಲಿ ತಲೆ ಯೆತ್ತದ್ಹಾಂಗೆ ಮಾಡುತ್ತಿ ॥ ೨ ॥ ಹಿರಿಯ ತನಕ್ಹೋಗುತ್ತಿ ಗರುವಿಕೆ ಮಾಡುತ್ತಿ। ನೆರೆಹೊರೆಯವರ ಕೂಡ ಬಡಿದಾ ಡುತ್ತಿ॥ ಧೊರೆಸಿರಿ ಪುರಂದರ ವಿಠ್ಠಲನ್ನ ಸ್ಮರಿಸದೆ। ದುರಿತಕ್ಕೆ ಗುರಿಯಾಗಿ ನೀ ನಿಲ್ಲುತ್ತಿ ॥೩॥

ದುಸ್ವಭಾವದ ಸತಿಯು ದೊರಕಿದರೆ ಅದರಿಂದಾಗುವಕೇಡು ಏನೆಂಬದು ಚನ್ನಾಗಿ ತಿಳಿಯುವದು,

ಪುರಂದರ ವಿಠಲರು

ಪದ ರಾಗ, ಪಂತುವರಾಳಿ ಅಟ್ಟತಾಳ

ಒಲ್ಲೆನೆ ವೈದೀಕ ಗಂಡನ ನಾ। ನೆಲ್ಲಾದರು ನೀರ ಧುಮುಕುವೆ ನಮ್ಮಾ ॥ಪ॥ ಇಟ್ಟೆನೆಂದರೆ ಇಲ್ಲ ತೊಟ್ಟೆನೆಂದರೆ ಇಲ್ಲ। ಕೆಟ್ಟ ಸೀರೆಯ ನಾ ನುಡ ಲಾರೆನೆ ॥ ಹಿಟ್ಟು ತೊಳಸಿ ಎನ್ನರಟ್ಟೆಲ್ಲ ನೊಂದವು। ಎಷ್ಟಂತ ಹೇಳಲಿ

ಕಷ್ಟದ ಪಗತನ ||೧|| ಕೃಷ್ಣಾ ಜಿನವನ್ನು ರಟ್ಟೆಯಲಿ ಹಾಕಿಕೊಂಡು || ಬಟ್ಟೆ
ಲಿಗಿಂಡಿಯ ಹಿಡಿದಿಹನೆ|| ಧಿಟ್ಟತನದಿ ನಾನೆಮರಿಗೆ ಹೋದರೆ || ದೃಷ್ಟಿಯಿಂ
ದಲಿ ಎನ್ನ ನೋಡನಮ್ಮ ||೨|| ನಿನ್ನಾಣೆ ಹುಸಿಯಿಲ್ಲ ಬಿನ್ನಣವಾತಲ್ಲ |
ಕಣ್ಣು ಸೊನ್ನೆಯಂತು ಪೊಡಲೆ ಇಲ್ಲ|| ಮುನ್ನಿನ ಜನ್ಮದಿ ಪುರಂದರವಿಠ್ಠಲನ್ನ|
ಚನ್ನಾಗಿ ಪೂಜಿಯಮಾಡಲಿಲ್ಲಮ್ಮ ||೩||

ಸ್ತ್ರೀ ದುಷ್ಟ ಸ್ವಭಾವ, ಭಾಮಿನಿ ಷಟ್ಪದಿ, ಆದಿಕೇಶವ,

ಆಯುವತಿಯರು ಕಾರ್ಯಗತಿಗಳ| ಬೇಯ ಮಾತ್ಸರು ಕುಟಿಲ
ವಿದ್ಯದಿ| ಮಾಯಗಳ ಹಣ್ಣುವರು ಸತ್ಯದಿ ಹುಸಿಯ ನಾಡುವರು|| ಕಾಯ
ವಳಿದರು ಅಂತರಂಗವ! ಬಾಯ ಬಿಡರನ್ಯಾರ್ಯ ಮಾಡುವ| ರಾಯತಾಕ್ಷಿ
ಯರಂಗ ಪಿದು ಸುರರಾಜಕೇಳೆಂದ||೧||ಕಪಟವನು ಪರಾತ್ಮಬುದ್ಧಿಯೋ|
ಳುಪಮೆಗಾಣದೆನುಡಿವ ದೋಷಿವರು| ಚಪಲ ಚಿತ್ತದಿ ಮನವ ವಂಚಿಸಿ
ಮಾತನಾಡುವರು|| ಗುಪಿತವ ಪಡೆರಾಪ್ತರೊಡವೆಯ| ನಪಹರಿಸಿ ಸಾಹಸದಿ
ಮರೆವರು | ನಿಪುಣೆಯರಿಗಿದು ಸಹಜಗುಣವಮರೇಂದ್ರ ಕೇಳೆಂದ ||೨||
ಸಾವಿಗೆಣಿಸರು ಮನದಿ ಸತ್ಯವ| ಭಾವಿಸರು ಹುಸಿಯೊಲುಮೆ ದೋರುವ |
ರಾವ ಪರಿಯಲಿ ಹೃದಯದೊಳಗೊಡರ ಸೃತಗಳ ನಾಡುವರು || ಪಾವಿವರ್ತನ
ವಿಲ್ಲ ಸತ್ಯಕೆ| ಪಾಪಕನ ಹುಟ್ಟಿಪರು ಸತಿಯರ| ನಾವರಿಯಲಿನಂಬ
ಬಹುದೈ ಎನುತ ಹೋರಪಂಟ ||೩|| ನಳಚರಿತ್ರೆಯಲ್ಲಿ ಹೆಂಣು ಮಕ್ಕಳನ್ನು
ಪರಿಪರಿಯಿಂದ ವರ್ಣಿಸುವ ದಾಸರು ವೈರಾಗ್ಯ ತಾಳಿದ ತತ್ವಜ್ಞಾನಿಗಳು
ಹೆಂಗಸರನ್ನು ಮನವಾರೆ ಹಳಿದಿರುವರು. ಸ್ತ್ರೀಯರನ್ನು ನಂಬಲು ಸಲ್ಲ.

ವಿಜಯ ವಿಠ್ಠಲರು, ಪದ ರಾಗ ಪಂತುವರಾಳಿ ಅಟ್ಟತಾಳ

ನೆಚ್ಚಬ್ಯಾಡೀ ಪತಿತನಾರಿಯ| ಕಚ್ಚುವ ಹಾವಿನ ಸಂಗವೆನ್ನಿ| ನಿಚ್ಚದಲಿ
ಚಿತ್ತಚಂಚಲಳಾಗಿ ಮೆಚ್ಚುಗೊಳಿಪಳು ಗುಣಿಸಿ ನೋಡಿ ||ಪಲ್ಲ||
ಯುವತನವ ಬರುವ ಪರಿಯಂತ್ರ ಯಾವ ದನಿತು| ಮೊಗವನೆತ್ತದಲೆ| ಯವೆ
ತೆಗೆದು ದಿಕ್ಕುಗಳ ನೋಡದೆ| ಅವನಿಗೆ ಬಾಗಿನಡೆವು ತಾ|| ತವರ ಮನೆಯವ
ರನು ಹಳಿದು| ನವನವ ಪ್ರಾವರ್ತನವನು ತೋರುತ || ಅವಗುಣಂಗಳಿಲ್ಲ
ದೋಷಾದಿಲಿ| ಲವಕಾಲವನ್ನು ಕಳೆವನಾರಿಯಾ ||೧|| ಪ್ರಾಯಾವಸ್ಥೆ ಬಂದು

ಪ್ರಾಪ್ತವಾಗಲು। ಆಯತಾಕ್ಷಿಗಳ ತಿರುಹಿಮೆಲ್ಲನೆ। ಬಾಯಲ್ಲಿ ಒಂದೊಂದು ಕ್ರಮಾನುಸಾರದಿ। ನೋಯ ನೋಯುದಂತೆ ವಚನವ॥ ದಾಯಿಗಳಂತೆ ಸುತ್ತ ರಿಸಿಬಯ್ಯಾಡಿ॥ ಮಾಯವೆ ಕಲ್ಪಿಸಿ ಮುಸಿಮುಸಿನಗೆ। ಆಯಕ್ಕೆ ತಗಲಿಕಂಡಾ ಜನರಿಗೆ। ಘಾಯಕಾಣಿನದಂತೆ ಮಾಳ್ಪಳ ॥೨॥ ಅತ್ತೆಮಾವನಿಗೆ ಅತ್ಯಂತ ವಾಗಿ ಪ್ರತಿ। ಉತ್ತರವೇಳೋಳು ಅಂಜಿ ಅಂಜದಂತೆ ॥ ಉತ್ತುಮಾರ ಮನೋರಥವೆ ಕೆಡಸಿ। ಅತ್ತಿಗೆಸಾದುನಿ ಮಿಗಿಲಾದ। ಕತ್ತೆನಾಯಿ ನರಿಯೆಂಬೋ ಸೊಲ್ಲಲ್ಲಾದೆ ಎತ್ತಲಾದೆರು ವಂಚಿಸಿ ಗಂಡನ್ನ। ತನ್ನತ್ತಮಾಡಿ ಕೊಂಡು ಹಗಲಿರಳು ಧ್ಯೈ ತಥ್ಥಾಯಂದಾಡಿಸಿ ಕುಣಿಸಿಯಲೋ ಯಿ। ನಿತ್ತ್ಯ ನಿಲ್ಲು ಎಂಬ ಸತಿಯಗುಳ ॥೩॥ ಮಿಥುನ ಭಾವಕೆ ಕೊಂಡ ತೆರದಿ। ಪತಿಯು ಸಮಯ ನೋಡಪೆ ತಾನು ನಥೆಯಿಂವಲಿ ಸಂಸಾರ ದೊಳಗಿದ್ದು। ಸುತ್ಕ್ರ ಪಡದು ಹವ್ಮ್ರಲೀ ಕಥನ ವೆಬ್ಬಿಸಿ ಗಂಡನ್ನ ಅಡವಿ। ಪಥವ ಹಿಡಿಸಿ ಹಣದ ಗೋಸುಗ ಸತತ ಮನೆಯೊಳಗಿದ್ದು ಬದುಕು। ಮಿತಿಯಿಲ್ಲದೆ ಭಕ್ಷಿಸುವ ನಾರಿಯ ॥೪॥ ಒಲಿಪಿಗೆ ನೀವು ಮೋನಗೊಂಡು। ಪೊಲಿಯುದಿರಿ ಸ್ತ್ರೀಯರಿಗೆ ಸೋತು। ಕಲಿಗೆ ಪ್ರಥಮ ಪಟ್ಟದ ಗದ್ದಿಗೆ ಸುಲುಭವಲ್ಲವೋ ಸುಖವಿಲ್ಲ ॥ ಕಲಕಲಾ ಮಹಾಕಾತುರದಿಂದಲಿ ಪೊಳಗಾಗದಿರು। ಒಳಿತು ಪೇಳುವೆ। ಜಲ ಜಾಕ್ಷವಿಜಯ ವಿಠಲನ। ನಂಬಿರೊ ನಂಬಿರೊ ಚತುರರು ॥೫॥

ವಿಜಯ ವಿಠ್ಠಲರ ಸುಳಾದಿ ರಾಗ ಸಾವೇರಿ ತಾಳ ಧ್ರುವ

ಹೆಣ್ಣಿನ ಬಣ್ಣ ನೋಡಿ ಕಣ್ಣಗೆಡದಲಿರಿ। ಹೆಣ್ಣು ಹೆಡತಲೆ ಮೃತ್ಯು ಕಾಣೊ। ಅನಂತ ಬಗೆಯಿಂದ ಜನ್ಮಜನ್ಮದಲ್ಲಿದ್ದ। ಪುಣ್ಯರಾಶಿಗಳೆಲ್ಲ ಹ್ರಾಸಕಾಣೊ। ಹೆಣ್ಣುಹೊನ್ನುಮಣ್ಣು ನಿನ್ನಾದೆನ್ನದಿರೊ। ಮುನ್ನೆದಾಯಿಗಳುಂಟೊ ಒಳಬಳಗೆ। ಹೆಣ್ಣಿನಮನದಲ್ಲಿ ಹಗಲು ಗತ್ತರೆ ಇಪ್ಪಮ। ನಿನ್ನೊಳು ನೀ ತಿಳಿದು ನೆಚ್ಚದಿರೊ। ತನ್ನ ಮೊದಲುಮಾಡಿ ಮಾವ। ಅತ್ತೆಗಂಡ ತಾಯಿ। ಅಣ್ಣತಮ್ಮ ಮಿಕ್ಕಾದ ಬಾಂಧವರ। ಚನ್ನಾಗಿ ಹಿಂಸೆ ಮಾಡಿ ಧ್ಯೈಯೆಂದು (ಧ್ಯೈರ್ಯದಲ್ಲಿ ತಿರುಗುವಳು) ಬಣ್ಣಣೆ ಬಾಯಲ್ಲಿ ಹೇಳಲಳವೆ। ಬಣ್ಣಿಸಿ ರಂಬಿಸಿ ನಿನ್ನಕರದುಕ್ಕಿನ। ಕಣ್ಣೋಲಿಕುಟ್ಟಿಸುಖವ ಬಡಿಸಿ। ತಿನ್ನಹಾಕುವಳುತಿಕ್ತಾದಿನಸದಿಂದ। ಖಿನ್ನವಿಲ್ಲದಂತೆ ವಿಟ ಪುರುಷಗೆ। ಅನ್ನ

ಗುಣ್ಯವಾಗಿಪ್ಪಳೊ ಪೆವರದಂತೆ। ಕಣ್ಣೊಳೊಬ್ಬ ಚನ್ನಿಗನ್ನು ಇಟ್ಟು। ಅನ್ಯಾಯವೆನಿಸಳು ನೋಳ್ಪರಿಗೆ। ಅಣ್ಣ ತಮ್ಮ ತಂಪೆ ಮಾವ ಮೈದುನಭಾವ। ತನ್ನನಂದನ ಅಳಿಯಗೋತ್ರಜರು। ಚನ್ನಾಗಿ ಚನ್ನಿಗರಾಗಿ ಸುಳಿದಾಡಲು। ಸುನ್ನುಮಥನ್ನ ಪೇಕ್ಷಮಾಡುವಳು। ನಣ್ಣವ ಪ್ರಾಯ ವೃದ್ಧ ಚಾಂಡಾಲಾದಿ ಜಾತಿಯ। ಉನ್ನವುದಾ ಪಿಡಿಸಿ ಪೀಡಿಪಳೋ। ವಿಣ್ಮೂತ್ರಾಸುಲಿನ ಹೊಲಸು ಸುಲ ಶ್ಲೇಷ್ಮಾ। ಕೆನ್ನೀರುತ್ವಕ್ ಚರ್ಮ ಅಸ್ಥಿಮಜ್ಜಾ। ಘನ್ನಮಾಂಸಮೇದ ನರದ ಬಳ್ಳಿಗಳು ವಾ। ಸನ್ನೆ ಬೆವರು ಕಫ ರೋಮ ಭರಿತಾ। ಅನ್ನಾದಿಂದಲಿ ಇವಳು ಚಿತ್ರ ವಿಚಿತ್ರ ಲಾ। ವಣ್ಯವಾಗಿ ತೋರುವಳು ಇಲ್ಲದಿರೆಬರಿದೆ। ಹೆಣ್ಣುಕುಣಪ ಸಮವೆಂದು ತಿಳಿದ ಮನುಜ। ಧನ್ಯಧನ್ಯ ನವನೊ ಧಾರುಣಿ ಯೊಳಗೆಲ್ಲ। ಗನ್ನ ಗತ್ತಿಯೊ ಅನ್ಯ ಸ್ತ್ರೀಯರ ಪ್ರೊಲಿಮಿಯು। ಥಣ್ಣನ ಪಾಪ ಕನು ತತ್ಕಾಲಕ್ಕೆ। ಎಣ್ಣೆಯೊಳಗೆ ನೊಣ ಬಿದ್ದಂತೆ ದೀಪಿಗಿ। ಹಣ್ಣೆಂದು ಕ್ರಿಮಿಗಳು ಬಂಮು ಎರಗಿದಂತೆ। ಉಣ್ಣದಿರು ಈ ಭವಣೆ ಉದ್ದಂಡ ತನ ಬ್ಯಾಡ। ನಿನ್ನಾ ಕುಲಕೆ ಕೀರ್ತಿ ಬರಲಿ ವೇಗ। ಚನ್ನಿಗರಾಯಾ ವಿಜಯ ವಿಠ್ಠಲರೇಯನ ಕಾರುಣ್ಯವನು ಪಡೆದು ಮಹಾ ಧೈರ್ಯಮಾಡೊ ॥೧॥

ಮಟ್ಟತಾಳ

ಜನನಿ ತನುಜಾ ಅತ್ತಿಗೆ ನಾದಿನಿ ಅತ್ತೆ ಮಿಕ್ಕ॥ ಜನರ ಸಂಗಡೆಪ್ಪನ ವಲ್ಲಿ ನೀನು। ಕನಸಿನೊಳಗೆ ಏಕಾನನದಿ ಕುಳ್ಳಿರದಿರು ॥ ಮುನಿಗಳಿಗಾದರೂ ಮನಸು ಓಡಿಯುವವು ಬಲು ಕ। ಠಿಣಕಾಣೊ ಮರುಳೆ ವನಿತಿಯರ ಕಂ। ಪನೆ ಕುದಿಯದಿರು ಮನಸು ನಿನ್ನಾಧೀನವಾದರೂ ಒಂದು। ಕ್ಷಣಾತುರ ವೆಂದು ವೆಸದಿರು ಪ್ರತಿದಿನ। ಪಣವಮಾಡಿದಿರು ಗುಣವಂತಳು ಎಂದು। ನೆನೆ ನೆನೆದು ಯೋಚನೆ ಯೊಳಗಾಗದಿರು। ಧನ ಉಳ್ಳನಕನಿನ್ನನು ಸೇವಿಸುವಳು। ಜನನಿಗಿಂತ ಮಿಗಿಲೆನಿಪಳು ಹಿತದಲ್ಲಿ। ಧನರಹಿತ ನಾಗೆ ತೃಣಕಿಂತಲಿ ನೀ। ಚನಮಾಡಿ ತನ್ನ ಮನೆಯ ಮುಂದಣ ಭೃತ್ಯನ ತೆರದಿ ಉದಾಸೀನದಿಂದಲಿ ಮಾತನು ಪೇಳುವಳು ಮಂಚನೆಯಲ್ಲಿ। ಅನುಗಾಲ ಕುಣಿಸುವಳೊ ಕಡಿಗೆ। ಹೆಣಮನುಜನನಾಡಿ ಘನ್ನಗುಣಗಣಸರ್ವಸ। ಜ್ಜನ ನಡತೆಗಳು ನಾಶನವಾ ಗುವವು ಕೇಳೊ। ಘನಯಾತನೆ ಗೆಡೆಮಾಡಿ ನಿನ್ನ ಅನುಗಾಲಾ। ಆನಳನ

ಮುಂದೆ ಜೆನ್ನೆಯುನು ಅಯುಸ್ಕಾಂತ| ಮಣಿಯು ಬಳಿಗೆ ಕಬ್ಬಿಣವ ತಂದಿಡಲ-
ಸು|ವ್ಯಾನೆ ಬಿಡಬಲ್ಲದೆ ನೋಡು ಯೋಚನೆಮಾಡು | ವನಧಿಶಯನ ನಮ್ಮ
ವಿಜಯ ವಿಠ್ಠಲ ಮೋ|ಹನ ಮೂರುತಿಯ ಸ್ಮರಣೆಯು ಬಿಡದಿರು ||೨||

### ತ್ರಿವಿಡಿತಾಳ

ಸ್ತ್ರೀಯರ ಮೋಹಕ್ಕೆ ಸೌಭರಿ ಮಹ ಋಷಿ| ರಾಯನಲ್ಲಿಗೆ ಪೋಗಿ ಬೇಡಿಕೊಂಡ | ರಾಜಋಷಿ ವಿಶ್ವಾಮಿತ್ರ ಕಾವ ಸುಪಹತಿಗೆ | ನಾಯಿ ಎಂಪದಿ ಪೋದ ಸ್ವರ್ಗವೆಡಿಗೆ| ಕಾಯಮಾ ಕೆಡಸಿಕೊಂಡ ಇಂದ್ರನು ಮದದಿಂದ| ಹಾಯಿಮ ಚಂದ್ರನು ತನ್ನ ಕಳೆಗುಂದಿದ| ನ್ಯಾಯು ವಿಲ್ಲದೆ ತಿಲೋತ್ತಮಿಯ ಗೋಸುಗವಾಗಿ| ಸಾಯಮಾ ಬಟ್ಟರು ಒಡಹುಟ್ಟಿದವರು| ಬಾಯಿ ಕೊಬ್ಬಿನಲ್ಲಿ ಕೀಚಕ ಕುಲದೊಡನೆ| ಆಯುದಿಂದಲಿ ಪೋದ ದುಃಖದಲ್ಲಿ| ರಾಯರಾಯರು ಮಹಾ ಧೈರ್ಯಶಾಲಿಗಳಾಗಿ | ಬಾಯ ಬಿಡುವರು ಹೆಣ್ಣಿನ ಕಾಣುತ್ತ | ಮಾಯುದೊಳಗಬಿದ್ದ ಕಡೆಗೆದ್ದವನಿಲ್ಲ | ಛಾಯಾ ಸೋಂಕಲು ಲೋಕಾ ಮರುಳಾ ಹೋದು| ಕಾಯಜನ ಹೊಲ್ಲ ಎಂದೆಂದಿಗೆ ಬಿಡದೆ| ದಾಯಿಗನಾಗಿ ಬೆಂಬಿಡದಲಿಪ್ಪ| ನಾಯಕ ಹೊಡದು ರುದ್ರನ ತಪಗೆಡಸಿದ |ವತಾಯಿ ಎಕ್ಕಳ ನೋಡ ಒಬ್ಬನಿರೆ| ಕಾಯಿದು ಕೊಳಲಾಗಿ ಅಂಗಜನಬಾಧೆ | ಸ್ತ್ರೀಯರ ಶೋಭನ ಸ್ವಭಾವ ವಿಶೇಷವು| ವಾಯು ಇದ್ದಾಗಲೆ ಇನಿತೆಂದು ತಿಳಿದು ಉ| ಪಾಯಚಿಂತಿಸು ಮುಂದಿನ ಗತಿ ಮಾರ್ಗಕ್ಕೆ | ಪ್ರಾಯ ಎರಡು ದಿವಸ ಅಗ ರೊಳು ಈ ಸುಖ| ಹೇಯವು ಸ್ಥಿರವಲ್ಲ ಕಾಣೊ ಅರ್ಕಶಾಕಾ | ನೋಯು ಮಾಡಿ ಅದರ ಕ್ಷೀರವ ಕುಡಿದಂತೆ | ಪ್ರಾಯಸ ಬಡದಿರು ಬರಿದೆ ಬಳಲಿ | ತೋಯನದಿಯೊಳಗೆ ಸೂಸಿದಂತೆ ಇದರೊಳು | ಪ್ರೀಯವಾಗದು ಕಾಲ ಹೋದ ವ್ಯಾಲೆ | ಮಾಯವಲ್ಲದೆ ಲೇಶಗತಿಗೆ ಸಾಧನವಲ್ಲ| ತೋಯಿಸದಿರು ಪಾಪದಲ್ಲಿ ದೇಹವ | ಆ ಯಮರಾಯನು ನಿನ್ನಯ ಕುಲ ನೀ| ಕಾಯವ ಎಳದೊಯ್ದು ಭಂಗಪಡಿಸಿ| ಪೂಯಸ ಮಿಗಿಲಾದ ನರಕದಲ್ಲಿ ಇಟ್ಟು| ಶ್ರೇಯಸ್ಸು ಕೆಡಿಸುವ ಬಲು ಜನುಮದ| ಶ್ರೀಯರಸ ರಂಗ ವಿಜಯ ವಿಠ್ಠಲರೇಯನ | ಗಾಯಿಕನಾಗಿ ಸಂತತದಿ ಸುಖಿಸೊ ||೩||

ಅಟ್ಟತಾಳ

ಶ್ರುತಿಶಾಸ್ತ್ರ ಪುರಾಣ ನಾನಾ ತೀರಿತ ಧರ್ಮ। ವ್ರತಗಳು ಚರಿಸಿ ಪುಣ್ಯವಂತನಾದರು। ಗತಿಗೆ ವಿರೋಧವಾಗಿದ್ದ ಕರ್ಮ ಅನ್ಯ। ಸತಿಯರ ಒಲುಮೆಗೆ ಸೋಲಲು ಸತ್ಕರ್ಮ। ಗತವಾಗಿ ಪೋಗೋದು ಏನಂಬೆ ಸೋಜಿಗ ಕ್ಷಿತಿಯೊಳು ಕಲಿಗೆ ಕೇವಲ ಆಶ್ರಯವೆನ್ನಿ ಹಿತವಾಗಿ ಪೇಳುವೆ ಕಣ್ಣಿನಿಂದಲಿ ಕಾಣುತಲಿ ಮದ್ಯಪಾನ ಮಾಡಿದ್ದಕ್ಕಿಂತ। ಅತಿ ಶಯವಾದ ಮುಂದಮುದ ಹೆಚ್ಚೋದು। ಪ್ರತಿಲೋಮ ಅನುಲೋಮರು ಉದ್ಭವರಾಗಿ ಶಾ। ಸ್ತ್ರಿತದಲ್ಲಿ ಬೆಳೆಯಲು ಸುಕುತಿಯ ಮಾರ್ಗಕ್ಕೆ। ಪ್ರತಿಕೂಲವಲ್ಲವೆ ಶೋಭನ ವಂದಿಲ್ಲ। ಯತಿಯಾದವರೇನು ಮೋಕ್ಷಮಾರ್ಗಕ್ಕೆ ಸಲ್ಲ। ಮತಿವಂತರು ಕೇಳಿ ಮರಿಯ ದೀರಿ ಪರ। ಸತಿಯರ ಕೂಟ ಕಾಳಕೂಟದ ಲೇಪ। ತತ್ಕಾಲಕೆ ದುರ್ವ್ಯಸನ ಸೀತಳವಾದ। ಹುತವಹನಂತೆ ತೋರುವದು ಆ ತರುವಾಯ। ಖತಿಗೊಳಿಸು ವದು ಇಹಪರದಲಿ ಬಂದು। ಅತಿಕಾಮಾತುರ ಸೀನಾದಡೆ ನಿಜಸು। ಸತಿಯಲ್ಲಿ ರಮಿಸೋದು ಇವಕೆ ವಿವರ ಉಂಟು ಋತುಕಾಲ ನಿಷಿದ್ಧ ಅನಿಷಿದ್ಧ ದಿನ ವೆಂದು। ಮಿತ ಉಂಟು ಉತ್ತಮ ಮಧ್ಯಂತವೆಂಬುವದು। ಹಿತವಾಹೋ ದಂಗಕ್ಕೆ ಕುಲಕೆ ಭೂಷಣ ಕೀ। ರುತಿ ಬಪ್ಪದು ಗುರುಹಿರಿಯರ ಸಮ್ಮತ। ಸುತಸುತರಾದ್ಯರು ವಂಶಜರೆನಿಪರು। ಪಿತಪಿತಮಹ ಪ್ರಪಿತಮಹ ಮಾತಾ ಮಹಾ। ತತಿಗಳು ಇವರಿತ್ತ ದಾನಾದಿಗಳಿಂದ। ಕೃತಕಾರ್ಯರಾಗಿ ತಾವೆಲ್ಲ ತಮ್ಮ ಯೋ। ಗ್ಯತದನಿತು ಗತಿಯಲ್ಲಿ ಪರಿಭಕ್ತಿಯಲ್ಲಿಪ್ಪರು। ಪತಿತ ಪಾವನ ಸಿರಿ ವಿಜಯ ವಿಠ್ಠಲಗೆ ಅ। ರ್ಪಿತವಾಗುವಂತೆ ನಿಜರಾಣಿಯ ಪ್ರೀತಿ ಬಡಿಸೊ ॥೪॥

ಆದಿತಾಳ

ಹಣೆಬೆವರು ತಲಿರೆ ದಣಿದು ಏಳುತಲಿರೆ। ಕುಣಿದಾಡುತಲಿರೆ ತನವು ಮುಚ್ಚದಲಿರೆ। ಮನೆಯೊಳೊಬ್ಬಳಿರೆ ಧನಿಕನಸಂಗವಿರೆ॥ ಹೆಣಲು ಬಿಚ್ಚಿ ಕೊಂಡಿರೆ ಜನರ ಹಳಿವುತಿರೆ। ಹಣವಬೇಡುತಲಿರೆ ಮುನಿದು ಪೋಗುತಲಿರೆ॥ ಕೊನೆ ನೋಟ ನೋಡುತಿರೆ ಋಣವ ಮಾಡುತಲಿರೆ। ಅನದೆ ಹಾಕುತಿರೆ ಕನಿಕರ ವಿಲ್ಲದಿರೆ ಕನಕ ಬಯಸುತಿರೆ। ಜನಪತಿಯ ಕೇಳುತಿರೆ ಉಣುತ ಏಳುತಲಿರೆ ಸುಣಪುತಿದ್ದುತಲಿರೆ॥ ಇನಿತುಳ್ಳನಾರಿಯ ಗುಣಗಳು ತಿಳಿದು ಒ।

ಬ್ಬನೆ ಇರಲಾಗದು ಜನ ವಿರಹಿತನಾಗಿ। ನಿನಗೆ ನೀನು ತಿಳಿದು ವನಿತೆಯರ ಮೊರೆ ಪೋಸ। ವೆಣಿಸಿದ ಕಾಲಕ್ಕೂ ಆನಿಂಪರೀಗರಿದು। ದ್ಯುಣಕವಾದ ಸ್ತ್ರೀ ಜನ ಸಂಗವಾಪರಿಗುಣವೆ ಕದುವಳು ಲೋಚನದಿಂದಲಿ ಕಳದು॥ಎನಿತು ಕೊಟ್ಟರು ತಾನು ದಣಿಯುಳು ಇವನ। ದಣಿಸೋಳು ಮುಂದಣ ಮಾರ್ಗ ತೋರದಂತೆ॥ ಫಣಿಶಾಯಿ ವಿಜಯ ವಿಠ್ಠಲರೇಯನ ನಾಮವ। ನೆನೆದು ಏಕಾಂತದಲಿ ನಿರ್ಮಲ ನೀನಾಗೊ ॥೫॥

ಜತೆ

ಸೊಲ್ಲು ಎತ್ತಲಿಸಲ್ಲ ಪರನಾರಿಯರ ಕೂಡ। ನಿಲ್ಲದು ಸುಕೃತ ವಿಜಯ ವಿಠ್ಠಲ ಮುನಿಪ ॥೬॥

ಸ್ತ್ರೀ ದುಷ್ಟ ಸ್ವಭಾವ ವಿಷಯ,

ಶ್ರೀ ಕೃಷ್ಣವಿಠ್ಠಲಸುಳಾದಿ ರಾಗವರಾಳಿ ಧ್ರುವತಾಳ

ನಾರಿ ಎಂಬುವಳು ಪುಣ್ಯಮಾರಿ ಕೇಳಿ ರಯ್ಯಾ। ನಾರಿಯು ಚಿತ್ರದ ಬೊಂಬಿ ಎನ್ನೊ। ವಾರೆ ನೋಟದ ಲೊಮ್ಮೆ ನೋಡಲು ಪುಣ್ಯಾವಾ। ಹಾರವಾಗುವದು ತತುಕ್ಷಣದಲ್ಲಿ। ನಾರಿಯು ಸಿಂದು ಭಾಂಭಾರಿಗೆ ನೋಡೆ। ಧೀರರು ಕೆಡುವ ದಾಕ್ಷ್ಯರ್ಯ ವೇನೋ। ಮಾರನಂಬಿಗೆ ಗುರಿಮಾಡಲಿರುವಳಿ। ನೂರು ವರುಷ ಉಪವಾಸ ವಿದ್ದವರ। ನೂರೊಂದು ಕುಂಭಿ ಪಾಕಕ್ಕಿಕ್ಕದೆ ಬಿಡಳು। ನಾರಿ ಎಂಬುವಳು ಪುರಷ ವೈರಿ ಕೇಳು।ವಾರಿಜಾಕ್ಷ ಸಿರಿಕೃಷ್ಣ ವಿಠಲನಿನ್ನ। ಸಾರುವರೆಲ್ಲರು ನಾರಿ ಹಂಬಲ ಬಿಡಿರೊ ॥೧॥

ಮಟ್ಟತಾಳ

ನಾರಿಗೆ ಮನ ಸೋತು ರಾವಣ ಏನಾದ। ನಾರಿಗೆ ಮನಸೋತಾ ಸುಯೋಧನನ ನೋಡು। ನಾರಿಯಿಂದ ಮಡಿದಾ ಕೀಚಕ ಕೇಳಯ್ಯ। ನಾರಿಯಿಂದ ಕೆಟ್ಟ ವಾಲಿಯುಕೇಳಯ್ಯಾ। ನಾರಿಯಿಂದೆನಹುಷಾಪದದಿಂದ ಚ್ಯುತನಾದ। ನಾರಿಯಿಂದ ಚಂದ್ರ ಕಳೆಗುಂದಿದನಯ್ಯಾ। ಮಾರ ಜನಕನಮ್ಮ ಸಿರಿಕೃಷ್ಣವಿಠ್ಠಲ। ನಾರಿಯ ಸೃಜಿಸಿ ಪತಿತರ ಸದೆಬಡೆವ ॥೨॥

॥ತ್ರಿವಿಡಿ॥

ನಾರಿ ಎಂಬ ದಂಡು ಪುರುಷ ಪುರಕೆ ಮುತ್ತಿ। ಸೂರೆಮಾಡದೆ ಬಿಡದು ಜಾಗ್ರತರಾಗಿ। ನಾರಿಯು ಭುಜವೆರಡು ಹುಯಲು ಕಾಳಿ ಕೇಳಿ। ನಾರಿಯರ ನೋಟ ಪುರುಷರ ಎದಿಗಂಬು। ನಾರಿಯಸ್ತನ ನೋಡಿ ಪುರುಷನು ಪಶ ನಾಗಿ। ನಾರಿ ಅಪ್ಪಣಿಯೊಳು ವರ್ತಿಸುವ। ನಾರಿ ದಂಡುಗೆದ್ದು ದೂರ ಓಡಿ ಸಿದರೆ। ಧಾರುಣಿಯೊಳಗವನೆ ಧನ್ಯ ಪುರುಷ। ವೈರಾಗ್ಯ ಸಿಧಿಗಳು ನಾರಿಗೆ ಮನಸೋತಾ। ಮಾರುತಿಕೇಳಿ ನಿಸ್ಸಂಗರಾಗಿ। ಸೀರವಾಂಗ ಸಿರಿಕೃಷ್ಣ ವಿಠ್ಠಲ ನಾಣೆ। ನಾರಿಯರೂಪ ನೆನಿಸಲಾಗದೊ ಮನವೆ ॥೩॥

ಅಟ್ಟತಾಳ

ಅರವತ್ತು ಸಾವಿರ ವರುಷ ಉಕ್ಕಿನಪುಡಿ ಅ ಹರವಾಗಿದ್ದಂಥ ವಿಶ್ವಾಮಿತ್ರ। ಪರಕನ್ನಿಕೆಯ ನೋಡಿ ಭ್ರಷ್ಟನಾದನು ಮುಸ್ಕಿ। ಸರಿ ಮಾಡೇನು ಈ ಧರೆಯೊಳಗೆ। ಕರಗದೆ ನವನೀತ ಅಗ್ನಿ ಸಂಬಂಧದಿ, ಮುರದು ಪೋಗದೆ ನಿಸ್ಸ ಜ್ಞಾನ ಭಕ್ತಿ। ಪರಮ ವೈರಾಗ್ಯ ನಾರಿಯ ಕಂಡು ನಿಲ್ಲದು। ಹರಿದಾಸನಾಗ ದಪ ನಾರಿದಾಸ। ಕರುಣ ನಾಗರ ಸಿರಿಕೃಷ್ಣ ವಿಠ್ಠಲನ್ನ, ಚರಣವೆಗತಿ ಎನ್ನೊ ಪರನಾರಿಯರ ಬಿಡೊ ॥೪॥

ಆದಿತಾಳ

ಹೆಂಗಳೆರಸಂಗ ಮಾನ ಭಂಗ ನಿಶ್ಚಯಕೇಳಿರಿ। ಹೆಂಗಳೆರ ಸಂಗಜ್ಞಾನ ಭಂಗ ನಿಶ್ಚಯಕೇಳಿರಿ। ಹೆಂಗಳೆರ ಸಂಗಸುಖ ಭಂಗ ನಿಶ್ಚಯ ಕೇಳಿರಿ। ಹೆಂಗ ಳೆರ ಸಂಗದಿಂದ ರಂಗ ದೂರಾಗುವ। ಮಂಗಳಾಂಗ ಸಿರಿಕೃಷ್ಣ ವಿಠಲನು। ಹಿಂಗದೊಲಿಯಬೇಕಾದರೆ ಹೆಂಗಳೆರ ಸಂಗ ಬಿಡಿರೊ ॥೫॥

ಜತೆ

ಮುನಿಗಳು ಕೆಡುವರು ಹೆಂಗಳೆರ ಸಂಗದಿಂದ। ಅನಿಮಿಷ ರೊಡೆಯಾ ಶ್ರೀಕೃಷ್ಣ ವಿಠ್ಠಲ ವೊಲಿವ ॥೬॥

ತನ್ನ ಸತಿಯು ಆದರೂ ಒಳ್ಳೆ ಪತಿವ್ರತೆ, ಸುಶೀಲೆ ವಿನಯಸಂಪನ್ನೆ ಯಾಗಿರಬೇಕು. ದುಸ್ಸೀಲೆ, ಚಂಡಿ, ಯಾಗಿರ ಬಾರದೆಂದು ಸ್ತ್ರೀ ದುಸ್ವಭಾವ, ಹೇಳಿದ್ದಾರೆ.

**ಅಭಿನವ ಜನಾರ್ಧನ ವಿಠಲ** ಪದರಾಗ ಭೈರವಿ ಆದಿತಾಳ

ಬಡವಗೆ ಒಳ್ಳೇ ಪಡದಿ ಕೊಡಲಿಲ್ಲ। ಕೇಳನ್ನ ಸಖನೆ। ಅಡವಿ ಅಡವಿ ತಿರಗಿ ತನಗೆ। ಒಡವೆಮಾಡಿಸಿ ಇಡು ಎಂಬುವಳು ||ಪ|| ನೆರೆಹೊರೆ ಕೇರಿಯವರನ ನೋಡುವಳು। ಅವರೆಂತೆನಗೆ। ಸಿರಿಸಂಪದ ವಿಲ್ಲೆಂದು ಮಿಡುಕುವಳು। ಇದ್ದರೂ ಇರಲಿ। ಸರಿ ಒಗೆತನ ದೊರೆಯಲಿಲ್ಲೆಂಬುವಳು। ಫಣಿಯಲ್ಲಿ ಬರೆದ। ಸರಸಿಜಭವಗೆ ಸಾಸಿರ ಬೈವಳು। ಪುಟ್ಟಿಸಿದ್ಯಾಕೆಂಬಳು ||೧|| ಅಪ್ಪ ಅವ್ವಾ ಹೆತ್ತಿಹೊಂದಿದವರು। ಆಲೋಚಿಸಿ ಎನ್ನನು। ರುಪ್ಪಯ್ಯಗಳಾಸಿಗೆ ಕೊಟ್ಟರು। ಕೊಟ್ಟರೂಕೊಡಲಿ। ಮುಪ್ಪಿನಗಂಡಗೆವಶಮಾಡಿದರು। ಪೇಳಲಿನ್ನೇನು। ತುಪ್ಪದ ಆಶಿಗೆ ಎಂಜಲು ತಿಂದಾರು ಎಂದು ನುಡಿವಳು ||೨|| ಮನಿ ಮನಿಯ ತಿರುಗಿತಿರುಗಿ ಬಾಹುವಳು। ದಣಿದೆನೆಂತೆಂದು। ಹಣಿಕಟ್ಟಿ ಕಟ್ಟಿ ತಾ ಮಲಗುವಳು || ಮಂದಿನ ಕೇನಾಯಿತು। ಮನಿಕೆಲಸಂಗಳನು ನೀ ಮಾಡೆಂಬುವಳು। ಅಡಿಗಿಯನುಮಾಡಿ। ಉಡಬಡನೆನಗೇನೀ ಉಣ್ಣೆಂಬುವಳು। ಕಸವ ತೆಗಿಸುವಳು ||೩|| ಇದ್ದ ಪದಾರ್ಥದೊಳಗರ್ಧ ತೆಗುವಳೊ। ಮಾರಿ ತನ್ನವರಿಗೆ। ಕದ್ದು ಕಳಿಸಿ ಮೆದ್ದು ಕೆಡಿಸುವಳು। ಪತಿಬುದ್ಧಿಯ ಪೇಳಲು। ಸದ್ದುಮಾಡಿ ನಿನ್ನ। ಸೊಲ್ಲೆಂತೆಂಬುವಳು। ಸಿಟ್ಟಲಿ ಬಂದು। ಎದ್ದು ಫಳಫಳನೆ ಚಟಕ ಮುರಿಯುವಳು। ಕಂಥಾಗೆ ಬೈವಳು ||೪|| ಇನಯನ ಬಡತನವನು ತಾನೋಡುವಳು। ತನಗಿದ್ದ ಒಡವಿ ಜನನಿ ಜನಕರ ಮನಿಗೆ ಕಳಿಸುವಳು। ಎನಗೆ ಗತಿ ಏನೇಂದೆನುತ। ಪರಿಯಲಿತಾ ಹೊರಳುವಳು। ಶ್ರೀ ಅಭಿನವ ಜನಾರ್ದನವಿಠಲನೇ ಈ ಸ್ಥಿತಿಯ ನೀಕೇಳೊ|| ಮುಂದಿನಗತಿ ಪೇಳೊ||೫||

**ಪುರಂದರ ವಿಠಲ** ಪದ ರಾಗ ಸೌರಾಷ್ಟ್ರ ಝಾಗುತಾಳ

ಕೂಳಿಗೆ ಬಿದ್ದಿರುವ ಬೋಳಿ ನಿನಗಿಷ್ಟು। ಗೈಯ್ಯಾಳಿತನ ವೇತಕ ||ಪ|| ಆಚಾರ ನೋಡಿದರೆ ಅಲ್ಲೇನು ಹುರಳಿಲ್ಲ। ನೊಚಿಸಂಣಂಗಾರ ಮುಸುಕು ತಿದ್ದಿ। ವಾಚಾಮಗೋಚರ ಒಕ್ಕಣೆ ಹರಟುವೆ। ನೀಚ ಮುಂಡೆ ನಿನಗೆ ನಾಚಿಕಿಲ್ಲವೇನೆ ||೧|| ಲಕ್ಷಬತ್ತಿಯಮಾಡಿ ಲಕ್ಷ ನಮಸ್ಕರಿಸಿ। ಕುಕ್ಷಿಯೊಳಗೆ ಕಪಟ ವಿಟ್ಟುಕೊಂಡು ಭಿಕ್ಷವ ಪ್ರೀತಿಯಲಿ ಪರಪುರುಷನಿಗೆ ರಾತ್ರಿ ಭಿಕ್ಷವ ಕೊಟ್ಟು, ನೀನಪ್ಪಿಕೊಂಬೆಲ್ಲೆ ||೨|| ಉಂಡು ತಿಂದು ಮುಂಡಿ ಗಂಡಗತ್ತಳು ಎಂದು।

ಕಂಡವರು ಹೇಳುವ ಗಾದಿಯಂತೆ। ದಂಡಿಸುವನು ಇವಳ ಪುರಂದರ ವಿಠ್ಠಲನು । ಮುಂಡೆ ಬೋಳಾದರೆ ಮುಸವು ಬೋಳಾಯ್ತು ॥೩॥

ಸರ್ವಜ್ಞನವಚನ ಕುನಾರಿಯರು, ಕುಲೀನನಾರಿ

ಬಗಬಗೆಯ ಭೋಗವಿರೇ ನಗುತಿಹರು ಜಾರಿಯರು। ಹೊಗೆಯೊಡೆಬಡ ತನ ಪತಿಯಕಾಣುವರು। ಹಗೆಯಕಂಡಂತೆ ಸರ್ವೇಶ॥೧॥ ಜಾರಿಯರುನರನ್ನು ಜಾರಿಪರುನರಕಕ್ಕೆ। ನಾರಿಯಣಿ ಉಭಯಕುಲಕೆ ಸರ್ಗದಾ। ದಾರಿತೋರಿಪಳು ಸರ್ವೇಶ॥೨॥

ಈಪ್ರಕಾರ, ಸ್ತ್ರೀಯರ ದುಸ್ವಭಾವಹೇಳಿ ಇನ್ನು

## ೨೫ ಜಾರಪುರುಷರ ದುಷ್ಟಸ್ವಭಾವ, ಮತ್ತು ಅವರನಿಂದ್ಯ

ಪುರಂದರ ವಿಠಲ, ಪದ, ರಾಗ ಪಂತುವರಾಳಿ ಏಕತಾಳ

ನಗೆಯು ಬರುತಿದೆ ಎನಗ ನಗೆಯು ಬರುತಿದೆ। ಜಗದೊಳಿರುವ ಜಾಣರೆಲ್ಲ ಹಗರಣವಮಾಡುವದುಕಂಡು ॥ಪ॥ ಪರವನಿತೆಯ ರೊಲಿಸಿ ಮೊಗೊಲಿದು। ಹರುಷದಿಂದ ಅವಳ ಬೆರಸು । ಹರಿವ ನೀರೊಳಗೆ ಮುಳುಗಿ। ಬೆರಳ ನೆಣಿಸುತಿಹರಕಂಡು ॥೧॥

ಪತಿಯಸೇವೆ ಬಿಟ್ಟು ಪರ। ಪತಿಯ ಕೂಡೆಸರಸವಾಡಿ। ಸತತವ್ಯೆಯ್ಯ ತೊಳೆದು ಹಲವು ವ್ರತವಮಾಳ್ಪ ಸತಿಯಕಂಡು ॥೨॥

ಹೀನ ಗುಣವ ಮನದೊಳಿಟ್ಟು। ತಾನು ವಿಷ(ಯ) ಪುಂಜನಾಗಿ ಮೌನಿ ಪುರಂದರ ವಿಠ್ಠಲನ ಧ್ಯಾನವಮಾಡುವವನ ಕಂಡು ॥೩॥

ಉದರೆ ವೈರಾಗ್ಯವಿದು ನಮ್ಮ ಪದುಮನಾಭನಲಿ ಲೇಶಭುಕುತಿಯಿಲ್ಲ ॥ಪಲ್ಲ॥

ಕರದಲಿ ಜಪಮಣಿ ಬಾಯಲಿ ಮಂತ್ರವು। ಅರಿವೆ ಮುಸುಕು ಮೋರೆಗೆ ಹಾಕಿ। ಪರಸತಿಯರ ಗುಣ ಮನದಲಿ ಸ್ಮರಿಸುತ। ಪರಮ ವೈರಾಗ್ಯ ಶಾಲಿಯೆಂದೆನಿಸುವದುದರ ವೈರಾಗ್ಯವಿದು ॥೩॥

ವಿಜಯವಿಠಲರ ಜಗದವಂಚಕ ನಾನು ಎಂಬಸುಳಾದಿ

ತ್ರಿವಿಡಿ ತಾಳದಲ್ಲಿ

ಪಟ್ಟೆ ಧೋತ್ರವ ತಂದು ಶುಭ್ರವಾಗಿ ಒಗೆದು । ಉಟ್ಟುಕೊಂಡು ಕಾಲಿಗೆಳವಂತೆಪ। ಪಟ್ಟೆನಾಮವ ಬಡಿದು ಮಿತಿಇಲ್ಲದೆ ಮುದ್ರೆ ಇಟ್ಟು। ಸಂಣಂ

ಗಾರ ತಿದ್ದಿ ಫಣಿಗೆ। ದಟ್ಟಡಿಯಾಗಿ ಕೊರಳಮಾಲೆ ಜಪಮಣಿ। ಬಟ್ಟೆನೊಳಗೆ ಸಿಗಸಿಕೊಂಡು ಕುಳಿತು। ದೃಷ್ಟಿ ಒಂದು ಕಡೆ ಚಂಚಲ ಮನದಲ್ಲಿ। ಇಟ್ಟಣಿಸಿ ಅನ್ಯಾ ಸತಿಯರನ। ಕೆಟ್ಟ ಜಿಂವೆನೆಂದು ತನ್ನ ಮೂಲಾ। ಗುಟ್ಟು ಇಟ್ಟಂತೆ। ಅವಳನ್ನಾ ಕಣ್ಣು ಸನ್ನೆ। ಗುಟ್ಟು ತೋರವಂತೆ ಪಿವ್ಹ ಖ್ಯಾಕಲಿಸಿ ಬಿ ಚಟ್ಟ ಹೊನ್ನುಗಳೆಲ್ಲ ತಗದು ತಂದು। ಕೊಟ್ಟದಲ್ಲದೆ ಬಿಡೆನೆಂದೆಂಬೊ ಮನಮಾಡಿ। ಅಟ್ಟುವೆ ಅವರ ಸಂಗಪ ಪುಣ್ಯವ। ಸಿಷ್ಠಿವುಳ್ಳವನಂತೆ ಬಯಲಾಚಾರದಲ್ಲಿ। ಧಿಟ್ಟಾ ನೆನಿಸುವೆ ಎಡಬಲದವರಿಗೆ। ಇಷ್ಟಾರೊಳಗೆ ಏಕಾಂತದಲ್ಲಿ ಕಾಣ। ಸೃಷ್ಟಿಯೊಳಗೆ ನಾನೆ ಧನ್ಯನೆಂಬೆ। ದುಷ್ಟಬುದ್ಧಿಯೆಂದು ಮುಂಗಾಣದೆನುನ। ಮುಟ್ಟಿಮಾಡುವೆನಯ್ಯಾ ಅನ್ಯ ಸಡತಿ। ತುಟ್ಟಾತುದಿಯಲ್ಲಿ ಬಳಲಿ ಬೆಂಡಾ ಗುವೆ। ಕಟ್ಟಿ ಪ್ಯಾಲಿನ ಮಂತ್ರ ಈ ಪರಿಮನದಲ್ಲಿ। ಅಷ್ಟದಿಕ್ಕಿಗೆ ಮನಸು ಓಡುತಿದಕೋ॥ ಇಷ್ಟಾರ್ಥ ಕಾಣಿನೊ ವಿಜಯ ವಿಠ್ಠಲ ಇಂಥ। ಭ್ರಷ್ಟಮಾನ ವಗೆ ಅವದೊ ಗತಿ ಮಾರ್ಗ ॥೩॥

## ಪ್ರಸನ್ವೆಂಕಟರು

ಸೂಳೆಗಾರರಿಗೆ ತುಳಸಿ ಮಾಲೆ ಯಾತಕೆ? ॥೧॥ ಕಂಡನಾರಿಯರ ಒಯಸುವ ಲೆಂಡಗೆ ಪುರಾಣವ್ಯಾಕೆ? ॥೨॥ ಪರವನಿತಿಗೆ ಚಿತ್ತ ಬೆರೆಯದಿರಲೀ ಮರುಳಕೀನಾಶ ಭಟರ ಊಳಿಗಕೆ ॥೩॥ ಪರನಾರಿಯರಿಗೊಮ್ಮೆ ಮನ ಸೋತಿರದೆ ಚಿತ್ತದ ಹರಿಯ ಮುರಿದು। (ಮರಿದು) ಗುರುಪೂರ್ಣ ಪ್ರಜ್ಞಾದಿ ಪ್ರಸನ್ವೆಂಕಟ। ಅರಸನ ಚರಣವ ಸ್ಮರಿಸದೆ ಬರಿದೆ ಸಾಧ್ಯವಲ್ಲವು ಮುಕುತಿ ಸಾಧ್ಯವಲ್ಲವು ॥೪॥ ಪರದಾರ ಸೂತಕಿಗೆ ಪರಿಪಿರಿಯವ್ರತವ್ಯಾಕೆ। ಪರಸ್ವಾಪ ಹರಗೆ ದೇವಪೂಜೆ ಯಾಕೆ। ಗುರುಹರಿ ದ್ರೋಹಿಗಳ ಗುಣ ವಿಚಾರಗಳ್ಯಾಕೆ। ಕರಿವರದ ಸ್ತುತಿ ಇಲ್ಲದ ಕವನ ವ್ಯಾಕೆ ॥೩॥

## ಜಾರಪುರುಷರ, ಲಕ್ಷಣ ಅವರಸ್ವಭಾವ, ಪ್ರಾಣೇಶ ವಿಠಲರು

ಪದ ರಾಗ ವರಾಳಿ ಅಟ್ಟತಾಳ

ಜಾರಪುರುಷರಾಡೊ ನುಡಿಯು। ಶ್ರೀಸಮೀರನ ಭಕ್ತರು ಕೇಳಿ ಥೀ ಎನ್ನಿರಿ ॥ಪಲ್ಲ॥ ಮೊನ್ನೆ ನಾನದಿಯೊಳು ಸ್ನಾನಕ್ಕೆ ಪೋಗಿರೆ। ಹೆಣ್ಣೊಂದು ಬಂದಿತ್ತೊ ವಗಿಯಲಿಕ್ಕೆ। ಅಣ್ಣನಾ ಏನು ಹೇಳಲಿ ಯವಿ ಇಕ್ಕದ। ಎನ್ನನೆ

ನೋಡುವಳೆಂದು ಹೇಳುವನೊಬ್ಬ ||೧|| ದಾರಿಯೊಳ್ ಬರುತಿರೆ ಗಜಗಮ ನೊಬ್ಬಳು । ಸಾರಿ ಸಾರಿಗೆ ಬಂದು ನಗುತ ನಿಮ್ಮಾ || ಊರಾವದೆಂಬಳು ಬಡಿಬಿಡಿ ಮಾತಿಲಿ । ಸಾರಿಹಂಬಲಮರಿಯಿನ್ನೊ ತಮ್ಮ ಎಂಬುವನೊಬ್ಬ ||೨|| ಆ ತರುಣಿಯ ಚಲ್ವಿಕೆ ನೋಡಿ ಬೆನ್ನಿಗೆ । ಆತು ಪೋಗಲು ಕೋಣ, ಗುದಗ, ಗಂಡು|| ಜಾತಿಗಳಿಗೆ ನಾಚಿಕೆಲ್ಲೆಂದು ಬೈವಳ । ಮಾತಿನಸಂವಿ ಏನು ಹೇಳಲೆಂಬೊ ನೊಬ್ಬೊನು ||೩|| ಬಿಳಿಜಾಡರೋಣಿಯೊಳು ಬರುವಾಗ ಪ್ರಾಯದ ।ವಳು ಕಂಡು ಎದುರಿಗೆ ಪೋಗಲಾಗಿ || ಉಲಸೆ ಒಂದಕ್ಕೆ ದಪ್ಪ ದರೆ ಗೋಡಿಗಾತಿ ಕೈ। ಸಂದಿದ್ದೆ ಎಚ್ಚರಿಕಿಲ್ಲನೆಂಬುವನೊಬ್ಬ ||೪|| ಜಾಣರು ಬಹುಮಂದಿ ಇರಲಾಗಿ ಬೇಕಂತ । ಓಣಿಯೊಳಗೆ ತೊಂಬಲದ ರಸವ। ಏಣಾಕ್ಷಿ ಉಗಳಿದಳೆನವ್ಯಾಲಿ ಸುಳ್ಳಲ್ಲ । ಪ್ರಾಣೇಶ ವಿಠಲನ್ನ ಆಣ್ಯೋ ಬೊಬ್ಬ ವಿವೇಕಿ ||೫||

ಪ್ರಾಣೇಶ ವಿಠಲ

ನಾರಿಯರಿಗೆ ಮನಸೋತವ ಭ್ರಷ್ಟ । ಸೂರಿಗಳಿಗೆ ಎರಗುವನೆ ವಿಶಿಷ್ಟಾ ||

ಸರ್ವಜ್ಞ ವಚನ ಪಂಚೇಂದ್ರಿಯಕ್ಕೆ ಮನಸೋಲದು.

ಪಂಚೇಂದ್ರಿಯನಲ್ಲದ । ವಂಚಕರು ಬೇರುಂಟೆ? || ಪಂಚಕಾಗ್ರಣಿಯಹಕಣ್ಣು ಉಳಿದವನು || ಮಿಂಚಿಪುದು ತಾನೆ ಸರ್ವೇಶ ||೧|| ಹೆಣ್ಣಿಂಗೆ ಜಿಹ್ವೆಯನು । ಹೆಣ್ಣಿಂಗೆವಪ್ಪವನ್ನು || ಮಣ್ಣಿಗೆ ಮನವನು ಗಂಧಕೆ ನಾಸಿಯನು । ಕಣ್ಣು ದೂಡುವುದು ಸರ್ವೇಶ ||೨|| ಹೆಣ್ಣು ಗಳ ಸೆರಗಿಂದ । ಹಣ್ಣಿದಾ ಬಲೆಯೊಳಗೆ । ಕಣ್ಣೆಂಬ ನಾಯಿ ದೂಡುಗು ಮೃಗದಂಥ । ಬಣ್ಣಿ ಗೇಡಿಯನು ಸರ್ವೇಶ ||೩|| ಕಣ್ಣೆಲ್ಲ ಭಾವನೆಯ । ಬಣ್ಣಿಪದು ಮನದೊಳಗೆ । ಕಣ್ಣಿಂದ ಹಿತಾಹಿತಗಳು ಎಲ್ಲವನು || ಕಣ್ಣೆ ಗೈಸುವದು ಸರ್ವೇಶ ||೪|| ನಡತರುವ ಬೆಂಕೆಯನು । ಕೆಡಿಸುತಿಹಕಣ್ಣನ್ನು ಬಿಡುವದಳವಲ್ಲ ಹಿಡಿತದಲ್ಲಿಟ್ಟು । ಪಡಿಬೇಕು ಹಿತವ ಸರ್ವೇಶ ||೫|| ಪಂಚೇಂದ್ರಿಯಂಗಳು । ವಂಚನೆಯ ಮಾಡುತ್ತ || ಪಂಚ ವಿಧ ಪಾತಕ ಗೈಸಿ ಜನರಿಂದ । ಮಿಂಚಿ ಪ್ಪವು ಗತಿಯ ಸರ್ವೇಶ ||೬|| ಒಂದೊಂದು ಅವಯ

ವವು। ಒಂದೊಂದೆ ಬಯಸುವವು ॥ ಬಂಧಿಸಲು ಇಂದ್ರಿಯಗಳನು ನಿಜ ಭೋಗ। ಸಂದಂತೆ ಅಹದು ಸರ್ವೇಶ ॥೭॥ ಕಾಡುಕುದುರೆಗಳ್ಕೈದ। ಹೊಡು ತ್ತೆ ಕಡಿವಾಣ। ಜೋಡಿಸದೆ ಓಡಿಸಿದಂತೆ ಇಂದ್ರಿಯವು। ಜಾಡ ವಿಾರುವದು ಸರ್ವೇಶ ॥೮॥ ಗುಡಿಗುಹೆಯು ಲಿರಲೇಕೆ?। ಉಡಲೇಕೆ ಕಾವಿಯನು?। ತೊಡಕೊಳ್ಳಲೇಕೆ ಬೂದಿಯ? ಕಾಮನನು। ಸುಡವುದೇ ಲೇಸು ಸರ್ವೇಶ ॥೯॥ ಅರಿತವನ ಮುಂದೊದು ಅರಿಯದನ ಮುಂದೊಂದು। ತೆರದ ನಡ ನುಡಿಯು ಇಂದ್ರಿಯ ದಾಸಂಗೆ। ನಿರುತ ಇಹವಯ್ಯ ಸರ್ವೇಶ ॥೧೦॥

**ಗುರು ಮಧ್ವೇಶ ವಿಠಲ** ಪದ ರಾಗ ಕಲ್ಯಾಣಿ ಅಟ್ಟತಾಳ

ನಾಚಿಕಿಲ್ಲದವಗೇನೆ ಪರನಾರಿಯರ ಚಿಂತೆ॥ ಸೂಚಿಸಿ ಬುಧರು ನೀಚ ನೆಂದು ನಿಂದಿಸುವರು ॥ಪ॥ ಉತ್ತಮಾಸ್ತ್ರೀ ಸಂಗಿಗಂತು ಊರ್ಧ್ವಲೋಕ ವಿಲ್ಲವೊ। ಹತ್ತೋದು ಕ್ಷಯರೋಗ ಹಾಗೆ ಭಗಂದರ। ಮತ್ತೆ ಹೀನಾ ಪತ್ಯ। ಕೃತಕೃತ್ಯನಾಗ। ಮರ್ತ್ಯಾಧಮ ನಾಹ ॥೧॥ ಅಧಮ ಜಾತಿಸಂಗಿಗೆ ಆಗಮ ಫಲವಿಲ್ಲವೊ। ನಧವನ ಸಂಗಿಗೆ ಸರ್ವನಾಶ ॥ ಬಾಲ। ವಿಧವಾ ವಿವಿಧಧವ। ಅಧರ ಸುಧವ ಸ್ವಾದಿ। ಸ್ವೈಧಮ ಭಾಗ್ಯನಾಹ ॥೨॥ ಜಾತಿ ಸಾಂಕರಿಯ ಪೋಷ ಜಾರ ತನದವಗೆ। ಪಾತವಾದ ಗರ್ಭಪಾತಕಾಘದಿಂದ। ಪ್ರೇತ ಜನು ಯಾತನುಂಡು ॥ ಜಾತ ಮೇಹ ವಾತರೋಗಿ ಯಾಹ ॥೩॥ ಇಂದ್ರ ಗಿದರಿಂದಲಿ ಬಲು ರಂಧ್ರವಾಯಿತೊ। ಚಂದ್ರಗಿರಿಂದ ಕ್ಷಯರೋಗ ಬಂತು ದೈ। ತ್ಯೇಂದ್ರ ರಾಕ್ಷಸೇಂದ್ರ ಕೀಚಕೇಂದ್ರ ಕೌರವೇಂದ್ರರ ಸ್ಥಿತಿಕೇಳು ॥೪॥ ಮರದುಮುಹಾವಃಓಮ ಶ್ರೀಗುರು ಮಧ್ವೇಶವಿಠಲನ್ನ। ಪರದಾರಾರತರಾದ ಪಾಪಾತ್ಮರ ಹಲ್ಲು। ಮುರಿದು ಹಸ್ತಗೊರಿದು ಹರಣ। ಹರಿದು ಯಮ ಮೆ ರದನೆಂಬುದು ಕೇಳಿ ॥೫॥

ಸ್ತ್ರೀ ಪುರುಷರ,, ದುಸ್ವಭಾವ ತೋರಿಸಿ ಇನ್ನು

## ೨೬ ಉಪದೇಶ ಪರ

ಕುನಾರಿಯರ ಸಹವಾಸ, ಸರ್ವಥಾ ಮಾಡಕೂಡದೆಂದು ದಾಸಾ ರ್ಯರು ಉಪದೇಶಮಾಡಿಡಿರುವದೇನಂದರೇ,

ಶ್ರೀ ಕೃಷ್ಣ, ರಾಗ ಆರಭಿ, ತ್ರಿಪುಟತಾಳ

ಛೀ ಛೀ ಮನವೆ ನಾಚದ ತನುವೆ । ನೀಚವೃತ್ತಿಯು ಬಿಟ್ಟು ನೆನೆಕಂಡ್ಯ ಹರಿಯು ॥ಪಲ್ಲ॥ ಕಿವಿಗೊಟ್ಟು ಗಂಟೆಯುನಾದಕ್ಕೆ ಹುಲ್ಲೆಯು । ನಿವಹ ಬಲೆಗೆ ಸಿಕ್ಕಿ ಬಿದ್ದುದ ಸರಿಯು । ನವಯೌವ್ವನೆಯರ ಕೋಕಿಲಾಲಾಪವ । ಸವಿನುಡಿ ಗೇಳದೆ ಅಚ್ಯುತನ ಕಥೆಕೇಳೊ ॥೧॥ ಪಣ್ಣೆಂದು ಭ್ರಮಿಸಿ ಪತಂಗ ದೀಪದಿ ಬಿದ್ದು । ಉಣ್ಣದುರಿವುದು ನೀ ಕಂಡು ಕಂಡರಿಯು ॥ ಬಣ್ಣದಬೆಳೆಯರ ರೂಪಿಗೆ ಮರುಳಾಗಿ । ನುಣ್ಣು ತಿನ್ನದೆ ಮಾಧವನ್ನ ನೀ ಸ್ಮರಿಸೊ ॥೨॥ ಗಾಣದ ತುದಿಯ ಮಾಂಸವ ಮೆಲ್ಲುವ ಮತ್ಸ್ಯ । ಪ್ರಾಣವ ಬಿಡುವುದಂಗ ನೆಯ ರಥರವ । ಮಾಣದೇ ಬಯಸಿ ಕೆಡದೆ ಶ್ರೀಮನ್ನಾರಾಯಣ ನಾಮಾ ಮೃತವ ಸವಿ ಎಲೆಮನವೆ ॥೩॥ ಆಳಿಯದ್ದು ಕರಿಕಣಿಯು ಸ್ಪರ್ಶಕೆ ಪೋಗಿ ಕುಳಿಯಬಿದ್ದುದು ನೀನುಕಂಡ ಕಂಡರಿಯು ॥ ಲಲನೆಯರಾಲಿಂಗನಕೆ ಎಳಸವೆ ಸಿರಿ । ಲಲನೇಶ ಸಂಸ್ಪರ್ಶಿಯನಪ್ಪಿಕೊ ಮನವೆ ॥೪॥ ಅಳಿ ಪರಿಮಳಕ್ಕಾಗಿ ನಳಿನ ದೊಳಗೆ ಸಿಕ್ಕಿ । ಅಳಿವಂತಂಗನೆಯ ಮೈ ಗಂಧವ ಬಯಸಿ ॥ ಬಳ ಲುವೆ ವರದ ಶ್ರೀ ಕೃಷ್ಣ ಸಂಸ್ಪರ್ಶಿಯೊಪ್ಪ । ತುಳಸಿಯ ನಾಘ್ರಾಣಿಸು ಕಂಡ್ಯ ಮನವೆ ॥೫॥

## ಪ್ರಸನ್ನವೆಂಕಟರು

ಶಬ್ದಸ್ಪರುಶ, ರೂಪ ರಸನ ಗಂಧ ಈವಿಷಯಾದಿಗಳಿಂದ ಸರ್ವಥಾ ಸ್ತ್ರೀಯರನ್ನು ಮೋಹಿಸಬಾರದೆಂಬ ಉಪದೇಶ.

ರಾಗ ಕಾಂಬೋಧಿ ಝಂಪಿತಾಳ

ಸತ್ಸಂಗ ಪಿಡಿದು ಸರ್ವೋತ್ತಮನೆ ಗತಿಯೆಂದು ನೆಚ್ಚಿ ಅರ್ಚಿಸುಗಾಢ ಮನುಜಾ ॥ಪಲ್ಲ॥ ವಿರಹಶಬ್ದಗಳ ಮೈಯ್ಯೊಳ ಗೊಲಿದು ಕೇಳಿ ಸತಿ । ಯರ ಧ್ವನಿಗೆ ಮುಗುಳೆ ಮೋಹಿಸುತ । ಹರಿಣ ಘಂಟಾರವಕೆ ಬಲೆ ಬೀಳುವಂತಾಗ ದಿರು ಹರಿಕಥೆಯು ಕೇಳಿ ಬಾಳು ॥೧॥ ಅರಿಯದರ್ಭಕನು ಕೆಂಡವ ಮುಟ್ಟಿ ಅಳುವಂತೆ । ಪರ ಸ್ತ್ರೀಯರ ಸರಸಕೊಳಗಾಗಿ । ನರಕದೊಳ್ ಬೀಳ್ವ ವಾಮರನೆ ಹರಿಚರಣಾಬ್ಜ ಸ್ಪರಿಶ ದೊರಕುವದೆಂತೊ ನಿನಗೆ ॥೨॥ ದೀಪ ಪ್ರಕಾಶಕೆ ಪತಂಗವುಕೆ ಕೆಡುವ ಪರಿಲಿ ನೀ ಲ್ಲಾಪವೇ ಪರಸತಿಯರೊಡನೆ ।

ಶ್ರೀಪತಿಯ ಮೂರುತಿ ಕಂಡೆರಗು ಮೂಢ ಮತಿ । ಪಾಪ ಬುದ್ಧಿಗಳನ್ನೆ ಜರಿದು ॥೩॥ ಶಸ್ತ್ರ ಧಾರಿಯ ಮಧುವ ಬಯಸುವಂತ್ಯೋನ್ಯತ್ರ । ಪರಸ್ತ್ರೀಯರಧರ ಸುಧೆಯ ಬಯಸಿ । ಚಿತ್ತಸ್ವಸ್ತವವಾಣ ದೊಷ್ಮ್ರಯಾದರು ಹರಿ ಭಕ್ತಿರಸವೀಂಟಿ ಸುಖಿಯಾಗು ॥೪॥ ವನಜ ವನಂ ಬಿಟ್ಟು ಅಳಿವೃಂದ ಚಂಪಕದ ಸೆಸಗ್ಗೆದಿ ಪ್ರಾಣ ಬಿಡುವಂತೆ ॥ ವನಿತೆಯ ವಾಸನೆಯಿ ನಿರಯ ಪಾತುಸವೆಂದು ವನಜಾಕ್ಷನಿರ್ಮಾಲ್ಯ ಮೂಸಿನೋಡು ॥೫॥

## ಹಯವದನರು

ಯಾಕೆ ಪ್ಮೆಮರತೆ ನೀನು ॥ ಪರಹೆಣ್ಣುಗಳ ನೋಡಿ ಪಾಪಗಳ ಕೂಡಾಡಿ ಅರಿತೊಪ್ಪು ಕಡೆಗೆ ತರವೆ ಎಲೆ ಮರುಳೆ । ಹರುಷದಿಂದವಳ ನೆರವೆ ಅಕಟ ಮರುಳೆ ಜೀವನವೆ ನಿನಗೆ ತರವೆ ॥ ಮತ್ತೊಬ್ಬರಿಗೆ ಬಂದು ಹೇಳುವಿಯಲ್ಲೊ ಶಾಸ್ತ್ರಗಳ । ನೋಡದೋದು ಪೇಳುವಿಯಲ್ಲೊ । ಹೋಗಿ । ನರಕ ಪೂರ್ಲ ಬೀಳುವೆಯಲ್ಲೋ ಪ್ರಾಣಿ ॥೧॥

## ಪುರಂದರ ವಿ॥ ಶು॥ ಅಟ್ಟತಾಳದಿ

ಕಾಮ ಕ್ರೋಧ ಬಿಡದನಕ ಪರ ಜೊಮ್ಮನೊ । ಲಿಮೆ ಎತ್ತ ನೀನೆತ್ತ ಮರುಳೆ। ಅಹಂಕಾರ ಮಮಕಾರವಳಿಯದೆ ಶರಧಿಶಯನ ದೊರಕೊಂಬುವನೆ ಮರುಳೆ। ವಿಹಂಗ ವಾಹನ್ನ ದೊರಕೊಂಬುವನೆ ಮರುಳ । ಆ ಹರಿ ದಾಸರ ಪದ ಪದ್ಮಕ್ಕೆರಗದೆ ಪುರಂದರವಿಠಲನು ಸುಲಭನೆ ಮರುಳೆ ॥ ಕಾಮಕ್ರೋಧ ಬಿಡದನಕ ॥೪॥

ಪರಸತಿಯು ಪರಧನವು ಪರನಿಂದ್ಯೆ ಪರಹಿಂಸೆ ಪರಮ ಪಾತಕದ ಕಾರಣವೆಂದು ತಿಳಿದು ॥ ಧರೆಗಧಿಕ ಪುರಂದರ ವಿಠ್ಠಲನ ಚರಣವನು ನೆರೆ ಭಜಿಸಿ ಸುಖಿಯಾಗಿ ಬಾಳೆಲವೊ ಮನುಜ ॥೧॥

ಏನು ವ್ರತವೇನು ಸಾಧನಗಳೇನು ಸ್ವಾನುಭವದ ಜ್ಞಾನ ಹೀನವಾದ ವನೆ ॥ಪ॥ ನೇಮಗಳ ಮಾಡಿ ಪರವಾಕವನು ಬಿಡುವಂತೆ **ಕಾಮಕ್ರೋಧಂಗಳು** ಬಿಡಬಾರದೇ ॥ ತಾಮಸರ ಕಣ್ಣಿಂದ ನೋಡದೆನೆಂಬುವ ನಿಷ್ಠೆ । ನೇಮವನು ಪರ ಸತಿಯೊಳಿಡಬಾರದೆ ॥೨॥

ಮರೆಯದಿರೆಲೆಮನ ಇಲ್ಲಿ ಯಮ । ಪುರಿಗೆ ಒಯ್ದು ಬಾಧಿಸುವರಲ್ಲಿ

||ಪ|| ಪರನಾರಿಯರ ಸಂಗವಿಲ್ಲಿ ಉಕ್ಕು | ಎರೆದ ಸತಿಯು ತಕ್ಕೈಸುವರಲ್ಲಿ || ಗುರುಹಿರಿಯರ ನಿಂದ್ಯ ಇಲ್ಲಿ | ಬಾಯಿ ತೆರಸಿ ಶೀಸವ ಕಾಸಿ ಹೊಯ್ಯುವರಲ್ಲಿ ||೧||

ಗುರುಪುರಂದರ ವಿ|| ರಾಗ ಪಂತುವರಾಳಿ ಅಟ್ಟತಾಳ

ಅನ್ಯಸತಿಯ ರೊಲಿಮೆ ಗೊಲಿದು ಅಧಮ ಗತಿಗೆ ಜೀಕಲ್ಯಾಕೆ || ತನ್ನ ಸತಿಯ ರೊಲುಮೆ ಗೊಲಿದು ತಾನುಸುಖಿಸುಬಾರದೆ ||ಪಲ್ಲ||

**ಪುರಂದರ ವಿಠಲ**

ರಾಗ ಯರಕಲ ಕಾಂಬೋದಿ ಅಟ್ಟತಾಳ

ಯಮನ ಶ್ಯಾಸನ ಕೇಳಿರೋಜೀವಾ, | ಇದು ಸಂಶಯವಿಲ್ಲೆಂದು ಎಣಿಸು ಸ್ವಭಾವಾ ||ಪ|| ಪರಸತಿಯರ ನೋಡಿದವಗೆ | ಪತ್ತು ಕೊರಡು ಕೆಂಪಗೆ ಕಾಶಿ ಕುಕ್ಕಿಕಂಣೊಳಗೆ | ಎರಡು ಗುಡ್ಡನು ಸೀಕೊವರೆಗೆ ಕರಗಿಸಿ ಸೀಸವ ಪೊಯ್ಯಿರೊ ಅವನ ಕಿವಿಯೊಳಗೆ ||೧|| ಅನ್ಯ ಸ್ತ್ರೀ ಪುರುಷರ ಸಂಗ| ತನ್ನಪರ ಕುಲವ ಅಳಸಿಟ್ಟು ಹಾಕುವ ರಂಗ| ನರಕಕ್ಕೆ ಗುರಿಮಾಡಿ ತುಂಗ | ಕೆಂಡವುರಿವ ಉಕ್ಕಿನ ಕಂಭ ಕಟ್ಟಿಪ ಭಂಗ ||೨|| ಪರಸತಿಯರ ಮರಿವೋದು ಕಂಡು | ಗಾಣ ವರಳೊಳಗಾಡಿಸಿ | ಒಣಗಿಸಿ ಬೆಂಡು || ಉರಿತೈಲ ದೊಳ ಘಾಕಿ ಗುಂಡು | ಕರದು ತೆರನಾಗಿ ಹಂದಿಯತಿಸಿಸುವ ಖಂಡು ||೩|| ಅನ್ಯ ಸ್ತ್ರೀ ವಿಚಾರ ಮೋಹ ವಿಟ್ಟಿಹ | ಘನ್ನ ಘಾತಕಗೆ ಗರಳಂತೆ ನೀಹ || ಚೆನ್ನಚರ್ಮವ ಕಿತ್ತಿ ದೇಹಕುಟ್ಟಿ ಬಾಧಿಸಿಕಡಲಿಕ್ಕೆ ಬಾಹ ||೪|| ಗಂಡನಿಂದ ಲಿಕೆಲಸಮಾಡಿಕೊಂಡ ಹೆಂಡರಿಗೆ ಖಡುಹಿಡಿದವರ ಕಾಡಿ || ಮುಂಡೆಕೊದಲು ಇನ್ನು ಕಿತ್ತಿ ಇಡ್ಯಾಡಿ | ಖಂಡಖಂಡದ ಕಿತ್ತಿ ದಂಡಿಪನೋಡಿ ||೫|| ಅತಿ ಕಾಂಕ್ಷ ಸ್ತ್ರೀ ಯರಲ್ಲಿಂದ ಜನ್ಮದ ಸದ್ಗತಿ ಕೇಳದೊ | ಅತಿ ಕ್ರೂರದಿಂದ ರಣ ಹದ್ದು ಗುಂಪು ಜತೆಯಿಂದ | ಪೀಡಿಪೀಡಿಸುವನು ಮುದದಿ ಮುಕುಂದ ||೬|| ಇನ್ನು ಪಾಪಗಳ ನೀ ಮಾಡಬೇಡ ಅನ್ಯರ ಗೊಡವಿಗೆ ಹೋಗಬೇಡ | ಸಜ್ಜನರ ಸಂಗ ಬಿಡಬೇಡ | ಚನ್ನಪುರಂದರ ವಿಠಲನ್ನ ಭಜಿಸದೀಬೇಡ ||೭||

**ಪುರಂದರ ವಿಠಲ, ಪದರಾಗ ಮೋಹನ ಝಂಪೆ ತಾಳ**

ಬೇಡ ಪರಸತಿ ಸ್ನೇಹ ಭ್ರಷ್ಟನಾದ್ಯೊ ಮನುಜ | ನೋಡಿಕೋ

ನೊಂದವರನು ||ಪಲ್ಲ|| ಧರಣಿಯೊಳಗೆ ಜಲಂಧರನು ಗೌರೀಕೆಣಿಕಿ ಹರನಿಂದ ಹತನಾದನು || ವ ೂರು ಲೋಕವಗೆದ್ದ ಮೂಢರಾವಣ ಬಿದ್ದ | ಕೀಚಕನು ಕೆಟ್ಟಾ | ಭ್ರಷ್ಟಾ ||೧|| ಕಾಕಾಸುರನ ನೋಡು ಏಕಾಕ್ಷಿಯಾದನು | ನಾಕಪಾಲನನ ನೋಡು ಆಕಾಶದಲಿ ಚಂದ್ರನಾಕಾರವನೋಡು ಯಾಲ್ಪಕಿನ್ನು ಬಡದು ಕೆಡದು ||೨|| ಸಾರದಲಿ ಸತ್ಸಂಗಿರಲು ದೂರು ದುಃಸ್ಸಂಘೋಗಿ ಪೂರ್ವೈಸು ಪುಣ್ಯ ಫಲದಿ || ಸೇರಿದ ಪಾಪ ಪರಿಹಾರಮಾಡುವ ನಮ್ಮ | ಧೀರ ಪುರಂದರವಿಠಲ ಕರುಣದಲಿ ಪೊರೆವ ||೩||

## ಆದಿಕೇಶವನ ಪದ, ರಾಗ ಭೈರವಿ ಝಂಪೆ ತಾಳ

ನೋಡಿ ಮರುಳಾಗದಿರು ಪರಸತಿಯರ | ನಾಡೊಳಗೆ ಕೆಟ್ಟವರ ಪರಿಯು ನೀನರಿತು ||ಪ|| ಶತಮುಖವನು ಮಾಡಿ ಸುರಸಭೆ ಗೈದ ನಹುಷ ತಾ | ಕಾತುರದಿ ರಜಗೆ ಮುನ ನೋತು ಭ್ರಮಿಸಿ || ಅತಿವೇಗ ಚಲಿಸೆಂದು ಚಲ ನೆಂದು ಜೀನಲಾಪುನಿಯಿಂದ| ಗತಿಗೆಟ್ಟು ಉರಗನಾಗಿಬಿದ್ದ ಪರಿಯುನರಿತು||೧||

ಸುರಪತಿಯು ಗೌತಮುನ ಸತಿಗಾಗಿ ಕಪಟದಿಂ | ಧರಿಗೆ ಮಾಯಾ ವೇಷ ಧರಿಸಿ ಬಂದು || ಪರಮ ಮುನಿ ಶಾಪದಿಂದಂಗದೊಳು ಸಾ| ವಿರ ಕಣ್ಣಾಗಿರ್ದ ಪರಿಯ ನೀನರಿತು ||೨|| ಸ್ಮರನಶರ ತಾಪವನು ಪರಿಹರಿಸಲರಿ ಯದೇ ಮರುಳ ಕೀಚನು ದ್ರೌಪದಿಯ ತುಡುಕೀ || ಮರುತ ಸುತ ಭೀಮನಿಂ ದಿರುಳೊಳಗೆ ಹತನಾಗೆ | ನರಗುರಿಯ ನಿನ್ನ ಪಾಡೇನು ಧರೆಯೊಳಗೆ ||೩|| ಹರನವರವನು ಪಡೆದು ಶರಧಿ ಮಧ್ಯದೊಳಿದ್ದು ದುರುಳ ದಶ ಶಿರನು ಜಾನ ಕಿಯ ನೊಯ್ದು || ಧುರದೊಳಗೆ ರಘುವರನ ಶರದಿಂದ ಈರೈದು | ಶಿರಗಳನ ಹೋಗಾಡಿಸಿದ ಪರಿಯು ನರಿತು ||೪|| ಇಂತಿಂಥವರು ಕೆಟ್ಟು ಹೋದವರೆಂಬುದ ನರಿತು | ಭ್ರಾಂತಿಯನೆ ಬಿಟ್ಟು ಭಯಭಕ್ತಿಯಿಂದ | ಅಂತರಾತ್ಮಕ ಕಾಗಿನೆಲಿ ಯಾದಿ ಕೇಶವನ ನಿ | ರಂತರದಿ ನೀ ಭಜಿಸಿ ನಿತ್ಯ ಸುಖಿಯಾಗು ||೫||

### ವಿಜಯವಿಠ್ಠಲರ ಸುಳಾದಿ, ರಾಗ ತೋಡಿ ತಾಳಝಂಪಿ

ಮನವೆ ನೀ ನೆನಿಸದಿರುಮನಸಿಜನ ಮರುಳಾಟ| ಕನಸಿನೊಳಗಾದರೂ ಎಂದೆಂದಿಗೂ | ಧನ ಸೂರೆ ಮತಿಹಾನಿ ಗತಿ ಕೆಡಗು ಕಂಡಲ್ಲಿ | ಜನಸುಡಿಗೆ ಕುಳಿತ ಕಡೆ ಜಗದೊಳಗೆ | ತನು ಶದ್ಧವಾಗದು ಎಣಿಸುವನು ಯಮರಾಯ

ಇನಶಶಿ ಉಳ್ಳ ಪರಿಯಂತ ನರಕ । ಗುಣಿಸು ನಿನ್ನೊಳು ವಸು ಮನಸು ವಿಜಯ ವಿಠಲ । ಘನ ಸುಲಭನೆಂದು ವಖ್ಯಾಣಿಸು ಸದಾನೆನಸು ॥೧॥

ಮಟ್ಟತಾಳ

ದಶೇಂದ್ರಿಗಳ ನಿನ್ನೊಳಶಮಾಡಿಕೊಂಡು । ದಶದಿಕ್ಕಿಗೆ ವೈದು ಹಸಗೆಡಿಸಿ, ದು ರ್‍ವ್ಯಸನಕ್ಕೆ ಹಾಕದೆ ಹಸನಾಗಿ ಇರು ಸ್ವಾ । ವಶವಿಜಯ ವಿಠ್ಠಲ್ಲ ಅಸಮದೈವವೆಂದು ॥೨॥

ತ್ರಿವಿಡಿ ತಾಳ

ನೀನೆ ಮಾನುಷ್ಯರು ಏನೇನು ಮಾಡುವ । ಸ್ನಾನಾದಿಗಳಿಗೆ ಪ್ರಧಾನವೆ ಮನವೆ। ನೀನೆ ನಿಲ್ಲಲು ಎನಗೆಧ್ಯಾನ ಪೂರ್ವಕದಿಂದ । ಜ್ಞಾನಕ್ಕೆ ಅಧಿಕಾರಿ ಎನಿಸುವೆನು । ನೀನೆ ಸಕಲೇಂದ್ರಿಯಗಳಿ ಗರಸೆಂದು ಪೇಳಲು । ನೀನೆ ನೀನೆಯೆಂದು ಸ್ತುತಿಸಿದೆನೊ । ನೀನಾನೊಲಿದು ಸರ್ವಜ್ಞ ವಿಜಯ ವಿಠ್ಠಲನ್ನ । ಕಾಣಿಸುವದು ಎನ್ನ ಹೃದಯ ಮಧ್ಯದಲ್ಲಿ ॥೩॥

ಅಟ್ಟತಾಳ

ಹುಲಿಯಾ ಕಟ್ಟಲಿ ಬಹುದು ಕಲಿಯಾಬಂಧಿಸಲಾವೆ ಜಲನಿಧಿಯೊಳು ಪೊಕ್ಕುನೆಲಿಯ ತರಲುಂಟು । ಸುಳಿಯುವಘಾಳಿಯನು ಹೊಕ್ಕಳಿಸಿ ತರಬಲಾವೆ । ಕುಲಗಿರಿಗಳು ಪಿಡಿದೊಲಿದು ಅಲ್ಲಾಡಿವೆ । ಒಳಗಿದ್ದ ಮನವೆ ನಿನ್ನಳ ವೀಗ ತಿಳಿಯದು । ಗೆಳೆಯ ನೀನಾಗು ಶುಭಾಂಗ ವಿಜಯವಿಠ್ಠಲನ ಕೂಡಬೆರದಾಡು ಭರವಸ ಸಾರು ॥೪॥

ಆದಿತಾಳ

ಕಾರಣಿ ಬಂಧ ಮೋಕ್ಷಕೆ ಕಾರ್ಯ ಕಾರಣ ನೀನು । ಹಾರಿಹಾರಿ ಹೋಗದೇ ಸೇರಿಕೊಂಡು ಎನ್ನೊಳು । ಪಾರಮಾರ್ಥವ ಬಯಸಿ ವೀರ ವಿಜಯ ವಿಠ್ಠಲನ್ನ ಸೇರಿ ಸತತದಲ್ಲಿ ನೋಡು ನೋಡು ನೋಡುನೋಡು ನೋಡು ॥೫॥

ಜತೆ

ಎತ್ತ ಪೋಗವಲೆ ಸಾರಥಿಯಾಗಿ ಅನುದಿನ । ಉತ್ತರಾ ವಿಜಯ ವಿಠ ಲನಲ್ಲಿ ಸೇರುವ ॥೬॥

ಪದ ರಾಗ ಕಾಂಬೋದಿ ತಾಳ ಝಂಪಿ

ನೋಡಿ ನೋಡಿನೋ ರಂಗ ನಿನ್ನ ನೋಡಿ ನೋಡಿನೋ | ಆಡಲೀ ನಯ್ಯ ಪರ ಸತಿಯರ ಮೋಹಕ್ಕೆ ಸಿಲುಕಿ ||ಪಲ್ಲ|| ಹೆಣ್ಣಿನಾ ಕಾಣುತ ಮನಸು ದ್ರವಿಸುವದು ಧೃಢವಾಗಿ | ಮುನ್ನೆ ದಾರಿದ್ರ್ಯತನ ಯೆಣಿಸಿಕೊಳದೆ|| ಕಣ್ಣು ಹೋಗುವ ಸುದ್ದಿ ತಿಳಿಯದಲೆ ನಿರೀಕ್ಷಿಸಿ| ಬನ್ನಬಡುವೆನೊ ರಂಗ ನಿನ್ನ ಮೂರ್ತಿಯ ನಿತ್ಯ ||೧|| ಜಲ್ಪಸಿಲ್ಪಗಳಿಂದ ಮಂತ್ರಮಾಡುವೆ ಅವಳ | ಸ್ವಲ್ಪ ಮುಖ್ಯಾರ ಗುಣ ಗುಣಿಸಿಕೊಳುತ || ತಲ್ಪ ಮಿಕ್ಕಾದ ಭೋಗದ್ರವ್ಯ ಬಯಸಿ ವಿ| ಕಲ್ಪ ಸಂಕಲ್ಪದಲ್ಲಿ ಬಳಲುವೆನು ಬಸವಳಿದು ||೨|| ವ್ಯಾಖ್ಯಾತ ಪಂಡಿತ ದ್ವಾಪ್ಯಸಕಪಾತಕಮುಹಾ | ಪ್ರಖ್ಯಾತ ವೇದವೇದಾಂತ ಪ್ರಹುಢಾ || ಸೌಖ್ಯ ಪುಸ್ತಕವಾಣಿ ಜ್ಞಾನಿಯೆನಿಸಲು ಅವಳ | ಆಖ್ಯಾನ ಕೇಳುತಲೆ ಕಿವಿಗೊಟ್ಟು ಲಾಲಿಸುವೆ || ೩ || ಬೀದಿಯೊಳು ಪೋಗುವವಳೊಂದು ಪ್ರಯೋಜನಕ | ಹಾದಿಯನು ಓಡಿದು ಸಮೀಪಬರಲು || ಪಾದಕಾದುರು ಬಿದ್ದು ಮಾತಾಡುವೆನೆಂಜೂ | ವೇದವನು ತಾಳಿ ಏಕಾಂತ ಹುಡುಕುವೆ ||೪|| ವಿಧವೆ ವ್ಯಾಧಿಷ್ಟೆ ವ್ಯಭಿಚಾರಿ ಅಂಧಕ ಮೂಕಿ| ಬಧಿರೆ ಹೀನಾಂಗ ಅಪರೋಕ್ತಮ ಜಾತಿ | ವಿಧಿನಿಷೇಧವನು ಚಿಂತಿಸದೆ ತೀವರದಿಂದ | ಅಧೋಗತಿಗೆ ಇಳುವೆನು ನಕ್ಕುಮೊವನು ತೊರೆದು ||೫|| ನೀರು ನೀರೆ ಪೋಗಿವಾಗ ಸ್ನೈತೊಳೆದು ಉಡುವಾಗ | ಊರು ಕುಚಾ ಕಚಾನೋಳ್ವ ಆಶೆಯಲೀ || ಮೂರು ಹತ್ತನೆ ತತ್ವ (೧೩ ಉಪಸ್ಥ) ನೆನೆನೆನೆದು ಯೋಚಿಸಿ | ನಾರಿತಿಯು ಕೇಳಿ ತಲದೂಗುವೆನು ಲೇಸಾಗಿ ||೬|| ಕಣ್ಣು ಯಿದ್ದುವಕೆ ಸಾರ್ಥಕವಾಗಲಿಲ್ಲ ಪ್ರ | ಸನ್ನ ಮೂರುತಿ ಎನ್ನ ಸಾಧನವೇನೊ || ಘನ್ನ ಎಲ್ಲೆಲ್ಲಿ ನಾನೋಡಿದರಲ್ಲಲ್ಲಿ | ನಿನ್ನ ರೂಪವ ತೋರೊ ವಿಜಯ ವಿಠಲ ಪೊಲಿದು ||೭||

**ಗೋಪಾಲ ವಿಠಲ | ರಾಗ ಪೂರ್ವಿ ತಾಳ ಝಂಪಿ**

ನೆಚ್ಚದಿರು ನಾರಿಯರನಾ | ನೆಚ್ಚದಿರು ನಾರಿಯರ ಮೆಚ್ಚುಗಳ್ಳರು ಮನಿಯು| ಎಚ್ಚರಿಸಿ ಸುಲಿವರಲ್ಲೋ ನೋಡುನೀ| ಹುಚ್ಚನಂತಿರುವಿಯಲ್ಲೋ ಪ್ರಾಣಿ || ||ಪಲ್ಲ|| ನೋಟವೆಂಬಾಸ್ತ್ರ ನುಡಿ ಮಾಟವೆಂಬಾ ಘಾಸಿ ಕೂಟದಲಿ ಮುಗಿದು ಕಟ್ಟ ಅವರ ನ್ಯ| ಮಾಟಕ್ಕೆ ಮನ-ನಿಟ್ಟು ಬಡಕು ಕಾ| ಮಾಟದಲಿ

ಸೋತುಬಿಟ್ಟೆ । ಮುಂದೆಸ್ನ (ದಿನ್ನು) ನೀಟಗತಿಗೇನುಬಟ್ಟೆ ಪ್ರಾಣಿ ||೧|| ಸೋತೆನೆಂಬರು ಪತಿಗೆ । ಮಾತನಾಡುವರು ಕೈ । ತಿರುವಿ ಪುರುಷಗೆ ದೂರ ಸಾಮ ಶೆ । ಕುತಿನೋಡುವರು ಚದುರ ವಚನದಿ ವ್ಮ್ಗೆ । ತೂತು ಮಾಡುವರು ಬುಧರ ದುಷ್ಟಕಾ । ಮಾತುರವ ಪುಟ್ಟಿಸುವರ ಅವರ ||೨|| ಪಂಟಿಯುಲಿ ಇರ ಮೆಚ್ಚಿ ನೆಂಟರಿಪ್ಪರು ಬಹಳ । ಸುಂಠಿ ಬೆಲ್ಲವನುಕಾಣೆ ಪತಿಯನು ದಂಟಾದಿ ಯಲೊ ಪ್ರಾಣಿ ಪುರುಷನಿಗೆ । ಪಂಟಲಿರ ಹೇಳಿ ರಾಣಿ । ಕುಂಟಿಕ್ಕಿ ಮನೆಗೆ ಲಸ । ಗಂಟು ಹಾಕಿ ಮೊಗವ । ಗಂಟು ಹುಡುಕುವಳು ಜಾಣಿಪ್ರಾಣಿ ||೩|| ಅರ್ಥಗಳಿಸುವೆನೆಂಬ, ಸ್ವಾರ್ಥದಲಿ ತನ್ನ ಮಾ । ವತ್ತ್ರಿಯನು ಹೊರಗೆ ಇಟ್ಟ ಸ್ತ್ರೀ । ತನ್ನ ಪತಿವ್ರತೆತನವ ಪತಿಗೆ ತೋರಿಸಿ ಒಮ್ಮೆಕೆಲ್ಲ ವ್ಯರ್ಥಮಾಗಾಡಿದೆ । ನಿಶಿ । ಮಿತ್ರಭೇದಗಳಿಂದ ವಿತ್ತವನು ಕೂಡಿಸಿ । ವ್ಯೊತ್ತ್ರಿ ಓಡ್ಯಾಡುಕೊ ಸೂಗಸಿ ||೪|| ಸುಣ್ಣದ ಮೇಲಿಸ್ನು ಬಣ್ಣವಿದ್ದಂತೆ ಈ । ಹೆಣ್ಣುಗಳ ಸ್ನೇಹಕೂಟ ಎರ ಳಿಯು । ಗಣ್ಣು ಹೆಂಗಳೆರ ನೋಟ । ರೂಪಲಾ । ವಣ್ಯಗಳ ವ್ಯೆಯ್ಯ ಮಾಟ । ಕಿನ್ನುನೀಸೋಲದಲಿ ಗೋಪಾಲ ವಿಠಲನ್ನ ಚನ್ನಾಗಿ ಭಜಿಸಿಬಾಳೊ ||೫||

ಪ್ರಸನ್ನವೆಂಕಟರು, ಪದ ರಾಗ ವಸಂತ ಭೈರವಿ ಝಂಪೆತಾಳ

ಏನೋ ಭ್ರಮೆ ಮನುಜ ನಿನಗೇಕೆ ಹರಿಭಟರ ಹಗೆ ಪರ । ಮಾನಿನಿ ಯರ ಸಂಗ ನರಕದೊಳು ಭಂಗ ||ಪ|| ಮಬ್ಬು ಮುಸುಕಿದ ಪರಿಯ ನಿಜ ಸತಿಯ ನೋಡದೆ ಮತ್ತೊಬ್ಬಳಾ ಕುಚಕೆ ಕಮಲವ ಹೋಲಿಸಿ । ಕೊಬ್ಬು ವ್ಯೆಯ್ಯವಳ ಸುಖವಿಡದಿರದು ಮಹಶೋಕ । ತಬ್ಬಿಬ್ಬುಗೊಳುತ ನಿರಯ ಗಳುಂಬೆ ||೧|| ಇಂದು ಮುಖಿಯಳ ಸಂಗ ಎನಗಿಂದು ಕೈಗೂಡಿ । ಲೆಂದೊಬ್ಬ ಕುಂತಣೆಗೆ ಧನವಿತ್ತು ನಿನ್ನ । ಸಂದುಗಳ ಕಡಿವ ವೈತರಣಿ ನಲಿಬದಿ ದೇಹ । ಹೊಂದಿಸುವರುಂಟು ಕಾಲನಕುಂಟಿಗಣಿಗರು ||೨|| ಚಿಕ್ಕಬೆಲೆಯರ ಕಂಡು ಚಂಚಲಿತ ನಾಗಿಪನ । ವಕ್ರನೋಟದಿ ಹಲವು ಸನ್ನೆಯಿಂದ । ತಕ್ಕೈಸ ಬೇಕೆಂಬ ಲಂಪಟದಿ ತಪ್ಪಾದ । ಶರ್ಕರಾಯಸ ಸ್ತಂಭ ವಪ್ಪಿ ಪೊರಳುವೆ ||೩|| ಹರಿದಾಸರಾಚಾರ ಕೇಳಲಸಿ ಪಳಿದೊರೆದು । ಒರಟು ಮಾತಿನ ಸರಕಿ ಲಾಯುಗಳದೇ || ವಿರತಿಜ್ಞಾನಾನ್ವಿತರ ಪೆರಸ ದಂಧಕನಾದೆ । ತರಣಿಯೊಳು ಹೊಂಭುಳವು ಗರುಪಿಸಿದ ತೆರದಿ ||೪|| ಜಂಬುಕವು ಹರಿಯೊಡನೆ ಸರಸ

ವಾಡಿದ ಪರಿಯೋಳಂಬುಜಾಕ್ಷನದಾಸ ನಿಂದ್ಯವಾಡಸಲ್ಲ| ಕುಂಭಿಪಾಕಿನಿಯಲ್ಲಿ ಮರಳಿಸುವ ಭಯವರಿತು । ನಂಬು ಪ್ರಸನ್ನ್ವೆಂಕಟೇಶ ಸಂಪ್ರಿಯಾ ||೫||

ವರದ ಗೋಪಾಲ ವಿಠ್ಠಲ ಪದ, ಶ್ರೀ ರಾಗ ತಾಳ ಝಂಪೆ

ಮನವೆ ದುರ್ವಿಷಯಂಗಳ ಮನನ ಮಾಡುತಲಿನ್ನ । ವಣಿಸಿ ಕಾಡುತ ಲಿಪ್ಪಿಯಾ । ಮನವೇ । ನಿನಗೆ ನೀ ತಿಳಿದುಕೋ ಘನ ಮಹಿಮಕೃಷ್ಣನ್ನ ನೆನಿಸಿ ಸುಖಿಸಲಿ ಬಾರದೇ || ೧ || ಚಂದನ ಸುಗಂಧಿ ಸ್ತ್ರೀ ಎಂದು ಪೇಳುವರು ಬಲು । ಅಂದವರಿಯದೆ ಮನುಜರು ಮನವೆ । ಒಂದು ಕ್ಷಣ ತೊಳಿಯದಿರೆ ವದನ ವಪು ಹೊಲಸು ದುರ್ಗಂಧ ನಾರುತಲಿಪ್ಪದು ಮನವೆ । ಬಿಂದು ಸುಖ ಪವಳ ಸಂಬಂಧವಾಗಲು ನೋಡು । ಮುಂದರ ಸದ್ಭಾವ ದುಃಖಪ್ರೋ ಮನವೆ । ಮುಂದವಾನ್ನವರ ಮಾತಿಗೆ ಮೋಸ ಹೋಗದಿರು । ಪ್ರೊಂದು ಇಂದಿರೆಯರಸನ ಮನವೆ ||೧|| ಹಲವು ಚಿಂತೆಯಲಿಂದ ಬಲುಬಳಲಿಸಿದಿ ನಿನ್ನ ಬಲವಿಕೆಗ ಭಾಷೆಬಾರ । ಮನವೆ। ತೊಳಲಿ ನಾನಾ ಕಡೆಯ ನೆಲೆಯ ಗಾಣದೆ ವಿಷಯ । ಜಲಧಿಯೊಳು ಮುಳುಗಿಹೋದ್ಯಾ ಮನವೆ । ಕಲಮಲಕಲುಷವೆಂಬ ಕರ್ಮ ನೊಳಗ ಸಿಲುಕಿ । ಬಲುಕ್ಲೇಶಕೊಳಗಾದಿಯಾ ಮನವೆ । ಜಲರುಹಾಕ್ಷನ್ನ ಚಲುವಿಕೆಗೆ ಚನ್ನಾಗಿ ನೀಚಲಿಸದೇ । ನಿಲ್ಲಿಸಬಾರದೇ ಮನವೆ ||೨|| ಏಸು ಪೇಳಿದರೇನು ಏಸು ಕೇಳಿದರೇನು । ಏಸೇಸು ಕೂಗಲೇನು । ಮನವೆ । ವಾಸ ನಿಯು ಸ್ತ್ರೀಯರಲಿ । ಈಷತ್ತು ಬಿಡದಲೆ ! ಮೋಸಗೊಳಿಪುದು ನಿನ್ನ ಮನವೆ । ವಾಸುದೇವ ಹಯಾಸ್ಯ ದಾಸರ ಸಮಾಗಮದಿ । ಸೂಸಿ ಸಂತೋಷಿಸೆಲವೊ ಮನವೆ ಶ್ರೀಶ ಶ್ರೀವರದ ಗೋಪಾಲ ವಿಠ್ಠಲನಲ್ಲಿ ಲೇಸು ಭಕುತಿಯನು ಮಾಡು ಮನವೆ ||೩||

ಜಗನ್ನಾಥ ವಿಠಲರು

ಮನವೇ ಮರಿಯದಿರು ಹರಿಯಾ । ಬಹುಜನುಮಗಳಲಿ ಬಟ್ಟಭವಣಿಗಳರಿಯಾ || ಪಲ್ಲ || ವಿಷಯಾಚಿಂತನೆ ಮಾಡಸಲ್ಲ । ಮೇಷ ವೃಷಣನಾದ ಹಿಂದೆ ಪೌಲೋಮಿನಲ್ಲ ಝಷಕೇತುವಿನ ವ್ಯಾಳಸಲ್ಲ ನಿ । ರಾಶಿಷ ನಾಗೊಯುಮರಾಯ ಎಂದೆಂದು ಕೊಲ್ಲ ||೧||

ಪ್ರಾಣೇಶ ವಿಠ್ಠಲರ ಪದ, ರಾಗಪರಾಳಿ ಅಟ್ಟತಾಳ

ಅನ್ಯಸತಿಗೆ ಒಲಿಯಬಾರದು । ಅನ್ಯಸತಿಗೆ ಒಲಿದರೊಂದು । ಘನ್ನತ ನವಕಾನೆ ಜನರು ಮನ್ನಣೆಡರು ಸದ್ಗತಿಲ್ಲ । ಸಣ್ಣ ಮನುಜ ನಾಗಬೇಡ ॥ ಪ ॥ ತಂದೆ ತಾಯಿ ಅಣ್ಣ ತಮ್ಮ ಬಂಧುಬಳಗ ತೊರಸಿ ತನ್ನ । ಹೊಂದಿ ಕೊಂಡ ಶ್ವಾನಸಂತೆ ಹಿಂದೆಮುಂದೆ ತಿರುಗಿಸುವಳು ।೧। ಸ್ನಾನ ವೊದಲು ಕರ್ಮ ಮಾಡಿ ಏನು ಉಂಬಿ ಫಲವ ದೇಹ । ಕ್ಷೀಣಗೊಳಿಸಬೇಡವೆಂದು। ಹೀನಬುದ್ಧಿ ಪ್ರೇರಿಸುವಳು ॥೨॥ ಎನ್ನ ಪತ್ನಿಯು ಒಬ್ಬಮೇಲೆ । ನಿನ್ನ ಸಂಗ ವಿಲ್ಲದಿತರ । ಕಣ್ಣನೆತ್ತಿ ನೋಡೆನೆಂಬ । ಅನ್ಯಕಾರಿ ಜಾರಕುಲಜೆ ॥೩॥ ಪ್ರಾಣಮೊಲ್ಲಭನ್ನಕ್ಕಿಂತ ನೀನೆ ಅಧಿಕವೆಂದು ಬಹಳ । ಆಣೆಕೊಟ್ಟು ಒಗತನ ವನು ಹಾನಿಮಾಡಿ ತೋರಿಸುವಳು ॥೪॥ ನತಿಯ ನೇರವಂತಮಾಡಿ ಸತತ ಚೋದ್ಯ ಮಾಡನಾಡಿ । ಹಿತವತೋರಿ ಮತಿಯುಕೆಡಸಿ ಅತಿಯಭ್ರಾಂತಮಾಡಿ ಸುವಳು ॥೫। ಧನವು ಕೊಡುವತನಕ ಎನ್ನ ತನುವು ನಿನ್ನದೆಂದುದಕ್ಕಿ ಕೊನೆಗೆ ರಿಕ್ತತನವು ಒರಲು ಮನಿಯ ಕಡಿಗೆ ಸುಳಿಯಗೊಡಳು ॥೬॥ ಇದನು ಮನಕೆ ತಂದು ದಯಾ । ಉದಧಿ ಪ್ರಾಣೇಶ ವಿಠಲನಂಘ್ರಿ । ಹೃದಯದಲ್ಲಿ ನೆನೆದು ಚಿಂತ । ವದದು ಸತತ ಸುಖಿಸೊ ಮನುಜ ॥೭॥

ಪ್ರಾಣೇಶ ವಿಠಲ

" ಪರಸತಿ ಪಡದವನ್ಯನೆಂಬುವ ಧನ್ಯ" ಕುಣಪದಂತೆ - ಪರಸ್ತ್ರೀ ನೋಡಲ್ ಭಯಪಡುವನು ಬಡುವನೆ ಬ್ರಾಹ್ಮಣನೆಂದರಿವದೆ। ಸಜ್ಜನ ನಡತೆ ಇದು । "

" ಪತ್ನಿ ಜನಮು ಅನ್ಯಸತಿಯು । ರತ್ನಸಮನ ತಿಳಿದುಹರಿಯ । ನತ್ನ ದಿಂದ ಪಾಡಿಸುಗತಿ ಯತ್ನಮಾಡದವರು ಬದುಕಿ ಏನು ಸಾರ್ಥಕ ॥ "

" ಮುರಳಿ ಕೇಳಿದ ನನವರತಾ ಹಿಂದೆ ಎರಳಿ ಜನ್ಮವತಾಳಿ ಬಂದನಾ ಭರತಾ, । ಫಲವೆಸಿಸುಯಾಪೇಕ್ಷನಿರುತಾ ನೀ ಎಚ್ಚರಿದು ಪೂಜಿಸು ತಾನೆ ವೊಲಿವ ಶ್ರೀ ಭರತಾ । ಮನವೆಸ್ಮರಿಸು ಕಂಡ್ಯಾ ಹರಿಯಾ "

" ಸೂಳಿಯು ಬಳಿ ಪೋಗಲಾನಂದ। ಪಾತ್ರರಾಲಯಖ್ಯೋಗಲಿಕ್ಕತಿ ದುಃಖ । ಕೆಡುವರೊ ವ್ಯರ್ಥ ಈ ಬ್ರಹ್ಮಣ್ಯ ।

ಪ್ರಾಣೇಶ ವಿಠ್ಠಲರು

ನಗಿಬರುವದೊ ಮಾಡುವ ಹಗರಣಕಿದು ಘನವೆ || ಇನಿತು ಮನಕೆ ಬರಲಿ ತವಕದಿ | ಮನ್ಮಥನ ಆಟಕೆ ತೊಡಕಿ ನಿರಯಸ್ಥಿತ ನೆನಿಸುವದು ಚಿತ್ತ ವೆಸಿನಗೆ ||೧||

ಶ್ರೀದ ವಿಠ್ಠಲರು

ಹೆಣ್ಣು ಹೊನ್ನು ಮಣ್ಣಿನಾಶೆಯು ಮಾಡುವಿ ಆಪದೊಳಗೇನಿದೆ ಹುಚ್ಚು ಹುಡಿ || ರಘುರಾಮನ ಪಾದವ ಪಿಡಿಪಿಡಿ ||೧||

ಬಾದರಾಯಣವಿಠ್ಠಲ

ವಾಮಲೋಚನಿಯ ಕೂಟ ಛೀ ಬಿಡೊ ಹೊಲಸೊ ||

'' ಗುರುಮಧ್ವೇಶ ವಿಠಲ, ಪದ ರಾಗ ಕಲ್ಯಾಣಿ ಅಟ್ಟತಾಳ

ಮೋಹಿಪ ದಾತನೆ ಜೀವನ್ಮುಕ್ತ ರೆಂಬುವರು | ಸ್ನೇಹ ಕೆಚ್ಚಿಸುವ ಪ್ರೌಢಸ್ತ್ರೀಗ್ರ ಶೃಂಗಾರ ಪಂತಿಗೆ ||ಪ|| ತಟಿನ ಲತಿಯಂಥಳವಳ ತಾರಕ್ಕಿಯಂ ಧವಳ | ಪಟುತಾರುಣ್ಯ ಲಾವಣ್ಯ ಪದ್ಮ ಗಂಧುಳ್ಳವಳಾ || ವಿಟಲಾಂಛನ ಸ್ಮಾರಕ ವಿಯಸನವ ಹಾಕಿ | ವಾಲಕುಟಿಲ | ಚಂದ್ರನಿಟಿಲ | ಹಾಸ ಪಟು ಲಜ್ಜಾನ್ವಯುತ ಚಟುಲನೇತ್ರಕ್ಕೆ ||೧|| ಕರಣಾಭರಣಗಳೊಪ್ಪು ಕದಪುಗಳುಳ್ಳವಳ | ವರಣಾ ವರಣದ ವೇಷ ಪ್ರೋಕ್ಷಿಸಿ ಒಲಿಪಿಸುವಳ || ತರುಣಾಂತಃಕರಣಕ್ಕೆ ತಾ ತೋರ್ಪವಳು | ನೇತ್ರ ಹರಣಾ ಓಷ್ಠ್ರದರುಣಾ | ಹಾರಸ್ಫುರಣಾ ಘನಕುಚ ಗುರುಣಾ ನಪ್ರಕ್ಕೆ ||೨|| ಕರಭೋರು ವೃತ್ತ ನಿತಂಬಕ್ಕೆ ಕಾಂಚಿದಾಮ ದಾಮ ಬದ್ಧಳಾ || ಗುರುಮಧ್ವೇಶ ವಿಠಲ ಗುಪ್ತರಿಗೆ ವಿರುದ್ಧಳಾ || ಚರಣದಂದಿಗೆ ಗೆಜ್ಜೆ ಝಂಕರಿಸುವ | ಮಂದ ಚಲನಾ ಹಾರಸ್ಫುರಣಾ | ಮಾರಾಡುರುಳಾಟಕೆ, ನೀ ವಿವರಳಾಗಲಿ ಕಂಡು ||೩||

ಶ್ರೀ ತುಲಸಿದಾಸರ ಧರ್ಮಪತ್ನಿಯಳು ತವರ ಮನೆಯಲ್ಲಿದ್ದಾಗ ರಾತ್ರಿ ಸ್ತ್ರೀ ವ್ಯಾಮೋಹದಿಂದ ತುಳಸಿದಾಸರು ತನ್ನ ಸತಿಯಳಲ್ಲಿ ಹೋದಾಗ್ಗೆ ಸುಶೀಲೆ ಪತಿವ್ರತೆಯು, ತುಲಸಿದಾಸರಿಗೆ, ವಿನಂತಿಮಾಡಿದ ಉಪದೇಶ (ತುಲಸೀದಾಸ ರಾಮಾಯಣ)

" ದೋಹಾ,,

ಲಾಜ ನಲಾಗತ್ ಆಪುಕೊ ದೌರೇ ಆಯಹು ಸಾಥ! ಧಿಕ್
ಧಿಕ್ ಐಸೆ ಪ್ರೇಮಕೊ ಕಹಾ ಕಹಂ(ಙ್ಞ)ಹು ವೈನಾಥ॥
ಅಸ್ಥಿ ಚರಮ ಮಯ ದೇಹ ಮಮತಾ ಮೈ ಜೈಸೀ ಪ್ರೀತಿ।
ತೈಸಿಜೋ ಶ್ರೀರಾಮ ಮಂ(ಙ್ಞ)ಹಹೋತನತೋಭವಭೀತಿ॥

ಅಹೋ ಎಂಥ ವ್ಯಾದು ಮಾಡಿ ಇದು ಹೇ ಪತಿಯೆ ನಿನ್ನಗೆ ಇಷ್ಟು ದೂರ ಒರಲು ನಾಚಿಕಿ ಬರಲಿಲ್ಲವೆ? ಹೇನಾಥನೆ ನಿನ್ನ ವಿಚಾರಕ್ಕೆ ಧಿಕ್ಕಾರ ವಿರಲಿ ಇಂಥ ಕುಚ್ಛಿತವಾದ ಪ್ರೇಮಕ್ಕೆ ನಾನು ಏನು ಹೇಳಲಿ, ಮಾಂಸ ಅಸ್ಥಿ ಚರಮ ವುಳ್ಳ ಈ ಹೊಲೆ ನಾರುವ ನನ್ನ ದೇಹದ ಮೇಲೆ ಇಂತು ಪ್ರೀತಿಯೆ ? ಇಂಥವೊಹವೇ ? ನನ್ನಮೇಲಿದ್ದಂಥ ಪ್ರೀತಿಯು ಯೋಗಿಗಳು ಮನ ಮುಟ್ಟಿ, ಭಜಿಸುವ ಶ್ರೀರಾಮ ದೇವರಲ್ಲಿ ಮಾಡಿದ್ದರೆ, ಭವಭೀತಿ ದೂರ ಆಗ ತ್ತಿದ್ದಿಲ್ಲವೇ ನಾಥಾ ? ಎಂದು ವಿನಯದಿಂದ ಪ್ರಾರ್ಥಿಸಿದಳು. ಆಗ್ಗೆ ಶ್ರೀತುಳಸೀದಾಸರಿಗೆ ವೈರಾಗ್ಯ ಪುಟ್ಟಿತೆಂದು ಹೇಳಿದ್ದಾರೆ ಹಿಂದೆ, ಇಂಥ ಪತಿವ್ರತೆ ಸ್ತ್ರೀಯರೇ ನಮ್ಮ ಪವಿತ್ರ ಭಾರತ ಭೂಮಿಯಲ್ಲಿ ಶೋಭಿಸುತಿದ್ದು ಪುರುಷರನ್ನು ಸಹ ಸುವಿಚಾರ, ವೈರಾಗ್ಯ ಮಾರ್ಗದಲ್ಲಿ ಪ್ರವೃತ್ತಿ ಸುತಿದ್ದರು.

## ೨೭ ಅಪರಾಧ ಕ್ಷಮಿಸೆ ಪ್ರಾರ್ಥನಾ

ಸಿರಿಕೃಷ್ಣ, ಸು॥ ರೂಪಕತಾಳ

ಇಂದ್ರಿಯಗಳೆಂಬ ಕಳ್ಳರೈವರು । ಬಂಧಿಸಿ ತಮ್ಮ ವಿಷಯಕ್ಕೊಯ್ದೆನ್ನ। ಕಂದಿಸಿ ಜ್ಞಾನವೆಂಬ ದೃಷ್ಟಿಯಾ । ಎಂದೆಂದಿನ ಧರ್ಮ ಧನವನೊಯ್ದರು ಬಂಧಿಸಿ । ಇಂದಿರೇಶ ಲೋಕ ಪತಿ ಸಿರಿಕೃಷ್ಣ ಎನ್ನ । ತಂದೆ ವಿಚಾರಿಸದೆಲ್ಲ ದ್ಯಾಕೆ ಬಾಧಿಪೆ ॥೩॥

ಪರಸತಿಗಳುಪಲು ಪರಮ ಪಾತಕಿಯೆಂದು ಪರಿಪರಿ ನರಕಕ್ಕೆ ಗುರಿ ಮಾಡುವಿ । ಪರಸತಿಯರ ಒಲುಮೆ ನಿನಗೊಪ್ಪಿತೋ ಕೃಷ್ಣ ಧೊರೆತನಕಂಜಿ ನಾ ಶರಣೆಂಬೆನಲ್ಲದೆ ॥

ಶ್ರೀಕೃಷ್ಣ, ಸುಳಾದಿ ಧ್ರುವತಾಳದಿ

ದೇಹ ಜೀರಣವಾಯಿತೋ ಧನ । ನೇಹ ಜೀರಣ ವಾಗದೊ ಕಣ್ಣು

ಕಿವಿ ಮಂದಾದವೊ । ಹೆಣ್ಣು ಮಣ್ಣು ಸಾಲಿ ಮಂದಾಗದು । ಕೈಕಾಲು ಜವಗುಂದಿದವು ಭೋಗ । ಲೋಲತೆಯು ಜನ ಗುಂದದೊ

ಇನ್ನಾದರು ದಯದಿಂದ ನೋಡಿ । ನಿನ್ನ ಭಕ್ತಿಯ ನಿತ್ತು ಮನ್ನಿಸಬೇಕಯ್ಯ ಎನ್ನನು ಸಿರಿ ಕೃಷ್ಣ ||೧||

ಮುದ್ದು ವಿಠಲರ, ಸು|| ಆದಿತಾಳ

ಇಂದ್ರಿಯಂಗಳು ತಾವು ಬಂಧಿಸಿ ಎನ್ನನು । ಸಂಧಿಸಿ ತಮ ತಮ್ಮಗೊಂದಿಗೆಳವು ತವೆ । ಮಂದರೋದ್ಧರ ಕೇಶವ ಬಂದು ನೀ ಎನ್ನನು । ಭಂದದಿ ಪಾಲಿಸೊ ತಂದೆ ಮುದ್ದು ವಿಠಲರೇಯ ಕರುಣಿ । ಮಂದರೋದ್ಧರ ಕೇಶವ ||೨||

ಅಚ್ಯುತ ವಿಠ್ಠಲರ, ಸು|| ಅಟ್ಟತಾಳ

ಮುದ್ರೆ ಯೊತ್ತಿದ ಲೋಕ ಕಾಮುಕರ ಪೋಲುವಂತೆ । ನಿಜ ಭಕ್ತನಾನೆಂದು ಸುಲಿವನು ಧನಿಕರನು । ಹರಿಯು ಮುದ್ರಧಾರಿ ತಾನೆಂದು ನಂಬಿಸಿ । ಭೂಚಕ್ರ ಮುದ್ರೆಯೊತ್ತಿ ಸುಲಿವನು ಧನಿಕರನು । ಹೊರಗೆ ದಂಡ ಮುದ್ರೆ ಒಳಗೆ ಕಳ್ಳಮುದ್ರೆ ಇದು ಕಂಡು ನಗುತಿರ್ದ ಅಚ್ಯುತ ವಿಠಲರಾಯ ಸುಲಿವನು ಧನಿಕರನ ||೩||

ಪುರಂದರ ವಿ|| ಸು|| ಆದಿತಾಳ

ಮನೆಮಾರಿ ಮನ್ನಣೆಗೆಡಿಸುತಲಿದೆ । ಎನ್ನ । ಮನಮನೆನಾರತಿಯಾಲಿ ಸುಹ ಬಾಧೆ ಬಡಿಸುತಲಿದೆ । ಧನದಾರಿ ಬೈಸ್ಯ ಬಡಿಸುತಿದೆ । ವನಿತೆಯರಾಲಿನ್ನ ಒಡಲ ಸುಡುತಿದೆ । ಇನಿತಾರಿಯ ಬಿಡಿಸು ಬುದ್ಧಿಯಲಿ ನಿನ್ನನೆನೆವಂತೆ ಮಾಡೆನಗೆ ಪುರಂದರ ವಿಠಲ ||೪||

ಗುರುಪುರಂದರ ವಿ|| ತ್ರಿವಿಡಿ ತಾಳದಲ್ಲಿ

ಹೆಣ್ಣು ನೋಡಿ ಮರಗುವ ಕಂಣಿಗೆ । ಮಣ್ಣು ಚಲ್ಲುವರಿಲ್ಲವೊ । ಹೆಣ್ಣಿಗೆ ಪರಹೆಣ್ಣಿಗೆ ಮರಗುವ ಮನ ಸುಟ್ಟು । ಸುಣ್ಣಮಾಡುವರಿಲ್ಲವೊ । ಹೆಣ್ಣಿಗೆ ಪರಹೆಣ್ಣಿಗೆ । ಪುಣ್ಯ ತುಮು ಗುರುಪುರಂದರವಿಠಲಗೆ ದಯವಿಲ್ಲವೊ ||೫||

ಅಟ್ಟತಾಳ

ಆಡುವೆ ಬಾಯಿಲಿ ಬೊಮ್ಮನ ಒಮ್ಮೆ । ನೋಡದಲ್ಲದೆ ಜಡೆ ಏಕಾಂತ ಮಾಡದೆ । ಮಾಡುವೆ ಹರಿಪೂಜೆ ಕೈಯ್ಯಲಿ ಒಮ್ಮೆ । ನೋಡದಲ್ಲದೆ ಜಡೆ ಯು ವತಿಯರೊಲಿಮೆಯು । ಈ । ಪೀಡೆಮನವ ನಿಂತು ನಿಲಿಸುವ ಕೃಪ । ಮಾಡ ಯ್ಯಾ ಗುರುಪುರಂದರ ವಿಠಲರೇಯ ॥೬॥

ವಿಜಯ ವಿಠ್ಠಲರ ಸುಳಾದಿ ರಾಗ ತೋಡಿ ಧೃವತಾಳ

ಇಂದ್ರಿಯಂಗಳಿರ್ಯಾ ನಿಮಗೆ ವಂದಿಸಿ ನಮೂ ಎಂಬ । ಎಂದಿಗೆ ಎನ್ನ ಪೊಂದಿಕೊಂಡು । ಸಂದೇಹ ಗೊಳಿಸದ ಬಂದಿಗೊಂಡಿಗೆ ಎಳೆದು । ಮುಂದುಗೆಡಿಸಿ ಭೀತಿ ಪಂಪಾತೋರಾದಿರಿ । ಛಂಧದಿಂದಲ್ಲಿ ನಿಮ್ಮಾಸಂದ ಸ್ಥಾನದಲ್ಲಿ । ಬಂಧುಗಳಾಗಿ ಅಲ್ಲಿಂದ ತೊಲಗದಿರಿ । ಒಂದೇರೀತಿಯಲ್ಲಿ ಮುಕ್ಕುಂದನ್ನ ಪಾದಾರ । ವಿಂದದಲ್ಲಿ ಭುಕುತಿ ಕುಂದದಲೆ ನಡೆಸೋದು । ಬಿಂದಾಗದಲೆಬೇಕೆಂದು ಧೃಡವಾಗಿ । ತಂದೆ ಹೃಷಿಕೇಶ ವಿಜಯ ವಿಠ್ಠಲ ಹರಿಯ । ಸಂದರುಶನಕೆಲ್ಲ ವಂದಾಗಿ ಬಲವಾಗಿ ॥೧॥ ಅಲ್ಲಿಂದ ಮುಂದೆ

ತ್ರಿವಿಡಿ ತಾಳದಲ್ಲಿ

ಏಕಾದಶಗಳು ಕೂಡಿ ಸಂತತದಲಿ ವಿ। ವೇಕರಾಗಿ ಶುದ್ಧ ಪ್ರವರ್ತಕ । ಜೋಕೆಯಿಂದಲಿ ಚರಿಸಿ ದುರುಳ ಚೇಷ್ಟೆಗಳು ನಿರಾಕರಿಸಿ ಹತ್ತೆ ಬಂದುಸೇರ ದೆಂತೆ । ಮಾಕಾಂತ ಮಹಾನನಾ ವಿಜಯ ವಿಠ್ಠಲನ್ನ ಅ। ನೇಕ ಬಗೆಯಿಂದ ನಾಮ ಕಥೆಯ ಕೇಳಿ ॥೩॥

ಜತೆ

ಸಕಲೇಂದ್ರಿಗಳಿರ್ಯಾ ಎನ್ನಲ್ಲಿ ಪೊಂದಿಕೊಂಡು ರಕುತನಾಮಾ ವಿಜಯ ವಿಠಲನ್ನ ವೊಲಿಸೋದು ॥೬॥

ಪ್ರಸನ್ವೆಂಕಟ ಕೃಷ್ಣರ ಪದ,

ತಪ್ಪುಗಳಿಲ್ಲವ ಪರಿಹರಿಸುವ ಸರ್ವೊಪ್ಪನಲ್ಲವೇ ನೀನು। ಒಪ್ಪಿದ ಒಳಿಕ ವಗುಣ ನೋಡದ ತಿಮ್ಮಪ್ಪನಲ್ಲವೇ ನೀನು ॥ ಪಲ್ಲ ॥ ಕಣ್ಣಲಿ ಕೃಷ್ಣಾ ಕೃತಿ ನೋಡದೆ ಪರಹೆಣ್ಣಿನ ನೋಡಿದ ತಪ್ಪು। ನಿನ್ನಕಥಾಮೃತವಲ್ಲದೆ ಹರಟೆಯ ।

ಮನ್ನಿಸಿದಾ ಕಿವಿ ತಪ್ಪು । ಅನ್ನವ ನಿಸಗರ್ಪಿಸದತಿ ಹರುಷದಿ ಉಣ್ಣುವನಾಲಗ್ಗಿ ತಪ್ಪು । ಚಿನ್ಮಯನೇ ನಿನ್ನ ಚರಣಕ್ಕೆರಗದೆ ಉನ್ಮತ್ತರಿಗೆರಗಿದ ತಲಿತಪ್ಪು ||೩|| ಇತ್ಯಾದಿ

## ವೇಣು ಗೋಪಾಲ ವಿಠಲ

ವಿಷಯಾಶೆ ಬಿಡಲೊಲ್ಲದೋ ದೇವ ವಸುದೇವ ಸುತ ನಿನ್ನ ವಶವಾಗದವರಿಂದ ||. ಪರರ ಸೌಭಾಗ್ಯ ವಿದ್ಯ ಮಕ್ಕಳ ಕಂಡು ಕಂಡು । ಮರುಗಿ ಮನದೊಳಗೆ ಕರಗಿ । ಸೊರಗೀ ಥರಥರದಿ ಪರ ಅಂಗನೆಯ ಚಲ್ವಿಕೆಯ ಕಂಡು ತೆರದು ಕಣ್ಣಿಂದ ನೋಡಿ ಬಾಡಿ || ಎರಗಿ ಮನೆಯೊಳಗೆ ಏಕಾಂತದಲಿ ಕಂಡ ಕಡೆ । ಕರೆದು ಸನ್ನೆಯನು ಮಾಡಿ ಕೂಡಿ । ಹೊರಗೆ ಗುಣವಂತ ನೆಂದೆನಿಸಿ ಧರೆಯೊಳಗೆ ಪಾಮರ ಬುದ್ಧಿಯಿಂದ ಸಂಚರಿಸಿ ನಿನ್ನನ್ನು ಮರದೆ ||೩||

ವೇಣುಗೋಪಾಲವಿ || ಸುಳಾದಿ ಅಟ್ಟತಾಳದಲ್ಲಿ

ಹೆಣ್ಣು ಹೊನ್ನು ಮಣ್ಣಾಸೆ ಎಂಬೋದು ಎನ್ನ । ಸುಣ್ಣದ ಕಲ್ಲಂತೆ ಸುಡುವದೊ ಪ್ರತಿದಿನ। ಚನ್ನಮೂರುತಿ ಸಿರಿವೇಣುಗೋಪಾಲನೆ।ಎನ್ನದೇಹದಿ ಸೇವೆಯನ್ನು ಕೈಕೊಳ್ಳೊದೊರೆಯೆ ||೬||

ವೇಣುಗೋಪಾಲ ವಿಠಲ

ಉನ್ಮತ್ತ ತನದಿ ಸಕಲ ಸನ್ಮಾರ್ಗವ ಜರಿದು ಸತತ। ದುರ್ಮತಿ ಯನ್ನ ಪೊಂದಿದೆನೊ, ನಿನ್ನ ಮರೆದು ವಿವಿಧ ಧರ್ಮ ತೊರೆದು ||೧|| ವಾಮಲೋಚನಿಯರ ಕಂಡು ನಾಮನಸು ಮಾಡಿಕೆಟ್ಟೆ । ಕಾಮಿಸಿದೆ ಕಲುಷಿಯಾಗಿ ನೇಮದಿಂದ ಅಲ್ಲಿ ಪ್ರೇಮದಿಂದ || ೨ || ಎನ್ನ ಸ್ವಾಮಿ ಸರ್ವ ಸ್ವಾಮಿ ಭಿನ್ನರಹಿತ ಅಖಿಳಜಗಂದತರ್ಯಾಮಿ ಎನಗಾವಗತಿಯೊ || ಎಂಬೊ ಪದ||

ರಾಮಚಂದ್ರ ವಿಠಲ ಸು|| ಝಂಪಿತಾಳ, ಇಂದ್ರಿಯಂಗಳು ಸತಿಸುತರ ಮೋಹದೊಳು। ಬೆಂದುಬಳಲಿದರನ್ನ ಕಡೆಗಾಗವೊ। ಕಂದರ್ಪನಾ ಪಾಶ ಬದ್ಧರಾಗಿ ಎನ್ನ । ಕುಂದಿಸಿ ಜಗತ್ತಿನಲಿ ಹುಚ್ಚನ ಮಾಳ್ಪವೊ । ಒಂದು ನಿಮಿಷಾ ನಿನ್ನಪೊಂದಿ ಪಾಡೇ ನೆನಲು । ಇಂದ್ರಿಯಂಗಳು ವಿಷಯದಿಂದಲಿ

ತೊಲಗವೊ । ಕಂದರ್ಪ ಜನಕ ರಾಮಚಂದ್ರ ವಿಠಲ । ಇಂದ್ರಿಯಗಳ ಪ್ರೇರಕ ನೀನೆಕರುಣಿಸೊ ॥೪॥

ಶ್ರೀ ವರದ ಗೋಪಾಲ ವಿಠಲ

**ಗತಿ** ಏನೋ ಕೃಷ್ಣಯ್ಯ ಎನಗೆ ॥ ಪ ॥ ಪರಸತಿಯಪ್ಪಲು ಥರಥರ ನಡುಗದೆ । ಅರಿಯದಂತವಳಿಗೆ ಹರವುತಿದೆಮನ ॥ ಹರಿ ಎನಗೀಪರಿ ಮರಳು ಹಚ್ಚಿ ನೀ ಅರಿಯುಂದತ್ತಿದ್ದರೆ ತೆರನೇನಯ್ಯಾ ॥೨॥

ಕಾಮಾದಿಗಳನ್ನೆಲ್ಲ ನೇಮದಿ ಬಡಿವಂಥ ಪ್ರೇಮಕವಚವ ತೊಡಿಸಿ ಆದರಿಸೀ ॥ ಹೇಮ ಕಾಮಿನಿಯರಲ್ಲಿ ಹೇಯ ಬುದ್ಧಿಯು ನೀಯೆ ಸೋಮ ಶೇಖರ ಜನನೀ ಸುಜ್ಞಾನಿ ॥೨॥

ಜಗನ್ನಾಥ ವಿಠಲ

**ಗತಿ** ಯಾವುದೆನಗೆ ಶ್ರೀಪತಿಯೆ ಪೇಳೊ । ಮತಿಗೆಟ್ಟು ಸತತ ಪರಸತಿಯರನು ಬಯಸುವೆನು ॥ ಮರಳು ಬುದ್ಧಿಯಲಿಂದ ಕರ ಸೂಚನೆಯಮಾಡಿ । ತರುಣಿಯರ ತಕ್ಕೈಸಿ ಸರಸವಾಡಿ । ಇರಳು ಹಗಲು ಹೀಗೆದುರುಳ ತನದಲಿ ತಿರುಗಿ ಧರೆಯೊಳಗೆ ನಾನೊಬ್ಬ ಹರಿದಾಸ ನೆನಿಸುವೆನು ॥೧॥

ರಘುಪತಿ ವಿಠಲರ ಸುಳಾದಿ ತ್ರಿವಿಡಿ ತಾಳ

ನೀನು ನಿನ್ನವರೆಲ್ಲ ಸಾಕ್ಷಿಯಾಗಿರಲಿಕ್ಕೆ । ನೀನು ನಿನ್ನವರೆಲ್ಲ ವ್ಯಾಪ್ತವಾಗಿರಲಿಕ್ಕೆ । ನೀನು ನಿನ್ನವರು ಜಾಗರೂಕರಾಗಿರಲಿಕ್ಕೆ । ನಾನು ಮಾಡುವ ಪಾಪ ಕೇಕಾಂತ ಬಯಸಿದ್ದೆ । ನಾನು ಕದವ ಮುಚ್ಚಿ ಜನರು ನಿದ್ರೆಯ ಗೈಯ್ಯೆ। ನಾನುಮಾಡುವ ಪಾಪ ನೋಳ್ಪರಾರಿಲ್ಲೆಂದು। ನಾನ-ದೀಪವ ತೆಗೆದು ಕತ್ತಲೆ ಮನಯೆಂದು । ನಾನು ನಿಶ್ಚಯವಾಗಿ ಪಾಪಮಾಡಿದ ಸ್ವಾಮಿ । ನೀನು ನಿನ್ನವರೆಲ್ಲ ಇಪ್ಪರೆಂಬುದು ಮರದೆ। ನೀನು ನಿನ್ನವರು ಮುಖ್ಯ ಶಿಕ್ಷಕರೆಂದರಿಯದೇ । ನಾನು ಕೆಟ್ಟುಪೋದ ಭಂಡನೇನುಸರಲಿ। ನಾನು ಪೇಳದಿರೆ ನೀನುನಿನ್ನವರೆಲ್ಲ। ನಾನು ಮಾಡಿದ ಪಾಪ ನೋಡಿಲ್ಲವೇ ಹೇಗೆ?। ನೀನು ನಿನ್ನವರಿಂದ ಕೂಡಿ ಸಕಲರಿಂದ । ನಾನೆ ಪಾಪಿ ಎನಲು ಅವರ ನಿಂದಿಸಿದೆನೊ । ನೀನಾಡಿದಾರೆನಗೆ ಯೇನುನುಡಿವದುಂಟೆ। ದೀನವತ್ಸಲರಘುಪತಿ ವಿಠಲ ಕರುಣಾಬ್ಧಿ ॥೩॥ ಮುಂದೆ ಅಟ್ಟತಾಳದಿ

ಅಟ್ಟತಾಳ

ನಾನು ಅಂಜುವದಿಲ್ಲ ನಾಮಾಳ್ಪ ಪಾಪಕ್ಕೆ। ನೀನು ನಿನ್ನವರು ಅಜ್ಞಾನಿಗಳೆಂದರಿದೆನಲ್ಲ। ನೀನು ನಿನ್ನವರು ಎಲ್ಲಿ ಇಲ್ಲೆಂದು ಭಾಪಿಸಿ ನೀನು ನಿನ್ನವರತಿ ಶೀಕ್ಷಕರಿಂದನದೆ। ನೀನು ನಿನ್ನವರೆಲ್ಲ ಅಂತರಂಗದಿ ಇದ್ದು। ನಾನು ಮಾಡುವ ಪಾಪನೋಸ್ಸರಿಂದರಿಯದೆ। ನಾನು ಕೆಟ್ಟ ಪೋದುದಕೆ ಮಿಡುಕುವೆನಯ್ಯಾ। ನಾನು ಸಾಯುವಕಾಣೆ ಈ ಪಾಪ ಪೋಗುವಾ। ಹಾನಿಗಂಜೆ ಎನ್ನ ಮಾನಭಂಗಕೆ ಅಂಜೆ। ನೀನುದ್ಧರಿಸು ನಿಮ್ಮ ಮರೆವ ಪಾಪಕ್ಷಣ। ನಾನು ಮಾಡದಂತೆ ಮಾಡೆಂದು ಬಿನ್ನೈಪೆ। ನಾನು ನುಡಿನದೇನೊ ರಘುಪತಿ ವಿಠಲ ॥೪॥

ಗುರು ವಿಜಯ ವಿಠಲರು

ಜನುಮಾರಭ್ಯವಾಗಿ ಚತುರ್ದಶಬ್ದವು ಕರ್ಮ। ಅನಿಯಾಮ್ಯನಾಗಿ ಮರದೆ ನಿನ್ನ। ಇನಿತುಕಾಲದಿಂದ ಯವ್ವನ ಮದದಿ ಪರವನಿತೆಯ ಅಭಿಲಾಷದಲ್ಲಿ ಶಿಲ್ಕಿ ಪರ। ಋಣಸಪೇಕ್ಷದಿಂದ ಅವರ ಉತ್ತುಮರೆನದೆ। ಘನವಾದ ದೋಷವೆಂಬ ಪರಿಜ್ಞಾನವಿಲ್ಲದೆ। ಇನಿತುಕಾಲವ ಕಳೆದೆ ಕೆಲವು ಕಾಲ।

ಮತ್ತು ಆದಿತಾಳ

ಹರಿ ನಿನ್ನ ಪದಗಳ ಜನುಮದೊಳಗೆ ಒಮ್ಮೆ ಸ್ಮರಿಸಿದ ನರನಲ್ಲ ಗುಣದಿಂದ ಹೀನನಾಗಿ। ಪರಧನ ಪರಸತಿ ಪರನಿಂದ್ಯದವನಾಗಿ। ಬರಿದೆ ಕಾಲ ಕಳದೆ ಪರಲೋಕ ದೂರನಾಗಿ। ಕುರಿ ತನ್ನ ಮರಣದ ಕುರುಹ ಕಾಣದಲೆ ಪರ ಭೂಷಣವಾದ ತೋರಣ ಬಯಸಿದಂತೆ।

ಬಾದರಾಯಣ ವಿಠಲರ ಸುಳಾದಿ ತ್ರಿವಿಡಿತಾಳ

ಕಾಮಿನಿಯರ ಸಂಗ ಸಾಮಗ್ರಿ ಹುಡುಕುತ ಭೂಮಿಯೊಳು ತಿರುಗುವ ಪಾಮರನೊನಾನು। ಶ್ರೀ ಮಧ್ವಶಾಸ್ತ್ರಾರ್ಥ ಪ್ರೇಮದಿ ಗುರುದ್ವಾರ। ನಾ ಮನಃ ಪೂರ್ವಕ ಕೇಳಲಿಲ್ಲವೋ ಕೆಟ್ಟ। ಗೋಮುಖ ವ್ಯಾಘ್ರನಂತೆ ಮನದೊಳು ಸದಾ। ಕ್ರಾಮುಕ್ರೋಧಂಗಳ ಬಚ್ಚಿಟ್ಟುಕೊಂಡಿಪ್ಪೆ। ತಾಮಸನಾನಯ್ಯ ನಿನ್ನ ದಾಸನೆಂಬೊ। ನಾಮಸಲ್ಲುವದೆ ಎನ್ನಂಥ ಪತಿತನಿಗೆ।

ಭೀಮಸೇನ ಪ್ರೀಯ ಬಾದರಾಯಣ ವಿಠಲ | ರಾಮ ನಿನ್ನ ದಾಸ್ಯ ವೆಲ್ಲೊ ಗ್ರ ನಾನಲ್ಲಿಹನೊ ||೩||

ಅಟ್ಟತಾಳ

**ಪರನಿಂದರತನಾನು ಪರಮ ಪತಿತನಾನು | ಪರದ್ರವ್ಯ ಪರನಾರಿ ಹರಣದಿ ಬಲುಶೂರ | ಶಿರಹುಳತನಾಯಿ ತೆರನಂತೆ - ಮನೆಮನೆ | ತಿರಗಿ ತಿಂದು ಮತ್ತವರ ನಿಂದಿಸುವೆನು | ಹರಿದಾಸರಿಗೆ ಇಂಥ ಹರಕು ಬುದ್ಧಿಯುಂಟೆ | ನರನಾರಾಯಣ ಬಾದರಾಯಣ ವಿಠಲ | ಹೊರಗೆ ನೋಡಲು ದಾಸ ಒಳಗೆ ನೋಡಲು ದೋಷ ||೪||**

**ಈ** ಪ್ರಕಾರ ಶ್ರೀದಾಸಾರ್ಯರು, ಸ್ತ್ರೀ ಸಂಗ ಕೆಟ್ಟದೆಂದು ಮೊದಲಿಗೆ ಹೇಳಿನಂತರ,ಅದನ್ನು ಸರ್ವಥಾಬಿಡುವದೆಂದು ಉಪದೇಶಿಸಿ ಕೊನೆಗೆ, ಒಂದು ವೇಳೆ ಅಕಸ್ಮಾತ್ತಾಗಿ ಸಂಭವಿಸಿದರೆ, ಆ ಕೆಟ್ಟ ನಡಾವಳಿ ಪಾಪಕರವೆಂದು ತಿಳಿದು ಅದನ್ನು ಬಿಟ್ಟು ಪಶ್ಚಾತ್ತಾಪದೊಂದಿಗೆ, ದೇವರನ್ನು ಪ್ರಾರ್ಥಿಸಬೇಕೆಂದು ಸದುಪದೇಶ ವಿಸ್ತಾರವಾಗಿ ಗೈದಿರುವರು. ಇವೆಲ್ಲಕ್ಕೆ.ಕಾರಣ ವಿಷಯ ವೈರಾಗ್ಯವೇ ಮುಖ್ಯ.

**೨೪ ಇನ್ನು ವಿಷಯ ವೈರಾಗ್ಯ ವಿನಾ ಯಾವದೂ ಲಭಿಸಲಾರದು.** ಕುರಂಗ, ಮಾತಂಗ, ಪತಂಗ, ಭೃಂಗ, ಮೀನ, ಈ ಐದು ಪ್ರಾಣಿಗಳನ್ನಾದರೂ ನೋಡಿ ವಿಷಯದಿಂದ ದೂರಾಗಬೇಕು. ಜಿಂಕೆಯು ಒಳ್ಳೇ ಗಾನಕ್ಕೆ ಮೆಚ್ಚಿ ಬಲೆಯೊಳಗೆ ಬೀಳುವಂತೆ, ಶ್ರೋತ್ರೇಂದಿಯ ಶಬ್ದಾದಿ ಸ್ತ್ರೀಯರ ಗಾನಕ್ಕೆ ಮೆಚ್ಚಬಾರದು. ಕಿವಿ ಬಿಗಿಹಿಡಿಯಬೇಕು. ಆನೆಯು ಒಳ್ಳೇ ಎಳೆ ಹುಲ್ಲು ಬೆಳಸಿನಲ್ಲಿ ಹೋಗಿ ಆದರ ಆಗೆ ಶಿಗ ಬೀಳ್ಳುವಂತೆ ಸ್ತ್ರೀಯರ ಆಲಿಂಗಾನಾದಿಗಳಿಂದ ತ್ವಗೇಂದ್ರಿಯವನ್ನು ರಕ್ಷಿಸಬೇಕು. ಪತಂಗಹುಳ ದೀಪಕ್ಕೆ ಹಣ್ಣೆಂದು ಭಾವಿಸಿ ಬಿದ್ದು ಪ್ರಾಣಕೊಡುವಂತೆ, ಸ್ತ್ರೀಯರ ರೂಪ ಲಾವಣ್ಯಕ್ಕೆ ಮೆಚ್ಚಿ ಅವರನ್ನು ನೋಡಿ ಕೆಡಬಾರದು ಚಕ್ಷುರೇಂದ್ರಿಯವನ್ನು ವಶದಲ್ಲಿರಿಸಬೇಕು ಹೂವುಗಳು ಸುವಾಸನೆಗೆ ಭೃಂಗ ಕಮಲಪುಷ್ಪದಲ್ಲಿ ಶಿಗಬಿದ್ದು ಮಿಡಕುವಂತೆತಿಳಿದು|ನಾಶಿಕೇಂದ್ರಿಯವನ್ನು,ನಿಗ್ರಹಿಸಬೇಕು, ಮೀನವು ಮಾಂಸಕರಣಿಗಾಗಿ, ಬೇಟೆಗಾರನ ಜಾಳಿಗೆಯಲ್ಲಿ ಬಿದ್ದು ಪ್ರಾಣ

ಕೊಡುವಂತೆ, ಜಿಹ್ವೇಂದ್ರಿಯ ಚಾಪಲ್ಯವನ್ನು ಬಿಡುವದು. ಹೀಗೆ ಪಂಚ ಇಂದ್ರಿಯ ನಿಗ್ರಹಿಸುವದು ಅಭ್ಯಾಸ ಮಾಡುವದು ಅತ್ಯಾವಶ್ಯಕತೆ ಇದೆ. ಪ್ರತಿಯೊಂದು ಇಂದ್ರಿಯಗಳ ಸುಖಕ್ಕೆ ಶಿಲುಕದೆ ವಿರಾಗಿಯಾಗುವದು. ವಿಷಯ ವೈರಾಗ್ಯ ವಿನಾ, ಇಂದ್ರಿಯಜಯ ಬ್ರಹ್ಮಚರ್ಯವು ಲಭಿಸಲಾರದು ಕಾರಣ ನಾವಲಿಗೆ ಸಕಲ ವಿಷಯಗಳಿಂದ ದೂರನಾಗಿದ್ದರೇನೆ ಇಂದ್ರಿಯ ಜಯವಾಗಿ ಮನೋ ನೈರ್ಮಲ್ಯಕ್ಕೆ ಕಾರಣ. ಇದೇ ವೈರಾಗ್ಯ ಭಾಗ್ಯಲಕ್ಷಣ ಬ್ರಹ್ಮಚರ್ಯದಲ್ಲಿಯೂ ಸಂತತ ನೆಲೆಗೊಳಿಸಿದೆ. ಇಂತು ಸಕಲ ಜಾತಿಯವರು ಬ್ರಹ್ಮಚರ್ಯ ಪಾಲನೆ ಮಾಡುವದು.

**೨೯ ಶೂದ್ರನಿಗಾದರೂ ಬ್ರಹ್ಮ ಚರ್ಯವು ಉತ್ತಮರ ಸೇವೆಯಿಂದಲೇ ಲಭಿಸುವದೇನಿಜ.** ಯಾಕಂದರೆ ಉತ್ತಮರಾದವರು ಒಳ್ಳೇನಡಾವಳಿಯಿಂದ ಇರುವರು ಅವರ ಸೇವೆ ಉತ್ತಮಾನ್ನ ಅವರ ಉಚ್ಛಿಷ್ಟ ಮೆಲುವದು ಸಂತತ ಅವರ ಸೇವೆಯಲ್ಲಿ ನಿರತನಾಗಿ ಮನಸ್ಸು ಎರಡನೇ ಕಡೆಗೆ ಚಲಿಸದೇ ವಿಷಯಾದಿಗಳಲ್ಲಿ ಹೋಗದೇ, ಉತ್ತಮರ ನಡಾವಳಿಯಂತೇ, ಈ ಶೂದ್ರನ ನಡಾವಳಿಯಾದರೂ ಸುಗುಣದಿಂ ಕ್ರಮೇಣ ಅಭಿವೃದ್ಧಿ ಹೊಂದುತ್ತ ಅವರ ಪ್ರಭಾವದಿಂದಲೇ ಸತ್ ಸಹವಾಸದಿಂದ ಎಲ್ಲವಿಷಯಗಳನ್ನು ತೆಜಿಸಿ ಸನ್ಮಾರ್ಗಕ್ಕೆ ಹತ್ತುವನು. ಇದೇ ಉತ್ತಮರಾದ ಬ್ರಾಹಣ ಕ್ಷತ್ರಿಯ ವೈಶ್ಯರ ಸೇವೆಯೇ ಶೂದ್ರನಿಗೆ ಬ್ರಹ್ಮ ಚರ್ಯಪಾಲನೆಯೆಂದುಹೇಳಿದ ಪ್ರತ್ಯೇಕ ಶೂದ್ರನಿಗೆ ಯಾವ ವಿಧವಾದ ವ್ರತ ನಿಯಮಗಳನ್ನು ಹೇಳಿಲ್ಲ ಉತ್ತಮರ ಸೇವೆಯೇ ಶೂದ್ರನಿಗೆ ಮುಖ್ಯ.

**೩೦ ಭಾಗವತ ಸಾರೋದ್ಧಾರ ಇಂದ್ರಿಯ ಜಯ ಪ್ರಕರಣದಲ್ಲಿ**

ಮುಮುಕ್ಷುವಾದ ಪುರುಷನು ಪಾಪಕರ್ಮವಾದ ಸ್ತ್ರೀ ಸಂಭೋಗಾದಿಗಳಲ್ಲಿ, ಆಸಕ್ತನಾಗದೇ ಇಂದ್ರಿಯಗಳನ್ನು ವಿಷಯಾದಿಗಳಲ್ಲಿ ಸರ್ವಥಾ ಹೋಗಗೊಡಬಾರದು, ಏಕಾಕಿಯಾಗಿ, ಏಕಾಂತದಲ್ಲೇ ಕುಳಿತು ಜಗತ್ ಪ್ರಭುವಿನಲ್ಲಿ ಮನಸ್ಸು ಸ್ಥಿರವಾಗಿ ನಿಲ್ಲುವಂತೆ ಸಾಧನ ಮಾಡುತ್ತಿರಬೇಕು. ಭಗವದ್ಭಕ್ತರ ಸಹವಾಸಮಾಡಿದ್ದು ಭಗವಂತನವಿಚಾರದಲ್ಲಿಯೇ ನಿರತನಾಗಿರಬೇಕು. ದೇಹದಲ್ಲಿದ್ದ ರೋಗಾದಿಗಳನ್ನು ಉಪೇಕ್ಷಿಸಿದರೆ ಹೇಗೆ ಔಷಧಾದಿ

ಗಳಿಂದ ನಿವಾರಣಮಾಡುವದು ಹೇಗೆ ದುಸ್ತರವೋ, ಚಿಕ್ಕವನಿದ್ದಾಗಲೇ ಪ್ರಬಲವಾದ ಶತ್ರುವನ್ನು ಸಂಹರಿಸದಿದ್ದರೆ, ಮುಂದೆ ಅವನು ಹೆಚ್ಚು ಬಲಿಷ್ಠನಾಗಲು ಅವನನ್ನು ಜೈಸಲು ಅಸಾಧ್ಯವು. ಇದರಂತೆಯೇ ಸ್ವೇಚ್ಛಾಚಾರವಾಗಿ ವಿಷಯಾದಿಗಳಲ್ಲಿ ಇರುವನು ಇಂದ್ರಿಯಗಳನ್ನು ವಶಪಡಿಸಿಕೊಳ್ಳುವದು ಬಹು ದುಸ್ತರವಾಗುತ್ತದೆ. ಮೌನವ್ರತ ತಪಸ್ಸು ಶಾಸ್ತ್ರಾಭ್ಯಾಸ, ಸದ್ಧರ್ಮಾಚರಣೆ, ಶಾಸ್ತ್ರವಿಮರ್ಶೆ, ಪಾಠಹೇಳುವದು ಮಂತ್ರಗಳ ಜಪ ಧ್ಯಾನ ಇವೆಲ್ಲ ಸದಾಚಾರಗಳು ಮುಕ್ತಿ ಸಾಧನವೆಂಬುದು ನಿಜ ಆದರೇ ಹೇ ಭಗವಂತನೇ, ಇಂದ್ರಿಯ ಜಯವಿಲ್ಲದ ಮಿಥ್ಯಾಚಾರಿಗಳಿಗೆ. ಇವು ಕೇವಲ ದಂಭಾರ್ಥವಾಗಿ ಉಪಜೀವನಕ್ಕೆಮಾತ್ರ ಮಾರ್ಗವಾಗಬಹುದು ಅಥವಾ ಉಪಜೀವನವಾದರೂ ಆಗದು. ಕೇವಲ ಮುಖ್ಯಸಾಧನದ ಪ್ರಯೋಜನವಾಗದೇ ವ್ಯರ್ಥವಾಗುತ್ತವೆ ಸಕಲ ವಿಷಯಗಳು ಮತ್ತು ಸ್ತ್ರೀಸಂಭೋಗಾದಿಗಳು ಐಹಿಕ ಸುಖಗಳೆಲ್ಲ ತುಚ್ಛವಾದವು. ನೈ ತಿಂಡಿ ಕಜ್ಜಿಗಳಿಂದ ದೂಷಿತನಾದವನು ತನ್ನ ಕೈಗಳಿಂದ ತುರಿಸಿ ತುರಿಸಿ ತತ್ಕಾಲದಲ್ಲಿ ಸ್ವಲ್ಪ ಸಮಾಧಾನಗೊಂಡು ನಂತರ, ಉರುಪು ಹೆಚ್ಚಾಗಿ ಬಳಲುವಂತೆಯೇ, ಕಾಮಕ್ರೋಧಗಳೆಂಬ ವಾಸನೆಗಳ ಕಜ್ಜಿಯು ತಿಂಡಿ ಉತ್ಪನ್ನವಾಗಿ, ದುರ್ವ್ಯಾಪಾರ ಮೈಥುನಾದಿಗಳಲ್ಲಿ ಕ್ಷಣಿಕ ಅಲ್ಪಸುಖಕ್ಕಾಗಿ ಪ್ರವೃತ್ತನಾಗಿ ಆ ಮೇಲೆ ಮಹಾದುಃಖಪಡುತ್ತಾನೆ ಧೀರ ಜ್ಞಾನಿನಿಯಾದವನು, ಕಜ್ಜಿಯ ತಿಂಡಿಯಂತೆ ಮನೋವ್ಯಾಕುಲವನ್ನು ಮುಂಚೆ ತಡೆದು ಕಾಮವೇಗವನ್ನು ಸಹನಮಾಡಕೊಳ್ಳಬೇಕು. ಪಾಪಬುದ್ಧಿಯುಳ್ಳವನಿಗೆ ಶ್ರೀಹರಿಯ ಸ್ಮರಣೆ ಎಂತು? ದಾನ ಸ್ವಧರ್ಮ ಯಮ ವೇದೋಕ್ತ ಕರ್ಮಾಚರಣೆ ಮತ್ತು ವ್ರತಾನುಷ್ಠಾನ ಇವೆಲ್ಲವೂ ಮನಸ್ಸು ಜೈಸಲು ಸಾಧನಗಳು. ಮನೋಜಯವೇ ಶ್ರೇಷ್ಠಯೋಗವು. ವಿಷಯಚಿಂತನೆಯುಳ್ಳ ಅಶಾಂತನಿಗೆ, ದಾನಾದಿಗಳಿಂದ ಏನುಪ್ರಯೋಜನ? ಒಂದುವೇಳೆ ಮನಸ್ಸು ಸ್ವಾಧೀನವಾಗಿ ತೋರಿದರೂ ವಿಷಯಸನ್ನಿಧಾನವನ್ನು ನಿರಂತರ ಬಿಡಬೇಕು. ವಿಷಯಸನ್ನಿಧಾನ ಜ್ಞಾನಿಗೂ, ಹಾನಿಕರವು.

### ೩೧ ಜ್ಞಾನಿಗಳ ಅಪರಾಧ ಹೇಗೆ ಕ್ಷಮಿಸುತ್ತಾನೆ

ಯಾರು ಉಪಾಸನಾದಿಗಳು ಮಾಡಲಿಕ್ಕೆ ಅಶಕ್ತರೂ ಅವರುಗಳಿಗೆ

ಮಾತ್ರ ನಾಮ ಸ್ಮರಣೆ, ಈ ಭಾಗವತ ಧರ್ಮಪರಾಯಣರಿಗೆ ಕ್ರಮೇಣ ಉತ್ತಮವಾದ ಒದೊಂದು ಶಕ್ತಿಯನ್ನು ಕೊಟ್ಟು ಪುರುಷಾರ್ಥವನ್ನು ಕೊಡುತ್ತಾನೆ ನಾಮ ಸ್ಮರಣೆಯಿಂದ ನರಕ ದುಃಖ ದೂರಾಗುತ್ತದೆ ಕಾರಣ ನಾಮ ಸ್ಮರಣದಿಂದ ಈ ದೇಹದಲ್ಲೇ ಪ್ರಾಯಶ್ಚಿತ್ತ ಮಾಡಿಕೊಳ್ಳುವದು ಅವಶ್ಯ. ರೋಗಿಯು ಬೇನೆಯನ್ನು ವೈದ್ಯನು ಕಂಡು ಹಿಡಿದು ಚಿಕಿತ್ಸೆಮಾಡು ವಂತೆ ಅಲ್ಪಮಹ ಪ್ರಾಯಶ್ಚಿತ್ತವಾದರೂ ಮಾಡಿಕೊಳ್ಳುವದು. ಭಕ್ತಿಪೂರ್ವಕ ನಾಮ ಸ್ಮರಣಮಾಡಿದರೆ ನರಕಭಯ ದೂರಾಗುವದು ಆದರೂ, ಸರ್ವರಿಗೆ ಲಭ್ಯವಾಗದು. ಯಾರು ಜನ್ಮಾಂತರದಲ್ಲಿ ಮಹತ್ಪಾಪ ರಜೋಭಿಷಿಕ್ತರಾಗಿ ಅವರ ಅನುಗ್ರಹ ಸಂಪಾದಿಸಿರುವರೋ! ಅವರಿಗೇವೆ ಭಗವನ್ನಾಮಕೀರ್ತನೆ ಲಭಿಸುವದು. ಈ ಪ್ರಕಾರ ಸರ್ವಾತ್ಮನಾ ತ್ರಿಕರಣಭಾವದಿಂದ ಭಕ್ತಿಯೋಗ ದಿಂದ ಶ್ರೀಹರಿಯ ಕಥಾ ವಚನಾದಿರೂಪ ನಾಮಸಂಕೀರ್ತನಮಾಡುವರಿಗೆ ಯಮದಂಡನೆಯು ಆಗುವುದಿಲ್ಲ. ಹೀಗಿದ್ದ ಮೇಲೆ ಸರ್ವರಿಗಾದರೂ ನಾಮ ಕೀರ್ತನವಮಾಡುವವರಿಂದ ದಂಡಕ್ಕೆ ಅರ್ಹರಲ್ಲವಾದರೂ, ಭಗವಂತನಲ್ಲಿ ಅಂತರಂಗ ವಿಮುಖರಾಗಿ, ವಿಷಯಾದಿಗಳು ಯಾರು ತರಣಮಾಡಿಲ್ಲವೋ ಅವರಿಗೆ ಯಮದಂಡನೆಯು ಎಂದಿಗೂ ತಪ್ಪದು. ಭಗವದ್ಭಕ್ತರೂ ಶ್ರೀಹರಿಪ ರಾಯಣರೂ ವಿಷಯದಲ್ಲಿ ಆಸಕ್ತಿ ಇಲ್ಲದವರೂ, ಕದಾಚಿದ್ಭಗವಂತನ ಸೇವೆಗೆ ಗೆವಿಮುಖರಾದ ನಿಜಭಕ್ತರಿಗೆ ಮಾತ್ರ ಯಮಯಾತನೆ ಇಲ್ಲ. ಇದಕ್ಕೆ ಅಜಾ ಮಿಳನೇ ಉದಾಹರಣೆ

ಅದು ಹೇಗಂದರೆ ಲೋಕದಲ್ಲಿ ಕದಾಚಿತ್ ರಾಜಪುತ್ರನು ಕಳ್ಳತನ ಮಾಡಿರಲು, ಸಂತತ ಕಳ್ಳತನ, ಮಾಡುವ ಕಳ್ಳನಿಗೆ ಕಠಿಣ ಶಿಕ್ಷೆಯಾದಂತೆ ರಾಜ ಪುತ್ರನಿಗೆ ಅಂಥ ದಂಡನೆ ಕೊಡದು. ಅವರ ಯೊಗ್ಯತೆ ಸ್ವಭಾವ ಅನು ಸರಿಸಿ ಶಿಕ್ಷಿಸುವಂತೆ ಯಮರಾಜನಾದರೂ, ಭಗವದ್ಭಕರಾದವರನ್ನು ಅವರ ಭಕ್ತ್ಯಾದಿಸ್ವರೂಪ ಭೂತವಾದಂಥಾದ್ದೆಂದು, ಗಣನೆಗೆ ತಾರದೇ ಕದಾಚಿತ್ ನೈಮಿತ್ಯಕ ಪಾಪವನ್ನು ಎಣಿಸಿ, ಆ ಭಕ್ತರ ಸಾಮ್ಯದಂತೆ, ತಾಪನ ಪಾಚನ ತಾಡನಾದಿ ದಂಡನೆಗಳು, ನಿಷ್ಕರುಣದಿಂದ ಮಾಡುವನೆ ? ಇಲ್ಲ. ಪ್ರಾಯಃ ಭಗವದ್ಭಕ್ತರಾದ ಸಂತರ ಮನಸ್ಸು ಪಾಪ ಮಾರ್ಗವಲ್ಲಿ ಎಂದಿಗೂ ಹೋಗು

ವದಿಲ್ಲ, ನಿಮಿತ್ತಾಂತರದಿಂದ ದುಷ್ಟ ಸಹವಾಸಾದಿಗಳಿಂದ ಏನೋ ಒಮ್ಮೆ ಪಾಪಮಾರ್ಗದಲ್ಲಿ ಹೋಯಿತೆಂದರೆ, ಪಶ್ಚಾತ್ತಾಪರೂಪವಾದ ಹರಿನಾಮ ಪ್ರಾಯಶ್ಚಿತ್ತದಿಂದ ಶುದ್ಧನಾಗುತ್ತಾನೆ. ಇಂಥ ಭಕ್ತರಿಗೆ ಪಾಪಲೇಪವಾಗದು. ಯಮದೇವರು ಕ್ಷಮಿಸುವನು. ಹೇಗೆಂದರೆ ಲೋಕದಲ್ಲಿ ಮಗನು ಏನೋ ಒಂದು ವೇಳೆ, ಅಕಸ್ಮಾತ್ತಾಗಿ ಕೆಟ್ಟ ಕೆಲಸಮಾಡಿ ತಪ್ಪುಮಾಡಿದ್ದರೆ ತಂದೆಯು ಬಹು ಸಿಟ್ಟಿನಿಂದ, ಎಲೋ ಪಾಪಿಯೆ ನಿನ್ನಗೆನಾನು ಹೊಡೆಯುವೆನುನೋಡು, ಇನ್ನು ಮೇಲೆ ಸರ್ವಥಾ ಈ ಕಾರ್ಯಮಾಡಬೇಡವೆಂದು, ತಾಡನಾದಿಗಳ ಬೆದರಿಕೆ ತೋರಿಸಿ, ಸುಶೀಲವಾದ ಪುತ್ರನನ್ನು ಒಳ್ಳೇ ಹಾದಿಗೆ ಹಚ್ಚು ವಂತೆ, ಭಗವದ್ಭಕ್ತರಾದವರನ್ನೂ ಸಹ, ಶ್ರೀಹರಿಯು ಇವರು ಒಳ್ಳೇ ಸುಶೀಲರು ಸುಸ್ವಭಾವದವರು, ಇವರು ದುಸ್ವಭಾವಿಗಳಲ್ಲ, ಪ್ರಮಾದದಿಂದ ಇವರಿಂದ ದುಷ್ಟ ಕಾರ್ಯವಾಗಿದೆಂದು ಇನ್ನು ಇವರು ಸರ್ವಥಾ ಅಂಥ ಪಾಪಕೆಲಸಕ್ಕೆ ಹೋಗರು ಎಂಬ ತಿಳಿದಸರ್ವಜ್ಞನು, ಇವರ ಅಪರಾಧವನ್ನು ಕ್ಷಮಿಸುತ್ತಾನೆ. ಎಂಥ ಭಕ್ತರ ಅಪರಾಧಕ್ಷಮಿಸುತ್ತಾನೆಂದರೆ. ಅಪರೋಕ್ಷವಾದನಂತರದಲ್ಲಿ ಸಂಚಿತಾಗಾಮಿ ಕರ್ಮನಾಶಾ ನಂತರ, ಪ್ರಾರಬ್ಧ ಉಪಭೋಗ ಕಾಲದಲ್ಲಿ, ಭಕ್ತರು ಕಿಂಚಿತಪಾಪಮಾಡಿದರೆ ಸಹಿಸಿ ಕ್ಷಮಿಸುತ್ತಾನೆಂಬ ನಿಯಮವಿದೆ. ಹರಿಕಥಾಮೃತ ಸಾರ ಭಕ್ತಾಪರಾಧ ಸಹಿಷ್ಣು ಸಂಧಿಯಲ್ಲಿ ಸಹ ಇದೇ ಉಕ್ತವಾಗಿದೆ.

" ಗೋಪ, ಗುರುವಿನ ಮಡದಿ, ಭೃಗು, ನಗಚಾಪ, ಮೊದಲಾದ ವರು ಮಾಡ್ದ ಮಹಾಪರಾಧಗಳನೆಣಿಸಿದನೆ ಕರುಣಾ ಸಮುದ್ರ ಹರಿ,,

ಇಂತಿರಲು ಸಂತತವಾಗಿ ದುಷ್ಕರ್ಮರತರಾಗಿ ಬಿಡದೇ ಮಾಡಿದ್ದೇ ಮಾಡುತ್ತಾ, ಪಾಪ ಭೀರುಗಳಾಗದೇ ಇದ್ದು ಭಗವದ್ಭಕ್ತರೆಂಬ ಆಭಾಸ ಭಕ್ತ ರನ್ನು, ಪರಮಾತ್ಮನ ಆಜ್ಞೆಯಿಂದಯಮರಾಜನು ಎಂದೂ ಶಿಕ್ಷಿಸದೆ ಬಿಡನು. ವಿಷ್ಣು ರಹಸ್ಯದಲ್ಲಾದರೂ ಕದಾಚಿತ್ ಅವಜ್ಞಾತದಿಂದ ಪಾಪಮಾಡಿದ ಮೇಲೆ ಪಶ್ಚಾತ್ತಾಪದಿಂದ ಭಗವನ್ನಾಮ ಸ್ಮರಣೆಮಾಡಿದ ಭಕ್ತರ ಅಪರಾಧ ಕ್ಷಮಿಸುವನೆ ಹೊರ್ತಾಗಿ, ಪುನಃ ಪುನಃ ಮಾಡಿದ ಪಾಪದಲ್ಲೇ ನಿರತಮನ ರಾದವರಿಗೆ ಆ ಪಾಪಕರ್ಮ ಲೇಪವು ಚನ್ನಾಗಿ ಹತ್ತಿ ಯಮ ದಂಡನೆಗೆ

ಅರ್ಹನಾಗುವನು. ಈ ಕಾರಣದಿಂದಾದರೂ, ಸುಶೀಲರು ಎಚ್ಚತ್ತು ಕಾಮುಕ
ರಾಗದೇ ಅನ್ಯ ಕ್ಷೇತ್ರದಲ್ಲಿ ವೀರ್ಯ ಧಾರಣೆ ಮಾಡುವಗು ಬಿಟ್ಟು, ಇಂದ್ರಿಯ
ನಿಗ್ರಹರೂಪ ಬ್ರಹ್ಮಚರ್ಯಧಾರಣ ಮಾಡಬೇಕು, ಇದೇ ಸುಶೀಲರಕರ್ತವ್ಯ.

**೩೨ ಸದ್ಯಕಾಲದಲ್ಲಿ ಕೆಲವುಜನರು ಬ್ರಹ್ಮಚರ್ಯ ವ್ರತ** ನಿಯಮ ಪಾಲನಮಾಡುವರಿದ್ದರೂ ಹಿಂದಿನ ಮಾರ್ಮಿಕ ಲಕ್ಷಣಗಳನ್ನೇ ಲಕ್ಷದ ಲ್ಲಿಟ್ಟು ಕಿಂಚಿತು ಆಚರಿಸಿದರೂ, ಕಾಲಭೇದ ನೀತಿಭೇದದಿಂದ ಸಲ್ಪ ವ್ಯತ್ಯಸ್ತ ವಾಗಿದೆ. ಕೆಲಜನರು ಆಶ್ರಮ ಮಾಡಿಕೊಂಡು ಸ್ನಾನಾದಿ ಕೆಲ ಕರ್ಮವಾಚ ರಿಸಿದರೂ, ಮನೋ ಸ್ಥೈರ್ಯಕ್ಕೆ ಕಾರಣವಾದ ಮುಖ್ಯ ನಿಯಮಗಳನ್ನೇ ಮರೆತಿದ್ದಾರೆ ವಿಷಯಾದಿಗಳ್ಲೇ ಮನ ಹೊತ್ತಾಗಿ ಭಗವಂತನಲ್ಲಿ ಹೆಚ್ಚಾದ ಭಕ್ತಿಜ್ಞಾನ ಸಂಪಾದನೆ ಕಡೆಗೆಲಕ್ಷಹೋಗದು ಈಕಾರಣ ಅವಶ್ಯಸುಧಾರಣೆ ಇಂದ್ರಿಯ ಜಯಬೇಕು

## ೩೩ ಇಂದ್ರಿಯ ಜಯಮಾಡುವ ಬಗೆಗಳು

ಶ್ರೀ ಮಹಾ ಭಾರತ ಹರಿವಂಶ ಯೋಗಶಾಸ್ತ್ರದಿ

ಇಂದ್ರಿಯ ಜಯ ಹೇಗೆ ಮಾಡುವ ವಿಚಾರ ಸಾಧನಮಾಡತಕ್ಕದೆಂದು ಹೇಳುತ್ತಾರೆ.

**ಕಾಯಾ ಕಾಶಯೋ ಸಂಬಂಧ ಸಂಯಮಾಲ್ಲಘು ತೂಲಸಮಾ ಪತ್ತೇಶ್ಚಾಕಾಶಗಮನಮ್,,** ||೬೨|| ಈಶರೀರ ಪಂಚಭೂತಗಳಿಂದ ಸೃಷ್ಟ ವಾದ ದೇಹವು ಸ್ಥೂಲವಾದುದು, ಮತ್ತು ಈ ಶರೀರ ಇರಲು ಅಂದರೆ ಈ ಶರೀರದಲ್ಲಿ ಪ್ರಾಣ (ಜೀವ) ನಿರಲು ಅವಕಾಶ ಕೊಡುವ ಆಕಾಶ ಇವೆರಡರ ಸಂಬಂಧವಿರುವ ಸ್ಥಳದಿ ಚಿತ್ತಸಂಯಮ ಮನೋ ನಿಗ್ರಹಪೂರ್ವಕ, ಅರಳೆ ಮುಂತಾದ ಬಹು ಹಗುರದ ಪದಾರ್ಥದಂತೆ ಚಿತ್ತವನ್ನು ಹಗುರಾಗಿ ಮಾಡು ವದು. ಅಂದರೆ ಮನಸಿನಲ್ಲಿ ಚಿತ್ತಸ್ಥಿರ ಬುದ್ಧಿಸ್ಸು ಸಮಗೊಳಿಸಿ ಎರಡನೇ ಕಡೆಗೆ ವಿಚಾರಬಾರದಂತೆ ಸ್ಥಿರಪಡಿಸಿ ಯೋಗ ಸಮಾಧಿಯನ್ನು ಮಾಡಿದ ಯೋಗಿಯು, ಅರಳೆಯ ಮುದ್ದೆಯಂತೆ ಬಹುಹಗುರಾಗಿ ಜಲದಲ್ಲಿ ಸಂಪರ್ಕ ವಿಲ್ಲದೆ ವಿಹಾರ, ನಂತರ ಜೇಡ ಹುಳುವಿನ ಸೂಕ್ಷ್ಮರೂಪವಾಗಿ ಮಾಡಿದ

ಜಾಳಿಗೆಯಲ್ಲಿ ಸೂರ್ಯನ ಕಿರಣಗಳಿಂದ ಒಡಗೂಡಿ. ಸಂಚಾರ ಈ ಕ್ರಮದಿಂದ ಬೇಕಾದಕಡೆಗೆ ಆಕಾಶದಲ್ಲಿ ಸೂಕ್ಷ್ಮರೂಪದಿಂದ ತಿರುಗಾಡುತ್ತಾನೆ.

**" ಸ್ಥೂಲ ಸ್ವರೂಪ ಸೂಕ್ಷ್ಮಾನ್ವಯಾರ್ಥವತ್ವ ಸಂಯಮಾದ್ ಭೂತ ಜಯಃ ||೪೪||** ಪೃಥ್ವಿ ಮೊದಲಾದ ಪಂಚಭೂತ ಇವುಗಳ ೧ ಸ್ಥೂಲತ್ವ ೨ ಸ್ವರೂಪತ್ವ ೩ ಸೂಕ್ಷ್ಮತ್ವ ೪ ಅನ್ವಯತ್ವ ಮತ್ತು ೫ ಅರ್ಥವತ್ವ ಹೀಗೆ ಐದು ವಿಶೇಷ ಅವಸ್ಥಾ ಪಂಚಭೂತಗಳಿರುವವು ಈ ಅವಸ್ಥೆಗಳಲ್ಲಿ ಚಿತ್ತೈಕಾಗ್ರತಾಮಾಡಿದರೆ, ಪಂಚ ಭೂತಗಳು ಯೋಗಿಯ ಪೂರ್ಣಸ್ವಾಧೀನವಾಗಿರುತ್ತವೆ. ಹೇಗೆಂದರೆ ೧ ಪಂಚಮಹಾ ಭೂತಗಳು ಕಣ್ಣಿಗೆ ತೋರುವ ವಿಶೇಷ ಆಕಾರರೂಪವೇ ಸ್ಥೂಲರೂಪವು. ೨ ಈ ಅನುಕ್ರಮದಿಂದ, ಅವುಗಳಲ್ಲಿದ್ದ ಕಠಿಣತ್ವ, ಸ್ನೇಹ ಸ್ನಿಗ್ಧತ್ವ, ಉಷ್ಣತ್ವ, ಪ್ರೇರಣತ್ವ, ಮತ್ತು ಅವಕಾಶಕೊಡುವ ಈ ಐದು ಸ್ವರೂಪಗಳು ಇವೆ ೩ ಇವುಗಳಲ್ಲಿ ಪ್ರಥಿವ್ಯಾದಿ ಕ್ರಮದಿಂದ, ಕಾರಣರೂಪದಿಂದ, ಪೃಥ್ವಿ= ಗಂಧ, ಅಪ್ಪು =ರಸ, ಅಗ್ನಿ= ರೂಪ, ವಾಯು= ಸ್ಪರ್ಶ, ಆಕಾಶ =ಶಬ್ದ, ಈಐದು ತನ್ಮಾತ್ರಗಳು ಪಂಚಭೂತಗಳತಮೋಗುಣದ ಸೂಕ್ಷ್ಮರೂಪಗಳು ೪ ಪ್ರಕಾಶ,-ಪ್ರವೃತ್ತಿ ಮತ್ತು ಸ್ಥಿತಿ ಈ ಮೂರು ಗುಣಗಳು ಯಾವಾಗಲೂ ಎಲ್ಲ ಭೂತಗಳಲ್ಲಿ ಒಂದೇ ಪ್ರಕಾರವಾಗಿ ಕಲೆತಿರುವವು ಇದಕ್ಕೆ ಅನ್ವಯತ್ವವೆಂದು ಹೇಳುವರು ೫ ಈ ಮೂರು ಗುಣಗಳಲ್ಲಿರುವ, ಆಯಾ ಗುಣಗಳ ಉಪಭೋಗವೆಂದರೆ ಅನುಭವದಲ್ಲಿ ತಂದು ಆನಂದ ಬಿಡುವದು, ಸಂಸಾರ ಬಂಧನದಿಂದ ಬಿಡುಗಡೆಯಾಗಿ ನಿಜಾನಂದ ಮೋಕ್ಷ ಹೊಂದಿಸುವ ಶಕ್ತಿಯು, ಇದೇ ಅರ್ಥತ್ವ ಎಂದು ಹೇಳುತ್ತಾರೆ. ಹೀಗೆ ಐದು ಅವಸ್ಥೆಗಳಿಂದ ಕೂಡಿದ ಪಂಚಭೂತಗಳ ಪ್ರತ್ಯಪ್ರತ್ಯೇಕ ಅವಸ್ಥೆಗಳಲ್ಲಿ ಚಿತ್ತ ಏಕಾಗ್ರತೆಮಾಡಿದರೆ, ಆಯೋಗಿಗಳಿಗೆ ಪಂಚ ಮಹಾಭೂತಗಳು ವಶವಾಗುತ್ತವೆ. ಚಿತ್ತ ಏಕಾಗ್ರತೆಮಾಡುವದು ಹೇಗೆಂದರೆ ಮೊದಲಿಗೆ ಸ್ಥೂಲರೂಪದಲ್ಲಿ ಚಿತ್ತನಿರೋಧ, ನಂತರ ಸೂಕ್ಷ್ಮರೂಪದಲ್ಲಿ ಚಿತ್ತ ಸಂಯಮನ ಮಾಡುವದು. ಈ ಪ್ರಕಾರ ಸ್ಥೂಲ ಸೂಕ್ಷ್ಮಕ್ರಮದಿಂದ ಯಾವ ಯೋಗಿಯು ಚಿತ್ತ ಸಂಯಮನ ಮಾಡುತ್ತಾ ಸಾಧನಮಾಡುವನೋ; ಆ ಯೋಗಿಯ ಚೇಷ್ಟೆಯಿಂದ ಪಂಚಮಹಾ ಭೂತಗಳು ವಶವಾಗಿ ಆಕಳ ಕರುವಿ

ಹಿಂದೆ ಆಕಳು ಹೋಗುವಂತೆ ಪಂಚಭೂತಗಳು ಹೋಗುತ್ತ, ಅವನ ಮನೋರಥ (ಬಯಕೆ) ಪೂರ್ಣವಾಡುತ್ತವೆ. ಹೀಗೆ ಪಂಚಭೂತಗಳ ಜಯದಿಂದ ಅಣಿಮಾ ಗರಿಮಾ ಲಘಿಮಾದಿ ಅಷ್ಟಾಂಗಯೋಗಸಿದ್ಧಿಗಳಾಗುವವು. ಇಂಥ ಯೋಗಸಿದ್ಧಿಗಳು ಪ್ರಾಪ್ತವಾಗಲು, ಆಯೋಗಿಯು, ಕಠಿಣತರವಾದ ರತ್ನ ಹೀರಾದಿ ಪದಾರ್ಥಗಳಲ್ಲಿ ಕೂಡ ಸಹ ಹೊಕ್ಕು ಅಲ್ಲಿ ಪ್ರವೇಶಮಾಡಿರುವಶಕ್ತಿ ಬರುವದು ಹೀಗೆ ಅಷ್ಟಾಂಗಯೋಗ ಲಭಿಸುವದು. ಇದು ಮಹಾ ಸಿದ್ಧಿ ಎಂದು ಕರೆಸುವದು. ಏಕಾದಶಸ್ಕಂಧ ಭಾಗವತದಲ್ಲಿಯೂ ಇದರ ವಿವರಣೆ ಹೆಚ್ಚಾಗಿದೆ. ಇಂಥ ಮಹಾಸಿದ್ಧಿ ಪ್ರಾಪ್ತವಾದಮೇಲೆ ಯೋಗಿಗಳಿಗೆ ಮುಂದೆ ಹೇಳುವ ಶರೀರ ಸಂಪತ್ತು ಪ್ರಾಪ್ತವಾಗುತ್ತದೆ. ಶರೀರ ಸಂಪತ್ತು ಎಂದಿಗೂ ಕೆಡುವದಿಲ್ಲ. ಅಗ್ನಿಯಲ್ಲಿ ಹೊಗಲು ಸುಡುವದಿಲ್ಲ, ಜಲದಲ್ಲಿ ಮುಳುಗುವದಿಲ್ಲ. ವಾಯು ಶುಷ್ಕಮಾಡುವದಿಲ್ಲ ಹೇಗೆಂದರೆ ಭಗವದ್ಗೀತೆಯಲ್ಲಿ ಜೀವನ ಸ್ವರೂಪವನ್ನು "ನೈನಂದಹತಿ ಪಾವಕಃ ನಚೈನಂ ಕ್ಲೇದಯಂತ್ಯಾಪೋನ ಶೋಷಯತಿಮಾರುತಃ, ಈ ಪ್ರಕಾರ ಸ್ಥೂಲ ಶರೀರಸಂಪತ್ತಿಗುಣಗಳು ತಿಳಿಯಬೇಕು.

**ರೂಪಲಾವಣ್ಯ ಬಲವಜ್ರಸಂಹನನತ್ವಾನಿ ಕಾಯಸಂಪತ್ ॥೪೬॥**

ರೂಪವೆಂದರೆ ಚಕ್ಷುರಿಂದ್ರಿಯಕ್ಕೆ ಗೋಚರಗುಣ, ಲಾವಣ್ಯವೆಂದರೆ ಸರ್ವಾಂಗ ಸುಂದರತ್ವ, ಪರಾಕ್ರಮವೆಂದರೆ ವಜ್ರ ಪ್ರಕಾರ ಶರೀರ ಕಠಿಣತ್ವ ಹೀಗೆ ಶರೀರ ಸಂಪತ್ತು ಯೋಗಿಗಳಿಗೆ ಪ್ರಾಪ್ತವಾಗುತ್ತದೆ. ಇಂಥ ಶರೀರ ಸಂಪತ್ತು ಪ್ರಾಪ್ತ್ಯನಂತರ,

## ಇಂದ್ರಿಯ ಜಯ

**ಗ್ರಹಣ ಸ್ವರೂಪಾಸ್ಮಿತಾನ್ವಯಾರ್ಥವತ್ವ ಸಂಯಮಾದಿಂದ್ರಿಯಜಯಃ ॥೪೭॥**

ಇಂದ್ರಿಯಗಳ ೧ ಗ್ರಹಣ, ೨ ಸ್ವರೂಪ, ೩ ಅಸ್ಮಿತಾ ೪ ಅನ್ವಯತ್ವ ೫ ಅರ್ಥವತ್ವ, ಹೀಗೆ ಐದು ಅವಸ್ಥಾ ಪ್ರತ್ಯೇಕ ಇಂದ್ರಿಯಗಳಿಗಿವೆ ಇದರಲ್ಲಿ ಷಡ್ಜ, ಋಷಭ ಮುಂತಾದಸ್ವರಮಯ ಶಬ್ದಗಳು, (ಶ್ರೋತ್ರ) ಶೀತೋಷ್ಣ ಮುಂತಾದ ಸ್ಪರ್ಶ (ವಾಯು) ಹಸರು ಹಳದಿ, ನೀಲ ಮುಂತಾದ (ರೂಪ)

ಸೀ, ಹುಳಿ ಕಹಿ ಮುಂತಾದವು (ರಸ) ಸುರಭಿ ಒಳ್ಳೇ ವಾಸನಿ ಮುಂತಾದವು (ಗಂಧ) ಇವು ಪಂಚತನ್ಮಾತ್ರಾದಿ ಇಂದ್ರಿಯಗಳ ವಿಷಯವಿವೆ. ಹೀಗೆ (೧) ಈ ಪ್ರಕಾರ ವಿಷಯದ ಕಡೆಗೆ ಆಯಾ ಇಂದ್ರಿಯಗಳ ಪ್ರವರ್ತಿ (ಚಲಿಸುವದೆ) ಇದಕ್ಕೆ ಗ್ರಹಣವೆನ್ನುವರು (೨) ಇಂದ್ರಿಯಗಳ ಸಾಧಾರಣ ಶಕ್ತಿ ದೃಷ್ಟಿ ಗೋಚರವಾಗುವದೇ ಸ್ವರೂಪ, (೩) ಅತಾಸ್ಮಿ ಎಂದರೆ ಅಹಂಕಾರ, (೪) ಅನ್ವಯತ್ವ (೫) ಅರ್ಥತ್ವವೆಂದರೆ ಮೇಲಿನ (೪೪)ನೇ ಸೂತ್ರದಲ್ಲಿ ವಿವರಿಸಿ ದೆಂತೆಯೇ, ಇಂದ್ರಿಯಗಳನ್ನು ಹೀಗೆ ಐದು ಅವಸ್ಥೆಗಳಲ್ಲಿ ನಿಗ್ರಹಿಸಿದರೆ ಇಂ ದ್ರಿಯ ಜಯವಾಗುತ್ತದೆ.

“ ತತೋಮನೋಜವಿತ್ವಂ ವಿಕರಣ ಭಾವಃ ಪ್ರಧಾನ ಜಯಶ್ಚ ||೪೮||

ಇಂದ್ರಿಯ ಜಯವಾದಮೇಲೆ ಮನೋಜಯಿತ್ವ ಎಂದರೆ ಮನೋವೇಗ ದಂತೆ ಶರೀರಗತಿ ಪ್ರಾಪ್ತವಾಗುತ್ತದೆ. ಅಂದರೆ ಇಂದ್ರಿಯ ಜಯಮಾಡಿದ ಯೋಗಿಯ ಮನಸ್ಸಿನಲ್ಲಿ, ಇಂಥ ಸ್ಥಳಕ್ಕೆ ಹೋಗಬೇಕೆಂದು ಇಚ್ಛಾಬಂದರೆ ಆ ಸ್ಥಳಕ್ಕೆ ನಿರಾಯಾಸವಾಗಿ ಹೋಗುವನು. ವಿಕರಣ, ವೆಂದರೆ ಇಂದ್ರಿಯ ಗಳಿಗೆ ದೇಹದ ಹೊರತಾಗಿ ತಮ್ಮಕಾರ್ಯ ಮಾಡಲಿಕ್ಕೆ ಬರುವದು. ಮತ್ತು ಸರ್ವ ಜಗತ್ತು ವಶವಾಗುವದು. ಇವೆಲ್ಲವು ಇಂದ್ರಿಯ ಜಯದಿಂದಲೇ ಪ್ರಾಪ್ತವಾಗುವವು ಈ ಸಿದ್ಧಿಗಳಿಗೆ ಯೋಗಶಾಸ್ತ್ರದಲ್ಲಿ “ ಮಧುಪ್ರತೀಕಾ,, ಎಂತ ಈ ಸಂಜ್ಞೆ ಇರುವದು.

## ೩೪ ಸಂಯಮನ ಅಭ್ಯಾಸವು ಅತ್ಯಾವಶ್ಯವು

ಸ್ತ್ರೀ ಪುರುಷರು ಒಂದೇ ಕಡೆಗೆ ವಾಸಮಾಡಿ, ಒಂದು ಪಕ್ಷ ೧೫ ದಿನ ಗಳ ವರೆಗಾದರೂ ಬ್ರಹ್ಮಚರ್ಯವನ್ನವಲಂಬಿಸಿಕೊಂಡಿರುವದಾದರು, ಸಂಭವ ವಿದೇಯೋ ಎಂಬುದಾಗಿ ಅನೇಕರು ಪ್ರಶ್ನೆಮಾಡುವರು ಒಂದುವೇಳೆ ಪತಿ ಪತ್ನಿಗಳು ಬೇರೆಬೇರೆ ಮನೆಗಳಲ್ಲಿ ಮಲಗಿಕೊಂಡು, ಸಂಯಮನಾಭ್ಯಾಸ ವನ್ನು ಪಾಲಿಸಿದರೆ, ಶಾರೀರಕಹಾಗು ಮಾನಸೀಕ, ತೇಜಗಳು ವೃದ್ಧಿಯಾಗು ವವು. ಶುಕ್ರವೇ ಮನುಷ್ಯ ಜನ್ಮದ ಮೂಲಾಧಾರವಾದ್ದರಿಂದ, ಅದನ್ನು ರಕ್ಷಿಸಿಕೊಂಡಿದ್ದರೆ ನಿಶ್ಚಯವಾಗಿ ಹಿತಕರವಾಗುವದು ಸಂಯಮನದ ತರು ವಾಯ ಸಂಭೋಗವು ಅತ್ಯಂತ ತೃಪ್ತಿಕರವಾಗುವದು. ಅಂಥ ಆತೃಪ್ತಿಯನ್ನು

ಇಂದ್ರಿಯಾಸಕ್ತರಾದವರು ಎಂದು ಅನುಭವಿಸಲಾರರು. ದೇಹಮಾತ್ರವೆಲ್ಲವೂ ಇಂದ್ರಿಯ ಸೇವನೆಯಿಂದ ದುರ್ಬಲವಾಗುವದು. ಮನಸ್ಸು ನಿಸ್ತೇಜವಾಗುವದು. ಅಂಗ ಪ್ರತ್ಯಂಗಗಳು ಇಂದ್ರಿಯಗಳು ತೀವ್ರ ಶಿಥಿಲವಾಗುವವು. ಸೌಂದರ್ಯವು ಕಡಿಮೆಯಾಗುವದು. ದೀರ್ಘಾಲೋಚನೆ ಸಾಮರ್ಥ್ಯವು ಉಳಿಯುವದಿಲ್ಲ. ಕಣ್ಣಿನ ಜ್ಯೋತಿಯೂ ಸ್ಮರಣಶಕ್ತಿಯೂ, ಕಡಿಮೆಯಾಗಿಹೋಗುವದು. ಮಿತಿಮೀರಿದ ಸ್ತ್ರೀ ಸಹವಾಸದಿಂದ ಜ್ವರ, ಶೂಲಿ ಶ್ವಾಸಕಾಸ, ಕೃಶತ್ವ ಪಾಂಡು ಕ್ಷಯ ಮೊದಲಾದವು ದೇಹವನ್ನೂ ಬಲವನ್ನೂ ನಾಶಗೊಳಿಸುವಂಥ ಅನೇಕ ತರತರದ ರೋಗಗಳು ಹುಟ್ಟುವವು. ಭಾರತ ಆದಿಪರ್ವ ಅಧ್ಯಾಯ ೧೨೧ರಲ್ಲಿ ಒಂದು ಪುರಾತನ ಇತಿಹಾಸ, ಪುರುವಂಶದಲ್ಲಿ, ಯುಷಿತಾಶ್ವನೆಂಬ ರಾಜನು ಧಾರ್ಮಿಕನಾಗಿ ಅನೇಕ ಯಜ್ಞ ಯಾಗಾದಿಗಳನ್ನು ಮಾಡಿ ಕೀರ್ತಿವಂತನೂ ಹತ್ತು ಆನೆಯಬಲವುಳ್ಳವನೂ, ಅತಿಸೌಂದರ್ಯ ಯುಕ್ತನಾಗಿ ಇರುವ ಈ ರಾಜನಿಗೆ ಕಕ್ಷಿವಾನನ ಕನ್ಯೆ ಭದ್ರಾನಾಮಕ ಸುಂದರಪತ್ನಿಯಿಂದ ವಿವಾಹಿತನಾಗಿದ್ದರೂ, ಅಕೆಯ ರೂಪಲಾವಣ್ಯಕ್ಕೆ ವಶವರ್ತಿಯಾಗಿ ಕಾಮಾತಿರೇಕದಿಂದ, ಹಗಲಿರುಳು ಭದ್ರೆಯೊಡನೆ ಅಂತಃಪುರದಲ್ಲಿ ವಿಹರಿಸ ತೊಡಗಿದನು. ಹೀಗೆ ಅಪರಿಮಿತವಾದ ಇಂದ್ರಿಯಾಸಕ್ತಿಯಿಂದ ರಾಜನು ತುಸು ದಿವಸಗಳಲ್ಲಿಯೇ ಕ್ಷಯರೋಗ ಪೀಡಿತನಾಗಿ ಅಲ್ಪವಯಸ್ಸಿನಲ್ಲಿಯೇ ಮರಣಹೊಂದಿದನು. ಅಸಾಧಾರಣ ಬಲಶಾಲಿಯಾದದರಿಂದ ರಾಜನು ಇಂದ್ರಿಯ ಸೇವನೆಯಿಂದ ದುರ್ಬಲನಾಗಿ ಕಠಿಣ ರೋಗದಿಂದ ಪೀಡಿತನಾಗಿ ಅಕಾಲದಲ್ಲಿ ಇಹಲೋಕವನ್ನು ಬಿಟ್ಟುಬಿಟ್ಟನು.

ಅಗ್ನಿಯಲ್ಲಿ ಹವಿಸ್ಸು ಬಿದ್ದಷ್ಟೂ ಅದು ಪ್ರಜ್ವಲಿಸಿ ಏಳುತ್ತಿರುವಂತೆ, ಇಂದ್ರಿಯ ಸೇವನೆಯು ಹೆಚ್ಚಾದಂತೆ ಇಂದ್ರಿಯ ಸುಖದ ಆಶೆಯು ಹೆಚ್ಚಾಗಿ ಬಲಪಡಿಸಿ; ವಿನಾಶಕ್ಕೆ ಕಾರಣವಾದುದು. ಆದ್ದರಿಂದ ದಾಂಪತ್ಯ ಜೀವನದಲ್ಲಿಯೂ ಸಂಯಮನದ ಅಭ್ಯಾಸ ಒಳ್ಳೇದು. ಕ್ಷಣಕಾಲ ಅತ್ಯಲ್ಪ ಸುಖಕ್ಕಾಗಿ ಬೇಕ ಬೇಕಾದಾಗ್ಗೆ ಸ್ತ್ರೀ ಸಹವಾಸಮಾಡಿ ದುರ್ಬಲರಾಗುವದು ಮತ್ತು ಹಸಿವೆ ಇಲ್ಲದಿದ್ದರೂ ಕೇವಲ ಆಸ್ವಾದನಕ್ಕಾಗಿ ಊಟಮಾಡಿ ರೋಗಪೀಡಿತರಾಗುವದೂ, ಎರಡೂ ಸಮಾನವಾದವುಗಳು. ಅತಿಶಯ ಸಹವಾಸದಿಂದ ಸ್ತ್ರೀ

ಯರಲ್ಲಿಯುವ ಶ್ವೇತ ಪ್ರದರ ರಕ್ತ ಪ್ರದರ ಜರಾಯು ವೃದ್ಧಿ ಅಂದರೆ ಗರ್ಭ ಕೋಶ ಕೆಳಗೆ ಇಳಿಬೀಳುವದು. ಮೂರ್ಛವಾಯು (ಹಿಸ್ಟೀರಿಯಾ) ಮೊದ ಲಾಗಿ ಅನೇಕತರದನುತು ಸಮ್ಮಂಧಿರೋಗಗಳು ಉಂಟಾಗುವವು ಹೊಟ್ಟೆಗೆ ಆಹಾರವನ್ನು ಕೊಡದಿದ್ದರೆ ನಡೆಯುವದಿಲ್ಲವೆಂದು ಜಡವರು ತಕ್ಕಷ್ಟು ಊಟ ಮಾಡುವಂತೆ, ಇಂದ್ರಿಯ ಸೇವನೆಯಾದರೂ ಅನಿಷಿದ್ಧ ಕಾಲ ನೋಡಿ ಋತು ವಿನ ನಾಲ್ಕನೇ ದಿನ ನೋಡಿ ಹದಿನಾರು ದಿನದಲ್ಲಿ ಒಮ್ಮೆ ಪುತ್ರ ಜನನ ಪರಿ ಯಂತ ಸಂಭೋಗ ಮಾಡಬೇಕು.

ಇಂದ್ರಿಯಜಯ ವಿಷಯದಲ್ಲಿ ಶ್ರೀವಿಜಯದಾಸರು—ಯಾಮ ರಾತ್ರಿ ಯಲ್ಲಿ ಸತ್ಕರ್ಮವನೆ ಮುಮುಗಿಸಿ, ನಿತ್ಯ ಭಕುತಿಯಿಂದ ಶ್ರೀ ಮುಕುಂದಗೆ ನಿತ್ಯ ಅರ್ಪಣೆಮಾಡಿ। ವಾಮ ಭಾಗದಿ ತನ್ನ ನತಿಯಿಂದ ಒಡಗೂಡಿ ಶ್ರೀ ಮನೋಹರನ ತುತಿಸಿಕೊಳ್ಳುತ್ತಾ॥ ಎಂದುಹೇಳಿದ್ದಾರೆ ಎಡಮಗ್ಗಲಿನಲ್ಲಿ ಸ್ತ್ರೀ ಮಲಗಿದ್ದರೂ ಸ್ತ್ರೀ ವಿಷಯ ಕಾಮ ಹುಟ್ಟಬಾರದು. ಇದಾದರರೂ ಸಾಧನ ದಿಂದ ಆಗುತ್ತದೆ ಅಸಾಧ್ಯವಲ್ಲ.

## ೩೫ ಸ್ತ್ರೀ ಸಂಭೋಗ, ವಿಷಯ ಉಪಯುಕ್ತ ಮಾತುಗಳು

೧ ಹಗಲಿನಲ್ಲಿ ಸ್ತ್ರೀ ಸಂಭೋಗಮಾಡಬಾರದು ಎಲ್ಲ ತರದಿಂದಲೂ ರಕ್ತ ಮತ್ತು ವೀರ್ಯ ಇಂದ್ರಿಯ ಶಿಥಿಲವಾಗಿ ನೀರಾಗುತ್ತದೆ.

೨. ಸ್ತ್ರೀಸಂಭೋಗ ಮಾಡತಕ್ಕಕಾಲವು ರಾತ್ರಿಯೇ ಉತ್ತಮ ಯಾ ಕಂದರೆ ಚಂದ್ರ ಕಿರಣ ಚಲನೆಯಿಂದ ಶರೀರದಲ್ಲಿ ಎಲ್ಲರಸವೂ ಚಲನೆಯಾ ಗುತ್ತ ವೀರ್ಯವು ಗಟ್ಟಿಯಾಗುತ್ತದೆ.

೩. ಗಡತರನ ಸ್ಥೂಲಕಾಯ ಸ್ತ್ರೀಗೆ, ತೆಳ್ಳನ ಪುರುಷಗೆ ಸಂಭೋ ಗದ ಆಶಾ ಹೆಚ್ಚಾಗಿರುತ್ತದೆ.

೪. ಪುರುಷರ ಬಲಭಾಗ ಪುರುಷಭಾಗವೆಂತಲೂ, ಎಡಬಾಗ ಸ್ತ್ರೀ ಭಾಗವೆಂತಲೂ ಕರೆಸಿಕೊಳ್ಳುತ್ತದೆ.

೫ ಸ್ತ್ರೀ ಪುರುಷರುಗಳ ಜನನೇಂದ್ರಿಯವು ಯಾವಾಗಲೂ ಶೀರೆ ಮೋತರದಿಂದ ಮುಚ್ಚಿಯೇಇರಬೇಕು. ಏಕಂದರೆ ಅದರಲ್ಲಿರುವ ಒಂದುತರದ ಸೂಕ್ಷ್ಮ ತೇಜಃ ಶಕ್ತಿ ಇರುವುದು.

೬. ಕ್ಷಣೆಕ್ಷಣೆ ಪರಸ್ಪರ ಸ್ತ್ರೀ ಪುರುಷರು ಜನನೇಂದ್ರಿಯವನ್ನು ಸ್ಪರ್ಶಮಾಡುವದರಿಂದ ಸಂಭೋಗ ಶಕ್ತಿಯು ಕಡಿಮೆಯಾಗುತ್ತಲಿದೆ.

೭. ಪುರುಷರ ಎಡಭಾಗ ಸ್ತ್ರೀಯರಿದ್ದ ಕಾರಣ ಪುರುಷರ ನೆಳಲೆಂದು ಕರಿಸಿಕೊಳ್ಳುತ್ತಾಳೆ. ಹಗಲು ಪುರುಷರ ದೇಹದಿಂದ ಬೇರೆ ಇರುವಳು, ಇರಳಿನಲ್ಲಿ ನೆಳಲಿನಂತೆ ಪುರುಷನಲ್ಲಿ ಬೆರೆಯುವಳು.

೮. ಪುರುಷನು ಸ್ತ್ರೀಯಳ ಕಡೆಗೆ ಮನವಿಟ್ಟು ಆವಳ ಸಮೀಪಿಸಲು, ಸ್ತ್ರೀಯಳು ದೂರದೂರ ಸರಿಯುತ್ತಾಳೆ. ಆದರೆ ಗಂಡಸು, ಕಾಮೇಚ್ಛಾ ಉತ್ಪನ್ನನಾದರೂ ಸ್ತ್ರೀಯಿಂದ ದೂರು ಓಡಿದರೆ ಗಂಡಿಸಿನ ಹಿಂದೆ ಓಡುತ್ತಾಳೆ.

೯. ಸಾಲಗೊಯ್ಸು ತಂದೆ, ವ್ಯಭಿಚಾರಿ ಮತ್ತು ವಿದ್ಯಾಹೀನಮಗನು, ಸುಂದರ ಹೆಂಡತಿ, ಈ ಮೂವರು ತನಗೆ ಶತ್ರುಗಳು.

೧೦ ದೇಹ ರಕ್ಷಣ ಮಾಡುವದೆಂಬುದು ಪ್ರಸಿದ್ಧ ನಿಯಮವಿದ್ದರೂ ಇಂದು ನಾಳೆ ದೇಹವೀರ್ಯ ರಕ್ಷಣೆ, ಯಾರೂ ಅದರ ಸಂವರಕ್ಷಣ ಕಡೆಗೆ ಲಕ್ಷವೇ ಕೊಡರು

೧೧. ಹೊಸ ಪದಾರ್ಥಗಳಲ್ಲಿ ಒಂದು ತರದ ಶಕ್ತಿ ಬಲವಿರತ್ತದೆ, ಮನಸಿಗೆ ಆನಂದ ಹರ್ಷ ಶರೀರಕ್ಕೆ ಬಲದಾಯಿಯಾಗಿವೆ. ಹೊಸ ಧಾನ್ಯಗಳು, ತಾಜಾನೀರು, ಆಗ್ಗ ಅರಳಿದ ಹೂವು, ಸದ್ಯಕರೆದ ಹಾಲು ಮುಂತಾದವುಗಳು.

೧೨. ತುಪ್ಪ ಹೆಚ್ಚಾಗಿತಿನ್ನುವದು ಮೈಗೆ ಎಣ್ಣೆ ತಿಕ್ಕುವದು ದೇಹಕ್ಕೆ ಬಲದಾಯಕ. ಹೇಗೆಂದರೆ ಗಾಡಿಗಳಿಗೆ ರಂಗುಕೊಟ್ಟಂತೆ ಹಾಲಿನ ಖೋವಾ ಪೇಡೆ ಉಪಯೋಗವು ದೇಹದ ನಿರ್ಬಲತೆ ದೂರ ಗೈಸುವದು.

೧೩. ಹೆಚ್ಚಿಗೆ ಸಂಭೋಗ ಮಾಡುವದರಿಂದ ಮೈಯ್ಯಲ್ಲಿಯು ಕೊಬ್ಬು ಬೆಳೆಯುತ್ತದೆ.

## ೩೬ ಸಂಭೋಗದ ವರ್ಜ

೧೪. ಊಟಮಾಡಿದ ಕೂಡಲೇ ಸಂಭೋಗವು ಮಾಡಿದರೆ ಉಂಡ ಅನ್ನ ಜೀರ್ಣವಾಗದೇ ನರಗಳಲ್ಲಿ ದುರ್ಬಲತೆ ಯಾಗುತ್ತದೆ.

೧೫ ಸ್ತ್ರೀ ರಜಸ್ವಲೆ ಇದ್ದಾಗ್ಗೆ ಸಂಭೋಗಮಾಡಕೂಡದು ಅದರಿಂದ

ಅತ್ಯುಷ್ಣತೆಯಿಂದ ಕಣ್ಣು ಮಿದಳು ಬೇನೆಗಳುಹೆಚ್ಚಿ ಮೋಹರೋಗ ಉತ್ಪತ್ನ ನಾಗುತ್ತಲಿವೆ.

೧೬. ಸ್ತ್ರೀ ಗರ್ಭವತಿ ಇರಲು ಸಂಭೋಗಮಾಡಿದರೆ ಗರ್ಭಪತನ ವಾಗುವದು ಸ್ತ್ರೀಗೆ ಅನೇಕ ರೋಗಗಳು ಸಂಭವಿಸುವದು.

೧೭. ಸ್ತ್ರೀ ಅನುಮತಿಯಿರದೆ, ಪುರುಷನನ್ನು ಬಯಸದಿರುವ ಸ್ತ್ರೀ ಸಂಭೋಗದಿಂದ ಕೆಟ್ಟ ಸಂತಾನ ಮತ್ತು ಪುರುಷನಿಗೆ ಅನೇಕ ರೋಗಗಳು.

೧೮. ವ್ಯಧವೆಯ ಸಂಗ ಬಹುಹಾನಿಕರ, ಏಕೆಂದರೆ ಅವಳು ಪರ್ವಾವಧಿಯ ರತಿ ಅಪೇಕ್ಷೆ ಒಮ್ಮೆಲೆ ತೀರಿಸಿಕೊಳ್ಳುವಳು. ಮನದಣಿಸದ ಪುರುಷನಿಗೆ ಅನೇಕ ರೋಗದ ಅಂಜಿಕೆ.

೧೯. ಪರಸ್ತ್ರೀ ಸಂಗವು, ಮರ್ಯಾದೆಹಾನಿ, ಮನಸ್ಸಿನ ಹೆದರುವ ಅಂಜಿಕೆ ಮಿದಳಿಗೆ ಬಹುಹಾನಿ.

೨೦. ಮುದಿ ಸ್ತ್ರೀಸಂಗವು ಮನೋಲ್ಹಾದ ಆನಂದ ಬದಲಾಗಿ ದುಃಖ ಪರಿಣಾಮದಿಂದ ನಿರ್ಬಲತೆ. ಹಳಸಿದ ಅನ್ನ, ಆಗ್ಗೆ ಹೆಪ್ಪುಗಟ್ಟಿದ ತಾಜಾ ಮೊಸರು ಮುದಿಹೆಂಗಸು ಮನುಜರನ್ನು ಕೊಲ್ಲುವೆಂಬುದು ಪ್ರಸಿದ್ಧ.

೨೧. ಕನ್ಯಾ ಅವಸ್ಥೆಯಲ್ಲಿರುವ ಋತುಮತಿಯಾಗದ ಸ್ತ್ರೀ ಸಂಗದಿಂದ ಪುರುಷರ ಜನನೇಂದ್ರಿಯಗಾಯ ಮತ್ತು ಕನ್ಯಾಕ್ಕೆ ಹೆಚ್ಚಿನಗಾಯವು.

೨೨. ಬೇನೆ ಬಂದ ವ್ಯಾಳದಲ್ಲಿ ಸ್ತ್ರೀಪುರುಷರು ರೋಗ ಗ್ರಸ್ತರಿರುವಾಗ್ಗೆ ಸಂಭೋಗವು ರೋಗದ ಹೆಚ್ಚಿನ ಪ್ರಬಲತೆ, ನಿತ್ರಾಣವು ಹೆಚ್ಚುವದು.

೨೩. ಅತ್ಯುಷ್ಣವಾಳ್ಯ ಬೇಸಿಗೆ ದಿನಗಳಲ್ಲಿ ಸಂಭೋಗದಿಂದ ಮಿದುಳಿಗೆ ಹೆಚ್ಚಿನ ಉಷ್ಣತೆ ಮನದಮೇಲೆ ಕೆಟ್ಟ ಪರಿಣಾಮ, ರಕ್ತದಹಾನಿ.

೨೪. ಚಿಂತೆ ಸಿಟ್ಟು ಸಂತಾಪ ಕೋಪದಲ್ಲಿ ಸಂಭೋಗವು ಕೆಟ್ಟಮೋಹಾದಿ ರೋಗಗಳ ಹುಟ್ಟುವಿಕೆ, ಮಿದಳಿನ ರೋಗ.

೨೫. ಗಾಳಿಯು ಕಟ್ಟಿರುವಮನೆಯಲ್ಲಿ ಸಂಭೋಗವರ್ಜ. ಎಲ್ಲಬೇನೆಗಳ ಉತ್ಪನ್ನ, ಪ್ರೇಮಕ್ಕೆ ಹಾನಿ.

೨೬. ಜಾರ ಸ್ತ್ರೀಸಂಭೋಗದಿಂದ ಅನೇಕರೋಗಗಳು, ವೀರ್ಯನಾಶ, ಹಾದಿಯಲ್ಲಿ ಎಲ್ಲರೂ ನಡೆಯುವದರಿಂದ ಹುಲ್ಲು ಬೀಜ ಹೇಗೆ ನಾಶವೊ

ಹಾಗೆ ಸಂತತ ಪರಪುರುಷರಸಂಗ ಮಾಳ್ಪ ಜಾರಸ್ತ್ರೀಯಲ್ಲಿ ವೀರ್ಯಪತನವು ವೀರ್ಯನಾಶಕ್ಕೆ ಕಾರಣವಾಗುವದು.

ಸಕಲ ಅವಯವಗಳಲ್ಲಿ ಶಕ್ತಿ ಕಡಿಮೆಯಾಗಿ ಕೈಕಾಲಿನಲ್ಲಿ ಉಸಿರಲ್ಲದಂತೆ ಆಗಿ ಆಲಸ್ಯ ಮಾಂದ್ಯ ನಿದ್ರಾ ಸಂಭವಿಸುವವು.

೨೭. ಹೆಚ್ಚಿನ ಸ್ತ್ರೀಸಂಭೋಗವು ಕೆಟ್ಟದಿದೆ. ಹೆಚ್ಚಿನ ಸ್ತ್ರೀಸಂಭೋಗದಲ್ಲಿರುವ ಪುರುಷನ ಲಕ್ಷಣವೆನೆಂದರೆ, ಮೈಯಲ್ಲಿ ರಕ್ತ ವಿಲ್ಲದೆ ಫಿಕಾರಂಗು (ಬಿಳಚುಮೈ,) ಕಣ್ಣುಗಳು ಒಳಗೆಹೋಗಿ ಎರಡುಗಲ್ಲಗಳು ಒಳಗೆಸೇರಿಕೊಂಡು ತಗ್ಗುಬಿದ್ದಿರುವದು. ಎಲ್ಲ ಇಂದ್ರಿಯಗಳು ಕುಂಠಿಸಿ ನಿರ್ಬಲವಾಗುತ್ತವೆ. ಮಿದುಳು ಎಲ್ಲ ಶರೀರವೂ ಮುಪ್ಪಾಗುತ್ತದೆ. ನೆನಪು ಶಕ್ತಿ ಬುದ್ಧಿಶಕ್ತಿ ಕಡಮೆಯಾಗುತ್ತದೆ. ಒಳಗಿನ ಎಲ್ಲ ರೋಗಗಳು ಪ್ರಬಲವಾಗುತ್ತಲಿವೆ. ಮೂರ್ಛಾವಸ್ಥೆ ಮನಸ್ಸು ಹಾರುವದು ಎದೆಭುಗಿಲೆಂಬುವದು, ಮತ್ತು ಜನನೇಂದ್ರಿಯದ ಅನೇಕ ರೋಗಗಳು ಸಂಭವಿಸಿ ವೀರ್ಯದಲ್ಲಿ ಗರ್ಭೋತ್ಪತ್ತಿಯ ಹುಳಗಳು ಕೂಡುತ್ತಲೆ ಸಾಯುತ್ತಿರುತ್ತವೆ. ನಿರ್ಬಲ ವೀರ್ಯನಾಗುವನು ಎಂಥ ಸಶಕ್ತಿಯುಳ್ಳ ಮನುಜನಿದ್ದರೂ ಹೆಚ್ಚಿಗೆ ಸ್ತ್ರೀ ಸಂಭೋಗಮಾಡುವದರಿಂದ ಮೃತಪ್ರಾಯನೇ ಸರಿ

## ೩೭ ಕಾಮೋತ್ತೇಜನ ಕಡಿಮೆ ಮಾಡತಕ್ಕ ಉಪಾಯಗಳು

೨೮ ವ್ಯಾಯಾಮಮಾಡುವದು ಯಾವಾಗಲೂಪುಸ್ತಕ ಓದುತ್ತಿರುವದು ಸಂತತವಾಗಿ ಕಾರ್ಯತತ್ಪರತೆ, ಸವಡು ಇಲ್ಲದಿರುವದು, ಪಾಪ ಭೀರುತೆ, ಲೋಕದಲಿ ಮರ್ಯಾದೆಹಾನಿಯ ಭೀತಿಯಿರುವದು, ಸ್ತ್ರೀಯರ ಸಮ್ಬಂಧ ಹೆಚ್ಚಿನ ಮಾತುಕತೆ ಆಡದಿರುವದು ಯಾವ ಸ್ತ್ರೀಯರ ಕಡೆಗೆ ಕಣ್ಣೆತ್ತಿ ನೋಡದಿರುವದು, ಸ್ತ್ರೀಯರ ಸಂಗಡ ಯಾವಾಗಲೂ ಮಂಚದಮೇಲೆ ಮಲಗಬಾರದು. ಮಿತ ಆಹಾರಿಯಾಗಿರುವದು, ಹೊಟ್ಟೆ ಹಸಿದಾಗ್ಗೆ ತಡದು ಊಟಮಾಡುವದು, ಇವೆಲ್ಲವನ್ನು ಲಕ್ಷದಲ್ಲಿಟ್ಟು ಪಾಲಿಸಿದರೆ ಕಾಮುಜನಕತ್ವ ಕಡಿಮೆಯಾಗುತ್ತದೆ.

೨೯. ಮನುಷ್ಯನು ಆಹಾರ ವಿಹಾರಗಳಲ್ಲಿ ಅನ್ಯ ಪ್ರಾಣಿಗಳಿಗಿಂತ ಹೆಚ್ಚು ಸ್ವಾತಂತ್ರ್ಯವನ್ನು ಭೋಗಿಸುವನು. ಆದುದರಿಂದಲೇ ಅವನು ಸರ್ವ

ವಿಷಯಗಳ ಭೋಗವನ್ನು ವಿಶೇಷವಾಗಿ ಮಾಡುವನು. ಈ ಮೂಲಕ ಅವನಿಗೆ ಕಾಮದ ಉದ್ರೇಕವು ವರ್ಷದ ವಿಶಿಷ್ಟದಿನಗಳಲ್ಲಿ ಉಂಟಾಗದೇ, ಅವನಲ್ಲಿ ಕಾಮ ವಿಕಾರವು ನಿರಂತರ ತೋರುವದು. ಇಂತು ಕಾಮ ವಿಕಾರವು ನಿರಂತರ ಭೋಗವಾದುದರಿಂದ, ಅದನ್ನು ಜಯಿಸುವದು ಅತ್ಯಂತ ಕಠಿಣ ವಾಗಿರುವದು.

೩೦. ಅನ್ಯ ಇಂದ್ರಿಯಗಳನ್ನು ಪೋಷಿಸದಿದ್ದರೆ ಕಾಮಕ್ಕೆ ಹೆಚ್ಚು ಪೋಷಣೆ ಸಿಕ್ಕುವದಿಲ್ಲವೆಂದು ಅನ್ಯ ಇಂದ್ರಿಯಗಳನ್ನು ಗೆಲ್ಲದೆ ಕಾಮ ವನ್ನು ಗೆಲ್ಲುವ ಆಶೆಮಾಡುವದು ವ್ಯರ್ಥವೆಂದೂ ವಿಚಾರೀ ಪುರುಷನು ಅರಿತು ಕೊಳ್ಳುವನು.

೩೧ ಈ ರೀತಿ ಪ್ರಯತ್ನ ಶೀಲರಾದ ಸ್ತ್ರೀ ಪುರುಷರಿಗೆ ಬ್ರಹ್ಮಚರ್ಯ ಪಾಲನೆಯು ಈಗ ಜನರು ತಿಳಿದಿರುವಷ್ಟು ಕಠಿಣವಲ್ಲ

## ೩೮ ಸದ್ಯದಕಾಲ ಪರಿಸ್ಥಿತಿ

ಇಂದು ನಾವು ಪಾಶ್ಚಾತ್ಯ ಶಿಕ್ಷಣದ ಪ್ರಭಾವದೊಳಗೆ ವಿಚಾರ ಹೀನರಾಗಿ ಮನಮೆಚ್ಚಿ ಇವೆಲ್ಲ ಮಹತ್ತರವಾದ, ಧರ್ಮ ವರ್ಣಾಶ್ರಮಾ ಚಾರ ವಿಹಿತವಾದ ಎಲ್ಲ ಸದಾಚಾರಗಳನ್ನು ಮೂಲೆಗೊತ್ತಿ, ನಿತ್ಯನಿತ್ಯ ಕ್ರಮದಿಂದ ನಮ್ಮ ವ್ರತ ನಿಯಮ ಆಚಾರಗಳನ್ನೆಲ್ಲ ಶಿಥಿಲಮಾಡಿಕೊಳ್ಳ ಹತ್ತಿದ್ದೇವೆ.

ಮತ್ತು ಈಗಿನಕಾಲ ಪರಿಸ್ಥಿತಿಯನುಸರಿಸಿ ಸ್ತ್ರೀ ಪುರುಷರುಗಳು ಯಾವ ನಿರ್ಬಂಧ ವಿಲ್ಲದೆ ಒಂದೆಡೆ ಕಲೆಯುವದು ಕೂಡುವದು. ನಿಸ್ಸಂಕೋ ಚದಿಂದ ಹರಟೆ ಹೊಡೆಯುವದು, ನಾನಾಸಭೆಗಳಲ್ಲಿ ಗೋಷ್ಠಿಗಳಲ್ಲಿ ಸಮ್ಮೇ ಳನದಲ್ಲಿ ಒಂದೆಡೆಕಲೆಯುವದು. ನಾಟಕರಂಗ ತಮಾಷೆಗಳಿಗೆ ಕಲೆತುಹೋಗು ವದು, ನಾಟಕ ಸಿನಿಮಾಗಳನ್ನು ನೋಡುವದು, ಬಹುಸುಧಾರಿಸಿದವರೆಂದೂ ಇವೆಲ್ಲ ಕಾರ್ಯ ನಿರ್ದೋಷವೆಂದೂ ತಿಳಿಯಹತ್ತಿರುವರಾಗಿದ್ದಾರೆ.

ನಮ್ಮ ವಿದ್ಯಾಶಾಲೆಗಳಲ್ಲಿ ಕಾಲೇಜಿನಲ್ಲಿ ವಿಶ್ವವಿದ್ಯಾಲಯದಲ್ಲಿಯೂ ಸಹ, ಬಾಲೆ ಬಾಲಕರು ಕೂಡಿಕೊಂಡ ವಿದ್ಯಾಭ್ಯಾಸ ಶಿಕ್ಷಣ ಬಹು ಜೋರಾಗಿ ನಡದದೆ. ಮತ್ತೂ ದಿನೆದಿನೆ ಹೆಚ್ಚಿಗೆಆಗಹತ್ತಿದೆ. ಈ ಸಮ್ಮಿಳಿತ

ಶಿಕ್ಷಣ ಕೆಟ್ಟ ಪರಿಣಾಮವು ಬಾಲೆ ಬಾಲಕ ಉಭಯರರಿಗೆ ಬಹು ಹಾನಿ ಕಾರಕವೆಂದು ಸಿದ್ಧ ಆಗಹತ್ತಿದೆ. ಯಾವವಿಚಾರಶೀಲಜನರು ಸಹ, ಶಿಕ್ಷಣದ ಪರಿಣಾಮ ಬಗ್ಗೆ ಬಹು ಸೂಕ್ಷ್ಮ ವಿಚಾರಮಾಡಿರುವರೋ, ಅವರೆಲ್ಲರೂ ಈ ಸ್ತ್ರೀ ಪುರುಷರ ಸಹ ಶಿಕ್ಷಣವು ಅನಿಷ್ಟಕರ ಪರಿಣಾಮವೆಂದು ಎಲ್ಲರೂ ಸ್ವೀಕರಿಸಿ ಮನದಿಂಪೊಪ್ಪಿದಾಗ್ಯೂ ತಟಸ್ಥರಾಗಿದ್ದಾರೆ.

ಇಷ್ಟು ಇದರಿಂದಲೇ ಸಾಹಿತ್ಯದ ಗತಿಯು ಸಹ ಕ್ರಮದಿಂದ ಕೆಟ್ಟ ರುಚಿಯ ಮಾರ್ಗವಾಗಿ ನಡೆದಿದೆ. ಚಲಚಿತ್ರ ಪಟ, (ಸೆನಿಮಾ)ದಿಂದಲೇ ಯುವತೀ ಯುವಕರರಲ್ಲಿ ಮಹತ್ತರವಾದ ಹಾನಿಯಾಗಹತ್ತಿದೆ. ಆದರೆ ನಾವು ಗಳೆಲ್ಲ ಎರಡೂ ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿಕೊಂಡು ಆಧುನಿಕ ಮಹಾ ಪ್ರವಾಹದ ಹೊಳೆಯಲ್ಲಿ ಹರಿದು ಮುಳುಗುತ್ತ ಹೋಗಹತ್ತಿರುವೆವು. ನೈತಿಕ ಹಾನಿಯು ಇಂದು ವಿಶೇಷ ಹಾನಿಕರವೆಂದು ತಿಳಿಯದಾಗಿದೆ. ಸ್ತ್ರೀಯರಲ್ಲಿ ಸಾತ್ವಿಕ ಸ್ವಭಾವವ್ಯಕ್ತವಾಗದೇ, ದಿನೆದಿನೇ ಲೋಪವಾಗ ಹತ್ತಿದೆ. ವ್ಯಭಿಚಾರವು ಬಹು ಕುತ್ಸಿತವಾಗಿದ್ದರೂ ಅದು ಅಂಥ ಮಹತ್ವವಾದ ಹೇಯ ವಲ್ಲ. ಏನೋ ದೇಹದ ಧರ್ಮವೆಂದು ತಿಳಿಯುತ್ತಾರೆ. ಸ್ತ್ರೀ ಪುರುಷರು ವಿಲಾಸಿಗರಾಗಿ, ತಮ್ಮ ಶೃಂಗಾರಮಾಡಿಕೊಳ್ಳುವದು, ಅದರ ಆಲೋಚನೆ ಕ್ರಮದಿಂದ ಪ್ರಬಲವಾಗಹತ್ತಿದೆ. ಜೀವನವು ಬಹು ದುರ್ವೃತ್ತಿಯಿಂದ ಖಜೀಲವಾಗಿನಡದದೆ.

ಎಲ್ಲದಕಿಂತಲೂ ಹೆಚ್ಚಿನ ವಿಷಾದವೇನೆಂದರೆ, ನಮ್ಮಬಾಲಬಾಲಕಿಯರಲ್ಲಿ ಕುತ್ಸಿತವಾದ ಕೆಟ್ಟನಡಾವಳಿಗಳೇ ಹೆಚ್ಚಿಗೆ ಆಗಿವೆ. ನೈತಿಕ ಧಾರ್ಮಿಕ ಶಿಕ್ಷಣವು ಅಭಾವವಾಗಿ ನೋಡುನೋಡುತ್ತಾ ಕಡಿಮೆಯಾಹತ್ತಿದೆ. ಶೃಂಗಾರ ಭಾವನೆ, ಅನೇಕ ಪ್ರಕಾರ. ನಿಂದ್ಯಕರ್ಮಗಳಿಂದ ಬೇನೆಗಳೆಂಬ ಬೇಟೆಗಾರನ ಬಲೆಗೆಬಿದ್ದು ಬಲಿಯಾಗಹತ್ತಿವೆ. ಊಟ ಉಡಿಗೆಗಳಲ್ಲಿ ಮಿತಿಯಿಲ್ಲ. ಅಸಂಯಮನ, ಕುರುಚಿಯಾದ ಸಾಹಿತ್ಯ, ನಾಟಕ ಸೆನಿಮಾಗಳಿಗೆ ಹಿರಿ ಕಿರಿಯರ ಯಾವ ಮರ್ಯಾದೆ ಅಂಜಿಕೆ ಇಲ್ಲದೆ ಹೋಗುವದು, ಹೀನದಿನ ಚರಿತ್ರವಾನ್ ನೈತಿಕ ಧಾರ್ಮಿಕಶಿಕ್ಷಕರ ಶಿಕ್ಷಣವು ಇಲ್ಲದೇ, ಶಾಲೆಯಯಲ್ಲಿ ಶಿಕ್ಷಕರು ಮನೆ ಯಲ್ಲಿ ಹಿರಿಯರ ಅಂಜಿಕೆ ಹೆದರಿಕೆ, ಶಿಕ್ಷಿಸುವದಿಲ್ಲರುವಿಕೆ, ಇವೆಲ್ಲವೂ ಬಾಲ

ಬಾಲಕಿಯರ ಕುತ್ಸಿತವಾದ ಸ್ಥಿತಿಗೆ ತರಲು, ಸಹಾಯಕವೆಂದು ಸಿದ್ಧವಾಗಿದೆ

ಫಲಾಂಶ ವೇನೆಂದರೆ, ನಮ್ಮ ಬಾಲಕರಲ್ಲಿ ಅನೇಕ ದುಶ್ಚಟಗಳು ದುರ್ವ್ಯಾಪಾರಗಳು, ಕುತ್ಸಿತನಡತೆಗಳು ದಿನೆದಿನೆವ ನವಾಡಹತ್ತಿವೆ ನಮ್ಮ ಸ್ಕೂಲು ಕಾಲೇಜು ಇವುಗಳಿಗೆ ಸಂಬಂಧಪಟ್ಟಿರುವ, ಊಟ ಉಡಿಗೆ ವಸತಿ ಗ್ರಹ (ಹಾಸ್ಟೆಲ್) ಮುಂತಾದುವುಗಳಲ್ಲಿ ನಡೆಯುವ ಕುತ್ಸಿತ ನಡಾವಳಿಯ ಪೂರತಂತೂ ಬಿಟ್ಟಿಬಿಡಿರಿ. ಭಾರತದ ಅನೇಕ ದೇಶದೇಶಾಂತರ ಸ್ಥಳಗಳಲ್ಲಿರುವ ಸಂಸ್ಕೃತ ಪಾಠಶಾಲೆ, ಅಲ್ಲಿ ವಸತಿ ಗೃಹ, ಈಗ ಕೆಲವು ಇದ್ದ ಗುರುಕುಲಗಳೂ ಸಹ ಈ ಕೆಟ್ಟ ನಡಾವಳಿ ಕುತ್ಸಿತ ವೃತ್ತಿಯಿಂದ ಉಳಿದಿಲ್ಲ. ನೋಡಿದವರಿಗೆ ಅನುಭವಸಿದ್ಧ. ಎಷ್ಟೋ ಬಾಲಕರಿಂದ ಪಶ್ಚಾತ್ತಾಪದಿಂದ ನೆರಳಿಬಳಿದ ತಮ್ಮ ವಿಷಾದವಾದ ನಡೆನುಡಿಗಳ ದೂರು ಕೇಳಹತ್ತಿದ್ದೆವೆ. ಕೆಲವು ಪ್ರತ್ಯಕ್ಷ ಕಣ್ಣಾರೆ ನೋಡಿದ್ದೇವೆ.

ಅಂದಮೇಲೆ ನಮಗೆ ಹೇಳಲು ನಹನಾಚಿಗೆ ಬರುತ್ತಲಿದೆ. ಇಂಗಶಾಲೆ ಕಾಲೇಜು ಹಾಸ್ಟೆಲ್‌ಗಳಲ್ಲಿರುವ ಶಾರೀರಕ ನೈತಿಕ ಹಾನಿಯು ಎಷ್ಟೆಂದು ಆಗಿದೆ. ಆಗಲಿಕ್ಕೆ ಹತ್ತಿದೆ. ಈ ಬಾಲಕರಲ್ಲಿ ಎಷ್ಟೋ ಜನರು ಸ್ತ್ರೀಸುಖಕ್ಕೆ ಮರುಳಾಗಿ ನಿತ್ಯ ವಂಚಿತರಾಗಿದ್ದಾರೆ. ಆಗ ಹತ್ತಿರುವರು. ಅಕಾಲದಲ್ಲಿಯೇ ನಂಪೂಸಕತ್ವಾದಿ ಅನೇಕ ರೋಗಗಳ ಬೇಟೆಗಾರ ಬಲಿಗೆಬಿದ್ದು, ಧಾತುಕ್ಷಯ ಪ್ರಮೇಹ ಯಕ್ಷ್ಮಾದಿ ಅನೇಕಮಹತ್ತರ ರೋಗಗಳಗ್ರುಹಗ್ರಸ್ತರಾಗಿದ್ದಾರೆ ಅವರ ನರಗಳು ಸಿಬಿಲವಾಗಿವೆ. ತೇಜಸ್ಸು ಹೀನರೂ ನಿರ್ಬಲರೂ ನಿರುತ್ಸಾಹಿಗಳೂ. ಮಂದ ಬುದ್ಧಿಗಳೂ ಆಗ ಹತ್ತಿರುವರು. ಕೆಲವು ಬಾಲಕರು ಅಲ್ಪ ವಯಸ್ಸಿನಲ್ಲೆ ಜೀವಿತಾಶಾ ಉಳಿಯುದವರಾಗಿದ್ದಾರೆ. ಅಂದಮೇಲೆ ಇವರಲ್ಲಿ ಸಂತಾನ ಉತ್ಪಾದಕ ಶಕ್ತಿಯು ಎಲ್ಲಿಂದಬರಬೇಕು? ಒಂದು ವೇಳೆ ಏನೋ ಸಂತಾನವಾದರೂ, ಆಜನಿಸಿದ ಕೂಸುಗಳು ಸಹ ದುರ್ಬಲ, ಕ್ಷೀಣ ಶರೀರ, ರೋಗ ಗ್ರಸ್ತ, ಅಲ್ಪಾಯು ಪುಳ್ಳವಗಳಾಗುತ್ತಲಿವೆ ಬಾಲಕರೇವೆ ನಮ್ಮ ದೇಶದ ಏಳಿಗೆಯು ಕಾರಣರು ಆಗಿರಲು, ಅವರಲ್ಲಿ ಇಂಥ ಪ್ರಕಾರದ ಕೆಟ್ಟನಡಾವಳಿಗಳು ಒದಗಲು, ರಾಷ್ಟ್ರದ ಉನ್ನತಿಯಲ್ಲಿ ದೊಡ್ಡ ಹಾನಿಕಾರಕ ವಾಗಿದೆ.

## ೩೯ ಇದರ ಸುಧಾರಣೆಯು ವಿಚಾರಕ್ರಮ

(೧) ಈ ಕಾರಣಗಳಿಂದ ನಮ್ಮ ಆಯುರ್ಮರ್ಯಾದೆ ಬುದ್ಧಿ ಶಕ್ತಿ ಇರುವ ಸಮಯದಲ್ಲೇ ನಾವು ತಿಳುವಳಿಕೆಯುಳ್ಳವರಾಗಿ, ಈ ಕೆಡಕುತನದಿಂದ ಹರಡಿರುವ ರೋಗಗಳನ್ನು, ಬಹು ಶೀಘ್ರವಾಗಿ ದೂರಗೈವ ಚಿಕಿತ್ಸೆ ಯತ್ನಮಾಡಲಿಕ್ಕೆ ಬೇಕು. ಹೇಗೆ! ಅಂಟು ಬೇನೆ ಕಾಲರಾ, ಪ್ಲೇಗು, ಮುಂತಾದ ರೋಗಗಳ ಪ್ರಬಲಕಾಲದಲ್ಲಿ ಅವುಗಳನ್ನು ನಿಲ್ಲಿಸಲಿಕ್ಕೆ ಪ್ರಯತ್ನ ಮಾಡದೇ ಸುಮ್ಮಗೆ ಕುಳಿತರೆ, ಅನೇಕರ ಬಲಿದಾನವಾಗಿ ಭಯಂಕರ ಪರಿಣಾಮವಾಗಿ ಸುಧಾರಿಸಿಕೊಳ್ಳಲು ಎಂದಿಗೂ ಶಕ್ತರಾಗುವದಿಲ್ಲವೋ? ಅದರಂತೇ ಈಗ್ಗೆ ವ್ಯಾಪಿಸಿ ವೃದ್ಧಿಗೆ ಹೊಂದಿದ ಮಹಾ ಕೆಡಕವಾದ ರೋಗವು ಭಯಂಕರವಾಗಿ ವ್ಯಾಪಿಸಿದ್ದನ್ನು ಅವಶ್ಯವಾಗಿ ಒಳ್ಳೇ ನುಸೀಲತೆ ಎಂಬ ಔಷಧ ಚಿಕಿತ್ಸೆಯಿಂದದೂರ ಮಾಡಲಿಕ್ಕೆ ಬೇಕು. ಇಲ್ಲವಾದರೆ ಈ ಮಹಾ ರೋಗ ಮತ್ತು ಹೆಚ್ಚಿಗೆ ವ್ಯಾಪಿಸಿ ಸುಧಾರಿಸುವದು ಬಹು ಕಠಿಣವಾಗಿ ನಮ್ಮ ಭಾರತ ಭೂಮಿಯು ಅಧೋಃಪತನಕ್ಕೆ ಮತ್ತೂ ಹೆಚ್ಚಿಗೆ ಕಾರಣವಾಗುವದು ನಿಜವಾಗಿ ತಿಳಿದು ಸರ್ವರೂ ಪ್ರಯತ್ನ ಮಾಡುವದು. ದೈವೇಚ್ಛೆಯಿಂದ ಸ್ವತಂತ್ರ ಒದಗಿದಾಗ್ಗೆ ರಾಷ್ಟ್ರದವರು ಈ ಮಹತ್ವದ ಸುಧಾರಣೆ ಕಡೆ ಲಕ್ಷ್ಯ ಕೊಡಬೇಕಾಗಿ ವಿನಂತಿ ಎದ್ಯಪಿ ಪಾಶ್ಚಾತ್ಯರ ಆಡಳಿತೆಯು ಇಲ್ಲವಾದರೂ ಅವರ ವಿದ್ಯಾಭ್ಯಾಸ ನಡೆನುಡಿ ಅವರ ಸಂಸ್ಕೃತಿ ಭಾರತೀಯರಲ್ಲಿ ಬೇರೂರಿದೆ ಅದನ್ನು ಆದಷ್ಟು ತ್ವರೆಯಾಗಿ ಕೀಳಬೇಕಾದ ಅತ್ಯಾವಶ್ಯಕತೆ.

ಸುಧಾರಿಸಿದರೆಂದೆನುವ ಪಾಶ್ಚಾತ್ಯರಶಿಕ್ಷಣವೂ ಈಗಿನಕಾಲದ ಬಾಲಬಾಲಕಿಯರು ಕೆಡಲು ಕಾರಣವಲ್ಲದೇ, ಭಾರತಿಯರು ನಮ್ಮಪುರಾತನ ನಡಾವಳಿ ಬಿಟ್ಟರು. ಹಳ್ಳಿಗಳಲ್ಲಿ ಸಹವಿದ್ಯಾಶಿಕ್ಷಣ ನೈತಿಕ ತತ್ವಬೋಧಕರು ಸಹ ಇಲ್ಲದೇ ಸ್ಕೂಲ ಕಾಲೇಜುಗಳಿಗಿಂತಲೂ ಕೆಲ ಮಟ್ಟಿಗೆ ಹೆಚ್ಚಿನ ಅ ನೈತಿಕ ಪರಿಸ್ಥಿತಿಯು ಒದಗಿದ್ದರೂ, ಅಷ್ಟು ಶಾರೀರಕ ದುರ್ಬಲರಾಗಿಲ್ಲ. ಮತ್ತೂ ಶಾರೀರಕ ದುರ್ಬಲತೆಗೆ ಚಹಾಪಾನ ಅಂಗಡಿಗಳು ಉಪಹಾರ ಗೃಹಗಳು ವಿಪುಲವಾಗಿವೆ. ಇವುಗಳನ್ನು ಸಹ ಸತ್ಯಾಗ್ರಹದಿಂದ ನಿಲ್ಲಿಸುವದು ಅವಶ್ಯ. ಆಡಳಿತೆಗಾರರಾದ ಸರಕಾರದವರಿಗೆ ಈ ದೂರು ಮುಟ್ಟಿಸಿ, ಇವುಗಳ ಪ್ರತಿ

ಬಂಧನಮಾಡಲು ಪ್ರತಿಯೊಬ್ಬ ವಿಕಾರ ಕೆರಳಿಸಿ ಕೊಂಕರಿಟ್ಟಬೇಕು. ಇವುಗಳೆಲ್ಲ ಬ್ರಹ್ಮಚರ್ಯಕ್ಕೆ ಮಹಾ ಹಾನಿಕರವಾಗಿವೆ.

(೨) ಎಲ್ಲಕಿಂತಲೂ ಅತ್ಯಾವಶ್ಯಕತೆ ಏನೆಂದರೆ ನಮ್ಮ ಬಾಲಬಾಲಿಕೆಯರನ್ನು ಚರಿತ್ರವಾನ್ ಸಕಲಪುರುಷರನ್ನು ಮಾಡಬೇಕೆನ್ನುವವರು ಸ್ವತಃ ಇವರ ಆಚರಣೆಯನ್ನಿಟ್ಟು, ಐತಿಹಾಸಿಕ ಮಹತ್ವ ಮಹಿಮಾನ್ ಪುರುಷರಾಗಬೇಕು. ಇವುಗಳಿಗೆಲ್ಲ ತಂದೆ ತಾಯಿಗಳು ಮತ್ತು ಶಿಕ್ಷಕರು ಇವರೇ ಬಾಲಕರ ಶಿಕ್ಷಣಿಗೆ ಮುಖ್ಯಕಾರಣರಾಗಿರುವರು. ಎಂದಿಗೆ ಶಿಶು ಗರ್ಭದಲ್ಲಿ ಸಂಚಲನಮಾಡಹತ್ತಿತೋ, ಅಂದಿನಿಂದಲೇ ಮಾತಾ ಪಿತೃಗಳು ಈ ಮಾತು ನೆನಪಿನಲ್ಲಿ ತಂದು ಧ್ಯಾನವಿಟ್ಟು ಆಚರಿಸತಕ್ಕದ್ದು ಅತ್ಯಾವಶ್ಯಕವಾಗಿದೆ. ಗರ್ಭಗತಶಿಶುವಿಗೆ ಒಳ್ಳೇ ಪರಿಣಾಮವಾಗುವ ಸಂಸ್ಕಾರಗಳು ಆಗಲಿಕ್ಕೆ ಬೇಕು ಕೆಟ್ಟಪದ್ಧತಿ ಸದಾವಳಿಯ ಸಂಸ್ಕಾರಗಳು ಬೀಳದಂತೆ ಮಾಡುವದು. ಇಂಥ ಸಂಸ್ಕಾರಗಳೇ ನಮ್ಮಿಂದ ಕ್ರಮಶಃ ಬಿಟ್ಟುಬಿಡಲಿಕ್ಕೆ ಹತ್ತಿವೆ

ಪೂರ್ವ ಸಂಸ್ಕಾರದಂತೆ ಗರ್ಭಾಧಾನ ಕ್ರಿಯಾ ಸಹಿತ ಇಂದು ನಾಳೆ ಕಾಮವಾಸನಾ ಪೂರ್ತಿಮಾತ್ರವಾಗಿದೆ.

## ೪೦ ಪೂರ್ವಿಕ ಸಂಸ್ಕಾರಗಳು

(೧) ಮೊದಲಿಗೆ ಗರ್ಭಾಧಾನ ವಿಧಾನವು ಧಾರ್ಮಿಕ ಉದ್ದೇಶದಿಂದ ವೇದಮಂತ್ರೋಚ್ಚಾರಣ ಪೂರ್ವಕವಾಗಿ ಆಗುತ್ತಿತ್ತು. ಗರ್ಭಾಧಾನದಿಂದ ಜನ್ಮ ಪರಿಯಂತವಾಗಿ, ಹುಟ್ಟಿದಂದಿನ ವಿವಾಹ ವರೆಗೆ, ನಮ್ಮ ಬಾಲಕರಿಗೆ ಎಷ್ಟೋ ಸಂಸ್ಕಾರಗಳು ಆಗುತ್ತಿದ್ದವು. ಈ ಸಂಸ್ಕಾರಗಳಿಂದ ಅವರಬುದ್ಧಿ ಮತ್ತು ನಡಾವಳಿಗಳಮೇಲೆ ಒಳ್ಳೇ ಶುಭವಾದ ತೇಜಸ್ಸು ಬೀಳುತ್ತಿತ್ತು. ಪ್ರಾಯಃ ಉಪನಯನ ಐದು ವರ್ಷದಿಂದ ಪ್ರಾರಂಭಿಸಿ ಹನ್ನೆರಡು ವರುಷ ಮುಗಿಯುವವರೆಗೆ ಆಗುತ್ತಿತ್ತು. ಅಲ್ಲಿಂದ ಇಪ್ಪತ್ತು ನಾಲ್ಕು ವರುಷ ಪರಿಯಂತವಾಗಿ ಅಂದರೆ ೧೨ ವರ್ಷ ತಪ್ಪದೇ ಪ್ರತಿಯೊಬ್ಬ ದ್ವಿಜಾತೀಯ (ಬ್ರಾಹ್ಮಣ ಕ್ಷತ್ರಿಯ ವೈಶ್ಯ) ಬಾಲಕರು ಬ್ರಹ್ಮಚರ್ಯದಿಂದ ಗುರುಕುಲ ವಾಸಮಾಡಿ, ವೇದಾಧ್ಯಯನ ಪೂರ್ವಕವಾಗಿ ಇತರ ಅನೇಕ ಶಾಸ್ತ್ರಗಳನ್ನು ಅಭ್ಯಸಿಸುತಿದ್ದರು. ಇಂಥ ಕಾಲದಲ್ಲಿ ಆ ಬಾಲಕರಿಗೆ ಸ್ತ್ರೀಯರ ಸಂಸರ್ಗ

ಸ್ತ್ರೀಯರ ವಿಷಯಕ ಮಾತುಕಥೆಗಳಿಂದ ಸಹ ದೂರಾಗಿರುತ್ತಿತ್ತು. ಅವರ ದಿನ ಚರ್ಯವು ಹೇಗೆ ಇರುತ್ತಿತ್ತೆಂದರೆ ಧಾರ್ಮಿಕ ಕೃತ್ಯಗಳು, ಗುರುಸೇವಾ ಮುಖ್ಯವಾದ ಅಧ್ಯಯನದಲ್ಲಿ ಅವರಿಗೆ ಯಾವಪರದಿಂದ ನಡುವೆ ಬಿಡುವಿನ ಕಾಲ ದೊರಿಯದೇ ಸಂತತ ಕಾರ್ಯನಿರತರಾಗಿರುತ್ತಿದ್ದರು. ಇದರಿಂದ ಆ ಬಾಲಕರಿಗೆ ಎರಡನೇ ಮಾತಿನ ವಿಚಾರಮಾಡಲು ಅವಕಾಶವೇ ಇದ್ದಿಲ್ಲ. ಗುರುಕುಲದ ವಾತಾವರಣವು ಬಹುಪವಿತ್ರವಾಗಿರುತ್ತಿತ್ತು. ಗುರುಗಳಾದರೂ ಪರಮ ಆಸ್ತಿಕ, ಪರಮ ಧಾರ್ಮಿಕರಾಗಿಯೂ ಮಹಾ ತಪಸ್ವಿಗಳಾಗಿಯೂ ಇರುತ್ತಿದ್ದರು. ಗುರುಗಳು ಎಲ್ಲ ವಿಧದಿಂದಲೂ ನಿಸ್ಪೃಹರೂ, ಅರ್ಥ ಕಾಮ ದೂಸ್ಯರೂ, ಆಗಿರುತ್ತಿದ್ದರು ಆ ಗುರುಗಳ ಜೀವನವು ಸಾದಾಸೀದಾ, ಕಾಮ ಪೂರ್ಣವಾಗಿ ಪವಿತ್ರವಾಗಿರುತ್ತಿತ್ತು. ಅವರು ಶಿಷ್ಯರುಗಳು ಭಿಕ್ಷಾಟಣೆಯಿಂದ ತಂದುದರಿಂದಲೇ ಉದರ ನಿರ್ವಾಹ ಮಾಡುತ್ತಿದ್ದರು. ಮತ್ತು ಅವರ ಎಲ್ಲ ಅವಶ್ಯಕತೆಗಳು ಅತ್ಯಂತ ಪರಿಮಿತವಾಗಿರುತ್ತಿದ್ದವು ಗ್ರಾಮ ಪಟ್ಟಣಗಳನ್ನು ಬಿಟ್ಟು ಬಹುದೂರವಾದ ಅಡವಿಯಲ್ಲಿರುತ್ತಿದ್ದರು. ಅಲ್ಲಿ ಅವರಿಗೆ ಯಾವ ತರದ ಕೆಟ್ಟ ನಡಾವಳಿಗಳು ಕೆಟ್ಟ ವಾರ್ತೆಗಳು ಸಹ ಅಲ್ಲಿ ಪ್ರವೇಶಮಾಡಲು ಶಕ್ಯ ವಿದ್ದಿಲ್ಲ.

ಇನ್ನು ಅಲ್ಲಿ ಬಾಲಕರಿಗೂ ಬಹು ಕಠಿಣ ತರವಾದ ಆಚರಣೆ. ಆತ್ಮ ಸಂಯಮನ ಪೂರ್ಣವಾದ ಜೀವನವಾಗಿದ್ದರೂ, ಸುಗಮವಾಗಿ ಮನೋ ಸ್ಥೈರ್ಯಕ್ಕೆ ಕಾರಣವಾಗಿತ್ತು. ಶೃಂಗಾರ ಇವರ ಮನೋಹವ್ಯಾಸವು ಅವರನ್ನು ಮುಟ್ಟಲುನಹಶಕ್ಯವಿದ್ದಿಲ್ಲ ಶರೀರ ಮತ್ತು ಕೂದಲುಗಳಿಗೆ ಒಳ್ಳೇ ಸುಗಂಧವಾದ ಎಣ್ಣೆ ( ಹೆಯರ ಆಯಲ್) ಸುಗಂಧದ್ರವ್ಯ ಹಚ್ಚೋಣ, ಒಳ್ಳೇ ರೀತಿಯಿಂದ ಹೊಲಿದ ವಸ್ತ್ರಗಳನ್ನು ಸಹ ಉಡುವದು, ಸ್ವಾದಿಷ್ಟವಾದರುಚಿ ಕರ ಪದಾರ್ಥಗಳ ಭೋಜನ ವಲ್ಲದೇ, ಎಲ್ಲಿವರೆಗೆಂದರೆ ಛತ್ರಿ ಹಿಡಿಯುವದು ಕಾಲಲ್ಲಿ ರಕ್ಷಾ ಮೆಟ್ಟುವದು ಸಹ ಆಬಾಲಕರಿಗೆ ನಿರ್ಬಂಧವಿತ್ತು. ಅವರು ಅಡವಿಯಿಂದ ಗುರುಗಳ ಉದ್ದಿಶ್ಯ ಕಟ್ಟಿಗೆಗಳನ್ನು ಮುರಿದು ತರುತಿದ್ದರು. ಗುರುಕುಲದ ವಸಕರುಗಳನ್ನು ನಂಬಾಳಿಸುತಿದ್ದರು. ಗುರುಗಳ ಉದ್ದಿಶ್ಯವಾಗಿ ನೀರುತರುತ್ತಿದ್ದರು. ಗುರುಗಳ ಏನೇ ಎಲ್ಲ ಕೆಲಸಗಳನ್ನು ತಾವೆ ನಾಂಬಾಳಿಸಿ

ಕೊಂಡು ಗುರುವಾನುಗ್ರಹಕ್ಕೆ ಪಾತ್ರರಾಗಿರುತಿದ್ದರು. ಈ ಪ್ರಕಾರವಾಗಿ ಅವರ ಜೀವನದಲ್ಲಿ, ಸದ್ಗುಣ ಸದಾಚಾರ ಸಂಯಮನ ಶ್ರಮ ಸಹಿಷ್ಣುತೆ, ಪವಿತ್ರತೆ ಸೇವಾ ಭಾವ, ಹಿರಿಯರ ಆಜ್ಞಾ ಪಾಲನೆ, ವಿನಯ ತಿತಿಕ್ಷಾ ಆಜ್ಞಾಪಾಲನಧರ್ಮ, ಮತ್ತು ಉಪಾಸನಾದಿ ಸಕಲ ಸದ್ಗುಣಗಳು ಸ್ವಾಭಾವಿಕ ವಾಗಿಯೇ ಬರುತಿದ್ದವು. ಆಗಿನ ಬಾಲಕರು ಶರೀರ ಮತ್ತು ಮನದಿಂದಲೂಸಹ ಬಲಿಷ್ಟರು ದೃಢಸಂಕಲ್ಪರು, ಹಿಡಿದ ಕೆಲಸ ಪೂರ್ಣಮಾಡುವಿಕೆ, ಹೀಗೆ ಪರಮ ಪವಿತ್ರವಾದ ಚರಿತ್ರ ಪುರುಷರಾಗಿ, ಸ್ವಾತ್ಮಬಲಸಂಪನ್ನರಾಗಿಯೂ, ಗುರು ಅನುಗ್ರಹಪಡೆದು ಗುರುಗೃಹದಿಂದ ಹೊರಬೀಳುತಿದ್ದರು. ಹೀಗೆ ಗುರುಸೇವಾ ಸದ್ಗುಣ ಸದಾಚಾರ, ಮತ್ತು ಉಪಾಸನೆಯಿಂದ ಅವರ ಬುದ್ಧಿಯೂ ಸಹ, ಮಹಾ ತೇಜಸ್ಸು ಮತ್ತು ನಿರ್ಮಲವಾಗಿರುತಿದ್ದು, ಗುರು ಕೃಪೆಯಿಂದಲೇ ಅನಾಯಾಸದಿಂದ ಬಹಳೇ ಸ್ವಲ್ಪ ಕಾಲದಲ್ಲಿ ಅನೇಕ ಶಾಸ್ತ್ರದಲ್ಲಿಯೂ ಸಹ ಪಾರಂಗತರಾಗಿರುತಿದ್ದರು ಅವರ ವಿದ್ಯೆ ಬುದ್ಧಿ ವಿವೇಚನೆಗೆ ಸಕಲ ಜನರು ಮಾನ್ಯ ಆವರ ಸತ್ಕರಿಸುತಿದ್ದರು ಈ ಪ್ರಕಾರ ನಮ್ಮ ಪೂರ್ವಜ ಬಾಲಕರು ಮಹಾ ಪ್ರಭಾವ ಶಾಲಿಗಳೂ ತೇಜಸ್ವಿಗಳೂ ಆಗಿ ಗೃಹಸ್ಥಾಶ್ರಮದಲ್ಲಿ ಪ್ರವೇಶಮಾಡುತಿದ್ದರು. ನಂತರ ಯೋಗ್ಯ ಕನ್ನಿಕೆಯನ್ನು ಸಂಪಾದಿಸಿ, ಸನಾತನಧರ್ಮವಿಧಿ ಪೂರ್ವಕ ಅಗ್ನಿಸಾಕ್ಷಿಯಾಗಿ ವಿವಾಹಮಾಡಿಕೊಂಡು, ಧರ್ಮಪೂರ್ವಕವಾಗಿಯೇ ಜೀವನವನ್ನು ಸನ್ಮಾರ್ಗದಲ್ಲಿಯೇ ಕಳೆಯುತಿದ್ದರು ಬಾಲ್ಯತನದಿಂದಲೇಯೇ, ಆತ್ಮಸಂಯಮನ ಪೂರ್ವಕ ಸದಾಚಾರದ ನಡಾವಳಿಯ ಶಿಕ್ಷಾ, ಮತ್ತು ಅದರ ಪಾಲನ ಮಾಡುತ್ತಿದ್ದಕಾರಣ, ಅವರು ಗೃಹಸ್ಥಾಶ್ರಮದಲ್ಲಿಯೂ ಸಹ ಹೆಚ್ಚಾಗಿ ಆತ್ಮ ಸಂಯಮನ, ಅಲಂ ಬುದ್ಧಿಯಿಂದ ಮಹಾ ಪವಿತ್ರವಂತರಾಗಿ ಇರುತಿದ್ದರು

ಕೇವಲ ಧರ್ಮ ಸಂತಾನೋತ್ಪಾದಕವಾದರೂ, ಪಿತೃ ಋಣದಿಂದ ಮುಕ್ತರಾಗುವ ಕಾರಣವಾಗಿಯೇ ಇತ್ತು. ಮತ್ತು ಇದಾದರೂ ಸೃಷ್ಟಿಕರ್ತೃನಾದ ಭಗವಾನ್ ದ್ವಾರವೇ ಪ್ರವೃತ್ತಿಸುವ ಸೃಷ್ಟಿಚಕ್ರ ನಡಿಸುವ ಮುಖ್ಯ ಕಾರಣವಾಗಿಯೇ ಇತ್ತು ಹೊರತಾಗಿ, ಕಾಮವಾಸನ ತೃಪ್ತಿಗಾಗಿ ಇದ್ದಿಲ್ಲ ಋತುಕಾಲದಲ್ಲಿ ವರ್ಜಿತ (ನಿಷಿದ್ಧ) ತಿಥಿಗಳನ್ನು ಬಿಟ್ಟು ತನ್ನ ವಿವಾಹಿತ

ಪತ್ನಿಯೊಡನೆ ಸಮಾಗಮ ಮಾಡುತ್ತಿದ್ದರು. ಮತ್ತು ಪತ್ನಿ ಗರ್ಭಿಣಿಯಾದ ನಂತರ ಶಿಶು ಜನನವಾದಮೇಲೆ ಪುನಃ ಋತುಕಾಲದ ಪರ್ಯಂತ ತಮ್ಮ ಪತ್ನಿಯ ಒಂದಾದರೂ ಎಂದೂ ಸಂಭೋಗಮಾಡುತ್ತಿದ್ದಿಲ್ಲ

## ೪೧ ಕಾಲ ಚಕ್ರಗತಿ

ಹೀಗೆ ಬರುಬರುತ್ತ ಕಾಲ ಚಕ್ರತಿರುಗುವಿಕೆ, ಅನ್ಯ ಜನರ ಸಹವಾಸ ಕಾಲವಶದಿಂದ ಹಿಂದಿನ ಪರಿಸ್ಥಿತಿಯು ಬಹುಬದಲಾಯಿಸಿತು. ಇಂದುನಾಳೆ ಆಶ್ರಮ ವ್ಯವಸ್ಥೆಯೇ ಇಲ್ಲದ ಕಾರಣ, ಒಂದು ಸಮಾಜದಲ್ಲಿ ಹಿಂದಿನ ಪದ್ಧತಿಯೇ ಪೂರ್ಣ ಬದಲಾಗಿದೆ. ಗೃಹಸ್ಥಾಶ್ರಮಿಗಳೆಂಬೋ ಹೆಸರು ಮಾತ್ರ ಉಳಿದಿವೆ. ಬ್ರಹ್ಮಚರ್ಯಾಶ್ರಮವಂತೂ ಲೋಪ ಆಗಿದೆ. ನಮ್ಮ ಗೃಹಸ್ಥಾಶ್ರಮವಾದರೂ, ಅಸಂಯಮಿಗಳ ವಿಲಾಸದಿಂದಿರುವ ಗೃಹಗಳಾಗಿವೆ. ಹಿಂದಿನ ಸಂಸ್ಕಾರಗಳಂತೂ. ಮೊದಲೇ ನಮ್ಮ ಮನದಿಂದಲೂ ಸಹ ದೂರಾಗಿ ಓಡಿಹೋಗಿವೆ ಉಪನಯನ (ಮುಂಜಿವಿ) ಯಾದರೂ ಕೂಡ, ನಮ್ಮನೇ ಹವರು ಹೇಳಲಿಕ್ಕೆಮಾತ್ರ ಉಳಿದವೆ ಮತ್ತು ಈ ಉಪನಯನ ವಿವಾಹಗಳಾದರೂ ಧಾರ್ಮಿಕ ಸಂಸ್ಕಾರ ಧಾರ್ಮಿಕ ಬಂಧನವೆಂಬ ಭಾವನೆಯು ಸಹ ಮೆಲ್ಲಮೆಲ್ಲನೇ ಲುಪ್ತವಾಗಿದೆ ಬರುಬರುತ್ತ ಇಂದುನಾಳೆ ನಮ್ಮ ಹಿಂದು ಸಂಸ್ಕಾರ ಹಿಂದುಜನಗಳಮೇಲೆ, ನಮ್ಮ ಹಿಂದು ಬಂಧುಗಳ ದ್ವಾರವೇ ಧರ್ಮ ವಿರೋಧ ನೀತಿವಿರೋಧ ಜಾತಿವಿರೋಧವಾದ ಕಾಯದೇ ಕಾನೂನುಗಳ ಭಯ ಹೊರಿಸಿ ಮತ್ತು ಹೆಚ್ಚಿನ ಅಷ್ಟದಾರಿಯಲ್ಲಿ ಕೆಡವ ಹತ್ತಿದೆ

ಮತ್ತು ನಾವುಗಳಾದರೂ ಯಾವ ಅಂಜಿಕೆಭಯವಿಲ್ಲದೇ ಸ್ತ್ರೀಸಹವಾಸ ಕೇವಲ ಕಾಮಬುದ್ಧಿಯಿಂದಲೇ ಮಾಡ ಹತ್ತಿದ್ದೇವೆ. ಪಶುಗಳು ಗರ್ಭ ಧರಿಸಲು ಪುನಃ ಬೆದೆಯಾಗುವ ಪರ್ಯಂತ ಸಹವಾಸಮಾಡುವದಿಲ್ಲ. ಪಶು ಎಸಕಿಂತ ನಾವು ಕೀಳರಾಗಿದ್ದೇವೆ. ಋತು ಕಾಲದ ಯಾವ ವಿಚಾರವೂ ಸಹ ಇಲ್ಲ ಇಂದ್ರಿಯನಿಗ್ರಹ ಆತ್ಮಸಂಯಮನ ದುರ್ಲಭವಾಗಿದೆ. ಗರ್ಭ ಸ್ಥಿತಿಯನಂತರವೂ ಸುಮಾರು ಪ್ರಸವಕಾಲವರೆಗಂದರೂ ಚಿಂತಿಯಿಲ್ಲ, ಸ್ತ್ರೀ ಸಹವಾಸ ನಡದೇ ಇರುತ್ತದೆ. ಮನಸ್ಸಿನಲ್ಲಿ ಪವಿತ್ರತೆಯ ಭಾವನೆಯೋ

ಉಳಿದಿಲ್ಲ ವ್ಯಭಿಚಾರವೂ ಅನಾಚಾರವೂ ಹೆಚ್ಚಾಗುತ್ತ ನಡೆದವೆ. ಈ ಕಾರಣದಿಂದಲೇ ಸ್ತ್ರೀ ಪುರುಷರ ಎಲ್ಲ ಬುದ್ಧಿಯು ಪ್ರಾಯಃ ದುಷ್ಟಸಂಸ್ಕಾರದಿಂದ ಮಲಿನವಾಗಿದೆ. ಶಾಸ್ತ್ರ ಮರ್ಯಾದೆ ಧರ್ಮದ ಕಟ್ಟಳೆ ವಿಚಾರಗಳು ಸಹ ಇದೇ ಕಾರಣದಿಂದಲೇ ಪೂರ್ಣವಾಗಿ ಲೋಪವೆ ಆಗಿವೆ. ಮತ್ತು ಊಟ ಉಡಿಗೆಯ ಪವಿತ್ರತೆಯು, ಇದರ ವಿಚಾರವೇ ಮನಸಿನಿಂದ ದೂರಾಗಿದೆ. ಪವಿತ್ರ ಅಪವಿತ್ರ ಎಲ್ಲ ಪದಾರ್ಥಗಳು ಸ್ಥಳಸ್ಥಾನವಿಲ್ಲದೇ ಕಂಡಕಾಲವಲ್ಲೇ ಬಾಯೊಳಗೆ ಹಾಕಲಾರಂಭಿಸಿದ್ದೇವೆ. ಸತ್ಯವೆಂಬುವದೆ ಮರೆತುಬಿಟ್ಟು, ಸತ್ಯಾಭಾಸರಾಗಿದ್ದೇವೆ. ವ್ಯರ್ಥವಾಗಿ ಸುಳ್ಳು ಕಾಲಕ್ಕಾಡಿದರೂ ಸತ್ಯವೆಂಬೊ ವೇಷಹಾಕಿ ಸ್ವಾರ್ಥದಿಂದ ಸತ್ಯವನ್ನಂತೂ ಮರೆತೆವು ಸುಳ್ಳನಾಡುತ್ತೇವೆಂಬ ವಿಚಾರ ಸ್ವಲ್ಪು ಆದರೂ ಮನದಲ್ಲಿ ತರುವದಿಲ್ಲ. ಉಚ್ಚನೀಚ. ಸದಾಚಾರ ದುರಾಚಾರಿ ಪವಿತ್ರ ಅಪವಿತ್ರ ಎಲ್ಲ ತರದ ಜನರಿಂದ ಕೂಡಿ, ಒಂದೇ (ಮೇಜು) ಅಡ್ಡಣಿಗೆಯಮೇಲೆ ಒಂದೇ ಪಾತ್ರೆ ತಾಟುಗಳಲ್ಲಿ ಭೋಜನಮಾಡುವದು. ಮತ್ತು ಊಟಮಾಡುವಾಗ್ಗೆ ಒಬ್ಬರನ್ನೊಬ್ಬರು ಮುಟ್ಟಿ ಒಬ್ಬರ ಕೈಯಿಂದಲೂ ಎಂಜಲಗೈ ಇರುವಾಗಲೇ, ಊಟ ಪದಾರ್ಥಗಳನ್ನು ಒಬ್ಬರಿಂದೊಬ್ಬರು ಹಾಕಿಕೊಂಡು ಊಟಮಾಡುವದು, ಇಂದು ನಾಳೆ ಒಳ್ಳೇ ಸುಧಾರಣೆಯ ದೊಡ್ಡವರೆಂಬ ಭಾವನೆಯು ಬಾವುಟವು ಹಾರಹತ್ತಿದೆ. ಅಭಕ್ಷ ಭಕ್ಷಣದಿಂದಲೂ ಎಲ್ಲ ಪವಿತ್ರತೆಯೂ ಹೊರಟೇ ಹೋಗಿದೆ. ಸುಳ್ಳು, ಕಪಟ, ಕಳ್ಳತನ, ಲಂಚಗೂಳಿಗೆ ಹೆಚ್ಚಾಗಿ ನಡೆವದೆ ಅಹಿಂಸೆ ಎಂದು ಮುಖದಿಂದ ಮಾತ್ರ ಉಚ್ಚಾರವೆ ಹೊತಾಗಿ ಹಿಂಸೆ ಇಂಥ ಅಹಿಂಸೆಯು ಉದಾಸೀನತೆ ಪ್ರಬಲವಾಗಿದೆ. ಬಹಿರಂಗ ಇವೆಲ್ಲ ಪರಿಣಾಮಗಳಿಂದ ನಮ್ಮ ಎಲ್ಲ ವಿಚಾರಗಳು ದೂಷಿತವಾಗಿ ಬುದ್ಧಿಮಾಂದ್ಯ ಮಲಿನವಾಗಿದೆ. ಧಾರ್ಮಿಕ ನೈತಿಕ ಭಾವನೆಯಂತೂ ನಷ್ಟವಾಗಿದೆ. ಇಂಥ ದುರ್ದೆಶೆಯಲ್ಲಿ ನಮ್ಮ ಬಾಲಕರು ಕೆಟ್ಟಿರುವರೆಂದು ಹೇಳಲು ಏನು ಆಶ್ಚರ್ಯವಿದೆ.

ಇತ್ತ ಕಾಲೇಜ ಸ್ಕೂಲುಗಳಲ್ಲಿಯ ವಾತಾವರಣವಂತೂ ಕೆಟ್ಟಿಹೋಗಿದೆ. ಕಾಲ ಸರಿಯಾಗಿ ಬೇಗಾಗುವದು ಸ್ವಾಭಾವಿಕವೇ ಸರಿ. ಶಾಲೆಯ ಮುಖ್ಯಸ್ಥರೂ ಮತ್ತು ಶಿಕ್ಷಕರು ಸಹ ನಾವೇ ಆಗಿವೇವೆ ಶಾಲೆ ಕಾಲೇಜ.

ಗಳಲ್ಲಿ ಶಿಕ್ಷಣ ಹೊಂದತಕ್ಕವರು ನಮ್ಮ ಸಂತಾನದ ಬಾಲಕರಲ್ಲವೆ ? ಇಂಥ ಕಾಲ ದುರ್ದೆಶೆಯಲ್ಲಿ ಅವರ ಸುಧಾರಣ ಹೇಗಾಗುತ್ತದೆ ? ಪೂರ್ವದನಡಾವಳಿ, ಅಂಜಿಕೆ, ಇವತ್ತು ನಾಳಿನಜನರಲ್ಲಿ ಹೆಚ್ಚಿಗೆ ಶಿಕ್ಷಕರಲ್ಲಿಯೇ ಉಳಿದಿಲ್ಲ. ಮತ್ತು ಆತ್ಮಸಂಯಮನ ಸದಾಚಾರಗಳು, ಮನಸ್ಸಿನ ವಿಶಾಲತೆ, ಪವಿತ್ರತೆ ಮುಂತಾ ಮೊದಲಿಗಿಲ್ಲ ಧಾರ್ಮಿಕಭಾವನೆ ಆಸ್ತಿಕ್ಯಬುದ್ಧಿ ನೈತಿಕ ಬಲವು ಎಂದೋಮೊರೋಡಿಬಿಟ್ಟವೆ. ಸ್ತ್ರೀ ಪುರುಷರು ಕೂಡಿ ಸ್ವೇಚ್ಛಾ ವೃತ್ತಿಯಿಂದ ಕಂಡಲ್ಲೆ ತಿರಿಗಾಡುವಿಕೆ, ನಿರಂತರ ಮೋಟಾರ ಗಾಡಿಗಳಲ್ಲಿ ಕಲೆತೇ ಸಂಚರಿಸುವಿಕೆ, ಮತ್ತು ಬಾಲಕರ ಎದುರಿಗೇವೆ, ಅವರಹಿರಿಯರುಶಿಕ್ಷಕರು ಮಾಸ್ತರಜನರು. ಅಧ್ಯಾಪಕರು ನಿರ್ಭಯದಿಂದ ಬೀಡಿ ಸಿಕರೇಟು ಸೇದುವದು ತಂಬಾಕು ನಸ್ಯ ಹಾಕುವದು ನಡೆದದೆ. ಅವರ ಮನಸ್ಸು ಎಂದೂಹಿಂಜರಿಯುವದಿಲ್ಲ. ಶಿಕ್ಷಕರು ಹಿರಿಯರು ನಾಟಕ ಸಿನಿಮಾ ವಿಶ್ರಾಂತಿ ಗೃಹಗಳಿಗೆ ಬಾಲಕರನ್ನು ಸಂಗಡಸೇ ಕರೆದುಕೊಂಡು ಹೋಗುತ್ತಾರೆ. ಮತ್ತು ಆ ಬಾಲಕರ ಸಂಗಡ ಸಂಕೋಚವಿಲ್ಲದೇ, ನಗೆಕಲೆಯುವದು, ಹಾಳು ಹರಟೆ ಹುಡುಗಾಟಿಗೆ ಮಾಡುತ್ತಲಿರುವದು ಅಲ್ಲಲ್ಲಿ ಕಾಣುತ್ತಲಿದೆ. ಇಂಥ ದುರ್ದೆಶೆಯಲ್ಲಿ ಆ ಬಾಲಕರ ಮೇಲೆ ಒಳ್ಳೇ ಪ್ರಭಾವ ಹೇಗೆ ಬಿದ್ದೀತು ?

ಇರಲು ಇತ್ತ ಬಾಲಕರಲ್ಲಿಯೂ ನಮ್ಮ ನೋಡುತ್ತಲೇಯೆ ಶೃಂಗಾರ ಅಲಂಕಾರ, ದುರ್ವ್ಯಸನಗಳ ಭಾವನೆಗಳು ಚಿಕ್ಕಂದಿನಿಂದಲೇ ಮನೆ ಮಾಡುತ್ತಲಿವೆ. ನಾವೇ ಸ್ವತಃ ನಮ್ಮ ಬಾಲಕರನ್ನು ಅಡ್ಡಹಾದಿಗೆ ಹಚ್ಚಿ ಮುಳ್ಳುಮಾರ್ಗದಲ್ಲಿ ಹಚ್ಚಲಾಗಿದ್ದೇವೆ. ಒಳ್ಳೇನಡಾವಳಿ ಆತ್ಮ ಸಂಯಮನ ಮುಂತಾದ ಒಳ್ಳೇದಾರಿಯಿಂದಾ ಎಷ್ಟೋ ಹರದಾರಿ ದೂರಮಾಡಿದ್ದೇವೆ. ನಾಟಕ ಸಿನಿಮಾಗಳಿಂದಲೂ ಬಾಲಕರ ಮನಸ್ಸು ಹೆಚ್ಚು ಕಟ್ಟ ಪರಿಣಮಿಸಿದೆ.

### ೪೨ ಕ್ರಮವಾಗಿ ಸುಧಾರಣೆ ಗರ್ಭರಕ್ಷಣೆ

ಇವೆಲ್ಲ ಕೆಟ್ಟ ಗುಣಗಳಿಂದ, ಉಳಿಯಬೇಕಾದರೆ ನಾವುಗಳೆಲ್ಲರೂ ಮೊದಲಿಗೆ ಆತ್ಮ ಸಂಯಮಿಗಳೂ ಸದಾಚಾರಿಗಳು ಆಗಲಿಕ್ಕೆಬೇಕು. ಗರ್ಭರಕ್ಷಣೆ ಗರ್ಭಸಂಸ್ಕಾರ ಗರ್ಭಧಾನದಿಂದ ಮೊದಲು ಮಾಡಿ ಶಿಶು ಜನಿಸುವವರೆಗೆ, ಮಾತಾಪಿತೃಗಳು ಒಳ್ಳೇ ಇಂದ್ರಿಯ ನಿಗ್ರಹವುಳ್ಳವರೂ ಮನಸ್ಸು

ಬೇಗಿಸಿ ಓದುಸಂಭೋಗವರ್ಜವಮಾಡುವರಾಗಬೇಕು. ಆದರಸ್ತ್ರೀಯೂ ತಾಯಿಯು ವಿಶೇಷವಾಗಿ ಪವಿತ್ರತೆ ಕಡೆಗೆ ಲಕ್ಷ್ಯಕೊಡಬೇಕು ಗರ್ಭಿಣಿ ಅವಸ್ಥಾದಲ್ಲಿ ಸ್ತ್ರೀಯರ ಸಂಭೋಗವು ಶಾರೀರಕ, ಮತ್ತು ನೈತಿಕ ದೃಷ್ಟಿಯಿಂದಲೂ, ದೊಡ್ಡ ಹಾನಿಕಾರಕವಾದದ್ದು. ಈ ಕೆಟ್ಟ ಪರಿಣಾಮವು, ಗರ್ಭದಲ್ಲಿದ್ದ ಶಿಶುವಿನ ಮೇಲೆ ಆಗುತ್ತದೆ. ಶಿಶುವಿನ ಅವಯವಗಳು ಕುಂದಾಗುತ್ತವೆ. ಅಲ್ಲದೆ ಗರ್ಭದಲ್ಲಿರುವ ಶಿಶುವಿನ ಮನೋಭಾಗವವು ಸಹ ಕೆಡುತ್ತದೆ ಎಲ್ಲಿಯವರೆಗೆ ಕೂಸು ಹೊಟ್ಟೆಯೊಳಗೆ ಇರುವದೋ ಅಲ್ಲಿಯುವರೆಗೆ ತಾಯಿಯು ಬಹುಸದಾಚಾರಿಯಾಗಿ, ಸಚ್ಚರಿತ್ರೆ ಕೇಳುತ್ತ ಆತ್ಮ ಸಂಯಮನ ಮಾಡುವಲ್ಲದೆ, ಶುದ್ಧ ಸಾತ್ವಿಕ ಆಹಾರಗಳನ್ನೇ ಉಣ್ಣಬೇಕು ಕಂಡಂತೆ ಗುರುಪದಾರ್ಥ ತಿನ್ನಬಾರದು ಹೆಚ್ಚಿನ ಹುಳಿ ಕಾರ ತೈಲಾದಿ ವಿಕಾರ ಜನ್ಯ ಪದಾರ್ಥಗಳನ್ನು ವರ್ಜಿಸಬೇಕು. ಸದಾ ಪ್ರಸನ್ನ ಚಿತ್ತತೆ ಇಂದಲೂ, ಒಳ್ಳೇ ವಿಚಾರದಿಂದಲೂ ಹಗಲರಾತ್ರಿ ಕಾಲ ಕಳೆಯಬೇಕು. ಕಟ್ಟವರಸಂಗ ಕೆಟ್ಟವಿಚಾರದಲ್ಲಿ ಹೋಗದೆ, ಬಹು ಜಾಗ್ರತೆಯಿಂದ ಇರಬೇಕು. ಒಳ್ಳೇಸದ್ಗ್ರಂಥಗಳ ಅಧ್ಯಯನ, ಮತ್ತು ಒಳ್ಳೇ ಸತ್ಕಥಾ ಶ್ರವಣಮಾಡಬೇಕು. ದೊಡ್ಡದೊಡ್ಡ ಮಹಾತ್ಮರ ಜೀವನ ಚರಿತ್ರೆಗಳು ಓದುತ್ತಲಿರಬೇಕು. ಸಾಧು ಸಂತರ ಉಪದೇಶಗಳನ್ನು ಓದಿ ಮನನ ಮಾಡಬೇಕು. ಪ್ರಲ್ಹಾದರಾಜನ ತಾಯಿಯು, ಪ್ರಹ್ಲಾದರಾಜನು ಗರ್ಭದಲ್ಲಿರುವಾಗ್ಗ, ದೇವಋಷಿಯಾದ ನಾರದರ ಆಶ್ರಮದಲ್ಲಿನಾರದರಿಂದಲೇ ರಕ್ಷಿತಳಾಗಿ ಅವರಿಂದ ಅನೇಕ ಸಚ್ಚರಿತ್ರೆ ಕೇಳುತ್ತಿದ್ದಳು ಈ ಮಹಾತ್ಮರ ಉಪದೇಶ ಪರಿಣಾಮವು ಗರ್ಭಗತವಾದ ಶಿಶುವಿನ ಮೇಲಾಗಿ, ಅನುಪಮ ಭಕ್ತಶ್ರೇಷ್ಠನಾದ ಪ್ರಲ್ಹಾದರಾಜನು ಜನಿಸಿದನು.

ಮತ್ತು " ನೇ ಪೋಲಿಯನ್ ಬೋನಾ ಪಾರ್ಟ ಯುದ್ಧ ಕ್ಷೇತ್ರದಲ್ಲಿ ಜನ್ಮನೆತ್ತಿದನು. ಇವೆಲ್ಲ ಉದಾಹರಣೆಗಳಿಂದ ಸ್ಪಷ್ಟವಾಗಿ ತಿಳಿಯುವದೇನಂದರ, ಗರ್ಭಸ್ಥ ಶಿಶುಗಳಮೇಲೆ ನಾವು ಹೇಗಬೇಕೊ ಅದರಂತೆ ಉತ್ತಮವಾದ ಪ್ರಭಾವ ಹಾಕಲು ಶಕ್ಯವಾದುದಿದೆ.

### ೪೩ ಶಿಶು ಜನ್ಮಸಂತರ, ಕರ್ತವ್ಯ

ಬಾಲಕರು ಜನ್ಮವೆತ್ತಿದನಂತರವೂ ಸಹ, ನಮ್ಮ ಕುಚೇಷ್ಟೆಗಳನ್ನು

ಪೂರಿಸಿ ಒಳ್ಳೆ ಸುಶೀಲತೆಯಿಂದ ನಡೆದುಕೊಳ್ಳಬೇಕು. ನಮ್ಮಗಳಿಂದಲೂ ದುಷ್ಕ್ರಿಯೆಯುಗಳು ಆಗಗೊಡದಂತೆ ಬಹು ಎಚ್ಚರದಿಂದ ಇರಬೇಕಾದುದು ನಮ್ಮ ದುಷ್ಕ್ರಿಯೆಯುಗಳಿಂದ ಕೆಟ್ಟ ಪರಿಣಾಮ ಬಾಲಕರಮೇಲೆ ಆಗಗೊಡದಂತೆ ಮಾಡುವದು, ಮತ್ತು ಎಂಥ ಚಿಕ್ಕಬಾಲಕರ ಮುಂದಾದರೂ ನಾವು ಎಂದೂ ಯಾವ ಕೆಟ್ಟ ಮತ್ತು ಕೆಟ್ಟ ಪರಿಣಾಮವಾಗತಕ್ಕ ನಡಾವಳಿಯಿಂದ ನಡೆಯಬಾರದು. ಮತ್ತು ಈ ಮಾತಿನ ಎಚ್ಚರಿಕೆ ಇರಬೇಕಾದುದೇನಂದರೆ ನಮ್ಮ ಯಾವ ತರದ ಕಾಮುಕ ಚೇಷ್ಟೆಗಳ ದುಷ್ಪರಿಣಾಮವಾಗದಂತೆ ಮಾಡುವದು. ಕೆಟ್ಟ ಚಲಚಿತ್ರಗಳು ಸ್ತ್ರೀ ಪುರುಷರು ಕೂಡಿ ಕುಳಿತರುವ ಫೋಟೊ, ಮತ್ತು ನೀತಿ ವಿಹೀನವಾದ ಕಾಮೋತ್ತೇಜಕ ಕುರುಚಿಯಾದ ಕವಿತಾಗಳು ಗದ್ಯ ಪದ್ಯಗಳ ಸಾಹಿತ್ಯಗಳು ಸಹಿತ, ಆ ಬಾಲಕರ ಕೈಗೆ ಸಿಕ್ಕದಂತೆ ಮಾಡುವದು ಅವಶ್ಯ ಮತ್ತು ಆ ಚಿಕ್ಕ ಬಾಲಕರ ಮುಂದೆ ಇಂಥ ಕಾಮುಜನಕ ಕೆಟ್ಟಮಾತುಕಥೆಗಳುಸಹ ಆಡಕೂಡದು. ಅದರಿಂದ ಆ ಬಾಲಕರಿಗೆ ಕಾಮ ವಿಷಯ ಜಿಜ್ಞಾಸಾ ಮತ್ತು ಕಾಮ ಸಂಕೇತನ, ಜಾಗ್ರತವಾಗದಂತೆ ಮಾತಾಡಕೂಡದು ಆಟಪಾಟಗಳಲ್ಲಿಸಹ ಆ ಬಾಲಕರ ಗುಪ್ತೇಂದ್ರಿಯಗಳ ಸ್ಪರ್ಶ ಸಹಮಾಡಕೂಡದು. ಹುಡುಗರನ್ನು ಆಡಿಸತಕ್ಕ ಸೇವಕರಿಗ ಸಹ ಈ ಎಲ್ಲ ವಿಷಯಗಳು ಆಗಾಗ್ಗೆ ಎಚ್ಚರಕೊಡುತ್ತ ಹೋಗಬೇಕು. ಅದು ಮುಟ್ಟಿಗ ಚಿಕ್ಕಬಾಲಕರ ಸಂಬಾಳಿಸುವಿಕೆ, ಅವರ ಸದಾ ರಕ್ಷಣೆ ಒಳ್ಳೇ ನಡಾವಳಿ ಕಲಿಸುವ ಎಲ್ಲ ಭಾರವನ್ನು ಹಿರಿಯರು ತಾವೇ ಸ್ವತಃ ಹೊರಿಸಬೇಕು. ಆ ಬಾಲಕರನ್ನು ಆಡಿಸಲು, ತಮ್ಮ ಸೇವಕರಿಗೆ ಒಪ್ಪಿಸಿ ತಾವು ನಿಶ್ಚಿಂತರಾಗ ಬಾರದು. ಇಂದು ನಾಳೆ ಒಳ್ಳೇ ಸುಪ್ರಸಿದ್ಧ ದೊಡ್ಡ ಮನೆತನಗಳಲ್ಲಿ ಪ್ರಾಯಃ ಚಿಕ್ಕಬಾಲಕರ ರಕ್ಷಣೆ ಉಡಿಗೆ ತೊಡಿಗೆ ಆಟಪಾಟ ಮುಂತಾದ ಎಲ್ಲ ಕರ್ತವ್ಯಗಳನ್ನು ಪರದೇಶ ಶಿಕ್ಷಣಹೊಂದಿದ (ದಾಯಿ) ತೊತ್ತುಗಳಿಗೆ ಒಪ್ಪಿಸಿರುವದು ಕಣ್ಣಾರೆ ನೋಡುತ್ತೇವೆ ಇದರಿಂದ ಚಿಕ್ಕತನದಿಂದಲೇ ಆ ಬಾಲಕರ ಮೇಲೆ ವಿಪರೀತ ಕೆಟ್ಟ ಪರಿಣಾಮಗಳೇ ಮನೆಮಾಡಿಕೊಂಡಿರುತ್ತವೆ. ಮತ್ತು ಮಾತೃ ಸ್ನೇಹವು ಸಹಿತ ಬಿಡುಗಡೆಯಾಗುತ್ತದೆ. ಇದರಿಂದ ಆ ಬಾಲಕರ ತಾಯಿಗಳ, ಮಾತೃಭಾವನೆಯಾದರೂ ದೂರವಾಗುತ್ತದೆ. ಮತ್ತು

ಚಿಕ್ಕ ಬಾಲಕರಿಗೆ ಶೃಂಗಾರ ಭಾವನೆಯು, ದೂರಾಗಿರುವಂತೆ ಶೃಂಗಾರ ಅಲಂಕಾರದಿಂದ ಜಾಗ್ರತರಾಗಿರುವಂತೆ ಮಾಡುವದು ಈ ಮುಖ್ಯಕಾರಣವನ್ನರಿತು ನಾವು ಸ್ವತಃ ಶೃಂಗಾರ ಅಲಂಕಾರದಿಂದ ಸಜ್ಜಾಗಿ ಶೋಕಮಾಡುವದು ಬಿಟ್ಟು, ಬಹುಜಾಗ್ರತರಾಗಿ ಸಾದಾ ಉಡುಪು ತೊಡಪುವಳಿ, ನಡಾವಳಿಗಳಲ್ಲಿ ರಬೇಕು. ಬಾಲಕರಿಗೆ ಯಾವಾಗಲೂ ಸ್ವಚ್ಛವಿಟ್ಟು ಬಟ್ಟೆಬರೆಗಳನ್ನು ಒಗೆದವು ಹಾಕಿ ಅವರ ಮನಸ್ಸು ಶಾಂತ ಸ್ವಚ್ಛವಿರುವಂತೆ ಮಾಡಬೇಕು ಅದರಿಂದ ಕಾಮು ಜನಕ ಶೋಕಮಾಡುವ ಶೃಂಗಾರಭಾವನೆಯು ಹುಟ್ಟದಂದದಿ ಮಾಡಬೇಕು ಸದ್ಗುಣ ಸದಾಚಾರಗಳೇ ನಮ್ಮ ನಿಜವಾದ ಶೃಂಗಾರ ಶೋಭೆಯಾಗಿರಬೇಕು. ಸದ್ಗುಣಗಳೇ ನಿಜವಾದ ಶೋಭೆಯೆಂದು ಎಚ್ಚತ್ತು ಆ ಆ ಸದ್ಗುಣಗಳ ಆಚರಣೆಯಿಂದ ನಮ್ಮ ಚಿಕ್ಕಬಾಲಕರನ್ನೂ ಮುಂದಿನ ಸಂತಾನವನ್ನೂ ಸಹ ಗುಣವಂತರನ್ನು ಚರಿತ್ರವಂತರನ್ನಾಗಿ ಮಾಡುವದು ನಮ್ಮ ಮುಖ್ಯಕರ್ತವ್ಯವಿದೆ.

### ೪೪ ಬಾಲಕರಿಗೆ ನಿಯಮಿತ ಆಹಾರ

ಮತ್ತು ಧ್ಯಾನದಲ್ಲಿರತಕ್ಕದ್ದೇನಂದರೆ, ಬಾಲಕರ ಆರೋಗ್ಯಕೆಡದಂತೆ ಹೆಚ್ಚಿನ ಸೀ, ಹೆಚ್ಚಿಗೆ ಹುಳಿ, ಖಾರ ಮುಂತಾದ ಉತ್ತೇಜಕ ಪದಾರ್ಥಗಳ ಊಟವನ್ನುಯೂ ಸಹ ಎಚ್ಚರಗೊಂಡಿರಬೇಕು ಮಾಂಸ ಆಹಾರವು ಎಲ್ಲ ಧೃಷ್ಟಿಯಿಂದಲೂ ಹಾನಿಕಾರಕ ಮತ್ತು ವೀರ್ಯವನ್ನು ಕೆಡಿಸುವದಾಗಿದೆ, ಚಹಾ, ಕಾಫಿ, ತಂಬಾಕು, ಎಲಿ, ಬೀಡಿ ಸಿಗರೇಟ ಇವೆ ಮೊದಲಾದವು ಮಹಾ ಹಾನಿಕರವಾಗಿವೆ. ಇವುಗಳನ್ನು ತಾವು ಸ್ವತಃ ಸೇವನಮಾಡದೇ ಬಾಲಕರಿಗೂ ಸಹ ಇಂಥದುಶ್ಚಟಗಳನ್ನು ಹಾಕಬಾರದು ಹೀಗಾದರೆ ಮುಂದೆ ಬಾಲಕರ ಜೀವನವು ಮಹಾಪವಿತ್ರವಾಗುವಂತೆಯೆ ಮಾಡುವದು. ಈಕಾರಣದಿಂದ ನಾವು ಸಣ್ಣ ದೊಡ್ಡ ಕೆಟ್ಟಸವಿಗಳಿಂದ ದೂರರಾಗಿರುವದಾದರೆ ಇದರಿಂದ ಬಾಲಕರ ಜೀವನವು ಸಹ ನಿಯಮಿತವಾಗಿ ನಡೆಯುವದು

ಮತ್ತು ನಾವುಗಳು ಈ ಎಲ್ಲ ಮಾತಿನ ಧ್ಯಾನದಲ್ಲಿಟ್ಟು ಸ್ವತಃ ಆಚರಣೆ ಮಾಡುವದೇನಂದರೆ, ಸೂರ್ಯೋದಯದಕಿಂತಲೂ ಮೊದಲಿಗೇವೆ ಏಳುವದು ಎದ್ದಕೂಡಲೇ ಶೌಂಚ ಮೂತ್ರಾದಿಗಳ ವಿಸರ್ಜನೆಮಾಡುವದು ಮುಖ

ಪ್ರಕ್ಷಾಲನೆ ನಂತರ, ತಂಡಿಯಿಂದ ರಕ್ಷಣೆಯಾಗುತ್ತ ಹನ್ನೆರಡು ತಿಂಗಳೂ, ಶುದ್ಧವಾದ ಹೊಸ ನೀರಿನಿಂದ ಸ್ನಾನಮಾಡುವ ಅಭ್ಯಾಸ ಇಡಬೇಕು. ಲಘು ಶಂಕಾ, ಮೂತ್ರವಿಸರ್ಜನೆ ನಂತರ ಸಹ, ಮೂತ್ರೇಂದ್ರಿಯವನ್ನು ತಣ್ಣೀರಿನಿಂದ ತೊಳೆಯುವ ಅಭ್ಯಾಸ ಆರೋಗ್ಯದ ಎಲ್ಲ ದೃಷ್ಟಿಯಿಂದಲೂ, ಒಳ್ಳೇದು ಅದೆ. ಇದರಂತೆ ಬಾಲಕರಿಗಾದರೂ, ಮಾಡುವ ಅಭ್ಯಾಸ ಹಾಕುತ್ತಲಿರಬೇಕು ಬಾಲಕರಿಗೆ ಹೆಚ್ಚಿಗೆ,ಉಣಿಸಿ ತಿನಿಸಿ ಅಜೀರ್ಣ ಆಗಗೊಡಬಾರದು. ಅಜೀರ್ಣದಿಂದ ಮೂತ್ರೇಂದ್ರಿಯಕ್ಕೆ ಉತ್ತೇಜನ ಬರುತ್ತದೆ. ಅದರಿಂದ ಬಾಲಕರು ನಾನಾ ಪ್ರಕಾರದ ರೋಗಗಳ ಬಲಿಗೆ ಬೀಳುತ್ತಾರೆ ಯಾವಾಗಲೂ ಬಾಲಕರ ಭೋಜನವಾದರೂ, ಶುಷ್ಕ ಅನ್ನದಿಂದ ಸಾತ್ವಿಕ ಆಹಾರವಾಗಿರಬೇಕು ಈಗಿನ ಪರಿಸ್ಥಿಗೆ ಅನುಸರಿಸಿ ಅಹಾರದಲ್ಲಿ ಒಳ್ಳೇ ಹಾಲು ತಕ್ಕಷ್ಟು ಉಪಯೋಗಿಸಬೇಕು. ಹೀಗೆ ಅನ್ನ ನೀರುಗಳ, ಪ್ರಮಾಣಸಹಿತವಾಗಿ ಬಾಲಕರಿಗೆ ತಕ್ಕಂತೆ ನಿಯಮಿತವಾಗಿರಬೇಕು. ಆಹಾರ ಫಲಾಹಾರವಾದರು ನಿಯಮಿತ ಕ್ಲೃಪ್ತವ್ಯಾಪ್ತಿಯಲ್ಲಿಯೇ ಕೊಡುವದು. ಕಂಡವರಲ್ಲಿ ಔತನ ಊಟಕ್ಕೆ ಮತ್ತು ಕುತ್ಸಿತವಾದ ಆಟ. ತಮಾಷೆಗಳಲ್ಲಿ, ಮದುವೆ ಮುಂಜಿಗಳಲ್ಲಿ ಯಥಾ ಪ್ರಕಾರ ಸ್ವೇಚ್ಛಾವೃತ್ತಿ ಇರುವಂತೆ ಬಾಲಕರನ್ನು ಸರ್ವಥಾ ಕಳಿಸಬಾರದು. ಯಾಕೆಂದರೆ ಇಂಥ ಅವಸರಗಳಲ್ಲಿ ಇಲ್ಲಿ ನಾವುಗಳೆಲ್ಲರೂ, ಎಲ್ಲ ಪ್ರಕಾರದಿಂದಲೂ ಅನಿಯಮಿತರಾಗಿಯೂ, ಭೋಜನಾದಿಗಳಲ್ಲಿ ಮಿತಿತಪ್ಪಿಯೂ, ಅಸಂಯಮಿಗಳಾಗಿರುವ ನಡಾವಳಿಯು ನಮ್ಮಲ್ಲಿನ ಕೋಮಲ ಬುದ್ಧಿಯ ಬಾಲಕರಮೇಲೆ ದೊಡ್ಡ ಪ್ರಭಾವಬಿದ್ದು, ಕೆಟ್ಟ ಪರಿಣಾಮವಾಗುತ್ತದೆ.

## ೪೫ ಬಾಲಕರ ನಡೆನುಡಿಗಳ ಶಿಕ್ಷಣ

ಹೀಗೆ ಬಾಲಕರ ದಿನಚರ್ಯ ನಡಾವಳಿ ಅವರು ಎಲ್ಲಿ ಯಾವ ಸಮಯ ಹೋಗುತ್ತಾರೋ ಯಾರು ಯಾರಿಂದ ಕೂಡಿ ಆಡುವ ಪ್ರಸಂಗ ಅವರ ಸಂಪರ್ಕ ಬರುವದೋ, ಇವೆಲ್ಲ ಬಾಲಕರಮೇಲೆ ನಿಯಮಮೇನ. ಶಿಕ್ಷಣ ಮತ್ತು ಅವರ ಮೇಲೆ ಒಳ್ಳೇ ಲಕ್ಷಪೂರ್ವಕ ನಿಯಂತ್ರಣಮಾಡುತ್ತ ರಕ್ಷಿಸುತಲಿರಬೇಕು. ಬಾಲಕರಿಗೆ ಸ್ವತಂತ್ರವಾಗಿ ಒಬ್ಬನೇ ತಿರುಗಾಡಲಿಕ್ಕೆ ಬಿಡುವದು. ಆ ಬಾಲಕರ ಹಾನಿಕಾರಕವಲ್ಲದೇ ಅವರನ್ನು ನಾವೇ ಸ್ವಚ್ಛಂದ

ವೃತ್ತಿಯುಳ್ಳವರನ್ನಾಗಿ ಮಾಡಿಸಿಂತಾಗುತ್ತದೆ. ಕಾರಣ ಆ ಬಾಲಕರನ್ನು ಸದಾಸರ್ವದಾ ನಾವು ನಮ್ಮ ದೃಷ್ಟಿಯಲ್ಲೇ ಇಟ್ಟು ಯಾವ ತಪ್ಪುಗಳೂ ಅವರ ಮೇಲೆ ಬೀಳದಂತೆ ಮಾಡುವದು ನಮ್ಮದೇ ಮುಖ್ಯ ಕರ್ತವ್ಯವಾಗಿದೆ ಇದಲ್ಲದೇ ಪೂರ್ತಿ ಲಕ್ಷಸಿಡುವದೇನೆಂದರೇ ಆ ಬಾಲಕರು, ಯಾವ ಪ್ರಕಾರ ಕೂಡ ನಿಂದಿರುವರು, ಯಾವ ಪ್ರಕಾರ ತಿರಿಗಾಡುವರು, ಯಾವರೀತಿ ಊಟ ಮಾಡುವರು, ಹೇಗೆ ಮಲಗುವರು, ಇವೆಲ್ಲವನ್ನು ಪುಟ್ಟ ಮಾತುಗಳು ಮೇಲೆ ನಾವು ಸರಿಯಾದ ದೃಷ್ಟಿಯಿಟ್ಟು, ಬಾಲಕರ ರಕ್ಷಣೆ ಶಿಕ್ಷಣದಲ್ಲಿ ತತ್ಪರರಾಗಿರಬೇಕು. ಎಲ್ಲಿಯುವರೆಗೆ ಆ ಬಾಲಕರ ಬುದ್ಧಿ ತಿಳುವಳಿಕೆ ಪರಿಪಕ್ವವಾಗಿ ಚಲೋ ನಡತೆ ತಿಳಿಯುವದಿಲ್ಲವೋ? ಮತ್ತು ಅವರ ಜ್ಞಾನ ತಮ್ಮ ಹಿತಾಹಿತ ಚಲೋ ಕೆಟ್ಟದೆಂಬುವ ಜ್ಞಾನ ಅವರಿಗೆ ಆಗುವದಿಲ್ಲವೋ ಮತ್ತು ಅವರ ಜ್ಞಾನ ಅವರಿಗೆ ಆಗುವದಿಲ್ಲವೋ ಅಲ್ಲಿಯುವರೆಗೆ, ಮತ್ತು ಅವರ ಮದುವೆಯಾಗುವ ಪರಿಯಂತವಾಗಿಯೂ, ಮತ್ತು ಮದುವೆಯಾದಮೇಲೆಯೂ, ಆ ಬಾಲಕರ ಎಲ್ಲ ನಡಾವಳಿಗಳ ಮೇಲೆಯೂ ಪೂರ್ಣ ದೃಷ್ಟಿಯನ್ನಿಟ್ಟಿರಬೇಕು. ಆ ಬಾಲಕರಲ್ಲಿ ಯಾವದಾದರೊಂದು ದೋಷ ಕಂಡಬಂದರೆ, ಅವರಿಗೆ ಶಿಕ್ಷಣ ಭಯದಿಂದಲೂ, ಒಳ್ಳೇ ಮಾತಿನಿಂದಲೂ ಅಪ್ಪಾ ಇದು ಕಟ್ಟ ನಡತೆಯೆಂದು ಬೋಧಿಸಿ ತ್ವರಿತ ಅವರ ಮನಸ್ಸಿನಲ್ಲಿ ಕಟ್ಟ ನಡಾವಳಿಗಳೆಂಬ ಭಾವನೆಯನ್ನು ಹುಟ್ಟಿಸಿ, ಮುಂದೆ ಅವರು ದೋಷಮಾರ್ಗಕ್ಕೆ ಹೋಗದಂತೆ ಕೆಟ್ಟನಾಡವಳಿಗಳಿಂದ ದೂರ ಇಡಬೇಕು. ಇದರಿಂದ ಅವರ ದೋಷಬುದ್ಧಿ ಹೆಚ್ಚಾಗುವದಿಲ್ಲ.

### (೪೬) ಮಾತಾ, ಪಿತೃ, ಶಿಕ್ಷಕರ ಕರ್ತವ್ಯದ, ಉಪಸಂಹಾರ

ಶಾಲೆ ಕಾಲೇಜಿನ ಸಂಚಾಲಕರೂ, ಮತ್ತು ಅಧ್ಯಾಪಕರೂ ಸಹ ಪೋಲಿಸ ನಿಯಮಗಳ ಮೇಲೆ ಲಕ್ಷವಿಟ್ಟು, ಬಾಲಕರ ತಂದೆ ತಾಯಿಗಳ ಕರ್ತವ್ಯವು ಸಹ ಸಮ್ಮತಿಲೆಯಮೇಲೆ ಇಟ್ಟದೆಂದು ತಿಳಿದು ಈ ವಿಷಯದಲ್ಲಿ ಪೂರ್ಣ ದೃಷ್ಟಿಯಿಂದ ಬಾಲಕರ ಶಿಕ್ಷಣ ಮಾಡತಕ್ಕದ್ದು ಮತ್ತು ಅಧ್ಯಾಪಕರು ತಾವು ಸ್ವತಃ ಮೇಲೆ ನಿರೂಪಿಸಿದ ಎಲ್ಲ ನಡಾವಳಿಗಳನ್ನು ತಮ್ಮ ನಿತ್ಯ ಆಚರಣೆಯಲ್ಲಿ ತರಬೇಕು, ಅಂದರೆ ಬಾಲಕರ ಮೇಲೆ ಒಳ್ಳೇ ಪ್ರಭಾವ

ಶಿದ್ದು ಸುಶಿಕ್ಷಿತ ಸುಶೀಲ ಬಾಲಕರಾಗುವಂತೆ ಪ್ರಯತ್ನಿಸತಕ್ಕದ್ದು. ಮತ್ತು ಶಾಲೆ ಕಾಲೇಜುಗಳಲ್ಲಿ ಸಹ ಇಂಥ ಉಚ್ಚತರದ ಶಿಕ್ಷಕರನ್ನೇ ನೇಮಕಮಾಡ ಬೇಕಾದುದು ಸಂಚಾಲಕರ ಕರ್ತವ್ಯವಾಗಿದೆ. ಒಳ್ಳೇ ಸುಶೀಕ್ಷಿತ ಉಚ್ಚ ಧ್ಯೇಯದ ಅಧ್ಯಾಪಕರನ್ನಿಟ್ಟು ಸಂತೋಷ ಮಾತ್ರವೇ ಅಲ್ಲ ಅಂಥ ಅಧ್ಯಾ ಪಕರೂ ಉಪಾಧ್ಯಾಯರಿಂದ ಬಾಲಕರು ಸಹಿತ, ಮಹಾ ಬಲಶಾಲಿ ವಿದ್ಯಾ ಶಾಲಿ ಬುದ್ಧಿಶಾಲಿ ಧೈರ್ಯಶಾಲಿ ಚರಿತ್ರವಾನ್ ಪುರುಷರಾಗುವಂತೆ ಮಾಡ ಬೇಕು.

ಯಾವಾಗಲೂ ಕೆಟ್ಟಪದ್ಧತಿಯು ಷೋಕಮಾಡುವದು ಬಿಟ್ಟು, ಸುಶಿಕ್ಷಿತ ಸಾದಾ ನಡಾವಳಿಯ ಜೀವನವಾಗಿರಬೇಕು ಬಿಳ್ಳೇದೆಲಿ, ತೊಂಬಾಕುಬೀಡಿ, ಇತ್ಯಾದಿಗಳನ್ನು ಬಿಟ್ಟು ಒಳ್ಳೇ ವ್ಯವಹಾರಮಾಡುವದು. ಚಹಾ ಕಾಪಿ, ಮದ್ಯ ಜನಕ ಪೇಯಗಳನ್ನು ಸರ್ವಥಾ ಬಿಡಬೇಕು. ಋಷಿಕುಲ, ಗುರು ಕುಲ, ಆಶ್ರಮ, ಶಾಲೆ, ಕಾಲೇಜುಗಳಲ್ಲಿ ಈ ರೀತಿ ಧಾರ್ಮಿಕ ಸಮ್ಬಂಧ ಪ್ರಶ್ನೆ, ನೈತಿಕ ಶಿಕ್ಷಣವೇ ಅವಶ್ಯವಾಗಿಲಿಕ್ಕೆ ಬೇಕು ನಮ್ಮ ಬಾಲಕರು ಬುದ್ಧಿವಂತರೂ ವಿದ್ಯಾವಂತರೂ ಆಗುವದರ ಸಂಗಡಲೇನೆ, ಮಹಾ ತೇ ಜಸ್ವಿ, ಧೈರ್ಯವಾನ್, ತೇಜಸ್ವಿಗಳೂ ಪರಮ ಆಸ್ತಿಕರು ನೈತಿಕರೂ ಪಂ ಡಿತರೂ ಧರ್ಮ ಧೀರುಗಳೂ, ಆಗಲಿಕ್ಕೆಬೇಕು. ಇಂಥ ಶಿಕ್ಷಣವೇ ಮೊದಲಿಗೆ ಬೇಕು

ಇವೆಲ್ಲ ಮಾತುಗಳಿಂದ ಎಲ್ಲ ಸಾಮೂಹಿಕ ಸಮಾಜ ಸುಧಾರಣೆ ಗಾಗಿಯೂ, ಎಲ್ಲರೂ ಧ್ಯಾನದಲ್ಲಿಟ್ಟು ಅಲಕ್ಷಮಾಡದೇ ಪೂರ್ಣ ತತ್ಪರರಾಗಿ ಇಂಥ ಸದ್ವರ್ತನೆಗಳು ತಂದೆತಾಯಿಗಳು ಹಿರಿಯರು, ಶಾಲೆಯ ಅಧ್ಯಾಪಕ ಪ್ರಾಧ್ಯಾಪಕರುಮಾಡಿ ಶಿಕ್ಷಿಸಿದರೆ, ಮುಂದೆ ನಮ್ಮ ಚಿಕ್ಕಬಾಲಕರು ಬಹಳ ಇಲ್ಲವಾದರೂ ಕೆಲ ಅಂಶದಿಂದಾದರೂ, ಸುಧಾರಣೆ ಹೊಂದುತ್ತಾರೆ. ಮುಂದೆ ಆ ಬಾಲಕರೇ, ಧರ್ಮ, ಸಮಾಜ, ನಮ್ಮರಾಷ್ಟ್ರದ ನೌಕಾಗಳಿಗೆ, ಅಂಬಿಗ ರಾಗಿ ಸ್ವತಂತ್ರ ಭಾರತಮಾತೆಯ ಮುಖವನ್ನು ಉಜ್ವಲಮಾಡಲಿಕ್ಕೆ ಶಕ್ತ ರಾಗುತ್ತಾರೆ.

ಭಗವಾನನು, ನಮ್ಮ ಸಂಗಡವೇ ಎಡಬಿಡದೇ ಇರುವನು, ಆ ಭಗ

ಷಂತನ್ನ ರಕ್ಷಕ ಸಹಾಯಕನೆಂದು ತಿಳಿಸಿ, ಈ ಉಚಿತವಾದ ಪ್ರಯತ್ನ ಮಾಡಿದರೆ, ಭಗವಂತನೂ ಅದರ ಪೂರ್ಣ ಸಫಲತೆಯನ್ನು ಮಾಡುತ್ತಾನೆ. ಇದು ನಿಶ್ಚಿತ ತತ್ವವಾಗಿದೆ. ಇಂಥ ಸ್ವಾತಂತ್ರ್ಯ ಭಾರತ ಕಾಲದಲ್ಲಿ ಎಲ್ಲ ಪಾಶ್ಚಾತ್ಯರ ಅನುಕರಣೆಗಳನ್ನು ಬಿಟ್ಟು ನಾವೆಲ್ಲರೂ ಕೂಡಿ ಇಂಥ ದುರ್ದಶೆಯಿಂದ ಪಾರಾಗಲು ಸಂಘಟಿತ ಪ್ರಯತ್ನವನ್ನು ಅವಶ್ಯ ಮಾಡಲಿಕ್ಕೆಬೇಕು. ಪೂರೈಸಲು ನಿತ್ಯ ಬ್ರಹ್ಮಚಾರಿಯಾದ ಭಗವಂತನು, ತತ್ ಸೇವಕ ಜಿತೇಂದ್ರಿಯನಾದ ವಾತಾತ್ಮಜ ಹನುಮಂತನ ನೆನೆಯಬೇಕು. ಕಾರಣ,

" ಮನೋಜವಂ ಮಾರುತ ತುಲ್ಯವೇಗಂ
ಜಿತೇಂದ್ರಿಯಂ ಬುದ್ಧಿಮತಾಂ ವರಿಷ್ಠಮ್ ॥
ವಾತಾತ್ಮಜಂ ವಾನರಯೂಥ ಮುಖ್ಯಂ
ಶ್ರೀ ರಾಮದೂತಂ ಶಿರಸಾ ನಮಾಮಿ " ॥

ಎಂದು ಪ್ರಾರ್ಥನೆ ಗೈಯುತ್ತೇನೆ. ಇದರಲ್ಲಿ ತಪ್ಪುಗಳಿದ್ದಲ್ಲಿ ಸಜ್ಜನರು ತಿದ್ದಿ ತಿಳುಹಲು ವಿನಂತಿ.

ಶ್ರೀಗುರು ಮಧ್ವೇಶ ಶ್ರೀಕೃಷ್ಣಾರ್ಪಣಮಸ್ತು



# ಜೈ ಭಾರತ್ ಮಾತಾ.

# ಶುದ್ಧಪತ್ರ

| ಪುಟ | ಸಾಲು | ತಪ್ಪು | ಒಪ್ಪು |
|---|---|---|---|
| ೨ | ೪ | ಬದ್ದುರೂ | ಬದ್ಧರೂ |
| ೨ | ೨೭ | ದೇಸಂದರೆಪ | ದೇನಂಗತೆ |
| ೨ | ೨೩ | ಮಪಾಸ್ತ್ವತ್ | ಮಪಾಸ್ಥತ್ |
| ೨ | ೨೩ | ಬ್ರಹ | ಬ್ರಹ್ಮ |
| ೩ | ೪ | ಯುದ್ವಸ್ತಿ | ಯುದ್ವದನ್ತಿ |
| ೩ | ೧೧ | ಸಾರ್ತ | ಸಾರ |
| ೩ | ೨೦ | ಶ್ರಾವಣಾದಿಕಂ | ಶ್ರವಣಾದಿಕಂ |
| ೩ | ೨೦ | ಮನನಾದ್ತಿ | ಮನನಾದಿ |
| ೩ | ೨೩ | ಆ ಬ್ರಹ | ಆ ಬ್ರಹ್ಮ |
| ೪ | ೩ | ಸಲ್ಪ | ಸ್ವಲ್ಪ |
| ೪ | ೪ | ಹೆಳಿದ್ದಾನೆ | ಹೇಳಿದ್ದಾನೆ |
| ೪ | ೧೭ | ಭಕ್ತಿಯಿಂದ | ಭಕ್ತಿಯಿಂದ |
| ೫ | ೩ | ವ್ಯವಸೆ | ವ್ಯವಸ್ಥೆ |
| ೫ | ೫ | ಪರಮ್ಧ | ಪರಮ |
| ೫ | ೧೬ | ವಿರ್ಯವೇ | ವೀರ್ಯವೆ |
| ೫ | ೧೭ | ಪ್ರತಿಷ್ಟಿತ | ಪ್ರತಿಷ್ಠಿತ |
| ೫ | ೨೨ | ಶರೀರಕಾ | ಶರೀರಕಾಂತಿ |
| ೫ | ೨೪ | ಸಸ್ಥ | ಸ್ವಸ್ಥ |
| ೫ | ೨೬ | ಆ ಕಾಲ | ಆಕಾಲ |
| ೬ | ೩ | ಅಸ್ವಸ್ಥ | ಅಸ್ವಸ್ಥ |
| ೬ | ೫ | ನಡೆಯುವೆ | ನಡೆದದೆ |
| ೭ | ೨ | ನಾಲಿ | ನಾಲ್ಕು |
| ೭ | ೪ | ಬ್ರಹ | ಬ್ರಹ್ಮ |
| ೭ | ೬ | ಶಿಗುತ್ತದೆ | ಸಿಗುತ್ತದೆ |
| ೭ | ೭ | ಪ್ರಕುರದ | ಪ್ರಕಾರದ |

| | | | |
|---|---|---|---|
| ೯ | ೧೭ | ವಿಯರ್ | ವೀರ್ಯ |
| ೯ | ೨೨ | ಬ್ರಹ | ಬ್ರಹ್ಮ |
| ೯ | ೨೬ | ವಾಗಿದೆಯೆಪ | ಯಾಗಿದೆಯೊ |
| ೧೦ | ೯ | ಆಸಕಿ | ಆಸಕ್ತಿ |
| ೧೦ | ೧೬ | ವುತು | ವುತ್ತು |
| ೧೧ | ೧೨ | ವೀರ | ವಿರ್ಗ |
| ೧೧ | ೧೩ | ವಾಸ್ನ | ವಾಸನೆ |
| ೧೧ | ೨೦ | ಆಥೊ | ಅಥೋ |
| ೧೧ | ೨೨ | ಮೆಥುನ | ಮೈಥುನ |
| ೧೨ | ೧೦ | ಉಪದ್ದೇಸಿ | ಉಪದೇಶಿ |
| ೧೨ | ೧೨ | ಕಾಸವೇ | ವಾಸವೇ |
| ೧೨ | ೧೩ | ಕಾಗಿ | ನಾಗಿ |
| ೧೨ | ೧೮ | ಾ | ಕಾಲಿ |
| ೧೨ | ೧೮ | ಕರೆದ್ನ | ಕರೆವ |
| ೧೨ | ೧೯ | ಕೂಡಲೇ | ಕೂಡಲೇ |
| ೧೨ | ೨೦ | ಾರುಗಳು | ಗುರುಗಳು |
| ೧೩ | ೫ | ತ್ತಿ ಸ್ವಭಾವಿ | ಸುಸ್ವಭಾವಿ |
| ೧೩ | ೧೧/೧೨ | ಒತಿಕೊಳ್ಳ್ಳು | ಒತ್ತಿಸಿಕೊಳ್ಳು |
| ೧೪ | ೧೨ | ಪರಪರೆ | ಪರಂಪರೆ |
| ೧೫ | ೭ | ಸ್ನಾನವಾಡ | ಸ್ನಾನವಾಡಿ |
| ೧೬ | ೫ | ಕೂಡ್ಯ | ಕೂಡ |
| ೧೬ | ೯ | ಂಸ್ನ | ತ್ರಸ್ನ |
| ೧೬ | ೧೦ | ತೊಂಡು | ಕೊಂಡು |
| ೧೬ | ೧೭ | ಪೂರ್ಣ್ಯ | ಪೂರ್ಣ |
| ೧೬ | ೧೯ | ತೆಜಸ್ವಿ | ತೇಜಸ್ವಿ |
| ೨೧ | ೩ | ಒಳ್ಳೆ | ಒಳ್ಳೇ |

| | | | |
|---|---|---|---|
| ೨೮ | ೭ | ಪಾತ್ರಾಲಾಪ | ಪಾತ್ರಾಲಾಪ |
| ೩೦ | ೧೧ | ಹುಲ್ಲು | ಹುಲ್ಲು |
| ೩೨ | ೩ | ಗುರುಪತಿ | ಗುರುಪತ್ನಿ |
| ೩೩ | ೮ | ಸಜ್ಜನಪಡತಿ | ಸಜ್ಜನ ನಡತೆ |
| ೩೩ | ೧೨ | ಜೋಗದ | ಯೋಗದ |
| ೩೩ | ೨೨ | ಬೇದಗಳನು | ವೇದಗಳನ್ನು |
| ೩೩ | ೨೫ | ಭೂಬುವಃ | ಭೂಃ ಭುವಃ |
| ೩೬ | ೨೧ | ವನ | ಮನ |
| ೩೮ | ೧೯ | ಪ್ರೇಷ | ಶ್ರೇಷ್ಠ |
| ೩೯ | ೧೨ | ರಜೋಗುಣ | ರಜೋಗುಣ |
| ೩೯ | ೧೬ | ಯಾವತು | ಯಾವರೀತಿ |
| ೩೯ | ೧೭ | ಪಾದಾಗ್ಯ | ಸಾದಾಗ್ಯ |
| ೪೦ | ೭ | ಆತು | ಆತ್ಮ |
| ೪೦ | ೯ | ವಾತ್ಮ | ವಾತ |
| ೪೦ | ೨೬ | ಶಕಿ | ಶಕ್ತಿ |
| ೪೧ | ೨೪ | ಸುಷಾವ್ನಾ | ಸುಷುವ್ನಾ |
| ೪೮ | ೮ | ಪರಿಚಯುಂತ | ಪರಿಯಂತ |
| ೫೩ | ೪ | ಸಿದ್ದಂ | ಸಿದ್ಧ |
| ೫೫ | ೧೩ | ಭಗದ್ವಿಷಯು | ಭಗವದ್ವಿಷಯು |
| ೫೭ | ೬ | ಭಕ್ತಿಜನ | ಭಕ್ತಿಂಜನಃ |
| ೫೮ | ೧೦ | ವಾಯುವನ್ನು | ವಾಯುವನು |
| ೫೮ | ೧೦ | ಮೂರ್ಧಿಯಲಿ | ಮೂರ್ಧ್ನಿಯಲಿ |
| ೬೪ | ೨೧ | ವೈ ಪ್ರಸ್ಕಂಪಂತಿ | ವೈಪ್ರಸ್ಕಂದಂತಿ |
| ೭೦ | ೧೦ | ದ್ವಾರಿವೊ | ಧ್ವಾರವೊ |
| ೭೨ | ೨೧ | ಸ್ತ್ರೀ ಜನಕ್ಕೆ | ಸ್ತ್ರೀ ಜನನಕ್ಕೆ |
| ೭೪ | ೧೩ | ಅತಿಶಂಯು | ಅತಿಶಯು |

| | | | |
|---|---|---|---|
| ೭೪ | ೨೦ | ಚತೇರ್ವಿಧ | ಚತುರ್ವಿಧ |
| ೭೫ | ೫ | ಮನಪ್ರೊಲಿಸಿದನು | ಮನ ವೊಲಿಸಿದನು |
| ೭೭ | ೨೦ | ರೇತಸ್ಸೆನಲ್ಲಿ | ರೇತಸ್ಸಿನಲ್ಲಿ |
| ೭೮ | ೧೪ | ಸುಳು | ಸುಳ್ಳು |
| ೭೯ | ೨೪ | ಧಮುಕುವೆ | ಧುಮುಕುವೆ |
| ೮೦ | ೧ | ಕೃಷ್ಟಾಜಿನ | ಕೃಷ್ಣಾಜಿನ |
| ೮೨ | ೨೪ | ಮಂಚನೆಯುಲ್ಲಿ | ವಂಚನೆಯಲ್ಲಿ |
| ೮೩ | ೧೩ | ವತಾಯಿಕ್ಕಳ | ತಾಯಿ ಮಕ್ಕಳ |
| ೮೬ | ೧೩ | ಷರಮ | ಪರಮ |
| ೮೯ | ೮ | ಸುನ | ಮನ |
| ೮೯ | ೧೯ | ಪರಿಪಿರಿಯು | ಪರಿಪರಿಯು |
| ೯೭ | ೨೦ | ಕಾರಣೆಬಂಧ | ಕಾರಣಬಂಧ |
| ೯೯ | ೬ | ॥ ಲಿ ॥ | ॥ ಪಲ್ಲ ॥ |
| ೯೯ | ೪ | ಜಲರುಹಾಕ್ಷ | ಜಲರುಹೇಕ್ಷ |
| ೧೦೦ | ೫ | ತಿರಿಗಿಸುಪಳು | ತಿರುಗಿಸುವಳು |
| ೧೦೧ | ೧೪ | ಲಾಂಛನುಳ್ಳ,ರೆ ವಿಯನೆಯಹಾಕೆ.- | ಲಾಂಛನುಳ್ಳ ರೆವಿಯ ನೆವಹಾಕಿ |
| ೧೦೪ | ೧೭ | ವಿಪಯುದಿಂದ | ವಿಷಯದಿಂದ |
| ೧೦೬ | ೧೭ | ಬ್ರಾಹಣ | ಬ್ರಾಹ್ಮಣ |
| ೧೧೦ | ೯ | ಭಕ್ತರಾವರನ್ನೂ | ಭಕ್ತರಾದವರನ್ನು |
| ೧೧೩ | ೬ | ಸಲ್ಪ | ಸ್ವಲ್ಪ |
| ೧೧೩ | ೯ | ವಿಷಯಾದಿಗಲ್ಲೇ | ವಿಷಯಾದಿಗಳಲ್ಲೇ |
| ೧೧೪ | ೧೮ | ಬಿಡುವದು | ಬಡುವದು |
| ೧೧೫ | ೧೬ | ಉಪಯೋಗ | ಉಪಭೋಗ |
| ೧೨೦ | ೧೯ | ಸಂಭ್ರೋಗದಿಂದ | ಸಂಭೋಗದಿಂದ |
| ೧೨೧ | ೬ | ವೆಸಂದರೆ, | ವೇನೆಂದರೆ |

| | | | |
|---|---|---|---|
| ೧೨೪ | ೧೦ | ನೆರಳಿಬಳಿವ | ನೆರಳಿ ಬಳಲಿದ |
| ೧೨೭ | ೩ | ಯಾವ ವಿದದಿಂದ- | ಯಾವ ವಿಧದಿಂದ |
| ೧೨೭ | ೨೧ | ಸ್ವಾಧಿಷ್ಟ | ಸ್ವಾದಿಷ್ಟ |

— ॥ ಮುಂದಿನ ೪-೫ನೇ ಕುಸುಮ ॥ —

# ಅಧ್ಯಾತ್ಮ ಮಾಲಾ

ಶಕೆ ೧೮೭೨ ಜೇಷ್ಠ ಶು॥ ೧೫ ಪೌರ್ಣಿಮೆಗೆ ಹೊರಡುವದು. ಶ್ರೀ ವಿಜಯದಾಸರ ಶಿಷ್ಯರಾದ ಶ್ರೀವೇಣುಗೋಪಾಲದಾಸರು ಇವರ ಶಿಷ್ಯರು ಶ್ರೀ ವ್ಯಾಸ ವಿಠ್ಠಲರು. ಇವರ ಶಿಷ್ಯರು ಅಪರೋಕ್ಷಜ್ಞಾನಿಗಳಾದ ಶ್ರೀರಘು ಪತಿವಿಠ್ಠಲ ವಿರಚಿತ. **ಅದ್ಯಾತ್ಮ ಮಾಲಾ** ಬಹು ಪ್ರಮೇಯದಿಂದ ಯುಕ್ತವಾದ. ಉಪಾಸನಾಭಾಗ ಶ್ರೀವಿಜಯದಾಸರ (೧೮೧) ಸುಳಾದಿಗಳ ಸವಿಸ್ತರ ಅರ್ಥ ಪ್ರತಿಪಾದಿಸಿರುತ್ತಾರೆ. ಮಾನಸಸ್ಮೃತಿ ಶೌನಕ ಸ್ಮೃತಿ ಅರ್ಥವೂ ಸರಳವಾಗಿ ಅದೆ. ವಿಷಯಾನುಕ್ರಮಣಿಕೆ ಅವರೇ ಕೊಟ್ಟಿದ್ದಾರೆ ಭಗವದು ಪಾಸನೆಮಾಡಲು ನಿಜವಾದ ಸಾಧನವೆಂದರೆ, ಅಧ್ಯಾತ್ಮಮಾಲೆಯು ಮುಖ್ಯ. ಶ್ರೀವಿಜಯ ದಾಸರ ಸುಳಾದಿಗಳ ಅರ್ಥವು ಬಹುಸುಲಭಶೈಲಿಯಿಂದ ವರ್ಣಿಸಿದ್ದಾರೆ. ಸರ್ವರೂ ಸಂಗ್ರಹಿಸುವ ಗ್ರಂಥವಾಗಿದೆ. ಪುಟ ಸುಮಾರು ೨೫೦ ಬೆಲೆ ೨-೮-೦ ಚಂದಾದಾರಿಗೆ, ಬೇರೆಬೆಲೆ ಇಲ್ಲ.

**ಸಂಪಾದಕ**

**ಶ್ರೀ ಸರ್ವಜ್ಞ ಸಂದೇಶವೆಂಬ** ತಿಳಿ ಗನ್ನಡ ಮಾಸ ಪತ್ರಿಕೆ. ಜೆಮ್ಮಿ ೧/೮ ವಾರ್ಷಿಕ ಚಂದಾ (೪) ಟಪ್ಪಾಲವೆಚ್ಚ ಬೇರೆ ಅತ್ಯುತ್ತವಾದ ಒಂದೇ ಒಂದಾಗಿ ಈಗ ಮಾಧ್ವರಲ್ಲಿ ವಿಶೇಷವಾಗಿರುವ ವಿಚಾರವನ್ನು ಸುರಳಿತವಾಗಿ ಸಕ್ರಮವಾಗಿ, ಸಂಕ್ಷಿಪ್ತವಾದ ಅನೇಕ ವಿಷಯುಗಳಿಂದ ತುಂಬಿದೆ.

ಸಂಪಾದಕರು, ಚೀಮುಹಳ್ಳಿ ಪಂಡಿತ ಶ್ರೀ ರಘುನಾಥಾಚಾರ್ಯರು ಉಪನಿಷತ್ ರತ್ನಾಕರ ಇತ್ಯಾದಿ. ಚಾಮರಾಜಪೇಟೆ ಬೆಂಗಳೂರು ಸಿಟಿ.

## ಶ್ರೀ ವರದೇಂದ್ರ ಹರಿದಾಸಸಾಹಿತ್ಯ ಮಂಡಲದಲ್ಲಿ ದೊರೆಯುವ ಪುಸ್ತಕಗಳಪಟ್ಟಿ

| | ರೂ. | ಆ. | ಪೈ. |
|---|---|---|---|
| ೧. ಶ್ರೀ ಸುಮಧ್ವವಿಜಯ ಮೂಲ ಭಾವಪ್ರಕಾಶಿಕಾ ಸಹಿತ ಅರ್ಥ ಸಹ ಭಾಗ ೪-೫-೬. ಸರ್ಗ ೧೧ ರಿಂದ ೧೬ ವರೆಗೆ ೫೦೦ ಪುಟ | ೨ | ೮ | ೦ |
| ೨ ಅಣುಮಧ್ವವಿಜಯ ಮೂಲ, ಪಟ್ಟಿಗೆ ಸಹ | ೦ | ೩ | ೦ |
| ೩. ಶ್ರೀ ಪ್ರಾಣೇಶ ವಿಠಲರ ಕೀರ್ತನಮಾಲಿಕಾ ೧ನೇ ಪುಸ್ತಕ | ೫ | ೦ | ೦ |
| ೪-೫. ಶ್ರೀ ಪುರಂದರದಾಸರು ಮತ್ತು ದಾಸರ ಪೀಳಿಗೆ | ೧ | ೦ | ೦ |
| ೬. ತಾರತಮ್ಯ ಸುಳಾದಿಗಳು | ೧ | ೮ | ೦ |
| ೭. ಶ್ರೀ ವಿಜಯದಾಸರ (೧೦೧) ಪ್ರಾರ್ಥನಾ ಸುಳಾದಿ | ೨ | ೦ | ೦ |
| ೮. ಸೃಷ್ಟಿಪ್ರಕರಣ ಸು\|\| ತಾತ್ಪರ್ಯ ಸು\|\| ೬೨೫ ಪುಟ | ೩ | ೦ | ೦ |
| ೯. ಶ್ರೀ ರಾಘವೇಂದ್ರ ಗುರುಸಾರ್ವಭೌಮ ೧೪೦ ಪದ | ೧ | ೪ | ೦ |
| ೧೦. ಕ್ಷೇತ್ರಮಹಿಮಾ ಪದ (೫೬) ಸುಳಾದಿ (೧೦೩) | ೩ | ೪ | ೦ |
| ೧೧ ಸಾಧನಭಾಗ ಸು\|\| ಅಚ್ಚಿನಲ್ಲಿ ಇದೆ | ೩ | [illegible] | ೦ |
| ಶ್ರೀವರದೇಂದ್ರ ಹರಿದಾಸ ಸಾಹಿತ್ಯಮಾಲೆ ಗದ್ಯರೂಪ, ವರ್ಷದಲ್ಲಿ (೬) ಪುಸ್ತಕಗಳಲ್ಲಿ ಕ್ರೌನ್ ೧೬ ಪೇಜಿ ೬೦೦ ಪುಟ ದಿಂದ ೭೨೦ ಪುಟವವರೆಗೆ ವಾರ್ಷಿಕ | ೬ | ೦ | ೦ |
| ಟಪಾಲು ವೆಚ್ಚ ೧೨ ಆಣೆ, ರಜಿಸ್ಟರಿನಿಂದ ಹೆಚ್ಚಿಗ | ೧ | ೮ | ೦ |
| ೧ನೇ ಕುಸುಮ, ಸದಾಚಾರ ಬಿಡಿ ಸಂಚಿಕೆ | ೧ | ೪ | ೦ |
| ೨ನೇ ಕುಸುಮ ಪಂಚಭೇದ, ಪ್ರಮೇಯಮುಕ್ತಾಮಾಲಾ, ಶ್ರೀಗುರು ವಿಜಯ ವಿಠಲ ಕೃತ | ೧ | ೪ | ೦ |
| ೩ನೇ ಕುಸುಮ ಬ್ರಹ್ಮಚರ್ಯ | ೧ | ೮ | ೦ |
| ೪-೫ನೇ ಕುಸುಮ ಅಧ್ಯಾತ್ಮಮಾಲಾ ರಘುಪತಿ ವಿ\|\| ವಿರಚಿತ ಸುಮಾರು ೨೫೦ ಪುಟ ಶಕೆ ೧೮೭೨ ಜೇಷ್ಠ ಶುದ್ಧ ಪೌರ್ಣಿಮೆವರೆಗೆ | ೨ | ೮ | ೦ |
| ೬ನೇ ಕುಸುಮ ಆಷಾಢ ಶುದ್ಧ (೧೫)ವರೆಗೆ | ೧ | ೪ | ೦ |

ಟಪಾಲು ವೆಚ್ಚ ಬೇರೆ

**ಸಂಚಾಲಕ, ಮಂಡಲ**

೭೮ ,, ಅಪನಿರಾವ ಮುದೋಳ, ಕೊಪ್ಪಳ.

೭೯ ,, ರಂಗರಾಯರು ದೆ॥ ಬಂಡಿಹಾಳ, ಕೊಪ್ಪಳ.

೮೦ ,, ಪಾಂಯಿವರದಾಚಾರ್ಯರು ಜಹಗೀರದಾರ ಚಿತ್ತಾಪುರ.

೮೧ ,, ಡಾ॥ ಎಸ್. ಕೃಷ್ಣಮೂರ್ತಿ ರಾವ ಭಾವಣಿ, ಲಿಂಗಸಗೂರ.

೮೨ ,, ರಾಮರಾವ ಕು॥ ಗವಿಗಟ್ಟಿ, ಪೋ॥ ಬಲ್ಲಟಗಿ, ಮಾನ್ವಿ,

೮೩ ,, ಪ್ಯಾಟಿ ಕೃಷ್ಣಾಚಾರ್ಯ ಮಾನ್ವಿ, ಮಾಸ್ತರ ಶಿರಿವಾರ.

೮೪ ,, ರಾಮಚಂದ್ರರಾವ ಕು॥ ಕುರಕುಂದಿ, ತಾ॥ ಮಾನ್ವಿ.

೮೫ ,, ಕಸಬೆ, ಕೊಪ್ಪರೇಶರಾವ ಕು॥ ರಾಯಚೂರ.

೮೬ ,, ರಂಗರಾಯರು ದೆ॥ ಕಾಡ್ಲೂರ, ರಾಯಚೂರ.

೮೭ ,, ಅಂಣಾರಾಯರು, ಅಮೀನಗಡ, ಇಂಜನಿಯರ ಹೈ. ದ.

೮೮ ,, ಶ್ರೀನಿವಾಸರಾವ ಸಿದ್ಧಾಪುರ, ಬಾಗಲಿಂಗಂಪಲ್ಲಿ ಹೈ. ದ.

೮೯ ,, ರಾಘವೇಂದ್ರ ರಾಯರು ಮಟಮರಿ, ,, ,,

೯೦ ,, ಗುರು ರಾಜರಾಯರು ಮಾನ್ವಿ ಸುಲ್ತಾನ ಬಾಜಾರ, ಹೈ. ದ.

೯೧ ,, ಕಷ್ಣಪ್ಪಾ ಕು॥ ಚಿತ್ತಾಪುರ, ತಾ॥ ಲಿಂಗಸಗೂರ.

೯೨ ,, ನರಹರರಾಯರು ತಹಸೀಲದಾರ, ಶಿರನಾಪಲ್ಲಿ ಹೈ. ದ.

೯೮ ,, ಆನಂದರಾವ, ಕು॥ ಜರರಮ್ ಬುಜರಗ್ ನಾರಾಯಣ್ ಪೇಟೆ.

೯೯ ,, ಶ್ರೀನಿವಾಸ ರಾಯರು, ಕಾಗಲ್‌ಕರ, ನಾಜಂ, ಹೈ. ದ.

೧೦೨ ,, ವೆ॥ಗೋತಗಿ ಹನುಮಂತಾಚಾರ್ಯರು ಬಾಗಲಿಂಗಂಪಲ್ಲಿ.

೧೦೩ ,, ವೆ॥ ಡಾಕ್ಟರ್ ಲಕ್ಷ್ಮಣಾಚಾರ್ಯ, ರಾಯಚೂರ.

೧೦೫ ,, ಶ್ರೀ ನಾರಾಯಣ ರಾವ ಹನುಮನಾಗರ, ೭೧೧ ಸು॥ ಬಾಜಾರ,

೧೦೬ ,, ರಾಘವಪ್ಪಯ್ಯಾ ದೆ॥ ಗುನ್ನಾಳ.ತಾ॥ ಕುಷ್ಟಿಗಿ

೧೦೭ ,, ಅಹೋಬಲ ಭೀಮಾಚಾರ್ಯ ವಕೀಲ. ಹೈ. ದ.

೧೦೮ ,, ಕೆ. ರಾಮಚಂದ್ರರಾವ ಯಂಕಿ ಮಾಸ್ತರ, ಹೈ. ದ

೧೦೯ ,, ಎಚ್. ಬಿ. ಕುಲಕರ್ಣಿ ಲಿಂಗಸಗೂರ.

೧೧೦ ,, ವೆಂಕೋಬರಾವ್ ಲೆಕ್ಕಿಹಾಳ ಮಹಸ್ಟ ದಕನ್ ಲಾರಿಪೋರ್ಟ್.

೧೧೧ ,, ಶ್ರೀ ವಿಜಯಾಚಾರ್ಯ ಆಶ್ರಿತ ಬಿ. ಎ. ಮದವಗಾರಮಾಲ,

೧೧೨ ,, ಲಕ್ಷ್ಮಣರಾವ ಚಳಗೇರಿ, ನಾಯಬ ತಹಸೀಲದಾರ.

೧೧೩ ,, ಗಿರಿರಾವ ಮರಳಿ ರ್‍ಯಾಷನಿಂಗ ಷಾಪ್, ಸುಲ್ತಾನ ಬಾಜಾರ.

# ವೃದ್ಧಾಪ್ಯ.

ದಿನವೆಲ್ಲ ದುಡಿದು ದಣಿದು ಕುಳಿತಾಗ
ಮುಂಬರುವ ವೃದ್ಧಾಪ್ಯದ ಚಿತ್ರ ಕಣ್ಣಿಗೆ ಕಟ್ಟಿದರೆ
ಇನ್ನಷ್ಟು ಆಯಾಸವಾಗುತ್ತದೆ.
ಮುಂಬರುವ ಮುಪ್ಪಿನಲ್ಲಿಯೆ ಕಷ್ಟಮಯ
ಬಾಳನ್ನು ಸುಖಮಯವನ್ನಾಗಿಸಲು,



**ಹೈದರಾಬಾದ ಕೋ-ಆಪರೇಟಿವ್ ಇನ್ಸುರೆನ್ಸ ಸೊಸೈಟಿಯಲ್ಲಿ**

## ವಿಮೆ ಇಳಿಸಿರಿ

---

**ಹೆಚ್ಚಿನ ವಿವರಕ್ಕಾಗಿ ಬರೆಯಿರಿ**

ಕೇಂದ್ರ ಕಾರ್ಯಾಲಯ

**ಬಶೀರ್ ಬಾಗ್ ರೋಡ್ ಹೈದರಾಬಾದು**

ಚಂದ್ರಗುಪ್ತ ಮುದ್ರಣಾಲಯ ಅಫ್‌ಜಲ್‌ಗಂಜ್ ರೋಡ್,
ಹೈದರಾಬಾದ್ (ದಕ್ಷಿಣ)